ಮಾನವಿಕ ಕರ್ನಾಟಕ

ಸಂಪುಟ ೩೭ ಸಂಚಿಕೆ ೧



ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಮಾನವಿಕ ಕರ್ಣಾಟಕ

ಸಂಪುಟ ೩೭ – ಸಂಚಿಕೆ ೧

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
೨೦೦೯

manavika karnataka : A Kannada Quarterly of the University of Mysore, Volume 37, No. 1, Edited by Prof. Aravindamalagatti, Prof. V.N. Sheshagiri Rao and Prof. R. Ramakrishna, Published by the Director, Prasaranga, University of Mysore, Manasagangotri, Mysore - 570 006 Pages : vi+123

ಪ್ರಧಾನ ಸಂಪಾದಕರು
ಪ್ರೊ. ಸಿ. ನಾಗಣ್ಣ
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ
ಮೈಸೂರು ೫೭೦ ೦೦೬

ಸಂಪಾದಕರು
ಪ್ರೊ. ವಿ.ಎನ್. ಶೇಷಗಿರಿರಾವ್
ಪ್ರೊ. ಅರವಿಂದ ಮಾಲಗತ್ತಿ
ಪ್ರೊ. ಆರ್. ರಾಮಕೃಷ್ಣ

ಪ್ರಕಾಶಕರು ಮತ್ತು ಮುದ್ರಕರು
ಪ್ರೊ. ಸಿ. ನಾಗಣ್ಣ
ನಿರ್ದೇಶಕರು
ಪ್ರಸಾರಾಂಗ ಮತ್ತು ವಿಶ್ವವಿದ್ಯಾನಿಲಯ ಮುದ್ರಣಾಲಯ
ಮಾನಸಗಂಗೋತ್ರಿ, ಮೈಸೂರು - ೫೦೦ ೦೦೬

ಪ್ರಕಾಶಕರ ಮಾತು

ಮೈಸೂರು ವಿಶ್ವವಿದ್ಯಾನಿಲಯ ನಿರಂತರ ಜ್ಞಾನ ಪ್ರಸಾರಕ್ಕಾಗಿ ಕೈಗೊಂಡು ವ್ಯವಸ್ಥಿತವಾಗಿ ನಿರ್ವಹಿಸುತ್ತಿರುವ ಹಲವು ಪ್ರತಿಷ್ಠಿತ – ಮೌಲಿಕ ಯೋಜನೆಗಳಲ್ಲಿ ನಿಯತ ಕಾಲಿಕೆಗಳ ಸಂಪಾದನೆ ಹಾಗೂ ಪ್ರಕಟಣೆಯೂ ಒಂದು. 'ಮಾನವಿಕ ಕರ್ನಾಟಕ'ದ ೩೭ನೇ ಸಂಪುಟದ ೧ನೆಯ ಸಂಚಿಕೆ ಮುದ್ರಣವಾಗಿದೆ. ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಉಪಯುಕ್ತ ಶೋಧಿತ ವಿವರಣಾತ್ಮಕ ಲೇಖನಗಳು ಈ ಸಂಚಿಕೆಯಲ್ಲಿವೆ.

'ಪ್ರಬುದ್ಧ ಕರ್ನಾಟಕ' ಮತ್ತು 'ಮಾನವಿಕ ಕರ್ನಾಟಕ' ನಾಡಿನ ಶ್ರೇಷ್ಠ ನಿಯತ ಕಾಲಿಕಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ. ಈ ಪತ್ರಿಕೆಗಳನ್ನು ಹೊರತರುವಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ವಿ.ಜಿ. ತಳವಾರ್ ಮತ್ತು ಕುಲಸಚಿವರಾದ ಡಾ.ಪಿ.ಎಸ್.ನಾಯಕ್ ಅವರು ವಿಶೇಷ ಆಸಕ್ತಿ ತೋರಿದ್ದಾರೆ. ಈ ಸಂಚಿಕೆಯನ್ನು ಪ್ರೊ. ಅರವಿಂದ ಮಾಲಗತ್ತಿ, ಪ್ರೊ. ವಿ.ಎನ್. ಶೇಷಗಿರಿರಾವ್ ಮತ್ತು ಪ್ರೊ. ಆರ್. ರಾಮಕೃಷ್ಣರವರು ಅಚ್ಚುಕಟ್ಟಾಗಿ ಸಂಪಾದಿಸಿ ಕೊಟ್ಟಿದ್ದಾರೆ. ಇವರೆಲ್ಲರಿಗೂ, ಈ ಸಂಚಿಕೆಯ ಲೇಖಕರಿಗೂ ನಮ್ಮ ಧನ್ಯವಾದಗಳು. ಇದರ ಅಕ್ಷರಜೋಡಣೆ ಕೆಲಸವನ್ನು ಮಾಡಿಕೊಟ್ಟ ಪ್ರಸಾರಾಂಗದ ಅಕ್ಕರಮನೆಯ ಸಿಬ್ಬಂದಿಗೂ ಶುದ್ಧವಾಗಿ ಕರಡನ್ನು ನೋಡಿದ ಕರಡು ಪರಿಶೀಲಕರಾದ ಶ್ರೀಮತಿ ಟಿ. ಕಮಲಮ್ಮ ಅವರಿಗೂ ಮುದ್ರಿಸಿಕೊಟ್ಟಿರುವ ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೂ ಈ ಎಲ್ಲ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಪ್ರಸಾರಾಂಗದ ಸಿಬ್ಬಂದಿ ವರ್ಗದವರಿಗೂ ನನ್ನ ಹಾರ್ದಿಕ ವಂದನೆಗಳು.

ಪ್ರೊ. ಸಿ. ನಾಗಣ್ಣ

ಸಂಪಾದಕರ ಮಾತು

ಈ ಸಂಚಿಕೆಯಲ್ಲಿ ಒಟ್ಟು ೧೩ ಲೇಖನಗಳಿವೆ. ಬಸವಣ್ಣನವರ ಸಮಾಜ ಸುಧಾರಣೆ ಬಗೆಗಿನ ಲೇಖನ ಚೆನ್ನಾಗಿ ಮೂಡಿ ಬಂದಿದೆ. ಸ್ಥಳೀಯ ಆಡಳಿತವನ್ನು ಕುರಿತ ಲೇಖನ ಚೊಕ್ಕವಾಗಿದೆ. ಗ್ರಾಮೀಣ ಪತ್ರಿಕೋದ್ಯಮವನ್ನು ಕುರಿತ ಲೇಖನ ಸ್ವಾರಸ್ಯಕರವಾಗಿದೆ. ಆರ್ಥಿಕ ಬೆಳವಣಿಗೆಯ ಬಗ್ಗೆ ಲೇಖನ ಸಾರಾಂಶ ರೂಪವಾಗಿದೆ. ಪಶ್ಚಿಮ ಏಷ್ಯಾದ ಸಮುದಾಯದ ಬಗೆಗಿನ ಲೇಖನ ಇತಿಹಾಸವನ್ನು ಸ್ಮರಿಸುತ್ತದೆ. ದಲಿತ ಚಳುವಳಿಯ ಎಳೆಗಳನ್ನು ಮುಂದಿನ ಲೇಖನ ನಮ್ಮ ಮುಂದಿಡುತ್ತದೆ. ಇಮ್ಮಡಿ ದೇವರಾಯನ ಬಗ್ಗೆ ಪರಿಚಯಾತ್ಮಕ ಲೇಖನ, ಸರ್ವೋದಯ ಸಿದ್ಧಾಂತದ ಪ್ರಸ್ತುತತೆ, ದೈವತ್ವಕ್ಕೇರಿದ ಕನ್ನಡ ಬೀರೆ, ಲೋಕಪಾವನಿ ನದಿ ತೀರದ ಅವಶೇಷಗಳು ಬಾಳ ಮುಸ್ಸಂಜೆಯ ನೋವುಗಳು ಸ್ವಾರಸ್ಯಕರವಾಗಿ ಮೂಡಿ ಬಂದಿದೆ. ಯೋಗದಾನಿಯಾದ ಶ್ರೀಕೃಷ್ಣ ಮತ್ತು ನಾಗಮಂಗಲದ ಭೌಗೋಳಿಕತೆಯ ಬಗ್ಗೆ ಲೇಖನಗಳು ಮೈತುಂಬಿಕೊಂಡಿವೆ.

ಪ್ರೊ. ವಿ.ಎನ್. ಶೇಷಗಿರಿರಾವ್
ಪ್ರೊ. ಅರವಿಂದ ಮಾಲಗತ್ತಿ
ಪ್ರೊ. ಆರ್. ರಾಮಕೃಷ್ಣ

ಪರಿವಿಡಿ

೧. ಸಮಾಜ ಸುಧಾರಕ ಬಸವಣ್ಣ

-ಎಂ.ಡಿ. ದೇವಪ್ಪ

ಪ್ರತಿ ವರ್ಷ ಬಸವ ಜಯಂತಿ ಮಹೋತ್ಸವ ಕರ್ನಾಟಕದ ಪ್ರತಿ ಜಿಲ್ಲೆಯ ಸಂಭ್ರಮ. ಬಸವಣ್ಣನವರ ಬಗ್ಗೆ ಕನಿಷ್ಠ ಒಂದು ವಾರ ಜಿಲ್ಲಾಡಳಿತ, ಬಸವ ಬಳಗಗಳ ಒಕ್ಕೂಟ, ವೀರಶೈವ ಹಿಂದೂ ಮಹಾಸಭೆ, ರಾಜಕಾರಣಿಗಳು, ಹೀಗೆ ಅನೇಕರಿಂದ ಬಸವಣ್ಣನವರ ಸಮಾಜ ಸುಧಾರಣೆಗಳ ಬಗ್ಗೆ ಸುದೀರ್ಘ ಭಾಷಣ ಕೇಳಿಬರುವುದು ಸಾಮಾನ್ಯ. ಬಸವಜಯಂತಿಯು ಸಮಾಜದ ಶೋಷಿತ ವರ್ಗ, ದೀನ ದಲಿತರು ಒಟ್ಟಾಗಿ ಸೇರಿ ಅರ್ಥಪೂರ್ಣವಾಗಿ ಆಚರಿಸುವಂತಹ ದಿನವಾಗಬೇಕೇ ಹೊರತು ಕೇವಲ ವೀರಶೈವ, ಲಿಂಗಾಯಿತ ಅಥವಾ ಬಸವ ವರ್ಗಕ್ಕೆ ಸೀಮಿತವಾಗಿರಬಾರದು.

೧) ಮಾನವ ಧರ್ಮದ ಕ್ರಾಂತಿಕಾರಿ

ಹನ್ನೆರಡನೇ ಶತಮಾನದಲ್ಲಿ ಸಮಾಜದಲ್ಲಿದ್ದ ಮೇಲು-ಕೀಳು ಭಾವನೆ, ದುಃಖ ದುಮ್ಮಾನಗಳನ್ನು ಕಂಡು ಕೆರಳಿದ ಬಸವಣ್ಣ ಕ್ರಾಂತಿ ನಡೆಸಿ ಧರ್ಮದ ಮುಖವಾಡವನ್ನು ಕಿತ್ತುಹಾಕಿ ಮಾನವ ಧರ್ಮದ ಸ್ಥಾಪನೆ ಮಾಡಿದ ಮಹಾತ್ಮ, ಸುತ್ತಮುತ್ತಲಿನ ಜನರ ದುಃಖದಿಂದ ಕರಗಿ ಅನ್ಯಾಯ ಸ್ವಾರ್ಥಗಳಿಂದಾದ ವಿಷಮತೆಯನ್ನು ದೂರಮಾಡಲು ಸ್ವಯಂಪೂರ್ಣ ಸುಂದರ ಸಮಾಜದ ನಿರ್ಮಾಣದ ಕನಸು ಕಂಡ ಮಹಾಯೋಗಿ.

ಬಸವಣ್ಣ ಒಂದು ಮತಕ್ಕಾಗಲಿ ಧರ್ಮಕ್ಕಾಗಲಿ ಸೀಮಿತವಾಗಿರಲಿಲ್ಲ. ಅವರ ಜೀವನದ ಉದ್ದೇಶವು ಇಡೀ ಮಾನವ ಜನಾಂಗಕ್ಕಾಗಿತ್ತು. ಕಾಲಕಾಲಕ್ಕೆ ಧಾರ್ಮಿಕ ಸುಧಾರಣೆ ಸಾಮಾಜಿಕ ಪರಿವರ್ತನೆ ಭಾರತಕ್ಕೆ ಅನಿವಾರ್ಯ. ಹಾಗೆಯೇ ಹಲವಾರು ಮಹನೀಯರ ಕೊಡುಗೆ ಅಪಾರ. ಬಸವಣ್ಣನವರ ತತ್ವಗಳು ಇಂದಿಗೂ ಎಂದೆಂದಿಗೂ ಅರ್ಥಪೂರ್ಣ. ಆದರೆ ಅನುಷ್ಠಾನ ಕ್ಷೀಣಸ್ಥಿತಿಯಲ್ಲಿದೆ. ಎಲ್ಲಾ ಕೆಲಸಗಳೂ ಸಮಾನ. ಆದ್ದರಿಂದ "ಕಾಯಕವೇ ಕೈಲಾಸ" ಎಂದು ಘೋಷಿಸಿದರು. ತತ್ವ ಆದರ್ಶಗಳು

ಮಾನವ ಜನಾಂಗಕ್ಕೆ ಉಪಯುಕ್ತವಾಗಿರುವಂತಹವು. ಹೀಗೆ ಅವರು ತಮ್ಮ ತತ್ವಗಳನ್ನು ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಅಳವಡಿಸಿ ಸಮಾಜಕ್ಕೆ ತೋರಿಸಿಕೊಟ್ಟಿದ್ದಾರೆ. ಸಂಸ್ಕೃತದಲ್ಲಿದ್ದ ವೇದ ಪುರಾಣಗಳು ಪ್ರಾಚೀನ ಸಾಹಿತ್ಯ, ಕೆಲವರಿಗೆ ಮೀಸಲಾಗಿತ್ತು. ಸರಳಕನ್ನಡದಲ್ಲಿ ವಚನಗಳನ್ನು ರಚಿಸಿ, ಸಮಾಜದ ಎಲ್ಲಾ ವರ್ಗದ ಜನರು ಸುಲಭವಾಗಿ ಆಡುಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವಂತೆ ಮತ್ತು ತಾವೇ ಸಾಹಿತ್ಯ ರಚನೆ ಮಾಡುವಂತಹ ವಾತಾವರಣ ಮಾಡಿದ ಪುಣ್ಯಪುರುಷ.

ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿ ತ್ಯಾಗಶೀಲ ಮನೋಧರ್ಮದಿಂದ ಸಾಧನೆಯ ಮಾರ್ಗದಲ್ಲಿ ನಡೆದು ಸಮಾಜದ ಏಳಿಗೆಗೋಸ್ಕರ ಸಾಮಾಜಿಕ ಸಮಸ್ಯೆಗಳನ್ನು ಎಳೆಎಳೆಯಾಗಿ ಬಿಡಿಸಿ ಸಮಾಜದ ಹಿತ ಸಾಧಿಸಿದ ಹಾಗೂ ಕೇವಲ ಉಪದೇಶ ಮಾಡದೇ ನುಡಿವಂತೆ ನಡೆದು ತೋರಿಸಿ "ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು" ಎಂಬ ತತ್ವವನ್ನು ಜಗತ್ತಿಗೆ ತೋರಿಸಿದ ಮಹನೀಯ ಬಸವಣ್ಣನವರು.

೨) ಸಮಾಜ ಸುಧಾರಣೆಗಳು

ಬಸವಣ್ಣನವರ ಆದರ್ಶಗಳು ಸಾಮಾಜಿಕ ಅಸಮಾನತೆ ವಿಚಾರಗಳು ತತ್ವಗಳು ಅಸಾಧಾರಣ. ಸುಧಾರಣೆಗಳನ್ನು ಅನುಷ್ಠಾನಕ್ಕೆ ಸಾಮಾಜಿಕ ಕ್ರಾಂತಿಯ ಮೂಲಕ ತಂದ ಬಸವಣ್ಣನವರ ದಿಟ್ಟತನಕ್ಕೆ ಈಗಿನ ರಾಜಕೀಯ ತಲೆಬಾಗಬೇಕು. ಸರ್ವ ಸಮಾನತೆ ತತ್ವ, ಅತ್ಯಂತ ಕ್ರಾಂತಿಕಾರಕ, ಧಾರ್ಮಿಕ ಸಂಪ್ರದಾಯಸ್ತರು, ದುಷ್ಟಶಕ್ತಿಗಳು ಬಂಡಾಯವೆಸಗಿದರು. ಆದರೂ ಬಸವಣ್ಣ ಮಂತ್ರಿ ಪದವಿಯನ್ನು ತ್ಯಜಿಸಿ ಸಂಗಮಕ್ಕೆ ತೆರಳಿ, ತತ್ವ, ಆದರ್ಶ ವಿಚಾರಗಳು, ಸಾಮಾಜಿಕ ಸುಧಾರಣೆಗಳನ್ನು ಕಲ್ಯಾಣದ ಅನುಭವ ಮಂಟಪದಲ್ಲಿ ಅನುಷ್ಠಾನಕ್ಕೆ ತಂದರು. ಸ್ತ್ರೀಯರಿಗೆ ಸಮಾನ ಹಕ್ಕು ಮತ್ತು ಮರ್ಯಾದೆ, ಅಸ್ಪೃಶ್ಯತೆಯ ನಿವಾರಣೆ, 'ಕಾಯಕದ ಮಹತ್ವ', 'ಸ್ವಯಂಪೂರ್ಣ ಸಮಾಜದ ನಿರ್ಮಾಣ', ಮುಕ್ತಿಯ ಮಾರ್ಗದ ಬೋಧನೆ, ಸರ್ವ ಸಮತಾ ಭಾವನೆ, ಅಂತರ್ಜಾತೀಯ ವಿವಾಹ ಇತ್ಯಾದಿ.

ಬಸವಣ್ಣನವರು ೧೨ ವರುಷಗಳಲ್ಲಿ ಸಾಮಾಜಿಕ ಅಸಮಾನತೆ ನೀಗಿಸಿ ಸಮಾಜಕ್ಕೆ ದಾರಿ ದೀಪವಾದರು. ಆದರೆ ಸ್ವಾತಂತ್ರ್ಯ ಬಂದು ೬೩ ವರುಷಗಳಾಗಿದ್ದರೂ ಕನಿಷ್ಠ ಬಸವಣ್ಣನವರ ಧ್ಯೇಯಗಳನ್ನು ಅನುಷ್ಠಾನಕ್ಕೆ ತರಲು ಈಗಿನ ಸರಕಾರಗಳಿಗೆ ಸಾಧ್ಯವಾಗಿಲ್ಲ. ಬಸವಣ್ಣನವರ ಜೀವನದ ಅವಧಿ ೩೬ ವರ್ಷಗಳು ಸಾಧಿಸಿದ ಕಾರ್ಯ ನೆನೆಸಲೂ ಅಸಾಧ್ಯ. ಚಾಡಿಕೋರರಿಂದ ಭಂಡಾರಿಯಾದ ಬಸವಣ್ಣನವರ

ಮೇಲೆ ಆಪಾದನೆ ಹೊರಿಸಿದಾಗ ಬಿಜ್ಜಳ ಮಹಾರಾಜ ಮತ್ತು ಬಸವಣ್ಣನವರ ಮಧ್ಯೆ ವಿರಸ, ಬಸವಣ್ಣ ಮಂತ್ರಿ ಪದವಿ ತ್ಯಜಿಸಿದಾಗ, ಭಂಡಾರ ದುರುಪಯೋಗ ವಾಗಿಲ್ಲವೆಂದು ಲೆಕ್ಕ ಪತ್ರಗಳಿಂದ ತಿಳಿದಾಗ ಬಿಜ್ಜಳ ಮಹಾರಾಜ ಪಶ್ಚಾತ್ತಾಪ ಪಟ್ಟುಕೊಳ್ಳುವುದು – ಈ ವಿಷಯವು ವಚನ ರೂಪದಲ್ಲಿ ಹೀಗೆ ವ್ಯಕ್ತವಾಗಿದೆ. "ಕೂಡಲ ಸಂಗಮ ದೇವಯ್ಯನುಳ್ಳನ್ನಕ್ಕ ಬಿಜ್ಜಳನ ಭಂಡಾರವೆನಗೇಕಯ್ಯ." ಈಗಿನ ರಾಜಕೀಯದವರು ಸರ್ಕಾರದ ಭಂಡಾರವನ್ನು ಲೂಟಿ ಹೊಡೆದು ಪದವಿಯನ್ನು ತ್ಯಜಿಸದೆ ಸಾಮಾಜಿಕ ಅಸಮಾನತೆಗೆ ಕಿಂಚಿತ್ತೂ ಲೆಕ್ಕಿಸದೆ ನಿರಂಕುಶ ಪ್ರಭುತ್ವವನ್ನು ಬಯಸುತ್ತಾ ಆಸ್ತಿ ಅಂತಸ್ತುಗಳನ್ನು ಹೆಚ್ಚಿಸುತ್ತಾ ಮುಂದಿನ ಚುನಾವಣೆಗೆ ಹಣ ಜಮಾಯಿಸುತ್ತಾ, ಕಳ್ಳ ಆಸ್ತಿ ಸಂಪಾದನೆಯ ಗುಂಗಿನಲ್ಲಿಯೇ ಕಾಲ ಕಳೆಯುತ್ತಾರೆ. ಸಾಮಾಜಿಕ ಸಮಸ್ಯೆ, ಅಸಮಾನತೆ ನಿವಾರಣೆ ಇವರಿಂದ ಸಾಧ್ಯವೇ ? ೨೧ನೇ ಶತಮಾನದಲ್ಲಿ ಬಸವಣ್ಣನಂತಹ ವ್ಯಕ್ತಿ ಅಥವಾ ಬಸವಣ್ಣನವರೇ ಮರುಜನ್ಮವೆತ್ತಿ ಬಂದರೆ ಎಲ್ಲಾ ರೀತಿಯ ಧರ್ಮ ಸಂಸ್ಥಾಪನೆ ಸಾಧ್ಯವಾಗಬಹುದು. ಬಸವಣ್ಣನವರು ಸಾಮಾನ್ಯರಾಗಿ ಹುಟ್ಟಿ ಅಸಾಮಾನ್ಯರಾಗಿ ಬೆಳೆದು ಯುಗ ಪ್ರವರ್ತಕ ಶಕ್ತಿಯಾಗಿ ಸಾಧನೆಗೈದರು. ಸಮಾಜದ ಒಳಿತಿಗಾಗಿ ಹೋರಾಡಿದರು. ಅವರ ಚಿಂತನೆ, ವಿಚಾರಗಳು ಇಂದಿಗೂ ಸಹ ಪ್ರಸ್ತುತ. ಬಸವಣ್ಣನವರು ಕ್ರಾಂತಿಕಾರರಾಗಿ ಸಮಾಜದಲ್ಲಿ ಸುಧಾರಣೆಗಳನ್ನು ತಂದರು. ಕೆಲವು ಪಟ್ಟಭದ್ರಶಕ್ತಿಗಳಿಂದ ಕ್ರಾಂತಿಯ ಪರಿಣಾಮ ಕ್ಷೀಣಿಸಿದಾಗ ನಿರಾಶೆ ಉಂಟಾಗಿತ್ತು. "ಮರಣವೇ ಮಹಾನವಮಿ" ಎಂದು ಮೃತ್ಯುವಿಗೆ ತಲೆಬಾಗಿ ಕೂಡಲಸಂಗಮದಲ್ಲಿ ಐಕ್ಯ ಹೊಂದಿದರು.

೩) ಬಸವಣ್ಣನವರು ಬಿಟ್ಟು ಹೋದ ವಚನ ಪುಷ್ಪಗಳು

ಅಹಿಂಸೆ, ಸಸ್ಯಾಹಾರ, ಸದಾಚಾರ, ರಸಪ್ರಜ್ಞೆ, ನೀತಿ ಪ್ರಜ್ಞೆ ಇವುಗಳ ಬಗ್ಗೆ ಲೋಕಕ್ಕೆ ಉಪದೇಶ, ಅಹಂಕಾರವಿಲ್ಲದೆ ವಿಶ್ವಕುಟುಂಬಿಯಾಗಿ ಈಶ್ವರನಲ್ಲಿ ಲೀನವಾಗುವುದು. ಆಚಾರವೇ ಶ್ರೇಷ್ಠಧರ್ಮ, ಕೇವಲ ಪರೋಪದೇಶ ಮಾಡದೆ ಸ್ವತಃ ಅನುಸರಿಸಿ ಇನ್ನೊಬ್ಬರಿಗೆ ಹೇಳುವುದಾಗಿದೆ. "ತನುವಬೇಡಿದಡೀವೆ, ಮನವ ಬೇಡಿದಡೀವೆ" ಎಂಬಲ್ಲಿ ನಿಷ್ಕಾಮ ಕರ್ಮ. ಶರೀರವ ದಂಡಿಸಿ ದಣಿಸಿ ನಿನ್ನ ಸ್ತುತಿಯ ಮಾಡಿ ಒಲಿಸುವೆನು ಎಂದು ಸಂಗಮದೇವನಿಗೆ ಹೇಳಿದ್ದಾರೆ. "ವಚನದಲ್ಲಿ ನಾಮಾಮೃತ ತುಂಬಿ ಭಕ್ತಿ ಶುಭಾಶಯ ನುಡಿಯ ನುಡಿವೆ, ನುಡಿದಂತೆ ನಡೆವೆ, ನುಡಿಯ ಪೂರೈಸುವೆ." ಈ ರೀತಿ ಆಡಿದ್ದನ್ನು ಮಾಡಿ ಆಚರಿಸಿ ತೋರಿಸಿದ ಮಹಾನುಭಾವರು. ಇವರ ವಚನಗಳಲ್ಲಿ ಭಕ್ತಿ, ವೀರತನ, ವ್ಯಥೆ, ವೈರಾಗ್ಯ ಅದ್ಭುತ ರಸಗಳ ವರ್ಣನೆ ಇದೆ. "ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು ಬಪ್ಪುದು

ನಮಗೀಗಲೇ ಬರಲಿ, ಇದಕಾರಂಜುವರು, ಇದಕಾರಳುಕುವರು." ವ್ಯಕ್ತಿತ್ವದ ವೀರಭಾವ ಧೈರ್ಯ ಸೂಚನೆ. ಸುಪ್ರಭಾತದ ಸಮಯದಲ್ಲಿ ಲಿಂಗವ ನೆನೆದರೆ ತಪ್ಪುವುವು ಅಪಮೃತ್ಯು "ಚಕೋರಂಗೆ ಚಂದ್ರಮನ ಬೆಳಕಿನ ಚಿಂತೆ...". ಸೌಂದರ್ಯ ಅಭಿವ್ಯಕ್ತಿಯೊಂದಿಗೆ ನಿಸರ್ಗ ಪ್ರೀತಿ ಕಂಡುಬರುತ್ತದೆ. ಹಾಗೆಯೇ ವಚನಗಳಲ್ಲಿ ಶಾಸ್ತ್ರ, ಆಗಮ, ವೇದ, ಉಪನಿಷತ್ತು ಪರಂಪರೆಗಳ ಹಿನ್ನೆಲೆ ಕಂಡುಬರುವುದು.

೪) ಸಾಮಾಜಿಕ ಪ್ರಜ್ಞೆ

"ವ್ಯಕ್ತಿ ಇಲ್ಲದೆ ಸಮಾಜ ಇಲ್ಲ, ಸಮಾಜವಿಲ್ಲದೆ ವ್ಯಕ್ತಿ ಇಲ್ಲ"– ಉತ್ತಮ ವ್ಯಕ್ತಿಗಳ ನಿರ್ಮಾಣಕ್ಕೆ ಬೇಕಾದಂತಹ ಜೀವನ ಮೌಲ್ಯಗಳನ್ನು ವಚನಗಳಲ್ಲಿ ವಿವರಿಸಿದ್ದಾರೆ. ನೈತಿಕವಾಗಿ, ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ವ್ಯಕ್ತಿ ಬೆಳೆದರೆ ಅವನಿಂದ ಸಮಾಜಕ್ಕೆ ಒಳ್ಳೆಯದಾಗುವುದು.

ಹನ್ನೆರಡನೆಯ ಶತಮಾನದಲ್ಲಿ ಜನರು ವಿವಿಧ ಮತಧರ್ಮಗಳ ಪೈಪೋಟಿ, ಮೇಲು ಕೀಳು ಭಾವನೆ, ರಾಜಕೀಯ ಘರ್ಷಣೆಗಳು ಮುಂತಾದವುಗಳಿಂದ ಅಸ್ಥಿರ ಸ್ಥಿತಿಯಲ್ಲಿದ್ದವರಿಗೆ, ಸಮಾಜದಲ್ಲಿ ಕಂದಾಚಾರ, ಢಾಂಬಿಕತೆ, ಮೂಢನಂಬಿಕೆ, ಮೋಸ, ವಂಚನೆ ಅವಲಂಬಿಸಿದ್ದವರಿಗೆ ಹಿತ ನುಡಿಗಳನ್ನು ಬೋಧಿಸುವುದರ ಜೊತೆಗೆ, ಸಮುದ್ರದಲ್ಲಿರುವ ರತ್ನಗಳನ್ನು ಹೊರತಂದಂತೆ ಜನರಿಗೆ ಅಮೃತ ನೀಡುವ ವಚನಗಳನ್ನು ಧಾರೆಯೆರೆದರು.

ಸ್ವರ್ಗ, ನರಕ, ಧರ್ಮ ಮುಂತಾದವುಗಳಿಗೆ ಹೊಸ ವ್ಯಾಖ್ಯೆ ನೀಡಿ "ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ" "ಆಚಾರವೇ ಸ್ವರ್ಗ, ಅನಾಚಾರವೇ ನರಕ" "ದಯವೇ ಧರ್ಮದ ಮೂಲವಯ್ಯ", "ದೇವನೊಬ್ಬ ನಾಮ ಹಲವು" ಎಂಬ ಸರಳ ಉಪದೇಶಗಳಿಗೆ ನೂತನ ವ್ಯಾಖ್ಯೆಗೆ ಉದಾಹರಣೆಗಳಾಗಿವೆ. ಹಾಗೆಯೇ ಗಾದೆಗಳು "ಹುತ್ತವ ಬಡಿದರೆ ಹಾವು ಸಾಯಬಲ್ಲುದೇ ಅಯ್ಯಾ" "ಅರಿತರೆ ಶರಣ ಮರೆತರೆ ಮಾನವ" "ಹಾಲಲ್ಲದ್ದು ನೀರಲ್ಲದ್ದು" "ಬಡವನ ಕೋಪ ದವಡೆಗೆ ಮೃತ್ಯು".

ವರ್ಣ ವ್ಯವಸ್ಥೆಯ ಬಗ್ಗೆ ಅಸಮಾಧಾನಗೊಂಡ ಬಸವಣ್ಣ "ಹೊಲಸ ತಿಂಬುವವನೇ ಹೊಲೆಯ, ಕೊಲ್ಲುವವನೇ ಮಾದಿಗ". ಎಲ್ಲರಿಗೂ ಒಂದೇ ಆಗಿರುವ ನೆಲಜಲಗಳಲ್ಲಿ ವರ್ಣಭೇದ ಸಲ್ಲದು. "ಕಾಯಕವೇ ಕೈಲಾಸ". ವ್ಯಕ್ತಿ ಗೌರವ ವ್ಯಕ್ತಿಯು ಸ್ವತಃ ಸಾಧನೆ ಮಾಡಬೇಕು. "ಕಲ್ಲುನಾಗರಕ್ಕೆ ಹಾಲು ಕೊಡುವವರು ಜಂಗಮ ಬಂದರೆ ನಡೆಯೆಂಬರು" ಎಂಬ ಗೇಲಿಯೊಡನೆ ಜನಸೇವೆಯು ಜನಾರ್ಧನನ ಸೇವೆ ಎಂದು ಹೇಳಿದರು.

ಆದರೆ ಈಗಿನ ಮಂದಿ ಧಾರ್ಮಿಕ ಕಾರಣಗಳಿಗಾಗಿ ಅಂದರೆ ಭಿಕ್ಷಾಟನೆಗೆ ಧರ್ಮದ ಬೆಂಬಲವಿದೆ ಎಂಬ ಕಾರಣದಿಂದಾಗಿ ಭಿಕ್ಷಾಟನೆ ಮಾಡುವುದು ಸಂಪ್ರದಾಯ ಶರಣ ಸಮಾಜದಲ್ಲಿ ಸಾಮಾನ್ಯವಾಗಿದೆ. ಯಾವುದೇ ಧಾರ್ಮಿಕ ಶ್ರದ್ಧೆಯಿಲ್ಲದೆ ಸಾಧು ಸನ್ಯಾಸಿಗಳಂತೆ ವೇಷಧರಿಸಿ ಜನರನ್ನು ಮೋಸಪಡಿಸುವ ಕಪಟ ಸನ್ಯಾಸಿಗಳು, ಜಂಗಮರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಭಿಕ್ಷಾಟನೆ ಸುಲಭವಾಗಿ ಜೀವನ ನಡೆಸಿ ಹೊಟ್ಟೆ ಹೊರೆದುಕೊಳ್ಳುವ ಒಂದು ವಿಧಾನ ಮಾತ್ರ, ಜಂಗಮರು ಭಿಕ್ಷೆ ಪಡೆದು ಇನ್ನೊಬ್ಬರಿಗೆ ಹಂಚುವ ಪ್ರವೃತ್ತಿ ನಶಿಸಿದೆ. ಜಂಗಮರೂ ಭಿಕ್ಷೆ ಎತ್ತಿ ಯಾರೂ ದಾಸೋಹ ನಡೆಸುವುದಿಲ್ಲ.

ಸಮಾಜದಲ್ಲಿ ಪರಸ್ಪರ ಪ್ರೀತಿ, ಸಹಕಾರ, ಉತ್ತಮ ಭಾವನೆ, ಎಲ್ಲರೂ ಎಲ್ಲರಿಗಾಗಿ ಎಂಬ ಸರ್ವೋದಯ ತತ್ವ, ಪಶು ಪಕ್ಷಿ, ಕಾಗೆ – ಕೋಳಿಗಳ ಉದಾಹರಣೆಯಿಂದ "ಹಂಚಿ ಉಂಡರೆ ಹಸಿವಿಲ್ಲ" ಎಂದು ತಿಳಿಸಿದರು.

"ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ" ಅಂತರಂಗ ಬಹಿರಂಗ ಶುದ್ಧಿಯ ಬಗ್ಗೆ ಬೇರೆಯವರಿಗೆ ಉಪದೇಶ ಕೊಡುವವರಿಗೆ "ನಿಮ್ಮ ನಿಮ್ಮ ಮನವ ತನುವ ಸಂತೈಸಿಕೊಳ್ಳಿ". ಸ್ವಾತಂತ್ರ್ಯ ಸಮಾನತೆ, ಕಾಯಕದ ಮಹತ್ವ, ಭಕ್ತಿ ದಯೆ ವಿನಯ ಸಾತ್ವಿಕತೆಗಳ ಬಗ್ಗೆ ಉಪದೇಶಿಸಿ ಜನರ ಉದ್ಧಾರಕ್ಕಾಗಿ ಪ್ರಯತ್ನಿಸಿದರು. "ನೀನೊಲಿದರೆ ಕೊರಡು ಕೊನರುವುದಯ್ಯ, ನೀನೊಲಿದರೆ ಬರಡು ಹಯನಹುದಯ್ಯ" ವಿಷ ಅಮೃತವಾಗುವುದು. ಭಗವಂತನ ಒಲುಮೆಯಿಂದ ಏನು ಬೇಕಾದರೂ ಉಂಟಾಗಬಹುದು. ದೇವರ ಕಾಣುವ ಸೂತ್ರ "ಓಂ ನಮಃ ಶಿವಾಯ" ಎಂಬುದೇ ಮಂತ್ರ ತಂತ್ರ, ಆದ್ದರಿಂದ ಬಸವಣ್ಣನವರಿಗೆ ಭಗವಂತನ ಸಾಕ್ಷಾತ್ಕಾರ ಉಂಟಾಯಿತು.

೫) ವಿಶ್ವಮಾನವ ಬಸವಣ್ಣ

ಕ್ರಾಂತಿ ಪುರುಷ ಬಸವಣ್ಣ ಸಮಾಜದ ಅಂಕುಡೊಂಕುಗಳನ್ನು ಸರಿಪಡಿಸಲು ಸಮಾಜ ಸುಧಾರಕನಾಗಿ, ತತ್ವಜ್ಞಾನಿಯಾಗಿ, ಕವಿಯಾಗಿ ಭಾವಜೀವಿಯಾಗಿ ವಿಶ್ವಮಾನವರಾದರು. ಗೌತಮ ಬುದ್ಧನ ದಯೆ, ವರ್ಧಮಾನ ಮಹಾವೀರನ ಅಹಿಂಸೆ, ಮೊಹಮ್ಮದ ಪೈಗಂಬರರ ಕೆಚ್ಚು, ಏಸುಕ್ರಿಸ್ತನ ಸರಳತೆ, ದಯೆ, ಮಹಾತ್ಮ ಗಾಂಧೀಜಿಯ ಸತ್ಯ, ನಿಷ್ಠೆ, ಅಹಿಂಸೆ – ಹೀಗೆ ಅನೇಕ ಮಾನವಗುಣಗಳಿಗೆ ಆಶ್ರಯರಾದರು ಬಸವಣ್ಣ. ಕಾಯಕ ತತ್ವದ ಮಹತ್ವ, ಸರ್ವ ಸಮಾನತೆ ತತ್ವಗಳಿಂದ ಎಲ್ಲಾ ಜಾತಿ ವರ್ಗ ವಯಸ್ಸಿನ ಜನರನ್ನು ಆಕರ್ಷಿಸಿದರು. ಕಲ್ಯಾಣದ ಮಾತುಕತೆಯೇ ಅನುಭವ ಮಂಟಪವಾಯಿತು. ಮಾತು ವಚನವಾಯ್ತು. ಬಸವಣ್ಣ ಸಾಧಕರು

ಸುಧಾರಕರು ಬರೀ ಬೋಧಕರಲ್ಲ, ಸರ್ವ ಸಮ ಭಾವನೆಯಿತ್ತು. ವರ್ಣಭೇದದ ಅನಿಷ್ಟವನ್ನು ದೂರ ಮಾಡಲು ಪ್ರಯತ್ನ, ಹುಟ್ಟಿನಿಂದ ಕುಲವನಳಿಯದೆ ಆಚರಣೆಯಿಂದ ನಿರ್ಧರಿಸಬೇಕು. ಲಿಂಗವಿದ್ದ ಮನೆಯೇ ಕೈಲಾಸವೆಂತಲೂ, ಸಕಲಜೀವಾತ್ಮರಿಗೆ ಲೇಸಬಯಸುವವನೇ ಶರಣ ಎಂದೂ ಸಾರಿದರು. ಬಸವಣ್ಣನವರು ನಿಷ್ಠುರವಾದಿಗಳು. ವಜ್ರಕ್ಕಿಂತಲೂ ಕಠಿಣರಾಗಿ ಹೂವಿಗಿಂತಲೂ ಮೃದುವಾಗಿದ್ದವರು. ವಿನಯದಲ್ಲಿ ಅದ್ವಿತೀಯರು. "ಎನ್ನವರೊಲಿದು ಹೊಗಳಿ ಹೊಗಳಿ ಹೊನ್ನ ಶೂಲದಲಿಕ್ಕಿದರು" ಎಂದು ಹೊಗಳಿಕೆಯ ಬಗ್ಗೆ ನುಡಿದಿದ್ದಾರೆ. ಬಸವಣ್ಣನವರು ಒಳ್ಳೆಯ ಸಂಘಟನಾ ಶಕ್ತಿಯನ್ನುಳ್ಳವರಾಗಿ ದಾಸೋಹದ ಮಹತ್ವ, ಆತ್ಮಸಾಕ್ಷಿಯಂತೆ ಬದುಕುವುದು, ಶಿವಾನುಭವ ಮಂಟಪದ ಸ್ಥಾಪನೆ, ಶಿವಶರಣರನ್ನು ಸಂಘಟಿಸುವುದು, ಮುಂತಾದ ಅಸಾಧಾರಣ ಕಾರ್ಯಗಳನ್ನು ಸಾಧಿಸಿದರು. ಬಸವಣ್ಣ ಒಬ್ಬ ನಿಸ್ವಾರ್ಥಿ. "ಈ ಲೋಕದಲ್ಲಿ ನಾನು ವ್ಯರ್ಥವಾಗಿ ಆಕಸ್ಮಿಕವಾಗಿ ಜನಿಸಿದೆನು" ಎಂದು ಹೇಳಿಕೊಂಡರೆ, ಮತ್ತೊಂದು ಕಡೆ ಹುತ್ತಕ್ಕೆ ಹಲವಾರು ಬಾಯಿಗಳಿದ್ದರೂ ಅದರಲ್ಲಿರುವ ಹಾವು ಒಂದೇ ಆಗಿರುವುದು. ಆಡಿನ ಕೊರಳಲ್ಲಿ ಮೊಲೆಯಿದ್ದರೆ ಅದರಲ್ಲಿ ಅಮೃತವಿರುವುದಿಲ್ಲ. ಪೆಟ್ಟು ಬಿದ್ದು ಕೆಳಗೆ ಬಿದ್ದ ಹಣ್ಣು ಉಪಯೋಗಕ್ಕೆ ಬಾರದು. ಕೇವಲ ಆಡಂಬರದಿಂದ ಪ್ರಯೋಜನವಿಲ್ಲ, ಅಂತರಂಗದಲ್ಲಿ ಶುದ್ಧಿಯಿಲ್ಲದವರು ಭಸ್ಮ, ರುದ್ರಾಕ್ಷಿ ಧರಿಸಿದರೇನು ಫಲ. ಸತ್ಯವಂತರಾಗಿ ಸಜ್ಜನವಾಗಿದ್ದವನಿಗೆ ನಿತ್ಯದ ನೇಮಗಳೇಕೆ. ಋಣ ತೀರದ ಹೆಂಡತಿಯಿಂದ, ಗುಣವಿಲ್ಲದ ನೆಂಟರಿಂದ ಜೀವವಿಲ್ಲದ ದೇಹದಿಂದ ಫಲವಿಲ್ಲ. ರಾಜನಿಗೆ ಒಲ್ಲದ ಅಳಿಯನಿಂದ, ಸಂಪತ್ತಿಲ್ಲದ ರಾಜನಿಂದ ವರ ಕೊಡದ ದೇವರಿಂದ ಫಲವಿಲ್ಲ. ಬಿದ್ದ ಹೂವಿನಲ್ಲಿ ಸುವಾಸನೆ, ವೃದ್ಧಳಾದ ಸೂಳೆಯಲ್ಲಿ ಮಧುರತೆ, ಕೊಳಚೆ ನೀರಿನಲ್ಲಿ ಸ್ವಚ್ಛತೆ ಸಿಗುವುದಿಲ್ಲ. ತೆರಿಗೆ ಕೊಡದೆ ಕಳ್ಳತನದಿಂದ ಹಣ ಸಂಪಾದಿಸಿದರೆ ಅದು ಉತ್ತಮ ಕಾರ್ಯಕ್ಕೆ ಸಲ್ಲುವುದಿಲ್ಲ. ಸಮತೆ ಸದ್ಭಾವ ಸತ್ಯವೆಂಬ ತ್ರಿಗುಣಗಳಿಂದಾದ ಕ್ರೋಧವು ಅಳಿಯುವ ತನಕ, ಆತ್ಮಸ್ತುತಿ ಪರನಿಂದೆ, ಅಸಹ್ಯತನ, ಸುಳ್ಳು ನಾಶಹೊಂದುವ ತನಕ ಅಹಂಕಾರ ಮತ್ಸರ ಅಳಿಯುವ ತನಕ, ಅರಿಷಡ್ವರ್ಗಗಳು ಬಾಡದ ತನಕ ಶ್ರೇಷ್ಠವಾದ ಅನುಭಾವ ದೊರೆಯಲಾರದು ಎಂಬ ಸಮಾಜದ ಸ್ಥಿತಿಗತಿಯ ಬಗ್ಗೆ ಪರಿಪಾಠ ಮಾಡಿದ್ದಾರೆ.

ಪ್ರಸ್ತುತ ಕಾಲದಲ್ಲಿ ಬಸವಣ್ಣನವರ ಮಾನವಧರ್ಮದ ತತ್ವಗಳು, ಸಾಮಾಜಿಕ ಸುಧಾರಣೆಗಳು, ಸಾಮಾಜಿಕ ಪ್ರಜ್ಞೆಗಳು, ಪ್ರಜಾಸತ್ತಾತ್ಮಕ ರಾಷ್ಟ್ರದ ಸಂವಿಧಾನದಲ್ಲಿ ಅಳವಡಿಸಲಾಗಿದ್ದು ಅನುಷ್ಠಾನ ತೀವ್ರ ಮಂದಗತಿಯಲ್ಲಿ ಸಾಗಿದೆ. ಪ್ರಜಾಪ್ರಭುತ್ವದ ವ್ಯವಸ್ಥೆ ನ್ಯಾಯ ಸಮ್ಮತದ ಹಾದಿಯಲ್ಲಿ ನಡೆದರೆ ಅನುಷ್ಠಾನ ಸಾಧ್ಯ.

ಬಸವಣ್ಣನವರ ಸಮಾಜದ ಕಳಕಳಿ ಇಡೀ ವಿಶ್ವಕ್ಕೆ ಸಾರಿದ ತತ್ವಗಳು. ಬೌದ್ಧ, ಕ್ರೈಸ್ತ ಇಸ್ಲಾಮಿಕ್ ಧರ್ಮಗಳು, ವಿಶ್ವವ್ಯಾಪಿ ಹರಡಿದ ಹಾಗೆ ಬಸವಣ್ಣನವರ ಮಾನವ ಧರ್ಮ ಕೇವಲ ಒಂದು ಅಥವಾ ಎರಡು ರಾಜ್ಯಗಳಲ್ಲಿ ಸ್ವಲ್ಪ ಮಟ್ಟಿಗೆ ಪ್ರಚಾರದಲ್ಲಿದೆ. ಮಾನವ ಧರ್ಮ ವಿಶ್ವವ್ಯಾಪಿಯಾಗಿ ಪ್ರಚಾರವಾಗದಿದ್ದರೂ ನಮ್ಮ ದೇಶದಲ್ಲಿಯೇ ಕುಂಠಿತಗೊಂಡಿದೆ. ಕೇವಲ ತತ್ವಗಳನ್ನು ಬಸವ ಜಯಂತಿಗೆ ಸೀಮಿತಗೊಳಿಸದೆ ಆಂಗ್ಲಭಾಷೆಗೆ ಅಥವಾ ಆಯಾ ಸ್ಥಳೀಯ ಭಾಷೆಗೆ ಅನುವಾದ ಮಾಡಿ ರಾಷ್ಟ್ರವ್ಯಾಪಿಯಾಗಿ ಸಮಾಜ ಸುಧಾರಕರು, ಚಿಂತಕರು, ರಾಜಕಾರಣಿಗಳು ಅನುಷ್ಠಾನಕ್ಕೆ ತರಲು ಪ್ರಯತ್ನ ನಡೆಸಿದರೆ ಆಗ ಬಸವ ಜಯಂತಿಗೆ ಒಂದು ಅರ್ಥ ಬರುತ್ತದೆ. ಹಾಗೆಯೇ ಸಮಾಜದ ಏಳಿಗೆಗೆ ದಾರಿದೀಪವಾಗುತ್ತದೆ.

❑

೨. ಮೈಸೂರು ಸಂಸ್ಥಾನದಲ್ಲಿ ಆಧುನಿಕ ಮಾದರಿಯ ಸ್ಥಳೀಯ ಆಡಳಿತ (೧೮೩೧-೧೯೪೭)

-ಹನುಮಂತರಾಜು ಎಂ.ಜಿ.

ಕ್ರಿ.ಶ. ೧೭೯೯ರಲ್ಲಿ ಟಿಪ್ಪುವಿನ ಮರಣಾನಂತರ ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಸ್ಥಿತ್ಯಂತರಗಳು ಹಾಗೂ ಗೊಂದಲಗಳು ಸೃಷ್ಟಿಯಾದವು. ಈ ಸಂದರ್ಭದಲ್ಲಿ ಒಡೆಯರಿಗೆ ಪುನಃ ಅಧಿಕಾರವನ್ನು ಈಸ್ಟ್ ಇಂಡಿಯಾ ಕಂಪನಿಯವರು ವಹಿಸಿಕೊಟ್ಟರು. ಕ್ರಿ.ಶ. ೧೮೦೦ ರಿಂದ ೧೮೮೧ರ ಕಾಲಘಟ್ಟ ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಒಂದು ವಿಶಿಷ್ಟವಾಗಿದೆ. ಈ ಅವಧಿಯಲ್ಲಿ ಮೈಸೂರು ಒಡೆಯರು ಮರಳಿ ರಾಜ್ಯಾಧಿಕಾರವನ್ನು ಪಡೆದುಕೊಂಡರಲ್ಲದೆ, ಸಂಸ್ಥಾನವು ಆಧುನಿಕ ಕಾಲದತ್ತ ಹೆಜ್ಜೆಯಿಡುತ್ತಿತ್ತು. ಅದೇ ಸಂದರ್ಭದಲ್ಲಿ ೧೮೩೧ರಲ್ಲಿ ನಡೆದ ನಗರದಂಗೆಯ ಪರಿಣಾಮವಾಗಿ ಆಡಳಿತ ಸೂತ್ರವನ್ನು ಬ್ರಿಟಿಷರಿಗೆ ಒಪ್ಪಿಸಬೇಕಾಯಿತು. ಕ್ರಿ.ಶ. ೧೮೩೧ರಿಂದ ೧೮೮೧ರವರೆಗೆ ಬ್ರಿಟಿಷರ ನೇರ ಆಡಳಿತ ಮೈಸೂರು ಸಂಸ್ಥಾನದಲ್ಲಿ ನೆಲಸಿತ್ತು. ಈ ಅವಧಿಯಲ್ಲಿ ಬ್ರಿಟಿಷ್ ವಸಾಹತು ನೀತಿಯ ಧೋರಣೆ ಎಲ್ಲಾ ರಂಗಗಳಲ್ಲೂ ಕಾಣಿಸಿಕೊಂಡಿತು.

ಮೈಸೂರು ಸಂಸ್ಥಾನದ ಆಧುನಿಕ ಕಾಲದ ರಾಜಕೀಯ ಇತಿಹಾಸವು ಅನೇಕ ದೃಷ್ಟಿಕೋನಗಳಿಂದ ಮಹತ್ವವುಳ್ಳದ್ದಾಗಿದೆ. ಏಕೆಂದರೆ ರಾಜಪ್ರಭುತ್ವ ಮಾದರಿಯ ಸರ್ಕಾರ ಅಸ್ತಿತ್ವವಿದ್ದ ಮೈಸೂರು ಸಂಸ್ಥಾನದಲ್ಲಿ ಕ್ರಿ.ಶ. ೧೮೩೧ರಲ್ಲಿ ಹೊಸ ರೀತಿಯ ಆಡಳಿತ ವ್ಯವಸ್ಥೆಯು ಕಾಣಿಸಿಕೊಂಡಿತು. ಇದಕ್ಕೆ ೧೮೩೧ರಲ್ಲಿ ಮೈಸೂರು ಸಂಸ್ಥಾನದಲ್ಲಿ ಕಾಣಿಸಿಕೊಂಡ ರಾಜಕೀಯ ವಿಪ್ಲವಗಳು ಕಾರಣವೆನ್ನಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸಂಸ್ಥಾನದಾದ್ಯಂತ ಸಂಭವಿಸಿದ ಅನೇಕ ದಂಗೆಗಳು ಸ್ಥಳೀಯ ಆಡಳಿತಗಾರರ ಸ್ವತಂತ್ರ ಪ್ರವೃತ್ತಿಯನ್ನು ಪ್ರತಿಬಿಂಬಿಸುವುದರ ಜೊತೆಗೆ ಅಂದಿನ ಆಡಳಿತಾತ್ಮಕ ದೌರ್ಬಲ್ಯತೆಗಳನ್ನು ಸಹ ಎತ್ತಿ ತೋರಿಸುತ್ತದೆ. ಉದಾಹರಣೆಗೆ, ಕ್ರಿ.ಶ. ೧೮೩೦ರಲ್ಲಿ ಬೂದಿಬಸಪ್ಪ ಅಥವಾ ಕುಂಶಿಯ ಮಲ್ಲನ ನೇತೃತ್ವದಲ್ಲಿ ನಡೆದ 'ನಗರದಂಗೆಯನ್ನು' ಮೈಸೂರು ಸೈನ್ಯವು

ಅಡಗಿಸಲಾಗದೆ ಕೊನೆಗೆ ವಸಾಹತು ಸೈನ್ಯದ ನೆರವಿನಿಂದ ದಂಗೆಯನ್ನು ಕೊನೆಗಾಣಿಸಬೇಕಾಯಿತು. ಅಂತಿಮವಾಗಿ ಮೈಸೂರು ಸಂಸ್ಥಾನದ ಆಡಳಿತವನ್ನು ಅಂದಿನ ಬ್ರಿಟಿಷ್ ಗೌರ್ನರ್ ಜನರಲ್ ಆಗಿದ್ದ ವಿಲಿಯಂ ಬೆಂಟಿಂಕ್ ವಸಾಹತು ಸಾಮ್ರಾಜ್ಯದ ಕಕ್ಷೆಗೆ ತೆಗೆದುಕೊಂಡಿದ್ದುದರಿಂದ ಸುಮಾರು ೫೦ ವರ್ಷಗಳ ಕಾಲ ಮೈಸೂರು ಸಂಸ್ಥಾನವು ಬ್ರಿಟಿಷರ ನೇರ ನಿಯಂತ್ರಣ ಹಾಗೂ ಆಡಳಿತಕ್ಕೊಳಪಟ್ಟಿತು.

ಅರ್ಧಶತಮಾನದ ಕಾಲ ಮೈಸೂರು ಸಂಸ್ಥಾನದಲ್ಲಿ ರಾಜಪ್ರಭುತ್ವ ತಾತ್ಕಾಲಿಕವಾಗಿ ರದ್ದಾಗಿ ಹೊಸ ಮಾದರಿಯ ಅಂದರೆ ಪಾಶ್ಚಿಮಾತ್ಯ ಹಾಗೂ ಆಧುನಿಕ ರೀತಿಯ ಆಡಳಿತ ವ್ಯವಸ್ಥೆಗಳು ಜಾರಿಗೆ ಬಂದವು. ಕ್ರಿ.ಶ. ೧೮೮೧ರಲ್ಲಿ ಪುನಃ ಮೈಸೂರು ಒಡೆಯರಿಗೆ ಸಂಸ್ಥಾನದ ಅಧಿಕಾರವು ಲಭ್ಯವಾದರೂ ಅದು ಪೂರ್ಣ ಪ್ರಮಾಣದ ರಾಜಪ್ರಭುತ್ವವಾಗಿರಲಿಲ್ಲ. ಏಕೆಂದರೆ ಅಷ್ಟೊತ್ತಿಗಾಗಲೇ ಬ್ರಿಟಿಷ್ ಪ್ರಭುತ್ವದ ನಿಯಂತ್ರಣಕ್ಕೊಳಪಟ್ಟಿದ್ದ ಮೈಸೂರು ಸಂಸ್ಥಾನದ ಅರಸರು ತಮ್ಮ ಸಾರ್ವಭೌಮಾಧಿಕಾರವನ್ನು ಕಳೆದುಕೊಂಡು ಹೆಸರಿಗೆ ಮಾತ್ರ ಮಹಾರಾಜರಾಗಿದ್ದರು.

ಕ್ರಿ.ಶ. ೧೮೩೧ ರಿಂದ ೧೮೮೧ರವರೆಗೆ ಮೈಸೂರು ಸಂಸ್ಥಾನವು ಬ್ರಿಟಿಷ್ ಸಾಮ್ರಾಜ್ಯದ ನೇರ ಆಡಳಿತಕ್ಕೆ ಒಳಪಟ್ಟಿದ್ದುದರಿಂದ ಅನೇಕ ಆಡಳಿತಾತ್ಮಕ ಬದಲಾವಣೆಗಳು ಕಾಣಿಸಿಕೊಂಡವು. ಆಧುನೀಕರಣ, ಪಾಶ್ಚಾತ್ಯೀಕರಣ, ಸಂಸ್ಕೃತೀಕರಣ, ಕೈಗಾರಿಕೀಕರಣ ಮೊದಲಾದ ಹೊಸ ಪರಿಕಲ್ಪನೆಗಳು ಮೈಸೂರು ಸಂಸ್ಥಾನದ ಆಡಳಿತದ ಮೇಲೆ ಪ್ರಭಾವ ಬೀರಿದವು. ಮೈಸೂರು ಸಂಸ್ಥಾನದಲ್ಲಿ ರೆಸಿಡೆಂಟ್, ಕಮೀಷನರ್ ಮೊದಲಾದವರ ಆಡಳಿತ ಪದ್ಧತಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನದ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿಯೂ ಸಹ ಅನೇಕ ಬದಲಾವಣೆಗಳು ಕಾಣಿಸಿಕೊಂಡವು. ಅವುಗಳನ್ನು ಕುರಿತು ಮುಂದೆ ಸಮಗ್ರವಾಗಿ ಚಾರಿತ್ರಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಮೈಸೂರು ಸಂಸ್ಥಾನದ ಆಧುನಿಕ ಸ್ಥಳೀಯ ಆಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ವಿಕಾಸದ ಇತಿಹಾಸವು ಒಂದೂವರೆ ಶತಮಾನದಷ್ಟು ಹಿಂದಿನದು. ಸ್ಥಳೀಯ ಸರ್ಕಾರದ ಪದ್ಧತಿಯನ್ನು ಬ್ರಿಟಿಷ್ ಕಮೀಷನರುಗಳು ರೂಪಿಸಿದರೆ ಸ್ಥಳೀಯ ಸಂಸ್ಥೆಗಳ ಬೆಳವಣಿಗೆಗೆ ಗೊಬ್ಬರ, ನೀರು ಹಾಕಿ ಪೋಷಿಸಿದವರು ಮೈಸೂರು ಅರಸರು. ಅದರಲ್ಲೂ ಮುಮ್ಮಡಿ ಕೃಷ್ಣರಾಜ, ಹತ್ತನೇ ಚಾಮರಾಜ, ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಜಯಚಾಮರಾಜ ಒಡೆಯರು ಈ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬೆಳವಣಿಗೆಗೆ ನೀಡಿದ ಪ್ರೋತ್ಸಾಹ ಸ್ಮರಣಾರ್ಹವಾದುದು. 'ರಾಜರ್ಷಿ' ಎಂಬ ಖ್ಯಾತಿ ಪಡೆದ ನಾಲ್ವಡಿಯವರು ದೂರದೃಷ್ಟಿ ಹೊಂದಿದ ಕೆಲವೇ ಭಾರತೀಯ ಸಂಸ್ಥಾನಿಕರಲ್ಲಿ ಒಬ್ಬರಾಗಿದ್ದರು. ಇದರ ಫಲವಾಗಿ ಮೈಸೂರು ಸಂಸ್ಥಾನ "ಮಾದರಿ ಸಂಸ್ಥಾನ" ಎನಿಸಿಕೊಂಡಿತು.

ಮೈಸೂರು ಸಂಸ್ಥಾನದ ಸ್ಥಳೀಯ ಸರ್ಕಾರದ ಸ್ವರೂಪ

ಆಧುನಿಕ ಮೈಸೂರು ಸಂಸ್ಥಾನದ ಆಡಳಿತ ವ್ಯವಸ್ಥೆಗೆ ಹೆಚ್ಚಿನ ಸುಧಾರಣಾ ಕ್ರಮಗಳು ಪ್ರಾರಂಭವಾದುದು ೧೮೩೧ರಲ್ಲಿ. ಬ್ರಿಟಿಷ್ ಪ್ರಭುತ್ವ ಮೈಸೂರು ರಾಜ್ಯದ ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಅಧಿಕಾರವನ್ನು ಹಿಂದಕ್ಕೆ ಪಡೆದು ಕಮೀಷನರ ಮೂಲಕ ಆಡಳಿತ ನಡೆಸಲು ಪ್ರಾರಂಭಿಸಿದ್ದು ಆ ವರ್ಷದಿಂದಲೇ. ಇಡೀ ಮೈಸೂರು ಸಂಸ್ಥಾನವನ್ನು ಮೂರು ಕಂದಾಯ ವಿಭಾಗಗಳಾಗಿ ಮಾರ್ಪಡಿಸಿ ಒಟ್ಟು ಎಂಟು ಜಿಲ್ಲೆಗಳನ್ನು ರಚಿಸಲಾಯಿತು. ನಂದಿದುರ್ಗ, ಅಷ್ಟಗ್ರಾಮ ಮತ್ತು ನಗರ ಇವು ಆ ಮೂರು ವಿಭಾಗಗಳು. ನಂದಿದುರ್ಗ ವಿಭಾಗಕ್ಕೆ ಬೆಂಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳು ಸೇರಿದ್ದವು. ಅಷ್ಟಗ್ರಾಮ ವಿಭಾಗಕ್ಕೆ ಮೈಸೂರು ಮತ್ತು ಹಾಸನ ಜಿಲ್ಲೆಗಳು ಸೇರಿದರೆ ನಗರ (ಬಿದನೂರು) ವಿಭಾಗಕ್ಕೆ ಶಿವಮೊಗ್ಗ, ಕಡೂರು (ಚಿಕ್ಕಮಗಳೂರು) ಮತ್ತು ಚಿತ್ರದುರ್ಗ ಜಿಲ್ಲೆಗಳು ಸೇರಿದ್ದವು. ಈ ಜಿಲ್ಲಾ ವಿಂಗಡನೆ ಇಂದಿನವರೆಗೂ ಮುಂದುವರೆದುಕೊಂಡು ಬಂದಿದೆ. ವಿಭಾಗಗಳಿಗೆ ವಿಭಾಗ ಸೂಪರಿಂಟೆಂಡೆಂಟ್‌ಗಳು ಮತ್ತು ಜಿಲ್ಲೆಗೆ ಜಿಲ್ಲಾ ಸೂಪರಿಂಟೆಂಡೆಂಟ್‌ಗಳನ್ನು ನೇಮಿಸಲಾಯಿತು.

ಜಿಲ್ಲಾಧಿಕಾರಿಗಳಿಗೆ ಆಡಳಿತ ಮತ್ತು ನ್ಯಾಯಾಂಗಗಳೆರಡರ ಮೇಲೂ ಅಧಿಕಾರವಿದ್ದಿತು. ಆದ್ದರಿಂದ ಜಿಲ್ಲಾಧಿಕಾರಿಗೆ ಆ ಸ್ಥಳೀಯ ಆಡಳಿತದಲ್ಲಿ ಅತ್ಯಂತ ಪ್ರಮುಖ ಸ್ಥಾನ ದೊರೆಯಿತು. ಜಿಲ್ಲೆಗಳನ್ನು ತಾಲ್ಲೂಕುಗಳಾಗಿ ವಿಂಗಡಿಸಲಾಯಿತು. ತಾಲ್ಲೂಕು ಸ್ಥಳೀಯ ಆಡಳಿತದ ಪ್ರಮುಖ ಹಂತವಾಗಿತ್ತು. ಅಮಲ್ದಾರ ತಾಲ್ಲೂಕಿನ ಮುಖ್ಯ ಅಧಿಕಾರಿ. ಅಲ್ಲೇ ಜನಸಾಮಾನ್ಯರ ಎಲ್ಲ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಬೇಕಾಗಿತ್ತು. ಕಂದಾಯ ವಸೂಲಾತಿ, ದರಖಾಸ್ತು ಮಂಜೂರಾತಿ, ಕಾನೂನು ಪಾಲನೆ, ಅಪರಾಧಿಗಳ ವಿಚಾರಣೆ ಇವೆಲ್ಲದರಲ್ಲೂ ತಾಲ್ಲೂಕಿನ ಆಡಳಿತ ಮುಖ್ಯರಾಗಿದ್ದ ಅಮಲ್ದಾರರಿಗೆ ಅಧಿಕಾರವಿದ್ದಿತು. ಹೋಬಳಿಗೆ ಶೇಕ್‌ದಾರ್ ಎಂಬ ಅಧಿಕಾರಿಯಿದ್ದು ಅಮಲ್ದಾರರಿಗೆ ಆಡಳಿತದಲ್ಲಿ ನೆರವಾಗಬೇಕಿತ್ತು. ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಗ್ರಾಮಾಡಳಿತದ ಪ್ರಾಥಮಿಕ ಆಡಳಿತ ಘಟಕವನ್ನು ಹಾಗೆಯೇ ಉಳಿಸಿಕೊಳ್ಳಲಾಯಿತು. ಆದರೆ ಹಿಂದೆ ಇದ್ದ ಗ್ರಾಮಗೌಡನ ಸ್ಥಾನದಲ್ಲಿ ಪೊಲೀಸ್ ಪಟೇಲನು ನೇಮಕವಾದನು. ಆತನಿಗೆ ಕಂದಾಯ ವಸೂಲಾತಿ ಮತ್ತು ಕಾನೂನು ವ್ಯವಸ್ಥೆಯ ಹೊಣೆಯನ್ನು ವಹಿಸಲಾಯಿತು. ಈ ಪಟೇಲ ಹುದ್ದೆ ಬಹುಮಟ್ಟಿಗೆ ಹಿಂದಿನ ಗ್ರಾಮಗೌಡನ ಮನೆತನದವರಿಗೇ ಬಂದಿತು. ಶಾನುಭೋಗನು ಪಾರಂಪರಿಕ ಗ್ರಾಮ ಲೆಕ್ಕಾಧಿಕಾರಿಯಾಗಿದ್ದು, ಆ ಹುದ್ದೆ ಮುಂದುವರಿಯಿತು. ಕುಳವಾಡಿ ಅಥವಾ ತಳವಾರರೂ ಗ್ರಾಮ ಸಹಾಯಕರಾಗಿ ಮುಂದುವರಿದರು.

ಹೀಗೆ ಸ್ಥಳೀಯ ಸರ್ಕಾರದಲ್ಲಿ ಗ್ರಾಮ ಮಟ್ಟದಲ್ಲಿ ಪೂರ್ವ ಪದ್ಧತಿಗೆ ಮನ್ನಣೆ ಕೊಟ್ಟು ಮೇಲಿನ ಮಟ್ಟದಲ್ಲಿ ಅನೇಕ ಬದಲಾವಣೆಗಳನ್ನು ತರಲಾಯಿತು.

ಸ್ಥಳೀಯ ಸರ್ಕಾರದಲ್ಲಿ ಸ್ಥಳೀಯ ಸಂಸ್ಥೆಗಳ ಪಾತ್ರದ ಸ್ವರೂಪ

ಕ್ರಿ.ಶ. ೧೮೮೧ ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಐತಿಹಾಸಿಕ ವರ್ಷ. ಆ ವರ್ಷ ರಾಜಮನೆತನದ ಮುಮ್ಮಡಿ ಕೃಷ್ಣರಾಜ ಒಡೆಯರ ದತ್ತುಪುತ್ರ ಹತ್ತನೇ ಚಾಮರಾಜ ಒಡೆಯರಿಗೆ ಪಟ್ಟಾಭಿಷೇಕ ಮಾಡುವ ಮೂಲಕ ಮೈಸೂರು ರಾಜಮನೆತನಕ್ಕೆ ಅಧಿಕಾರವನ್ನು ಹಿಂದಿರುಗಿಸಲಾಯಿತು. ಚಾಮರಾಜ ಒಡೆಯರ ಅಕಾಲಿಕ ಮರಣದಿಂದಾಗಿ ೧೮೯೪ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಪಟ್ಟಾಭಿಷೇಕವಾಯಿತು. ಅವರು ಅಪ್ರಾಪ್ತ ವಯಸ್ಕರಾಗಿದ್ದರಿಂದ ರಾಜ್ಯಾಧಿಕಾರವನ್ನು ರಾಜಪ್ರತಿನಿಧಿಗೆ ವಹಿಸಲಾಯಿತು. ೧೯೦೨ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಪ್ರಾಪ್ತ ವಯಸ್ಸಿಗೆ ಬರಲು ರಾಜ್ಯಭಾರ ನಡೆಸತೊಡಗಿದರು. ಅವರ ಆಡಳಿತ ಕಾಲವು ಸ್ಥಳೀಯ ಸಂಸ್ಥೆಗಳ ವಿಕಾಸದ ದೃಷ್ಟಿಯಿಂದ ಸುವರ್ಣಕಾಲವಾಗಿದೆ ಎಂದು ಹೇಳಬಹುದು. ಸ್ಥಳೀಯ ಸಂಸ್ಥೆಗಳಿಗೆ ಪ್ರಜಾಸತ್ತಾತ್ಮಕ ಸ್ವರೂಪ ಒದಗಿಸಿ, ಅವು ಜನಪರ ಸಂಸ್ಥೆಗಳಾಗುವಂತೆ ಮಾಡಲು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತೋರಿದ ಆಸಕ್ತಿ ಮತ್ತು ನೀಡಿದ ಪ್ರೋತ್ಸಾಹಗಳು ಚಿರಸ್ಮರಣೀಯವಾಗಿವೆ.

ಮೈಸೂರು ಸಂಸ್ಥಾನದ ಆಧುನಿಕ ಸ್ಥಳೀಯ ಸಂಸ್ಥೆಗಳ ಅಸ್ತಿತ್ವದ ಮೂಲವನ್ನು ಹುಡುಕಿದರೆ ಅದು ೧೮೬೨ರಷ್ಟು ಹಿಂದಕ್ಕೆ ಹೋಗುತ್ತದೆ. ಆ ವರ್ಷ ಪ್ರಾಯೋಗಿಕವಾಗಿ ಬೆಂಗಳೂರು ಮತ್ತು ಮೈಸೂರು ನಗರಗಳ ಅಗತ್ಯಗಳನ್ನು ನೋಡಿಕೊಳ್ಳಲು ಅವುಗಳಿಗೆ ಪ್ರತ್ಯೇಕ ಸಮಿತಿಗಳನ್ನು ರಚಿಸಲಾಯಿತು. ೧೮೬೪–೬೫ರ ಹೊತ್ತಿಗೆ ಸರ್ಕಾರ ಪ್ರತಿಯೊಂದು ಜಿಲ್ಲಾ ಕೇಂದ್ರಗಳಿಗೂ ಇಂತಹ ಒಂದೊಂದು ಸಮಿತಿಗಳನ್ನು ರಚಿಸಿತು. ಈ ಸಮಿತಿಯಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳಿರುತ್ತಿದ್ದರು.

ಸ್ಥಳೀಯ ಆಡಳಿತಕ್ಕೆ ಸಂಬಂಧಿಸಿದಂತೆ ೧೮೭೧ರಿಂದ ಈ ಸಮಿತಿಗಳಿಗೆ ಆಯಾ ಪಟ್ಟಣಗಳ ಕೆಲವು ಪ್ರಮುಖ ನಾಗರಿಕರನ್ನು ನಾಮಕರಣ ಮಾಡುವ ಪದ್ಧತಿಯನ್ನು ಪ್ರಾರಂಭಿಸಲಾಯಿತು. ಗ್ರಾಮಾಂತರ ಪ್ರದೇಶಗಳ ಬೇಕುಬೇಡಗಳನ್ನು ನೋಡಿಕೊಳ್ಳಲು ೧೮೭೪ರಲ್ಲಿ ಲೋಕಲ್ ಫಂಡ್ ಅಥವಾ ಸ್ಥಳೀಯ ನಿಧಿಯನ್ನು ಅಸ್ತಿತ್ವಕ್ಕೆ ತರಲಾಯಿತು. ರಸ್ತೆ, ಕುಡಿಯುವ ನೀರು ಇವುಗಳ ಬಗ್ಗೆ ಈ ಸಮಿತಿಗಳು ಕಾರ್ಯನಿರ್ವಹಿಸುತ್ತಿದ್ದವು. ಅಂದರೆ ನಾಗರಿಕರ ಅವಶ್ಯಕತೆಗಳನ್ನು ಪೂರೈಸಬೇಕಾದ ಜವಾಬ್ದಾರಿ ಪ್ರಮುಖವಾಗಿತ್ತು.

ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆ ಮತ್ತು ಸ್ಥಳೀಯ ಸರ್ಕಾರದ ಬಲವರ್ಧನೆ

ಸ್ಥಳೀಯ ಸರ್ಕಾರದ ಬಲವರ್ಧನೆಗೆ ಸಂಬಂಧಿಸಿದಂತೆ ೧೮೮೧ರಲ್ಲಿ ಸಂಸ್ಥಾನದಲ್ಲಿ ಮಹಾರಾಜರ ಅಧಿಕಾರದ ಮರು ಸ್ಥಾಪನೆಯಾದದ್ದು ಸ್ಥಳೀಯ ಸಂಸ್ಥೆಗಳ ಬೆಳೆವಣಿಗೆಗೆ ಮಹತ್ವದ ಕಾಣಿಕೆಯಾಯಿತು. ಕಾರಣ–ಆಗಿನ ಮಹಾರಾಜ ಚಾಮರಾಜ ಒಡೆಯರು ದಿವಾನ್ ಸಿ. ರಂಗಾಚಾರ್ಲುರವರ ಸಲಹೆ ಮೇರೆಗೆ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಈ ಪ್ರಜಾಪ್ರತಿನಿಧಿ ಸಭೆ ರೈತರ, ವರ್ತಕರ, ಪ್ಲಾಂಟೇಷನ್ ಮಾಲೀಕರ ಮತ್ತು ಇತರ ವರ್ಗಗಳ ಪ್ರತಿನಿಧಿಗಳಿಂದ ಕೂಡಿದ್ದಿತು. ಮಹಾರಾಜರು ಜನಪ್ರತಿನಿಧಿಗಳನ್ನು ಸಮೀಪ ಇಟ್ಟುಕೊಂಡು ಆಡಳಿತ ನಡೆಸುವುದರಿಂದ ಜನರ ಸುಖದುಃಖಗಳನ್ನು ತಿಳಿಯಲು ಸಾಧ್ಯವಾಗುವುದಲ್ಲದೆ ಜನರ ವಿಶ್ವಾಸವನ್ನು ಗಳಿಸಲು ಅವಕಾಶವಾಗುತ್ತದೆಂದು ಭಾವಿಸಿದ್ದರು. ಈ ಪ್ರತಿನಿಧಿಗಳನ್ನು ಪ್ರಾರಂಭದಲ್ಲಿ ಸರ್ಕಾರವೇ ನೇಮಿಸುತ್ತಿದ್ದು ೧೮೯೧ರಿಂದ ಹಂತಹಂತವಾಗಿ ಚುನಾವಣೆಯ ಮೂಲಕ ಆರಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಈ ಅಧಿಕಾರೇತರ ಸದಸ್ಯರು ಹೆಚ್ಚಾಗಿ ಪಟ್ಟಣಗಳಿಗೆ ಸೇರಿದವರಾಗಿರುತ್ತಿದ್ದರು. ಅವರು ಪುರಸಭೆಗಳಿಗೆ ಹೆಚ್ಚಿನ ಹಣ ಒದಗಿಸಲು ಮತ್ತು ಚುನಾಯಿತ ಸದಸ್ಯರನ್ನು ಮತ್ತು ಅಧಿಕಾರೇತರ ನಾಗರಿಕರನ್ನು ಸಮಿತಿಗಳಿಗೆ ಸೇರಿಸಲು ಪರೋಕ್ಷವಾಗಿ ಕೋರಿಕೆ ಸಲ್ಲಿಸತೊಡಗಿದರು. ಇದರ ಪರಿಣಾಮವಾಗಿ ೧೮೯೨ರಿಂದ ಪುರಸಭಾ ಸಮಿತಿಗಳಿಗೆ ಅರ್ಧ ಭಾಗದಷ್ಟು ಸದಸ್ಯರು ಚುನಾವಣೆಯ ಮೂಲಕ ಆಯ್ಕೆಯಾಗಲು ಅವಕಾಶ ಕಲ್ಪಿಸಲಾಯಿತು. ತೆರಿಗೆದಾರರು ಸದಸ್ಯರನ್ನು ಆರಿಸುವ ಹಕ್ಕನ್ನು ಪಡೆದರು. ೧೮೮೧ರಲ್ಲಿ ಪುರಸಭೆಗಳ ಸಂಖ್ಯೆ ೮೩ ಇದ್ದದ್ದು ೧೯೦೪ರ ಹೊತ್ತಿಗೆ ಅವುಗಳ ಸಂಖ್ಯೆ ೧೨೫ ಆಯಿತು.

ಸ್ಥಳೀಯ ಸರ್ಕಾರ ಮತ್ತು ೧೯೦೨ರ ಸ್ಥಳೀಯ ಸಂಸ್ಥೆಗಳ ಕಾಯಿದೆ

ಆಡಳಿತದಲ್ಲಿ ವಿಶೇಷವಾಗಿ ಸ್ಥಳೀಯ ಹಾಗೂ ಪುರಸಭೆ ಆಡಳಿತಕ್ಕೆ ಸಂಬಂಧಿಸಿದಂತೆ ಜಾರಿಗೆ ಬಂದ ೧೯೦೨ರ ಸ್ಥಳೀಯ ಸಂಸ್ಥೆಗಳ ಕಾಯಿದೆಯನ್ನು ಮುಂದೆ ವಿವರಿಸಲಾಗಿದೆ. ಇಪ್ಪತ್ತನೆಯ ಶತಮಾನದ ಪ್ರಾರಂಭದ ಹೊತ್ತಿಗೆ ಸ್ಥಳೀಯ ಸಂಸ್ಥೆಗಳಿಗೆ ಬ್ರಿಟಿಷ್ ಪ್ರಭುತ್ವದಿಂದಲೂ ವಿಶೇಷ ಪ್ರೋತ್ಸಾಹ ಬರತೊಡಗಿತು. ಗವರ್ನರ್ ಜನರಲ್ಲರು ಬ್ರಿಟಿಷ್ ಪ್ರಭುತ್ವದ ಬಗ್ಗೆ ಜನರಲ್ಲಿ ಹೆಚ್ಚುತ್ತಿದ್ದ ಅಸಹನೆಯನ್ನು ಉಪಶಮನಗೊಳಿಸಲು ಬ್ರಿಟಿಷ್ ಪ್ರಾಂತ್ಯಗಳಲ್ಲಿ ಪುರಸಭೆಗಳು ಮತ್ತು ಜಿಲ್ಲಾ ಸಮಿತಿಗಳಲ್ಲಿ ಜನಪ್ರತಿನಿಧಿಗಳಿಗೆ ಸಾಕಷ್ಟು ಅವಕಾಶ ಕಲ್ಪಿಸಿದರು. ಮೈಸೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ೧೮೯೫ರಲ್ಲೇ ಅಧಿಕಾರಕ್ಕೆ ಬಂದರೂ ಅವರು

ಸ್ವತಂತ್ರವಾಗಿ ಆಳ್ವಿಕೆ ಪ್ರಾರಂಭಿಸಿದ್ದು ೧೯೦೨ರಿಂದ. ಅದೇ ವರ್ಷ ಸ್ಥಳೀಯ ಸಂಸ್ಥೆಗಳ ಸಮಗ್ರ ಕಾಯಿದೆಯನ್ನು ಜಾರಿಗೆ ತಂದರು. ೧೯೦೩ರ ಸೆಪ್ಟೆಂಬರ್ ೯ರಂದು ಈ ಬಗ್ಗೆ ಅಧಿಸೂಚನೆ ಹೊರಡಿಸಲಾಯಿತು. ಅದರ ರಚನೆ ಹೀಗಿತ್ತು.

ಈ ಕಾಯಿದೆ ಜಿಲ್ಲಾ ಮಂಡಲಿ (ಬೋರ್ಡ್), ತಾಲ್ಲೂಕು ಮಂಡಲಿ ಮತ್ತು ಸಂಯುಕ್ತ ಪಂಚಾಯಿತಿಗಳನ್ನು ರಚಿಸಲು ಅವಕಾಶ ಕಲ್ಪಿಸಿತು. ಜಿಲ್ಲೆಗೊಂದರಂತೆ ಜಿಲ್ಲಾಬೋರ್ಡ್‌ಗಳ ರಚನೆಯಾದವು. ಈ ಮಂಡಲಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಿದ್ದರು. ಪ್ರತಿ ತಾಲ್ಲೂಕಿಗೆ ಒಬ್ಬರಂತೆ ತಾಲ್ಲೂಕು ಮಂಡಲಿಯಿಂದ ಚುನಾಯಿತರಾದ ಸದಸ್ಯರು ಇರುತ್ತಿದ್ದರು. ಉಪಾಧ್ಯಕ್ಷರನ್ನು ಸರ್ಕಾರ ನೇಮಿಸಬಹುದಾಗಿತ್ತು. ಇಲ್ಲವೇ ಚುನಾವಣೆಯ ಮೂಲಕ ಆರಿಸಬಹುದಾಗಿತ್ತು. ಪ್ರತಿ ತಾಲ್ಲೂಕು ಮಂಡಲಿಗೂ ಹನ್ನೆರಡು ಸದಸ್ಯರಿರುತ್ತಿದ್ದರು. ಸಹಾಯಕ ಕಮೀಷನರ್ ಅಧ್ಯಕ್ಷರಾಗಿರುತ್ತಿದ್ದರು. ಅಮಲ್ದಾರರು ಉಪಾಧ್ಯಕ್ಷರಾಗಿರುತ್ತಿದ್ದರು. ಹನ್ನೆರಡು ಜನ ಸದಸ್ಯರಲ್ಲಿ ನಾಲ್ವರು ಚುನಾಯಿತ ಸದಸ್ಯರಿರುತ್ತಿದ್ದರು.

ಕಿರಿಯ ಪುರಸಭೆಗಳ ಜಾಗದಲ್ಲಿ ಸಂಯುಕ್ತ ಪಂಚಾಯಿತಿಗಳನ್ನು ರಚಿಸಲಾಯಿತು. ಅಬ್ಕಾರಿ, ಅರಣ್ಯ ತೆರಿಗೆ, ಕಂದಾಯದ ಮೇಲಿನ ಹೆಚ್ಚುವರಿ ತೆರಿಗೆ ಮೊದಲಾದವು ಈ ಸ್ಥಳೀಯ ಸಂಸ್ಥೆಗಳ ಆದಾಯ ಮೂಲವಾಗಿದ್ದವು. ಇದಲ್ಲದೆ ಕೆಲವು ಮಾರಾಟ ತೆರಿಗೆಗಳು ಸೇರುತ್ತಿದ್ದವು. ೧೯೧೧ರಲ್ಲಿ ತಂದ ತಿದ್ದುಪಡಿಯ ಮೇರೆಗೆ ಅಂಗಡಿಗಳು, ಸಂತೆ, ಕಸಾಯಿಖಾನೆ, ತಂಗು ನಿಲ್ದಾಣಗಳ ತೆರಿಗೆ ವಿಧಿಸುವ ಅಧಿಕಾರ ಜಿಲ್ಲಾ ಮಂಡಳಿಗಳಿಗೆ ಬಂದಿತು.

೧೯೦೯ರ ಮಿಂಟೋ-ಮಾರ್ಲೆ ಸುಧಾರಣೆಗಳು ಸ್ಥಳೀಯ ಆಡಳಿತದ ನಿರ್ಣಾಯಕ ಹಂತವೆನ್ನಬಹುದು. ೧೯೦೯ರ ಕಾಯಿದೆಯ ಶಿಫಾರಸ್ಸುಗಳಂತೆ ಭಾರತದಾದ್ಯಂತ ಸ್ಥಳೀಯ ಸಂಸ್ಥೆಗಳ ಸಂಘಟನೆಗೆ ಹೆಚ್ಚಿನ ಚಾಲನೆ ದೊರೆಯಿತು. ಈ ಸಂಸ್ಥೆಗಳನ್ನು ಹೆಚ್ಚು ಪ್ರಜಾಸತ್ತಾತ್ಮಕವಾಗಿ ಬೆಳೆಸಲು ಅವಕಾಶವಾಯಿತು. ಆಗ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಜನಪ್ರತಿನಿಧಿಗಳು ಈ ಸಂಸ್ಥೆಗಳಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸಲು ಸಾಧ್ಯವಾಗುವ ಸುಧಾರಣೆಗಳನ್ನು ಬೆಂಬಲಿಸಿದರು. ಇದರ ಪರಿಣಾಮವಾಗಿ ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಈ ಸ್ಥಳೀಯ ಸಂಸ್ಥೆಗಳ ಬೆಳವಣಿಗೆಯಲ್ಲಿ ಐತಿಹಾಸಿಕವೆನ್ನಬಹುದಾದ ಮಾರ್ಪಾಡುಗಳನ್ನು ತರಲಾಯಿತು.

ಮೈಸೂರು ಸಂಸ್ಥಾನದಲ್ಲಿ ವಿಶ್ವೇಶ್ವರಯ್ಯನವರು ಸ್ಥಳೀಯ ಸಂಸ್ಥೆಗಳನ್ನು ಆದಷ್ಟು ಪ್ರಜಾಸತ್ತಾತ್ಮಕವಾಗಿ ರೂಪಿಸಲು ಯೋಜಿಸಿದರು. ಅದಕ್ಕೆ ಮಹಾರಾಜರ ಬೆಂಬಲ ಸಂಪೂರ್ಣವಾಗಿದ್ದಿತು. ಈ ಕಾರ್ಯಕ್ಕಾಗಿ ಸರ್ಕಾರ ಎರಡು ಸಮಿತಿಗಳನ್ನು

ನೇಮಿಸಿತ್ತು. ಒಂದು ಸಮಿತಿಗೆ ಕೌನ್ಸಿಲ್ ಸದಸ್ಯರಾಗಿದ್ದ ಎಂ. ಕಾಂತರಾಜ ಅರಸುರವರೇ ಅಧ್ಯಕ್ಷರಾಗಿದ್ದರು. ಇನ್ನೊಂದು ಸಮಿತಿಗೆ ಸಿ. ಶ್ರೀನಿವಾಸ ಅಯ್ಯಂಗಾರರು ಅಧ್ಯಕ್ಷರಾಗಿದ್ದರು. ಈ ಸಮಿತಿಗಳಲ್ಲಿ ಒಂದು ಸ್ಥಳೀಯ ಸಂಸ್ಥೆಗಳ ಅಂಗರಚನೆಯನ್ನು ಕುರಿತು ಸಲಹೆ ನೀಡಿದರೆ ಇನ್ನೊಂದು ಸಮಿತಿ ಅವುಗಳ ಹಣಕಾಸು ಸಂಪನ್ಮೂಲ ಕ್ರೋಢೀಕರಣದ ಸಾಧ್ಯತೆಗಳ ಬಗ್ಗೆ ಸಲಹೆ ನೀಡಿತು. ಈ ಎರಡೂ ಸಮಿತಿಗಳ ವರದಿಯನ್ನು ಚರ್ಚಿಸಿ ಅಭಿಪ್ರಾಯ ಸಂಗ್ರಹಿಸಲು ೧೯೧೫ರಲ್ಲಿ ಒಂದು ಸಮ್ಮೇಳನ ಜರುಗಿತು. ಈ ಸಮ್ಮೇಳನದ ಸಲಹೆಗಳು ಮತ್ತು ವರದಿಗಳನ್ನು ಆಧರಿಸಿ ಸರ್ಕಾರ ೧೯೧೬ರಲ್ಲಿ ಒಂದು ಅಧಿಸೂಚನೆ ಹೊರಡಿಸಿ ವಾಸ್ತವವಾಗಿ ಕೈಗೊಳ್ಳುವ ಕ್ರಮಗಳನ್ನು ಪ್ರಕಟಿಸಿತು. ಅದರಂತೆ ಚುನಾಯಿತ ಸದಸ್ಯರ ಸಂಖ್ಯೆ ಒಟ್ಟು ಸದಸ್ಯರ ಸಂಖ್ಯೆಯ ಅರ್ಧ ಭಾಗ ಇರುವುದೆಂದು ಮತ್ತು ಮಹಿಳೆಯರಿಗೆ ಮತದಾನದ ಹಕ್ಕನ್ನು ಕೊಡಲಾಗುವುದೆಂದೂ ಹಾಗೂ ಆಯಾ ಸಂಸ್ಥೆಗಳ ಸಭೆಯೇ ಅಧ್ಯಕ್ಷರನ್ನು ಆರಿಸುವುದೆಂದೂ ಗೊತ್ತುಪಡಿಸಲಾಯಿತು.

ಸ್ಥಳೀಯ ಸರ್ಕಾರ ಹಾಗೂ ೧೯೧೮ರ ಸ್ಥಳೀಯ ಸಂಸ್ಥೆಗಳ ಕಾಯಿದೆ

೧೯೧೮ರಲ್ಲಿ ಜಾರಿಗೆ ಬಂದ ಸ್ಥಳೀಯ ಸಂಸ್ಥೆಗಳ ಕಾಯಿದೆ ಸ್ವರೂಪ ಪಡೆದು ಜಾರಿಗೆ ಬಂದಾಗ ಸ್ಥಳೀಯ ಸಂಸ್ಥೆಗಳನ್ನು ಒಂದು ಭದ್ರವಾದ ಬುನಾದಿಯ ಮೇಲೆ ನಿಲ್ಲಿಸಿದಂತಾಯಿತು. ಈ ನಿಬಂಧನೆಯ ಮೇರೆಗೆ ರಾಜ್ಯದಲ್ಲಿ ೨ ನಗರ ಪುರಸಭೆಗಳು, ೨೯ ಪಟ್ಟಣ ಪುರಸಭೆಗಳು, ೭೧ ಕಿರಿಯ ಪುರಸಭೆಗಳು ಅಸ್ತಿತ್ವಕ್ಕೆ ಬಂದವು. ಚುನಾಯಿತ ಸದಸ್ಯರ ಸಂಖ್ಯೆ ನಗರ ಪುರಸಭೆಗಳಿಗೆ ಮೂರನೆಯ ಎರಡು ಭಾಗ ಎಂದೂ, ಪಟ್ಟಣ ಪುರಸಭೆಗಳಿಗೆ ಅರ್ಧ ಭಾಗ ಎಂದೂ ಹಾಗೂ ಕಿರಿಯ ಪುರಸಭೆಗಳಿಗೆ ಮೂರನೆಯ ಒಂದು `ಭಾಗ ಎಂದೂ ನಿರ್ದಿಷ್ಟಪಡಿಸಲಾಯಿತು. ಅನೇಕ ಪುರಸಭೆಗಳ ಉಪಾಧ್ಯಕ್ಷ ಸ್ಥಾನಗಳಿಗೆ ಅಧಿಕಾರೇತರರು ಆರಿಸಿ ಬಂದರು. ಬೆಂಗಳೂರು ಪುರಸಭೆಗೆ ಕೆ.ಸಿ. ಪುಟ್ಟಣ್ಣ ಚೆಟ್ಟಿಯವರನ್ನು ೧೯೧೩ರಲ್ಲೇ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ೧೯೧೭-೧೮ಕ್ಕೆ ಮೈಸೂರು ನಗರಕ್ಕೂ ಅಧಿಕಾರೇತರ ಅಧ್ಯಕ್ಷರು ನೇಮಕವಾದರು. ಈ ಸುಧಾರಣೆಗಳು ಪುರಸಭೆ ಮತ್ತು ನಗರಸಭೆಯ ಕಾರ್ಯನೀತಿಯಲ್ಲಿ ಜನಪ್ರತಿನಿಧಿಗಳ ಮಾತು ನಡೆಯುವಂತೆ ಮಾಡಿದವು.

೧೯೧೮ರ ಸ್ಥಳೀಯ ಸಂಸ್ಥೆಗಳ ನಿಬಂಧನೆಯು ಜಿಲ್ಲಾ ಮಂಡಲಿಗಳಲ್ಲಿ ಚುನಾಯಿತ ಸದಸ್ಯರು ಬಹುಮತದಲ್ಲಿರುವಂತೆ ಮಾಡಿತು. ಉಪಾಧ್ಯಕ್ಷರನ್ನು ಚುನಾವಣೆಯ ಮೂಲಕ ಆರಿಸುವ ವ್ಯವಸ್ಥೆಯಾಯಿತು. ಜಿಲ್ಲಾ ರಸ್ತೆಗಳ ನಿರ್ಮಾಣ,

ದೊಡ್ಡ ಕಾಮಗಾರಿಗಳ ನಿರ್ವಹಣೆ, ವೈದ್ಯಕೀಯ ಮತ್ತಿತರ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವುದು, ತಾಲ್ಲೂಕು ಮಂಡಲಿಗಳ ಮೇಲುಸ್ತುವಾರಿ ಇವು ಜಿಲ್ಲಾ ಬೋರ್ಡ್‌ಗಳ ಮುಖ್ಯ ಕಾರ್ಯಗಳಾಗಿದ್ದವು. ಇದರಿಂದಾಗಿ ಜಿಲ್ಲಾ ಆಡಳಿತದಲ್ಲಿ ಜನಪ್ರತಿನಿಧಿಗಳ ಅಭಿಪ್ರಾಯಗಳಿಗೆ ಬೆಲೆ ಬರತೊಡಗಿತು. ೧೯೧೮ರ ನಿಬಂಧನೆಯು ತಾಲ್ಲೂಕು ಮಂಡಲಿಗಳಿಗೆ ಸಂಸ್ಥಾರೂಪವನ್ನು ನೀಡಿ ಸ್ವತಂತ್ರವಾಗಿ ಹಣಕಾಸು ನಿರ್ವಹಿಸುವ ಅಧಿಕಾರ ನೀಡಿತು. ಚುನಾಯಿತ ಸದಸ್ಯರು ಬಹುಮತದಲ್ಲಿ ಇರುತ್ತಿದ್ದುದಲ್ಲದೆ ಉಪಾಧ್ಯಕ್ಷ ಸ್ಥಾನವನ್ನು ಅಧಿಕಾರೇತರರು ತುಂಬಲು ಅವಕಾಶವಾಯಿತು. ಈ ಸಂಸ್ಥೆಗಳಿಗೆ ಪ್ರವಾಸಿ ಮಂದಿರಗಳು, ಆಸ್ಪತ್ರೆಗಳು ಮತ್ತು ಪಶು ಚಿಕಿತ್ಸಾಲಯಗಳನ್ನು ನೋಡಿಕೊಳ್ಳುವ ಅಧಿಕಾರ ಬಂದಿತು. ೧೯೧೮ರ ನಿಬಂಧನೆಯಲ್ಲಿ ಪ್ರತಿ ಕಂದಾಯ ಗ್ರಾಮಕ್ಕೊಂದರಂತೆ ಗ್ರಾಮ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದವು. ಹಿಂದಿನ ಸಂಯುಕ್ತ ಪಂಚಾಯಿತಿ ವ್ಯವಸ್ಥೆಯನ್ನು ಬದಲಿಸಿ ಪಾರಂಪರಿಕ ಗ್ರಾಮಗಳಿಗೆ ಅಧಿಕಾರ ಕೊಡಲಾಯಿತು. ಈಗಲೂ ಅನೇಕ ಪ್ರಯೋಗಗಳ ಅನಂತರ ಮತ್ತೆ ಗ್ರಾಮ ಪಂಚಾಯಿತಿಗಳಿಗೆ ಆದ್ಯತೆ ನೀಡಿರುವುದನ್ನು ಗಮನಿಸಬಹುದು. ಇವು ಗ್ರಾಮ ನೈರ್ಮಲ್ಯ, ರಸ್ತೆ ನಿರ್ವಹಣೆ, ಸಮುದಾಯ ಕಾರ್ಯ, ನೀರು ಪೂರೈಕೆ ಇತ್ಯಾದಿಗಳನ್ನು ನೋಡಿಕೊಳ್ಳುತ್ತಿದ್ದವು.

[illegible]ಯು ಸರ್ಕಾರದ ಹಿನ್ನೆಲೆಯಲ್ಲಿ ಸ್ಥಳೀಯ ಸಂಸ್ಥೆಗಳ ಸ್ಥಾಪನೆಯ ಪರಿಣಾಮಗಳು

೧೮೮೧ರ ಅನಂತರ ರಾಜ್ಯದ ಪ್ರಭುಗಳ ನಿಲುವಿನಲ್ಲಿ ಭಾರಿ ಬದಲಾವಣೆ ಆದುದರ ಪರಿಣಾಮವಾಗಿ ಈ ಸುಧಾರಣೆಗಳನ್ನು ತರುವುದು ದಿವಾನರುಗಳಿಗೆ ಸುಲಭವಾಯಿತು. ಮಹಾರಾಜರು ಅಧಿಕಾರಶಾಹಿಯ ಕಪಿಮುಷ್ಟಿಯಿಂದ ಜನತೆಯನ್ನು ಬಿಡುಗಡೆ ಮಾಡಿ ಜನರಿಗೇ ಸಾರ್ವಜನಿಕ ವಿಚಾರಗಳಲ್ಲಿ ಹೇಳಿಕೊಳ್ಳಲು ಸಾಧ್ಯವಾಗುವಂತೆ ಮಾಡಲು ಆಶಿಸಿದರು. ಇದು ಪ್ರತಿ ಹಂತದಲ್ಲೂ ಜನಪ್ರತಿನಿಧಿಗಳ ಸಂಸ್ಥೆಗಳು ಬೆಳೆಯಲು ಪ್ರೋತ್ಸಾಹಕರವಾಯಿತು. ಈ ಸಂಸ್ಥೆಗಳಿಗೆ ಪೂರಕವಾಗಿ ೧೯೧೧ರಿಂದ ವಿಶ್ವೇಶ್ವರಯ್ಯನವರ ಮಾನಸಿಕ ಶಿಶುವಾಗಿದ್ದ ಎಕಾನಮಿಕ್ ಕಾನ್‌ಫರೆನ್ಸ್ ಅಥವಾ ಆರ್ಥಿಕ ಪರಿಷತ್ತು ಸ್ಥಾಪಿಸಲು ಮಹಾರಾಜರು ಒಡಂಬಟ್ಟದ್ದು ಅವರ ದೂರದರ್ಶಿತ್ವಕ್ಕೆ ಸಾಕ್ಷಿಯಾಗಿದೆ. ಈ ಕಾನ್‌ಫರೆನ್ಸ್‌ನ ಸಮಿತಿಗಳನ್ನು ಗ್ರಾಮಮಟ್ಟದವರೆಗೆ ರಚಿಸಿದ್ದು ಸಹ ಜನರು ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸಿಕೊಳ್ಳಬೇಕೆಂಬ ಉದ್ದೇಶದಿಂದಲೇ. ರೈಲು ತೆರಿಗೆ ವಿಧಿಸಿ, ಆಯಾ ಜಿಲ್ಲೆಗಳಿಗೆ ರೈಲುಮಾರ್ಗ ನಿರ್ಮಿಸಿಕೊಳ್ಳುವಂತಹ ದೊಡ್ಡ ಆಲೋಚನೆಗಳಿಗೂ ಸಹ ಮಹಾರಾಜರು ಒಪ್ಪಿಗೆ ನೀಡಿದರು. ೧೯೨೧ರ ತಿದ್ದುಪಡಿಯಲ್ಲಿ ಜಿಲ್ಲಾ

ಬೋರ್ಡ್‌ಗಳು, ಶಿಕ್ಷಣ, ವ್ಯವಸಾಯ, ಕೈಗಾರಿಕೆ ಮತ್ತು ವಾಣಿಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾಡಬಹುದಾದ ಕೆಲಸಗಳ ಬಗ್ಗೆ ಉಪನಿಯಮಗಳು ರಚಿತವಾದವು. ಅದೇ ವರ್ಷದಲ್ಲಿ ೩೦ ಪುರಸಭೆಗಳ ಪೈಕಿ ೨೦ ಪುರಸಭೆಗಳಿಗೆ ಚುನಾವಣೆಗಳು ನಡೆದವು. ೧೯೨೪ರಲ್ಲಿ ೮ ಜಿಲ್ಲಾ ಬೋರ್ಡ್‌ಗಳು, ೭೬ ತಾಲ್ಲೂಕು ಮಂಡಲಿಗಳು, ೮೧೧೭ ಗ್ರಾಮ ಪಂಚಾಯಿತಿಗಳೂ ಇದ್ದವು. ಮುಂದೆ ತಾಲ್ಲೂಕು ಮಂಡಲಿಗಳನ್ನು ರದ್ದುಪಡಿಸಲಾಯಿತು.

ಮೈಸೂರು ಸಂಸ್ಥಾನದಲ್ಲಿ ೧೯೩೦ರ ದಶಕದಲ್ಲಿ ಹೆಚ್ಚಿದ ರಾಜಕೀಯ ಸಂಘಟನೆಗಳಿಗೆ ಈ ಸ್ಥಳೀಯ ಸಂಸ್ಥೆಗಳು ಬಹಳಷ್ಟು ಆಸರೆಯಾಗಿದ್ದವು. ಪ್ರಜಾಪ್ರತಿನಿಧಿ ಸಭೆಯ ಸದಸ್ಯರೊಂದಿಗೆ ಜಿಲ್ಲಾ ಬೋರ್ಡ್ ಮತ್ತು ಗ್ರಾಮ ಪಂಚಾಯಿತಿ ಸದಸ್ಯರು ಸೇರಿಕೊಂಡು ಜನಪ್ರತಿನಿಧಿಗಳ ದೊಡ್ಡ ಪಡೆಯೇ ನಿರ್ಮಾಣವಾಯಿತು. ಇವರೆಲ್ಲ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು ಈ ಸ್ಥಳೀಯ ಸಂಸ್ಥೆಗಳ ಅನುಭವವೇ ದೊಡ್ಡ ಶಕ್ತಿಯಾಯಿತು. ವಿಶೇಷವಾಗಿ ಗ್ರಾಮೀಣ ಪ್ರತಿನಿಧಿಗಳಿಗೆ ನಾಯಕತ್ವ ಬೆಳೆಸಿಕೊಳ್ಳಲು ಈ ಸಂಸ್ಥೆಗಳು ಅತ್ಯಂತ ಉಪಯುಕ್ತವಾದ ಸಾಧನಗಳಾದವು. ನಾಲ್ವಡಿ ಕೃಷ್ಣರಾಜ ಒಡೆಯರು ಆದರ್ಶಗಳನ್ನು ಹೊತ್ತ ಹೃದಯವಂತ ಮಹಾರಾಜರು. ಅವರು ತಮ್ಮ ದಿವಾನರುಗಳನ್ನು ದೇಶದ ಕಲ್ಯಾಣ ಕಾರ್ಯಗಳಿಗಾಗಿ ಯಶಸ್ವಿಯಾಗಿ ದುಡಿಸಿದರು. ಮಿರ್ಜಾ ಇಸ್ಮಾಯಿಲರು ರಾಜನಿಷ್ಠರಾಗಿ ಸ್ಥಳೀಯ ಸಂಸ್ಥೆಗಳನ್ನು ಸರ್ಕಾರದ ಪರವಾಗಿ ಪರಿವರ್ತಿಸಲು, ಅಂದರೆ ಸರ್ಕಾರಿ ಪಕ್ಷದ ಪ್ರತಿನಿಧಿಗಳು ಹೆಚ್ಚಾಗಿರುವಂತೆ ನೋಡಿಕೊಳ್ಳಲು ಪ್ರಯತ್ನಿಸಿದರು. ಆದರೆ ಅದು ಮಿತಿಮೀರಿ ಮಹಾರಾಜರ ಜನಪ್ರಿಯತೆಗೆ ಬಾಧಕವಾಗದಂತೆ ಎಚ್ಚರವಹಿಸುವ ಜಾಗೃತಿ ತೋರಿದವರು ನಾಲ್ವಡಿಯವರು. ಆಧುನಿಕ ಸಮಾಜದ ಸುವ್ಯವಸ್ಥೆ ಸ್ಥಳೀಯ ಸಂಸ್ಥೆಗಳ ಸಮರ್ಪಕವಾದ ನಿರ್ವಹಣೆಯನ್ನು ಅವಲಂಬಿಸಿದೆ. ಅಂತಹ ಸಂಸ್ಥೆಗಳ ಒಂದು ಪರಂಪರೆಯೇ ಬೆಳೆಯಲು ಮುಮ್ಮಡಿ ಕೃಷ್ಣರಾಜ, ಹತ್ತನೇ ಚಾಮರಾಜ, ನಾಲ್ವಡಿ ಕೃಷ್ಣರಾಜ ಒಡೆಯರು ಕಾರಣರಾಗಿರುವುದು ಮತ್ತು ಅವರು ಈ ನಾಡಿಗೆ ಸಲ್ಲಿಸಿದ ಅನೇಕ ಕೊಡುಗೆಗಳಲ್ಲಿ ಪ್ರಮುಖವಾದುದು. ಈ ಮೂಲಕ ಅವರು ಜನರ ಹೃದಯ ಸಿಂಹಾಸನದಲ್ಲಿ ಚಿರಸ್ಥಾನವನ್ನು ಪಡೆದಿದ್ದಾರೆ ಮತ್ತು ಗಾಂಧೀಜಿಯವರ ಆಶಯಗಳಿಗೆ ಪೂರಕವಾಗಿ ಸ್ಥಳೀಯ ಸರಕಾರ ಹಾಗೂ ಗ್ರಾಮೀಣ ಪ್ರದೇಶಗಳ ಆಡಳಿತಗಳ ಬಲವರ್ಧನೆಗೆ ಸಾಕಷ್ಟು ಉತ್ತಮ ಅವಕಾಶಗಳನ್ನು ಒದಗಿಸಿ ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ ಮಾದರಿ ಸರಕಾರ ಮುಂತಾದ ಜನಾಭಿಪ್ರಾಯಗಳನ್ನು ಸಂರಕ್ಷಣೆ ಮಾಡಿದ್ದಾರೆ ಎನ್ನಬಹುದು.

ಗ್ರಂಥಋಣ

೧. ದಿವಾಕರ್. ಆರ್.ಆರ್., ಕರ್ನಾಟಕ ಪರಂಪರೆ, ಬೆಂಗಳೂರು, ೧೯೭೪.

೨. ಗುಂಡಪ್ಪ, ಡಿ.ವಿ., ಮೈಸೂರಿನ ದಿವಾನರುಗಳ ಜ್ಞಾಪಕ ಚಿತ್ರಶಾಲೆ, ಮೈಸೂರು., ೧೯೭೧.

೩. ಕೃಷ್ಣರಾವ್, ಎಂ.ವಿ., ಕರ್ನಾಟಕ ಇತಿಹಾಸ ದರ್ಶನ, ಬೆಂಗಳೂರು, ೧೯೮೧.

೪. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಮುಜರಾಯಿ ಫೈಲುಗಳು

೫. Kaith, A.B., Constitutional History of India, New Delhi, 1961.

೬ Sathyamurthy, S., Krishnaraja Wodeyars Contribution to Democracy, Bangalore, 1937.

೭. Heltne, B., The Political Economy of Indirect rule Mysore, New Delhi, 1978

೮. Hayavadana Rao, C., History of Mysore, Bangalore, 1948.

❑

೩. ಗ್ರಾಮೀಣ ಪತ್ರಿಕೋದ್ಯಮ ಅಭಿವೃದ್ಧಿ ಸಂವಹನ

-ಪ್ರೊ. ಆರ್. ಎನ್. ಪದ್ಮನಾಭ

ಗ್ರಾಮೀಣ ಪತ್ರಿಕೋದ್ಯಮದ ಇನ್ನೊಂದು ಅರ್ಥ ಸಮುದಾಯ ಪತ್ರಿಕೋದ್ಯಮ. ಸಮುದಾಯ ಪತ್ರಿಕೋದ್ಯಮ ಇಪ್ಪತ್ತನೇ ಶತಮಾನದ ಆವಿಷ್ಕಾರ. ನಮಗೆಲ್ಲಾ ತಿಳಿದಿರುವಂತೆ ಪತ್ರಿಕೆಗಳನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದು. ಅವು (೧) ರಾಷ್ಟ್ರೀಯ ಪತ್ರಿಕೆಗಳು (೨) ರಾಜ್ಯ ಅಥವಾ ಪ್ರಾಂತೀಯ ಪತ್ರಿಕೆಗಳು ಮತ್ತು (೩) ಸ್ಥಳೀಯ ಅಥವಾ ಗ್ರಾಮೀಣ ಪತ್ರಿಕೆಗಳು ಅಥವಾ ಸಮುದಾಯ ಪತ್ರಿಕೆಗಳು.

ಸಮುದಾಯ ಪತ್ರಿಕೆಗಳು ಸಾಮಾನ್ಯವಾಗಿ ಸಣ್ಣ ಅಥವಾ ಜಿಲ್ಲಾ ಪತ್ರಿಕೆಗಳು ಮತ್ತು ಗ್ರಾಮೀಣ ಪತ್ರಿಕೆಗಳು. ಇವರಲ್ಲಿ ಸ್ಥಳೀಯ ವಿಚಾರ, ವಿಷಯಗಳನ್ನು, ಆಶೋತ್ತರಗಳನ್ನು, ಶ್ರೇಯೋಭಿವೃದ್ಧಿಯನ್ನು, ಆಮೂಲಾಗ್ರ ಬೆಳವಣಿಗೆಯನ್ನು ಪ್ರತಿಬಿಂಬಿಸಬೇಕು. ಈ ಪತ್ರಿಕೆಗಳು ಸಮುದಾಯದ ಸೇವೆ, ಸಮಸ್ಯೆಗಳ ಪರಿಹಾರ, ಸಾಧನೆ ಮತ್ತು ವೈಫಲ್ಯಗಳ ಕೈಗನ್ನಡಿಯಾಗಬೇಕು.

ಗ್ರಾಮೀಣ ಪತ್ರಿಕೆಗಳು ವಿಶೇಷವಾಗಿ ಓದುಗರ ಹೃದಯ ಹಾಗೂ ಮನಸ್ಸಿಗೆ ಹತ್ತಿರವಾಗಿರುತ್ತವೆ. ವಿಶ್ವಾಸಾರ್ಹ, ಜವಾಬ್ದಾರಿಯುತ ಗ್ರಾಮೀಣ ಪತ್ರಿಕೆಗಳು ಗ್ರಾಮೀಣ ಜನರ ಜೀವನದಲ್ಲಿ ಹಾಸುಹೊಕ್ಕಾಗಿರಬೇಕು. ಅವರ ಆಮೂಲಾಗ್ರ ಬೆಳವಣಿಗೆಗೆ ಶ್ರಮಿಸುವ ಸಾಧನವಾಗಬೇಕು. ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಸಕ್ರಿಯ ಪಾಲು ವಹಿಸುವ ಗ್ರಾಮೀಣ ಪತ್ರಿಕೆಯ ಸಂಪಾದಕರು ಹಾಗೂ ಪತ್ರಿಕೆಗಳು ಗ್ರಾಮೀಣ ಜನರ ಸ್ನೇಹಿತ, ವೇದಾಂತಿ ಹಾಗೂ ಗೈಡ್ ಎಂದರೆ ಉತ್ಪ್ರೇಕ್ಷೆಯಲ್ಲ.

ಸಮುದಾಯ ಪತ್ರಿಕೋದ್ಯಮದಲ್ಲಿ ವಿಶೇಷವಾಗಿ ಅಮೆರಿಕಾ ಮತ್ತು ಜಪಾನ್ ದೇಶಗಳು ಸಾಧಿಸಿರುವ ಮುನ್ನಡೆ ನಮಗೆ ಮಾದರಿಯಾಗಬೇಕು. ಖ್ಯಾತ ಪತ್ರಿಕೋದ್ಯಮಿ, ಬರಹಗಾರ ಶ್ರೀ ಚಂಚಲ್ ಸರ್ಕಾರ್ ತಮ್ಮ "ಎಮರ್ಜಿಂಗ್ ಎಸ್ಟೇಟ್" ಪುಸ್ತಕದಲ್ಲಿ ಜಪಾನಿನ ಗ್ರಾಮೀಣ ಪತ್ರಿಕೆಯಾದ "ನೈಗ್ಯಾಟೊನಿಪ್ಪೊ"ದ

ಸಾಧನೆಗಳನ್ನು ಸುದೀರ್ಘವಾಗಿ ಸಾರವತ್ತಾಗಿ ವಿವರಿಸಿದ್ದಾರೆ. ಈ ಪುಸ್ತಕ ಓದಿದವರು ಒಂದು ಸ್ಥಳೀಯ ಪತ್ರಿಕೆ ಹೇಗೆ ಆ ಪ್ರಾಂತ್ಯದ ಆಮೂಲಾಗ್ರ ಬೆಳೆವಣಿಗೆಗೆ ಮಹತ್ತರ ಕೊಡುಗೆ ನೀಡಬಲ್ಲುದು ಎಂಬುದನ್ನು ಕಂಡುಕೊಳ್ಳಬಹುದು. ನಮ್ಮ ಸಮುದಾಯ ಪತ್ರಿಕೆಗಳೂ ಈ ದಾರಿ ತುಳಿದರೆ ಖಂಡಿತ ಗ್ರಾಮೀಣ ಪತ್ರಿಕೆಯು ಬವಿಷ್ಯವನ್ನು ಹಸಿರಾಗಿಸಬಹುದು.

ನಮ್ಮ ದೇಶದ 'ರಾಜಾಸ್ಥಾನ್ ಪತ್ರಿಕಾ' ಹಾಗೂ ಹಾಸನದ 'ಜನಮಿತ್ರ' ಈ ದಿಸೆಯಲ್ಲಿ ಯಶಸ್ವೀ ಪತ್ರಿಕೆಗಳು.

ಹೊಸ ಪೀಳಿಗೆಯನ್ನು ಸೆಳೆದುಕೊಳ್ಳುತ್ತಿರುವ ಗ್ರಾಮೀಣ ಸಮುದಾಯ ಪತ್ರಿಕೋದ್ಯಮ ಎಲ್ಲರ ಗಮನಸೆಳೆದಿರುವುದು ಗಮನಾರ್ಹ.

ಎಚ್.ವೈ. ಶಾರದಾಪ್ರಸಾದ್ ಅವರ ಪ್ರಕಾರ ಗ್ರಾಮೀಣ ಪತ್ರಿಕೆಗಳು ವಿಶೇಷವಾಗಿ ಕೃಷಿ, ಗ್ರಾಮೀಣಾಭಿವೃದ್ಧಿ, ಆರೋಗ್ಯ, ಶಿಕ್ಷಣ, ಸಮಾಜಕಲ್ಯಾಣ ಇತ್ಯಾದಿ ವಿಚಾರಗಳಿಗೆ ಪ್ರಾಶಸ್ತ್ಯ ನೀಡಬೇಕು.

ಅಭಿವೃದ್ಧಿಪರ ರಾಷ್ಟ್ರಗಳ ಪ್ರಮುಖ ಸಮಸ್ಯೆ, ಗ್ರಾಮೀಣ ವಿಕಾಸ, ಸಾಮಾಜಿಕ ಬದಲಾವಣೆಗೆ ಬೇಕಾದ ತಾಂತ್ರಿಕ, ವೈಜ್ಞಾನಿಕ ಆವಿಷ್ಕಾರಗಳ ಕೊರತೆ ಅಲ್ಲ. ಬದಲಾಗಿ ಪರಿಣಾಮಕಾರೀ ಸಂವಹನ ನೀತಿ. ಅಭಿವೃದ್ಧಿಗೆ ಸಂವಹನ ಅನಿವಾರ್ಯ. ಅತ್ಯಾವಶ್ಯಕ.

ಸಂವಹನ ನೀತಿ ಇಲ್ಲದ ಯಾವುದೇ ಯೋಜನೆ ವಿಶೇಷವಾಗಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಯಶಸ್ಸು ಅಸಾಧ್ಯ. ನಮ್ಮ ದೇಶದ ಸಂವಹನ ನೀತಿ ದೇವರಿಗೇ ಪ್ರೀತಿ.

•

ವರದಿಗಾರಿಕೆ ತಂತ್ರಗಳು

ವರದಿಗಾರಿಕೆಯಲ್ಲಿ ಹಲವು ತಂತ್ರಗಳು ಇವೆ. ಅದರ ಪರಿಜ್ಞಾನ ಗ್ರಾಮೀಣ ಪತ್ರಿಕೋದ್ಯಮಿಗಳಿಗೆ ಅತ್ಯಾವಶ್ಯಕ. ಅವುಗಳು ಹೀಗಿವೆ:

೧) ಕ್ಷೇತ್ರ ಸಂಚಾರ
೨) ಪ್ರಶ್ನೆಗಳನ್ನು ಬಾಸುಲಿ ಕೇಳುವುದು
೩) ಸಮಾಚಾರ ದಾಖಲೆ
೪) ಸಂದರ್ಶನಗಳು
೫) ಸಮಾಚಾರ ಹಿನ್ನೆಲೆ
೬) ವೈಯಕ್ತಿಕ ಅಧ್ಯಯನ
೭) ಓದುಗರ ಬಗ್ಗೆ ಮಾಹಿತಿ

ವರದಿಯಲ್ಲಿ ಮೂರು ಮುಖ್ಯ ಭಾಗಗಳು.

(೧) ತಲೆಬರಹ (೨) ಪ್ರಸ್ತಾವನೆ (ಅವು ಏನು, ಎಲ್ಲಿ, ಯಾವಾಗ, ಏಕೆ, ಯಾರು, ಹೇಗೆ ?) (೩) ಒಡಲು

ವರದಿ ಯಾವಾಗಲೂ ಸರಳವಾಗಿ, ನೇರವಾಗಿ, ಓದುಗರಿಗೆ ಸುಲಭವಾಗಿ ಅರ್ಥವಾಗುವಂತೆ ಇರಬೇಕು. ಸಂಕ್ಷಿಪ್ತತೆ, ಸರಳತೆ, ಸಾಮಯಿಕತೆ, ಸಾಮಿಪ್ಯತೆ, ಪ್ರಾಮುಖ್ಯತೆಗೆ ವಿಶೇಷ ಗಮನ ನೀಡಬೇಕು.

ಸಂಪಾದನೆಯ ತಂತ್ರಗಳು

ವರದಿಯನ್ನು ಸಂಪಾದಿಸುವುದು ಒಂದು ಕಲೆ. ತಪ್ಪುಗಳನ್ನು ತಿದ್ದಿ, ಪತ್ರಿಕೆಯ ಶೈಲಿಗನುಗುಣವಾಗಿ ವರದಿ ಮಾರ್ಪಡಿಸುವುದು ಕಷ್ಟಸಾಧ್ಯವಾದರೂ ಅತ್ಯಾವಶ್ಯಕ.

(೧) ಲೋಪದೋಷಗಳ ಪರಿಶೀಲನೆ
(೨) ಹಸ್ತಪ್ರತಿ ತಿದ್ದುವುದು
(೩) ಕರಡು ತಿದ್ದುವುದು
(೪) ಮರು ಬರಹಗಾರಿಕೆ
(೫) ತಲೆಬರಹ ರೂಪಿಸುವುದು
(೬) ಅಚ್ಚುಮೊಳೆ ಮತ್ತು ಮುದ್ರಣ ಕಲೆಯ ಜ್ಞಾನ
(೭) ಮುದ್ರಣ ವಿಧಾನಗಳ ಜ್ಞಾನ
(೮) ಮಾನಹಾನಿ ಹೇಳಿಕೆಗಳ ನಿರ್ಮೂಲನೆ
(೯) ತರ್ಜುಮೆ

ಸಮಸ್ಯೆಗಳು

ಸಂವಹನ : ಅಭಿವೃದ್ಧಿ

ಸರ್ಕಾರದ ರಣನೀತಿಯಾಗಿ ಸಂವಹನ ನೀತಿ ರೂಪಿತವಾಗದಿದ್ದರೆ ಸಮಗ್ರ ಅಭಿವೃದ್ಧಿ ಯೋಜನೆಗಳು ಯಶಸ್ಸು ಸಾಧಿಸಲು ಅಸಾಧ್ಯ : "Where there is communication there is Development" ಎಂಬ ಹೇಳಿಕೆ ಸತ್ಯ. ಇದು ಸಾಬೀತಾಗಿರುವ ಸತ್ಯ.

ಮನುಷ್ಯ ಬದುಕುವುದೇ ಒಂದು ಸಂವಹನ ವಿಚಾರ. ಮಾನವ ಹುಟ್ಟಿ ಸಾಯುವ ತನಕ ಸಂವಹನ ಕ್ರಿಯೆ ಸರ್ವೇ ಸಾಮಾನ್ಯ. ನಮ್ಮ ಬದುಕಿನ ಸರ್ವಸ್ವ ಸಂವಹನ. ನಾವು ಹೇಗೆ ಸಂವಹನ ಮಾಡುತ್ತೇವೆಯೋ ಹಾಗೆಯೇ ಬದುಕುತ್ತೇವೆ.

ಜನ ಸಂಧಿಸಿದಾಗ ಸಂವಹನದಲ್ಲಿ ತೊಡಗುವುದು ಸರ್ವೇಸಾಮಾನ್ಯ ವಿಷಯ. ಹೀಗೆಯೇ ವ್ಯಕ್ತಿಗಳು ಪರಸ್ಪರ ನಿಯಂತ್ರಿಸುವುದು, ಒಗ್ಗೂಡಿಸುವುದು. ಸಾಮಾಜಿಕ ಸ್ಪಂದನ ವ್ಯಕ್ತಿಯ ಆಶೋತ್ತರಗಳ ಅಭಿವ್ಯಕ್ತಿ. ಇದರಿಂದಲೇ ಜನಾಭಿಪ್ರಾಯ ಮೂಡುವುದು ಹಾಗೂ ರೂಢಿಸುವುದು.

ಭಾಷೆ ಮಾನವನ ಒಂದು ಅವಿಭಾಜ್ಯ ಸಂವಹನ ತಂತ್ರ, ಮೂಲಭೂತವಾಗಿ ಕೇಳುವುದು, ಮಾತನಾಡುವುದು, ಪ್ರತಿಕ್ರಿಯಿಸುವುದು ಹಾಗೂ ಅರ್ಥ ಮಾಡಿಕೊಳ್ಳುವುದು ಸಂವಹನದ ಹಲವು ಮುಖಗಳು.

"ಭಾಷಾ ನಡವಳಿಕೆ" ರೂಪಿತವಾಗುವುದೇ ವ್ಯಕ್ತಿಗಳ ನಡುವಣ ಸಂಧಿಸುವಿಕೆಯಿಂದ, ಸ್ಪಂಧಿಸುವಿಕೆಯಿಂದ ಹಾಗೂ ಸಂವಹನ ಕ್ರಿಯೆಯಿಂದ.

ವಿವರಣೆ : ಸಂವಹನ ಒಂದು ಕ್ರಿಯೆ, ಪ್ರಕ್ರಿಯೆ ಹಾಗೂ ಪ್ರತಿಕ್ರಿಯೆ.

ಸಂವಹನ ಎಂದರೆ ಮನುಷ್ಯರು ಮನುಷ್ಯರಿಗೆ ಅರ್ಥ ಕಲ್ಪಿಸುವುದು.

ಸಂವಹನ ಮಾನವನ ಒಂದು ಅಭೂತಪೂರ್ವ ವಿಶಿಷ್ಟ ಲಕ್ಷಣ.

ಸಂವಹನ ಒಂದು ಸಿಮ್ಯಾಂಟಿಕ್ ಜಾಲ. ಅದು ಚಿನ್ಹೆಗಳ ಮೇಲೆ ಅವಲಂಬಿತ. ಚಿನ್ಹೆಗಳು ಒಂದು ಭಾಷಾ ಸಮುದಾಯ ಬಳಸಲು ಆಯ್ಕೆ ಮಾಡಿದ ವಿಷಯ.

ಸಂವಹನ ಎಂದರೆ ಸಮಾಚಾರ ವಿಚಾರಗಳನ್ನು ಬೇರೆಯವರಿಗೆ ತಿಳಿಸುವುದು ಮತ್ತು ಇತರರಿಂದ ತಿಳಿದುಕೊಳ್ಳುವುದು.

ಅಸ್ತಿತ್ವವುಳ್ಳ ವ್ಯಕ್ತಿಗಳ ನಡುವೆ ಸಮಾಚಾರ ವಿಚಾರ ವಿನಿಮಯವೇ ಸಂವಹನ.

ಸಂವಹನದ ಮೂಲ ಉದ್ದೇಶ ಸಾಮಾಜಿಕ ಬದಲಾವಣೆ ಉಂಟು ಮಾಡುವುದು. ಅಶಿಕ್ಷಿತರನ್ನು ಶಿಕ್ಷಿತರನ್ನಾಗಿ, ನಿರಕ್ಷರಸ್ತರನ್ನು ಅಕ್ಷರಸ್ತರನ್ನಾಗಿಸುವುದು. ಜೀವನ ಮಟ್ಟವನ್ನು ಸುಧಾರಿಸುವುದು. ದೇಶದ, ಸಮಾಜದ ಸರ್ವತೋಮುಖ ಬೆಳೆವಣಿಗೆಗೆ ಪೂರಕವಾಗಿ ಬದುಕುವುದು.

ಪರಂಪರಾಗತ ಸಮಾಜದಲ್ಲಿ ಹಾಗೂ ಆಧುನಿಕ ಸಮಾಜಗಳಲ್ಲಿ ಸಂವಹನ ವೈವಿಧ್ಯಮಯ ಹಾಗೂ ರಮಣೀಯ. ಅವು ಹೀಗಿವೆ :

(೧) ಮೂಕಿ ಸಂವಹನ

(೨) ಲಿಖಿತ ಸಂವಹನ

(೩) ಚಿನ್ಹಾ ಸಂವಹನ

(೪) ಮೌಖಿಕ ಸಂವಹನ

(೫) ದೃಕ್ ಸಂವಹನ

ಮಾನವ ಸಂವಹನವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ.

(೧) ಸಿನ್‌ಟ್ಯಾಕ್ಟಿಕ್ಸ್ [SYNTACTICS] ಚಿಹ್ನೆ ಹೇಗೆ ಸಂಬಂಧಪಟ್ಟಿವೆ

(೨) ಸೆಮ್ಯಾಂಟಿಕ್ಸ್ [SEMANTICS] ಚಿಹ್ನೆ ಪದಾರ್ಥಗಳ ಸಂಬಂಧ

(೩) ಪ್ರಗ್‌ಮ್ಯಾಟಿಕ್ಸ್ [PRAGMATICS] ಚಿಹ್ನೆ ಜನರ ಸಂಬಂಧ

ಇವು ಬೇರೆ ಬೇರೆ ವಿಚಾರ ಅಥವಾ ವಿಷಯಗಳಲ್ಲ. ಮೂರೂ ಬೇರೆ ಬೇರೆ ರೀತಿಯ ಒಂದೇ ವಿಷಯದ ಸಂಬಂಧಗಳ ಅಧ್ಯಯನ. ಪ್ರತಿಯೊಂದು ಸಂವಹನ ಸಂದೇಶದಲ್ಲೂ ಪದಗಳು, ಚಿಹ್ನೆಗಳು ಇವೆ. ಇದು **"ಚಿಹ್ನಾತ್ಮಕ ನಡವಳಿಕೆ"**. ನಡವಳಿಕೆ ಎಂದರೆ ಕಲಿತ, ಹಂಚಿಕೊಂಡ, ಕಲೆತು ಬೆರೆತು ಕಲಿತ ಜ್ಞಾನ.

ಸಂವಹನದ ಮೂಲಾಂಶಗಳು

ಸಂವಹನ ಕ್ರಿಯೆಯಲ್ಲಿ ಮೂಲಭೂತವಾಗಿ ಈ ಅಂಶಗಳು ಅತ್ಯಾವಶ್ಯಕ. ಇಲ್ಲದಿದ್ದರೆ ಸಂವಹನ ಸಾಧ್ಯವಾಗದ ವಿಷಯ. ಅವುಗಳು –

೧. ಮೂಲ

೨. ಸಂದೇಶ

೩. ಸಂದೇಶ ನೀಡುವವ

೪. ಮಾಧ್ಯಮಗಳು

೫. ಸಂದೇಶ ಪಡೆಯುವವ

೬. ಪ್ರತಿಕ್ರಿಯೆ

ವಿವಿಧ ಸಂವಹನ ಮಾಧ್ಯಮಗಳು

ಇವುಗಳು ಮುಖ್ಯವಾಗಿ ಮೂರು

(೧) ಪರಂಪರಾಗತ ಮಾಧ್ಯಮಗಳು

(೨) ಮುದ್ರಣ ಮಾಧ್ಯಮಗಳು

(೩) ಎಲೆಕ್ಟ್ರಾನಿಕ್ ಮಾಧ್ಯಮಗಳು

ಸಂವಹನದ ವಿವಿಧ ಬಗೆಗಳು

೧. ಮುಖಾ-ಮುಖಿ ಸಂವಹನ

೨. ಗುಂಪು ಸಂವಹನ

೩. ಅಂತರ ವ್ಯಕ್ತಿ ಸಂವಹನ

೪. ಸಾರ್ವಜನಿಕ ಸಂವಹನ

೫. ಆಂತರಿಕ ಸಂವಹನ

೬. ಪರಿಣಾಮಕಾರೀ ಸಂವಹನ

ಮಾನವ ಸಂವಹನ ಒಂದು ಕಾರ್ಯ ವಿಧಾನ ಪರಿವರ್ತನೆಯ ಪರಂಪರೆ. ಅಂತೆಯೇ ನಮ್ಮ ಜೀವನ ಕೂಡಾ. ಅದು ಒಂದು ಸಾಂಸ್ಕೃತಿಕ ಜೀವನ ನಡೆದು ಬಂದ ದಾರಿ. ಸಂಸ್ಕೃತಿ ವ್ಯಕ್ತಿಯನ್ನು ಬದಲಿಸಿದರೆ, ವ್ಯಕ್ತಿ ಸಂಘ ಸಂಸ್ಥೆಗಳನ್ನು ಬದಲಿಸುತ್ತಾನೆ. ಸಂಘ ಸಂಸ್ಥೆಗಳು ನಮ್ಮ ಜ್ಞಾನವನ್ನು ಬದಲಿಸುತ್ತವೆ. ಜ್ಞಾನ ಅನಿಸಿಕೆಗಳನ್ನು, ನಂಬಿಕೆಗಳನ್ನು ಬದಲಿಸುತ್ತದೆ. ಭಾಷೆ ಚಿಂತನೆಯನ್ನು ಬದಲಿಸಿದರೆ, ಚಿಂತನೆ ನಂಬಿಕೆ ಮೌಲ್ಯಗಳನ್ನು ಬದಲಿಸುತ್ತದೆ. ಇಲ್ಲಿ ಯಾವುದೂ ಪ್ರಥಮವಲ್ಲ, ಮೂಲಭೂತವಾದುದಲ್ಲ. ಎಲ್ಲಾ ಒಂದಕ್ಕೊಂದು ಸಂಬಂಧಪಟ್ಟ ಪರಸ್ಪರ ಪ್ರಭಾವ ಬೀರುವ ವಿಚಾರಗಳು.

ಸಂವಹನದ ಅಡಚಣೆಗಳು ಎಲ್ಲಾ ಸಮಾಜದಲ್ಲೂ ಇವೆ. ಅವುಗಳು :

೧. ದೈಹಿಕ ಅಡಚಣೆಗಳು

೨. ಮಾನಸಿಕ ಅಡಚಣೆಗಳು

೩. ಆಯ್ಕೆ

೪. ಶಬ್ದ (NOICE)

೫. ಹಿನ್ನುಣಿಸು

೬. ಅನುಭವ – ಜೀವನಾನುಭವ

ಒಟ್ಟಿನಲ್ಲಿ ಸಂವಹನದ ಮೂಲ ಗುರಿ ಮಾನವನ ಸರ್ವತೋಮುಖ ಬೆಳೆವಣಿಗೆ. ನಾಗರಿಕತೆಯ ಪರಾಕಾಷ್ಠತೆ. ಸಮಾಜದ ಹಿತಾಸಕ್ತಿಗಳ ಪೂರಕ. ಮಾನವನ ವ್ಯಕ್ತಿತ್ವ ವಿಕಾಸಕ್ಕೆ ನಡೆಸುವ ಪ್ರಯತ್ನ.

ಅಂದರೆ ಸಂವಹನ ಅಭಿವೃದ್ಧಿಯ ಬೆಳೆವಣಿಗೆಯು, ವಿಕಾಸದ ಅವಿಭಾಜ್ಯ ಅಂಗ. ಬದಲಾವಣೆಯ ಹರಿಕಾರ.

ಬದಲಾವಣೆಯನ್ನು ಯಾರೂ ಒಮ್ಮೆಗೇ ಸ್ವಾಗತಿಸುವುದಿಲ್ಲ. ಅಡಚಣೆಗಳು ನೂರೆಂಟು. ಸಾಮಾಜಿಕ ಸರ್ವತೋಮುಖ ಬೆಳೆವಣಿಗೆಯನ್ನು ಸಾಮಾಜಿಕ ವಿಜ್ಞಾನಿಗಳು, ಸಂವಹನ ವಿಜ್ಞಾನಿಗಳು "ಅಡಾಪ್ಟೇಶನ್ ಪ್ರೊಸೆಸ್" – Adoptation Process) ಎಂದು ಕರೆದಿದ್ದಾರೆ. ಇದನ್ನು ಐದು ಮಟ್ಟಗಳಾಗಿ ವಿಂಗಡಿಸಿದ್ದಾರೆ. ಅದು ಹೀಗಿದೆ:

(೧) Information stage – ಸಮಾಚಾರ ನೀಡುವ ಮಟ್ಟ

(೨) Awarness stage – ತಿಳುವಳಿಕಾ ಮಟ್ಟ

(೩) Demonstration stage – ಪ್ರತಿಪಾದನಾ ಮಟ್ಟ

(೪) Trial stage – ಪರೀಕ್ಷಣ ಮಟ್ಟ

(೫) Adoptation stage – ಅಂಗೀಕೃತ ಮಟ್ಟ ಅಥವಾ ಸ್ವೀಕೃತ ಮಟ್ಟ

ಯಾವುದೇ ಒಂದು ಹೊಸ ವಿಚಾರ, ವಿಷಯ, ತಾಂತ್ರಿಕತೆ, ಯಂತ್ರ, ವಿಧಾನ ಮೇಲಿನ ಅಂಗೀಕೃತ ದಾರಿಯನ್ನು ತುಳಿಯಲೇಬೇಕು.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ವಿಶೇಷ ಘಟಕ ಯೋಜನೆ, ಸಹಕಾರ ಆಂದೋಳನ, ಜೈವಿಕ ಅನಿಲ ಯೋಜನೆ, ಕೃಷಿ ಮಾರುಕಟ್ಟೆ ಸೌಲಭ್ಯ ಚಳುವಳಿ, ಬಿ.ಡಿ.ಓ. ಯೋಜನೆ, ಹಸಿರು ಕ್ರಾಂತಿ ಅಥವಾ ಬಿಳಿಕ್ರಾಂತಿ, ಎಲ್ಲರಿಗೂ ಆರೋಗ್ಯ ಯೋಜನೆ, ಕುಟುಂಬ ಕಲ್ಯಾಣ ಯೋಜನೆ, ತೆಂಗು ಅಭಿವೃದ್ಧಿ ಯೋಜನೆ, ರೇಷ್ಮೆ ಕೃಷಿ ಅಭಿವೃದ್ಧಿ ಯೋಜನೆ, ಹಣ್ಣು ತರಕಾರಿ ಅಭಿವೃದ್ಧಿ ಯೋಜನೆ ಅಥವಾ ಇನ್ನಾವುದೇ ಅಭಿವೃದ್ಧಿಪರ ಯೋಜನೆಗಳು ಸಫಲವಾಗಬೇಕಾದರೆ ಅಡಾಪ್ಟೇಶನ್ ಪ್ರಾಸೆಸ್ ಮೂಲಕ ಮಾತ್ರ ಸಾಧ್ಯ. ಆದ್ದರಿಂದಲೇ ಸಂವಹನ ನೀತಿ ರಾಷ್ಟ್ರಮಟ್ಟದಲ್ಲಿ ರಾಜ್ಯಮಟ್ಟದಲ್ಲಿ, ಗ್ರಾಮೀಣ ಮಟ್ಟದಲ್ಲಿ ಅಭಿವೃದ್ಧಿ ಧೋರಣೆಯ ಮೂಲ ಅಂಶವಾಗಬೇಕು.

ಕೃಷಿ ಮಾರುಕಟ್ಟೆ ಆಂದೋಳನ ಸಫಲತೆ ಅಥವಾ ಯಶಗಳಿಸುವುದು ಕೇವಲ ಸಂವಹನ ನೀತಿಯನ್ನು ಸಮಗ್ರ ಯೋಜನೆಯಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಾಧ್ಯ. ಈ ದಿಸೆಯಲ್ಲಿ ಇವರು ನಡೆಸುತ್ತಿರುವ ಈ ತರಬೇತಿ ಶಿಬಿರ ಅರ್ಥ ಪೂರ್ಣವಾದದ್ದು.

ಕೃಷಿ ಮಾರಾಟ ತರಬೇತಿ ಮಹಾವಿದ್ಯಾಲಯ ಹೊರತರುತ್ತಿರುವ ಮಾಸಿಕ 'ಕೃಷಿಪೇಟೆ' ಯಶಸ್ಸಿಗೆ ಇಂತಹ ತರಬೇತಿ ಶಿಬಿರಗಳು ಪೂರಕವಾಗುತ್ತವೆ.

ಸೈದ್ಧಾಂತಿಕವಾಗಿ 'ಕೃಷಿ ಪೇಟೆ'ಯ ಸಾಹಿತ್ಯ ಮೂರು ಪ್ರಕಾರಗಳಲ್ಲಿ ಬೆಳೆಯಬೇಕಾಗಿದೆ. ಈ ಮೂರೂ ಪ್ರಕಾರಗಳು ಕೃಷಿ ಉತ್ಪನ್ನ, ದಾಸ್ತಾನು ಮತ್ತು ಮಾರಾಟಗಳ ವಿಚಾರ. ಅಂದರೆ,

೧) ಬೆಳೆಗೆ ಮುಂಚೆ

೨) ಬೆಳೆ ಬಂದಾಗ

೩) ಬೆಳೆ ಕಟಾವ್ ಆದನಂತರ, ಕೃಷಿ ಸಾಹಿತ್ಯ ಬೆಳೆಯಬೇಕು.

❑

೪. ಮೈಸೂರು ಸಂಸ್ಥಾನದ ಆರ್ಥಿಕ ಬೆಳವಣಿಗೆಯಲ್ಲಿ ಗೃಹಕೈಗಾರಿಕೆಗಳ ಪಾತ್ರ (೧೯೨೫-೫೦)

-ಆರ್. ಸಿದ್ಧರಾಜು

ಮೈಸೂರು ಸಂಸ್ಥಾನದ ಗೃಹಕೈಗಾರಿಕೆಗಳು, ದೇಶೀಯ ಕಸುಬುಗಳು ಹಾಗೂ ಕುಶಲಕಲೆಗಳು ಭಾರತ ಮಾತ್ರವಲ್ಲ ವಿಶ್ವದಾದ್ಯಂತ ಪ್ರಸಿದ್ಧವಾಗಿವೆ. ಗೃಹ ಅಥವಾ ಗುಡಿಕೈಗಾರಿಕೆಗಳ ಉತ್ಪಾದನೆಯ ವಿಧಾನ ಸರಳ ಮತ್ತು ಅತಿ ಖರ್ಚಿನದಲ್ಲದ್ದು. ಆದುದರಿಂದ ಸಾಮಾನ್ಯವಾಗಿ ಉತ್ಪಾದನಾ ಕೇಂದ್ರ ಕಾರ್ಮಿಕನ ಮನೆಯೋ ಅಥವಾ ಕುಟೀರವೋ ಆಗಿರುತ್ತಿತ್ತು. ಗೃಹಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ಪದಾರ್ಥಗಳು ಅನತಿದೂರದಲ್ಲಿ ಉಪಲಬ್ಧವಿರುತ್ತಿತ್ತು. ತಯಾರಾದ ವಸ್ತುಗಳು ಮಾಮೂಲು ಅಂಗಡಿ ಪೇಟೆಯಲ್ಲೋ, ವಾರದ ಸಂತೆ ಮತ್ತು ಜಾತ್ರೆಗಳಲ್ಲೋ ಮಾರಲು - ಕೊಳ್ಳಲು ಸಿಗುತ್ತಿದ್ದವು. ಈ ಹಿನ್ನೆಲೆಯಲ್ಲಿ ಕರ್ನಾಟಕ ಇತಿಹಾಸವನ್ನು ಗೃಹಕೈಗಾರಿಕೆಗಳ ಮತ್ತು ಕರಕುಶಲ ಕಲೆಗಳ ದೃಷ್ಟಿಯಿಂದ ಪರಿಶೀಲಿಸಿದರೆ ಅದರ ಭವ್ಯತೆ, ಸೌಂದರ್ಯ ಮತ್ತು ಪರಿಪೂರ್ಣತೆಗಳು ಎದ್ದು ಕಾಣುತ್ತವೆ. ಬನವಾಸಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಸೋಮನಾಥಪುರ, ಹಂಪಿ, ಶ್ರೀರಂಗಪಟ್ಟಣ, ಮೈಸೂರು ಮೊದಲಾದ ಐತಿಹಾಸಿಕ ಸ್ಥಳಗಳಲ್ಲಿರುವ ಕಲಾಸ್ಮಾರಕಗಳನ್ನು ಗಮನಿಸಿದರೆ ನಮ್ಮ ನಾಡಿನ ಕರಕುಶಲ ಕಲೆ ಯಾವ ಮಟ್ಟದಲ್ಲಿ ಬೆಳೆದಿತ್ತೆಂಬುದು ಸ್ಪಷ್ಟವಾಗುತ್ತದೆ. ಆಧುನಿಕ ಪೂರ್ವ ಕರ್ನಾಟಕದಲ್ಲಿ ಕೃಷಿಯೇ ಪ್ರಧಾನವಾದ ಉದ್ಯೋಗವಾಗಿದ್ದರೂ ಸಹ ಅದರ ಮೇಲೆ ಅವಲಂಬಿತವಾದ ಹಾಗೂ ಕೃಷಿಯೇತರ ಅನೇಕ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವೆಂಬ ವಿಷಯ ಪ್ರಧಾನವಾಗಿ ಶಾಸನಗಳು ಮತ್ತು ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ. ರಾಜಕೀಯ ಏಳುಬೀಳುಗಳು ಗೃಹಕೈಗಾರಿಕೆಗಳ ಮತ್ತು ಕರಕುಶಲ ಕಲೆಗಳ ಬೆಳವಣಿಗೆಯನ್ನು ಹೆಚ್ಚಾಗಿ ತಟ್ಟಲಿಲ್ಲ. ರಾಜಾಶ್ರಯಕ್ಕಿಂತ ಮಿಗಿಲಾಗಿ ಇವುಗಳು ಜನಾಶ್ರಯದಲ್ಲಿ ಬದುಕಿ ಉಳಿದವು. ಪಾಶ್ಚಿಮಾತ್ಯರ ಸಂಪರ್ಕದಿಂದ ಹೊಸ ತಂತ್ರಜ್ಞಾನ ಇಲ್ಲಿಗೆ

ಆವುದಾದಾಗ ಈ ಕ್ಷೇತ್ರಗಳಲ್ಲಿ ಹೊಸ ಹೊಸ ಆವಿಷ್ಕಾರಗಳಾದವು. ಆದಾಗ್ಯೂ ಅನೇಕ ಗೃಹಕೈಗಾರಿಕೆಗಳು ಮತ್ತು ಕರಕುಶಲ ಕಲೆಗಳು ಇಂದಿಗೂ ಉಳಿದು ಬಂದಿರುವುದನ್ನು ನಾವು ನೋಡಬಹುದು.

ಮೈಸೂರು ಸಂಸ್ಥಾನವು ಪ್ರಾಚೀನ ಕಾಲದಿಂದಲೂ ಗ್ರಾಮೀಣ ಅಥವಾ ಗೃಹಕೈಗಾರಿಕೆಗಳಾದ ನೂಲುವುದು, ನೇಯುವುದು, ಕೈಮಗ್ಗದಿಂದ ಖಾದಿ ಉತ್ಪನ್ನ, ಕೊಟ್ಟಣದಿಂದ ಅಕ್ಕಿ ತಯಾರಿಕೆ (ಅವಲಕ್ಕಿ ತಯಾರಿಕೆ), ಗಾಣದಿಂದ ಎಣ್ಣೆ ಉತ್ಪಾದಿಸುವುದು, ಜೇನು ಸಾಕಾಣಿ, ರೇಷ್ಮೆ ನೂಲು ತೆಗೆಯುವುದು, ತೆಂಗಿನ ನಾರಿನ ಉತ್ಪಾದನೆ. ಕರಕುಶಲ ವಸ್ತುಗಳ ತಯಾರಿಕೆ, ಪಿಂಗಾಣಿ ಪಾತ್ರೆಗಳ ತಯಾರಿಕೆ, ವಿಗ್ರಹಗಳ ಕೆತ್ತನೆ, ಬೊಂಬೆಗಳನ್ನು ತಯಾರಿಸುವುದು, ಚಾಪೆ ರತ್ನಗಂಬಳಿಗಳನ್ನು ತಯಾರಿಸುವುದು, ಚರ್ಮದ ಚೀಲ ಹಾಗೂ ಪಾದರಕ್ಷೆಗಳನ್ನು ಮಾಡುವುದು, ಬಿದಿರಿನ ಕೆಲಸ, ಮಣ್ಣಿನ ಮಡಕೆ ತಯಾರಿಕೆ, ಮರದ ಆಟಿಕೆಗಳ ತಯಾರಿಕೆ, ದಂತ ಕೆತ್ತನೆ, ನಾಡ ಹೆಂಚು ತಯಾರಿಕೆ, ಕಬ್ಬಿಣದ ಕೆಲಸ, ಬೆಲ್ಲ ಮತ್ತು ಖಂಡ ಸಾರಿ ತಯಾರಿಕೆ, ಬೆಂಕಿಪೊಟ್ಟಣ ತಯಾರಿಕೆ, ಶ್ರೀಗಂಧ ಕೆತ್ತನೆ, ಆಭರಣಗಳ ತಯಾರಿಕೆ ಮೊದಲಾದ ಅನೇಕ ಗೃಹಕೈಗಾರಿಕೆಗಳು ಹಾಗೂ ಕುಶಲಕಲೆಗಳಿಗೆ ಬಹಳ ಜನಪ್ರಿಯವಾಗಿತ್ತು. ಮೈಸೂರು ಒಡೆಯರು ಹಾಗೂ ಹೈದರಾಲಿ ಟಿಪ್ಪುಸುಲ್ತಾನ್‌ರವರು ಈ ಗೃಹಕೈಗಾರಿಕೆಗಳು ಹಾಗೂ ಕುಶಲ ಕೌಶಲ್ಯಗಳಿಗೆ ವಿಶೇಷ ಪ್ರೋತ್ಸಾಹ ನೀಡಿ ಅಭಿವೃದ್ಧಿಗೊಳಿಸಿದರು. ಮೈಸೂರು ಸಂಸ್ಥಾನದಲ್ಲಿ ತಯಾರಾದ ವಸ್ತುಗಳಿಗೆ ಭಾರತದಾದ್ಯಂತ ಮಾತ್ರವಲ್ಲದೆ ವಿದೇಶಗಳಲ್ಲಿಯೂ ಸಹ ಅಪಾರ ಬೇಡಿಕೆ ಇದ್ದುದು ಚರಿತ್ರೆಯಲ್ಲಿ ದಾಖಲಾಗಿದೆ.

ಮೈಸೂರು ಸಂಸ್ಥಾನದ ಗೃಹಕೈಗಾರಿಕೆಗಳ ಉತ್ಪಾದನೆಗೆ ಸಂಬಂಧಿಸಿದಂತೆ ವಿವಿಧ ಇತಿಹಾಸಕಾರರು ಮತ್ತು ಅರ್ಥಶಾಸ್ತ್ರಜ್ಞರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಬ್ರಿಟಿಷರ ಆಗಮನ, ವಸಾಹತು ಆರ್ಥಿಕ ನೀತಿ, ಕೈಗಾರಿಕಾ ಕ್ರಾಂತಿ, ಯಂತ್ರಗಳ ಬಳಕೆ ಮೊದಲಾದ ಕಾರಣಗಳಿಂದ ಮೈಸೂರು ಸಂಸ್ಥಾನದಲ್ಲಿ ಗ್ರಾಮೀಣ ಕಸುಬುಗಳು ಮತ್ತು ದೇಶೀಯ ಕೈಗಾರಿಕೆಗಳು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡು ನಶಿಸಿಹೋದವು. ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಅಂದಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜೇಂದ್ರ ಒಡೆಯರ್ ಮತ್ತು ಶ್ರೇಷ್ಠ ದಿವಾನರುಗಳಾದ ಸರ್ ಎಂ. ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್ ಮೊದಲಾದವರ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಬೃಹತ್ ಕೈಗಾರಿಕೆಗಳು ಸ್ಥಾಪನೆಗೊಂಡು ಉತ್ಪಾದನಾ ವಲಯದಲ್ಲಿ ತೀವ್ರ ಪರಿಣಾಮವನ್ನುಂಟು ಮಾಡಿದವು. ಇವರಿಂದ ದೇಶೀಯ ಕೈಗಾರಿಕೆಗಳು ಹಾಗೂ

ಕುಶಲ ಕಲೆಗಳು ನಾಶವಾದವು. ಮಾಲೀಕರು ಅಪಾರ ನಷ್ಟವನ್ನನುಭವಿಸಿದರೆ ಕರಕುಶಲಗಾರರ ಕೈಚಳಕ ಕಾಣದಾಯಿತು. ನಿರುದ್ಯೋಗ ತೀವ್ರವಾಗಿ ಅಧಿಕಗೊಂಡಿತು. ನಗರ ಪಟ್ಟಣಗಳತ್ತ ಹಳ್ಳಿಗರ ವಲಸೆ ತೀವ್ರಗೊಂಡಿತು. ಗ್ರಾಮಗಳ ಸ್ವಾವಲಂಬನೆ ತಪ್ಪಿಹೋಗಿ ಪರಾವಲಂಬನೆ ಅಧಿಕವಾಯಿತು. ನಗರಗಳಲ್ಲಿ ಕೊಳಚೆಗೇರಿಗಳ ಸಂಖ್ಯೆ ಹೆಚ್ಚಾಯಿತು. ಇಂತಹ ವಿನಾಶಕಾರಿ ಸಂದರ್ಭದಲ್ಲಿ ಮೈಸೂರು ಸಂಸ್ಥಾನಕ್ಕೆ ಗಾಂಧಿಯವರ ಆಗಮನ ಪ್ರಮುಖವಾಗಿ ಅವರ ಗ್ರಾಮೀಣ ಆರ್ಥಿಕ ನೀತಿಯ ಮಹತ್ವ, ಗೃಹಕೈಗಾರಿಕೆಗಳ ಸುಧಾರಣೆ, ಖಾದಿಪ್ರಚಾರ ಮುಂತಾದ ತತ್ವಗಳು ಮೈಸೂರು ಸಂಸ್ಥಾನದಲ್ಲಿ ತೀವ್ರ ಸಂಕಟಕ್ಕೀಡಾಗಿದ್ದ ದೇಶೀಯ ಕೈಗಾರಿಕೆಗಳು ಹಾಗೂ ಸ್ಥಳೀಯ ಕುಶಲಕಲೆಗಳ ಪುನರ್‌ಜೀವನಕ್ಕೆ ವರದಾನವಾಯಿತೆಂಬುದು ಗಮನಾರ್ಹ. ಇದಕ್ಕೆ ನಿದರ್ಶನವಾಗಿ ಬದನವಾಳು, ತಗಡೂರು, ಮೈಸೂರು, ಬೆಂಗಳೂರು, ಹಾಸನ, ಕಡೂರು, ಮಂಡ್ಯ, ತುಮಕೂರು, ಚಿತ್ರದುರ್ಗ ಮೊದಲಾದ ಕಡೆ ಆರಂಭವಾದ ಖಾದಿ ಕೇಂದ್ರಗಳು, ಉಣ್ಣೆ ಗಿರಣಿಗಳು ಹಾಗೂ ಹಲವು ಬಗೆಯ ಸ್ಥಳೀಯ ಕೈಗಾರಿಕೆಗಳು ಅಭೂತಪೂರ್ವ ಮುನ್ನಡೆ ಸಾಧಿಸಿದವು. ಮಿಗಿಲಾಗಿ ಮೈಸೂರು ಸಂಸ್ಥಾನದಲ್ಲಿ ನೂಲುವುದು, ನೇಯುವುದು, ಶಿಲ್ಪ ಇತ್ಯಾದಿ ಕೆಲವು ಕಸುಬುಗಳಲ್ಲಿ ಅತ್ಯುತ್ತಮ ಕಾರ್ಯಕೌಶಲ್ಯವನ್ನು ಕಾಣಬಹುದು. ಇವು ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ, ಹಲವಾರು ತಲೆಮಾರುಗಳಿಂದ ಬಂದ ಕಸುಬುಗಳಾಗಿದ್ದವು.

ಮೈಸೂರು ಸಂಸ್ಥಾನದಲ್ಲಿ ಹೇರಳವಾಗಿ ಸಿಗುತ್ತಿದ್ದ ಹಲವಾರು ಬಗೆಯ ಮರಗಳಿಂದ ವಿವಿಧ ಮನೆಯ ಪೀಠೋಪಕರಣಗಳು, ಗಾಡಿ ಮುಂತಾದ ವಾಹನಗಳು, ದೋಣಿ, ತೆಪ್ಪ ಮೊದಲಾದವುಗಳನ್ನು ಮಾಡುತ್ತಿದ್ದರು. ಗೃಹನಿರ್ಮಾಣ, ವ್ಯವಸಾಯ ಹಾಗೂ ನೀರಾವರಿ ಕಾರ್ಯ ಮೊದಲಾದವುಗಳಲ್ಲಿಯೂ ಸಹ ಹಲವಾರು ಉಪಕರಣಗಳು ಬಡಗಿಗಳಿಂದ ತಯಾರಾಗುತ್ತಿದ್ದವು. ಚಮ್ಮಾರರು ಹಲವು ಬಗೆಯ ಪಾದರಕ್ಷೆಗಳು, ನೀರು ತುಂಬುವ ಹಾಗೂ ಮೇಲೆತ್ತುವ ಬಾನಿ, ಚೀಲಗಳು, ಹಗ್ಗಗಳು ಇತ್ಯಾದಿ ಚರ್ಮದ ಪದಾರ್ಥಗಳನ್ನು ತಯಾರಿಸುತ್ತಿದ್ದರು.

ಲೋಹದ ಕೆಲಸಗಳಲ್ಲಿ ಚಿನ್ನಬೆಳ್ಳಿಯ ಆಭರಣಗಳು, ದೇವತಾಮೂರ್ತಿಗಳು, ಹರಿವಾಣಗಳು, ಪಾತ್ರೆಪಗಟೆಗಳು, ಚಂಬು, ತಟ್ಟೆ, ಲೋಟ, ಸೌಟು, ಕನ್ನಡಿ ಇತ್ಯಾದಿ ಹಲವಾರು ವಸ್ತುಗಳನ್ನು ಸಾಮಾನ್ಯವಾಗಿ ಕಂಚು, ಹಿತ್ತಾಳೆ, ತಾಮ್ರಲೋಹಗಳಿಂದ ಮಾಡುತ್ತಿದ್ದರು. ಕಂಚು ಅಥವಾ ಪಂಚಲೋಹಗಳಿಂದ ಎರಕ ಹುಯ್ದು ದೇವತಾ ವಿಗ್ರಹಗಳನ್ನು ಮಾಡುತ್ತಿದ್ದರು. ಹೀಗೆ ಪ್ರಾಚೀನ ಕಾಲದ ಮೈಸೂರು ಸಂಸ್ಥಾನದ ಕೈಗಾರಿಕೆಗಳು ಗೃಹಕೈಗಾರಿಕೆಗಳ ಮಟ್ಟದಲ್ಲಷ್ಟೇ ಇದ್ದರೆ, ಸುಮಾರು ೧೯ನೆಯ

ಶತಮಾನದ ಅಂತ್ಯದ ಹೊತ್ತಿಗೆ ಆಧುನಿಕ ರೀತಿಯ ಹಾಗೂ ವ್ಯವಸ್ಥಿತ ಕೈಗಾರಿಕಾ ರಂಗ ಉಗಮವಾಗುವ ಸೂಚನೆಗಳು ಕಂಡುಬಂದವು.

ಹೈದರಾಲಿ ಟಿಪ್ಪುಸುಲ್ತಾನರ ಕಾಲದಲ್ಲಿ ವಿಶೇಷವಾಗಿ ಯುರೋಪಿಯನ್ನರ ಆಗಮನ, ಕೈಗಾರಿಕೀಕರಣ, ವಿಜ್ಞಾನತಂತ್ರಜ್ಞಾನಗಳ ಮುಂದುವರಿಕೆ ಮೊದಲಾದ ಅಂಶಗಳಿಂದ ದೊಡ್ಡ ದೊಡ್ಡ ಕೈಗಾರಿಕೆಗಳ ಸ್ಥಾಪನೆಯಾದರೂ ಗೃಹಕೈಗಾರಿಕೆಗಳು ಮತ್ತು ಕುಶಲಕೌಶಲ್ಯ ಕಲೆಗಳಿಗೆ ಹೆಚ್ಚಿನ ಆದ್ಯತೆ ದೊರಕಿತು. ಉದಾಹರಣೆಗೆ, ರೇಷ್ಮೆ ಸಾಕಾಣಿಕೆ, ರೇಷ್ಮೆಬಟ್ಟೆ ತಯಾರಿಕೆ, ಹತ್ತಿಬಟ್ಟೆ ತಯಾರಿಕೆ, ಗೊಂಬೆಗಳ ಕೆತ್ತನೆ, ಆಭರಣಗಳ ತಯಾರಿಕೆ, ದಂತಕೆತ್ತನೆ, ವಜ್ರದ ಕೆಲಸ ಮೊದಲಾದವುಗಳು ವಿಶೇಷವಾಗಿ ಪ್ರಸಿದ್ಧಿಗೆ ಬಂದವು. ಆದರೆ ಮೈಸೂರು ಸಂಸ್ಥಾನವು ಬ್ರಿಟಿಷ್ ವಸಾಹತು ಆಡಳಿತದ ನಿಯಂತ್ರಣ ಹಾಗೂ ಪ್ರಭಾವಕ್ಕೆ ಒಳಗಾದಾಗ ಸಹಜವಾಗಿ ಗುಡಿಕೈಗಾರಿಕೆಗಳು ಮತ್ತು ದೇಶೀಯ ಕಸುಬುಗಳು ಮೂಲೆಗುಂಪಾದವು. ಯುರೋಪ್ ರಾಷ್ಟ್ರಗಳಿಂದ ಕೈಗಾರಿಕೋತ್ಪನ್ನಗಳು ಹಾಗೂ ಸರಕುಗಳನ್ನು ಆಮದು ಮಾಡಿಕೊಳ್ಳಲಾರಂಭಿಸಿದುದು ಸ್ಥಳೀಯ ಮತ್ತು ಸಣ್ಣಪ್ರಮಾಣದ ಕೈಗಾರಿಕೆಗಳಿಗೆ ಭಾರೀ ಪೆಟ್ಟಾಯಿತು. ಇಂತಹ ಸಂದಿಗ್ಧ ಸಂದರ್ಭದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಪ್ರೋತ್ಸಾಹ, ಸರ್ ಎಂ. ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್ ಮೊದಲಾದ ಶ್ರೇಷ್ಠ ದಿವಾನರುಗಳ ದೂರದೃಷ್ಟಿಯಿಂದ ಜೊತೆಗೆ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಗಾಂಧೀಜಿಯವರು ಜನಪ್ರಿಯಗೊಳಿಸಿದ ಖಾದಿ ಉತ್ಪಾದನೆ, ಚರಕದಿಂದ ನೂಲುವುದು ಮೊದಲಾದ ರಚನಾತ್ಮಕ ಕಾರ್ಯಕ್ರಮಗಳಿಂದ ಸಂಪೂರ್ಣ ಅವನತಿಯತ್ತ ಸಾಗಿದ್ದ ಗುಡಿಕೈಗಾರಿಕೆಗಳು ಪುನಃ ಪುನಶ್ಚೇತನ ಗೊಂಡವು. ತನ್ಮೂಲಕ ದೇಶೀಯ ಕಸುಬುಗಳು, ಸ್ಥಳೀಯ ಉದ್ಯೋಗಗಳು, ಕುಶಲಕೆಲಸಗಳು ಪುನರ್ಜೀವನಗೊಂಡು ಹೊಸ ಬೆಳವಣಿಗೆಗಳುಂಟಾಗಿ ಆರ್ಥಿಕ ಕ್ಷೇತ್ರದಲ್ಲಿ ಸುಧಾರಣೆ ಹಾಗೂ ಪ್ರಗತಿ ಕಂಡುಬಂದವು. ಅವುಗಳನ್ನು ಕುರಿತಂತೆ ಚಾರಿತ್ರಿಕ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನದ ಆರ್ಥಿಕ ಬೆಳವಣಿಗೆಯಲ್ಲಿ ಗೃಹಕೈಗಾರಿಕೆಗಳ ಪಾತ್ರ (೧೯೨೫-೫೦) ಎಂಬ ವಿಷಯದ ಬಗ್ಗೆ ಹಲವು ಮಾಹಿತಿಗಳನ್ನು ಸಂಗ್ರಹಿಸಿ, ಚರ್ಚಿಸಲಾಗಿದೆ.

ಗೃಹಕೈಗಾರಿಕೆಗಳು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಬೇಸಾಯದ ಆರ್ಥಿಕ ಹಿನ್ನೆಲೆಯಲ್ಲಿ ಬೆಳೆದುಬಂದವು. ಕೃಷಿ ಈ ಕೈಗಾರಿಕೆಗಳಿಗೆ ಬೆನ್ನೆಲುಬು. ಹಾಗೇ ಗ್ರಾಮಾಂತರ ರೈತರ ಕೈಗಾರಿಕಾ ಜ್ಞಾನವನ್ನು ಪ್ರೋತ್ಸಾಹಿಸಿ ಅಭಿವೃದ್ಧಿಪಡಿಸಿ ನಿರುದ್ಯೋಗ ನಿವಾರಣೆಗೂ ಒಂದು ರೀತಿಯ ಸಾಧನವಾದುದರಿಂದ ೧೯೩೩ರಲ್ಲಿ ಅಂದಿನ ಮೈಸೂರು ಸರ್ಕಾರ ಹಲವು ಗೃಹಕೈಗಾರಿಕೆಗಳ ಸ್ಥಾಪನೆಗೆ ಯೋಜನೆ

ಹಾಕಿತು. ಅದರಂತೆ ಮಾದರಿ ಮಡಿಕೆಕುಡಿಕೆಗಳ ತಯಾರಿಕೆ, ಗುಂಡಿ ಮತ್ತು ಚರ್ಮ ವಸ್ತುಗಳ ತಯಾರಿಕೆ ಇವೇ ಮುಂತಾದ ೧೭ ತರಹದ ಗೃಹಕೈಗಾರಿಕೆಗಳು ಸ್ಥಾಪನೆಯಾದವು. ಜೊತೆಗೆ ಸಂಸ್ಥಾನದ ಕೆಲವು ಭಾಗಗಳಲ್ಲಿ ತರಬೇತಿ ಕೇಂದ್ರಗಳು ಸ್ಥಾಪಿತವಾದವು. ಮುಂದೆ ಕೈಗಾರಿಕೋದ್ಯಮದ ಬೆಳವಣಿಗೆಗೆ ಮತ್ತು ನಿರುದ್ಯೋಗ ನಿವಾರಣೆಗೆ ಗೃಹಕೈಗಾರಿಕೆಗಳ ಅಭಿವೃದ್ಧಿ ಅಗತ್ಯವೆಂಬುದನ್ನು ಮನಗಂಡು ಸರ್ಕಾರ ಕೆಲವು ಮಂಡಳಿಗಳನ್ನು ಸ್ಥಾಪಿಸಿತು. ಅವುಗಳಲ್ಲಿ ಮುಖ್ಯವಾದವು - ಅಖಿಲ ಭಾರತ ಖಾದಿ ಗ್ರಾಮೋದ್ಯೋಗ ಆಯೋಗ, ಅಖಿಲ ಭಾರತ ಕೈಮಗ್ಗದ ಮಂಡಳಿ, ಅಖಿಲ ಭಾರತ ಕುಶಲ ಕೈಗಾರಿಕೆಗಳ ಮಂಡಳಿ, ಅಖಿಲ ಭಾರತ ತೆಂಗಿನ ನಾರಿನ ಕೈಗಾರಿಕಾಭಿವೃದ್ಧಿ ಮಂಡಳಿ ಮತ್ತು ಕೇಂದ್ರ ರೇಷ್ಮೆ ಮಂಡಳಿ ಇತ್ಯಾದಿ. ಇವೆಲ್ಲವೂ ರಾಜ್ಯಮಟ್ಟದಲ್ಲಿ ತಮ್ಮ ಮಂಡಳಿಗಳನ್ನು ಹೊಂದಿದ್ದು ಸಂಬಂಧಿಸಿದ ಗೃಹಕೈಗಾರಿಕಾಭಿವೃದ್ಧಿಗೆ ಶ್ರಮಿಸುತ್ತಿವೆ. ಈ ಮಂಡಳಿಗಳ ಮೂಲಕ ಸರ್ಕಾರ ಗೃಹಕೈಗಾರಿಕೆಗಳಿಗೆ ಆರ್ಥಿಕ ನೆರವನ್ನು ಸಾಲ ಮತ್ತು ಸಹಾಯಧನದ ಜೊತೆಗೆ ತಾಂತ್ರಿಕ ಸಹಾಯ ಮತ್ತು ತರಬೇತಿ ಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ಗೃಹಕೈಗಾರಿಕೆಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸಿತು.

ಮೈಸೂರು ಸಂಸ್ಥಾನದ ಗೃಹಕೈಗಾರಿಕೆಗಳು ಅನೇಕ ಬಾರಿ ಏರಿಳಿತವನ್ನೂ ಕಂಡಿವೆ. ಕೃಷಿಯ ಅಭಿವೃದ್ಧಿಗೆ ನೆರವಾಗುವಂತೆ ಪ್ರತಿ ಗ್ರಾಮಗಳಲ್ಲೂ ಕೈಗಾರಿಕೆಗಳಿದ್ದು, ಇವು ಕೆಲವರಿಗೆ ಉಪಕಸುಬಾದರೆ ಮತ್ತೆ ಕೆಲವರಿಗೆ ಪೂರ್ಣೋದ್ಯೋಗವಾಗಿದ್ದು ಗ್ರಾಮಗಳು ಒಂದು ರೀತಿಯಲ್ಲಿ ಸ್ವಾವಲಂಬನೆ ಹಾಗೂ ಪರಿಪೂರ್ಣತೆ ಸಾಧಿಸಿದವೆನ್ನಬಹುದು. ಮೈಸೂರು ಸಂಸ್ಥಾನದ ಕುಶಲ ಕೈಗಾರಿಕಾ ವಸ್ತುಗಳು, ಉತ್ತಮ ಮಾರುಕಟ್ಟೆಗಳನ್ನು ಇತರ ಪ್ರಾಂತ್ಯಗಳಲ್ಲೂ ದೇಶದಾದ್ಯಂತ ಪಡೆದಿದ್ದವು. ತಮ್ಮ ತಮ್ಮ ಕಸುಬಿನಲ್ಲಿ ಪರಿಣಿತಿ ಪಡೆದ ಕುಶಲಕರ್ಮಿಗಳ ಹಸ್ತದಿಂದ ಅತ್ಯಂತ ನಾಜೂಕಾದ ವಸ್ತುಗಳು ತಯಾರಾಗುತ್ತಿದ್ದವು. ವಸ್ತುಗಳು ಉಪಯೋಗ, ಬಾಳಿಕೆ ಮತ್ತು ಕಲಾತ್ಮಕದೃಷ್ಟಿಯಿಂದ ಉತ್ತಮವೆನಿಸಿದ್ದು ಅವುಗಳಿಗೆ ಹೆಚ್ಚು ಬೇಡಿಕೆಯೂ ಇತ್ತು.

ಆದರೆ ಬ್ರಿಟಿಷರ ಆಡಳಿತ ಕಾಲದಲ್ಲಿ ಮೈಸೂರು ಸಂಸ್ಥಾನದ ಗೃಹಕೈಗಾರಿಕೆಗಳಿಗೆ ಸರಿಯಾದ ಹಾಗೂ ಸೂಕ್ತ ಪ್ರೋತ್ಸಾಹ ದೊರಕದೆ ಯಂತ್ರಗಳಿಂದ ತಯಾರಾದ ಥಳುಕಿನ ವಿದೇಶಿ ವಸ್ತುಗಳೊಡನೆ ಸ್ಪರ್ಧಿಸಲಾರದೆ ಹಿಂದೆ ಬೀಳಬೇಕಾಯಿತು. ಇದರಿಂದ ಮೈಸೂರು ಸಂಸ್ಥಾನದ ಅನೇಕ ಗುಡಿಕೈಗಾರಿಕೆಗಳು ಬಾಗಿಲು ಮುಚ್ಚಿ ಅವನತಿ ಹೊಂದಿದವು. ಕುಶಲಕರ್ಮಿಗಳು ಉದ್ಯೋಗವಿಲ್ಲದೆ ತೀವ್ರ ತೊಂದರೆಗಳಿಗೆ ಸಿಲುಕಿದರು. ಗೃಹ ಕೈಗಾರಿಕೆಗಳ ಮಾಲೀಕರು ಅಪಾರ ಕಷ್ಟನಷ್ಟಕ್ಕೀಡಾದರು.

ಉದ್ಯೋಗವಿಲ್ಲದೆ ಅನೇಕ ಕುಶಲಕಲೆಗಾರರು, ಕಸುಬುದಾರರು, ಉದ್ದಿಮೆದಾರರು ನಗರಪಟ್ಟಣಗಳತ್ತ ವಲಸೆ ಬಂದರು. ಇದರಿಂದ ನಗರಪಟ್ಟಣಗಳಲ್ಲಿ ಜನಸಂಖ್ಯೆಯ ಹೆಚ್ಚಳದೊಂದಿಗೆ ಅನೇಕ ಸಾಮಾಜಿಕ ಮತ್ತು ಮೂಲಭೂತ ಸಮಸ್ಯೆಗಳು ಕಾಣಿಸಿಕೊಂಡವು. ನಿರುದ್ಯೋಗ ಸಮಸ್ಯೆ ಉಲ್ಬಣಗೊಂಡಂತೆ ಕಳ್ಳತನ, ದರೋಡೆ, ಕೊಲೆ, ಸುಲಿಗೆ, ವ್ಯಭಿಚಾರ, ವೇಶ್ಯಾವಾಟಿಕೆ ಮೊದಲಾದ ಅನೈತಿಕ ಚಟುವಟಿಕೆಗಳು ಹಾಗೂ ಅನಾಚಾರಗಳು ಕಾಣಿಸಿಕೊಂಡವು. ಕೊಳಚೆಗೇರಿಗಳ ಸಂಖ್ಯೆ ಅಧಿಕಗೊಂಡವು. ಇದರಿಂದ ಮೈಸೂರು ಸಂಸ್ಥಾನದ ನಗರಪಟ್ಟಣಗಳಲ್ಲೆಲ್ಲಾ ಹಲವು ಬಗೆಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ತಲೆದೋರಿದವು. ಇಂತಹ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಮಹಾರಾಜರು ಹಾಗೂ ದಿವಾನರು ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡು ಗೃಹಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಪ್ರೋತ್ಸಾಹಿಸಿದರು. ಇದೇ ಸಂದರ್ಭದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ಗಾಂಧೀಜಿಯವರು ಕರ್ನಾಟಕದ ವಿವಿಧ ಪ್ರಾಂತ್ಯಗಳಿಗೆ ಪ್ರಧಾನವಾಗಿ ಮೈಸೂರು ಸಂಸ್ಥಾನದ ವಿವಿಧ ಭಾಗಗಳಿಗೆ ಭೇಟಿ ನೀಡಿದರಲ್ಲದೆ ಗುಡಿಕೈಗಾರಿಕೆಗಳ ಪುನಶ್ಚೇತನಕ್ಕೆ ಹಲವು ರೀತಿಯಲ್ಲಿ ಸಹಕರಿಸಿದರು. ಉದಾಹರಣೆಗೆ, ಸಂಸ್ಥಾನದ ನಂಜನಗೂಡು ತಾಲ್ಲೂಕಿನ ಬದನವಾಳು ಖಾದಿಗ್ರಾಮದ ಸ್ಥಾಪನೆ. ಹೀಗೆ ಮೈಸೂರು ಸಂಸ್ಥಾನದ ಗುಡಿಕೈಗಾರಿಕೆಗಳು ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಉಪಯುಕ್ತವಾದುವೆಂದು ಹೇಳಬಹುದು.

ಆಧಾರಗ್ರಂಥಗಳು

೧. ಬಸವರಾಜ ಕುಮ್ನಾರ್, ಗ್ರಾಮೀಣ ಆರ್ಥಿಕ ಅಭಿವೃದ್ಧಿ ಹಾಗೂ ಯೋಜನೆಗಳು, ಬೆಂಗಳೂರು, ೧೯೯೮.

೨. ಕೃಷ್ಣ, ಜಿ.ಆರ್., ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ, ಬೆಂಗಳೂರು, ೧೯೮೫.

೩. ಕೃಷ್ಣಮೂರ್ತಿ, ಎಚ್.ಆರ್., ಭಾರತದ ಆರ್ಥಿಕ ವ್ಯವಸ್ಥೆ, ಬೆಂಗಳೂರು. ೨೦೦೩.

೪. ತಿರುಮಲ ತಾತಾಚಾರ್ಯಶರ್ಮ, ಮೈಸೂರು ಇತಿಹಾಸದ ಹಳೆಯ ಪುಟಗಳು, ಬೆಂಗಳೂರು, ೧೯೯೬.

೫. ನಾಗೇಶ್, ಎಚ್.ವಿ., ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ, ಧಾರವಾಡ, ೧೯೯೧.

೬. Karnataka Khadi & Village Industries Board, Bangalore, Annual Report, 1999-2000.

೭. Khadi & Village Industries Commission, Bombay, Annual Report, 1995-2005.

೫. ಪಶ್ಚಿಮ ಏಷ್ಯಾದ ಸಮುದಾಯಗಳು
– ಒಂದು ಐತಿಹಾಸಿಕ ಹಿನ್ನೆಲೆ

– ಶಿವಾನಂದ

ಇಸ್ಲಾಂ ಧರ್ಮವು ಜಗತ್ತಿನ ಪ್ರಮುಖ ಧರ್ಮಗಳಲ್ಲಿ ಒಂದಾಗಿದ್ದು, ೧.೨ ಮಿಲಿಯನ್ ಅನುಯಾಯಿಗಳನ್ನು ಹೊಂದಿದೆ. ಇದು ಜಗತ್ತಿನಲ್ಲಿ ಎರಡನೇ ಅತಿ ದೊಡ್ಡ ಹಾಗೂ ವೇಗವಾಗಿ ಬೆಳೆಯುತ್ತಿರುವ ಧರ್ಮವಾಗಿದೆ. ಕೊನೆಯ ಅರ್ಧ ಶತಮಾನದ ಹೊತ್ತಿಗೆ ಮುಸ್ಲಿಂ ಜಗತ್ತಿನ ಸೈದ್ಧಾಂತಿಕ ರಾಜಕೀಯ ಮತ್ತು ಪ್ರಜಾಸತ್ತಾತ್ಮಕ ಮಾರ್ಗವು ನಾಟಕೀಯವಾಗಿ ಬದಲಾವಣೆ ಆರಂಭವಾಯಿತು. ೨೦ನೇ ಶತಮಾನದ ಪ್ರಧಾನವಾದ ಬೆಳವಣಿಗೆಯೆಂದರೆ, ಸಾಂಪ್ರದಾಯಿಕ ರಾಜ್ಯ ವ್ಯವಸ್ಥೆ ಅಥವಾ ಪಾಶ್ಚಿಮಾತ್ಯ ದಬ್ಬಾಳಿಕೆಯಿಂದ ಹೊರಬಂದು ಆಧುನಿಕ ಮುಸ್ಲಿಂ ರಾಷ್ಟ್ರಗಳು ಉದಯವಾದವು. ಜಾನ್. ಎಲ್. ಎಸ್ಪೂಸಿಟೂ ಪ್ರಕಾರ ಸಮಕಾಲೀನ ಮುಸ್ಲಿಂ ಇತಿಹಾಸವು ಅತಿವೇಗದ ಪಾಶ್ಚಿಮಾತ್ಯೀಕರಣ ಮತ್ತು ಸಮಾಜದ ಜಾತ್ಯತೀಕರಣಕ್ಕೆ ಕಾರಣವಾಗುವ ಆಧುನೀಕರಣದ ಸವಾಲಾಗಿದೆ.

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗೆ ಜಾತ್ಯತೀತ ಸಮಾಜವು ಅಗತ್ಯ. ಪೂರ್ವ ಷರತ್ತಿನ ಅಗತ್ಯತೆಯನ್ನು ಸ್ಪಷ್ಟಪಡಿಸಲಿಲ್ಲ.

ಪಶ್ಚಿಮ ಅರೇಬಿಯಾದಲ್ಲಿ ಪ್ರವಾದಿ ಮಹಮದ್ (ಕ್ರಿ.ಶ. ೫೭೦–೬೩೨)ರ ಜೀವನ ಮತ್ತು ಬದುಕಿನೊಡನೆ ಇಸ್ಲಾಂ ಧರ್ಮ ಮತ್ತು ನಾಗರಿಕತೆಗಳ ಪಾದಾರ್ಪಣೆ ಮಾಡಿದವು. ಇವನ ಮರಣದ ನಂತರ, ಕಲೀಫರೆಂದು ಕರೆಯಲ್ಪಡುವ ಸಾವಿರಾರು ವಾರಸುದಾರರು ಇಸ್ಲಾಂ ಸಮುದಾಯದ ಮೇಲೆ ರಾಜಕೀಯ ಅಧಿಕಾರವನ್ನು ವಹಿಸಿದರು. ಕಲೀಫರ ಅವಧಿಯಲ್ಲಿ ಜಗತ್ತಿನಾದ್ಯಂತ ಪ್ರಮುಖವಾದ ಧಾರ್ಮಿಕ ಸಂಪ್ರದಾಯ ಮತ್ತು ನಾಗರಿಕತೆಯಾಗಿ ಬೆಳೆಯಿತು.

೬ನೇ ಶತಮಾನದಲ್ಲಿ ಪಶ್ಚಿಮ ಏಷ್ಯಾ ಮತ್ತು ಮೆಡಿಟರೇನಿಯನ್‌ಗಳೆರಡೂ ಬಹುದೊಡ್ಡ ಸಾಮ್ರಾಜ್ಯಗಳಾಗಿ ವಿಭಾಗವಾದವು. ಒಂದು ಬೈಜಾಂಟಿಯನ್ ಎಂತಲೂ ಅಥವಾ ಪಶ್ಚಿಮ ಭಾಗದ ಕೊನೆಯಲ್ಲಿ ರೋಮನ್ ಸಾಮ್ರಾಜ್ಯವೆಂತಲೂ ಹಾಗೂ

ಪೂರ್ವದಲ್ಲಿ ಸಸ್ಸಾನಿಯನ್ ಸಾಮ್ರಾಜ್ಯವೆಂತಲೂ ವಿಭಾಗವಾದವು. ಅಲ್ಲದೇ ದಕ್ಷಿಣ ಅರೇಬಿಯಾದಲ್ಲಿ ಹಿಮಾಯುರ್ ಸಾಮ್ರಾಜ್ಯವು ಮತ್ತು ಆಫ್ರಿಕಾದಲ್ಲಿ ಆಕ್ಸುಮ್ ಸಾಮ್ರಾಜ್ಯಗಳು ಕೂಡ ಅಸ್ತಿತ್ವದಲ್ಲಿದ್ದವು. ಬೈಜಾಂಟಿಯನ್ ಸಸ್ಸಾನಿಯನ್ ವಿರೋಧಿಗಳು ರೋಮ್ ಮತ್ತು ಪರ್ಶಿಯಾಗಳ ನಡುವಿನ ವಿರೋಧಿಗಳಾಗಿಯೇ ಮುಂದುವರಿದಿದ್ದು ಕೊನೆಯ ೫೦೦ ವರ್ಷಗಳಿಗಿಂತ ಹೆಚ್ಚು ಕಾಲದವರೆಗೆ ಇದ್ದಿತ್ತು. ಈ ಎರಡು ಸಾಮ್ರಾಜ್ಯಗಳು ಜಗತ್ತಿನ ಸಾಮ್ರಾಜ್ಯಗಳಿಗಾಗಿ ಸ್ಪರ್ಧೆಗೆ ಮಾತ್ರ ಇಳಿಯದೆ ಇವೆರಡು ವಿಭಿನ್ನ ಸಾಂಸ್ಕೃತಿಕ ಸಂಪ್ರದಾಯಗಳನ್ನು ಪ್ರತಿನಿಧಿಸುತ್ತಿದ್ದವು.

ಬೈಜಾಂಟಿಯನ್‌ಗಳು ರೋಮನ್ ಮತ್ತು ಹೆಲೆನಿಸ್ಟಿಕ್ ಸಂಸ್ಕೃತಿಯನ್ನು ಸಸ್ಸಾನಿಯನ್‌ಗಳು ಪ್ರಾಚೀನ ಇರಾನ್ ಮತ್ತು ಸೆಮಿಟಿಕ್ ಸಾಂಸ್ಕೃತಿಕ ಸಂಪ್ರದಾಯಗಳನ್ನು ನೋಡಿಕೊಳ್ಳುತ್ತಿದ್ದವು ಮತ್ತು ಪರದೇಶಿ ಎಂದು ಹೆಲೆನಿಸ್ಟಿಕ್ ಸಂಸ್ಕೃತಿಯನ್ನು ತಿರಸ್ಕರಿಸಿದವು. ಈ ಒಂದು ಸಾಂಸ್ಕೃತಿಕ ಭಿನ್ನತೆಗಳು ಧಾರ್ಮಿಕ ವಿರೋಧತ್ವಕ್ಕೆ ಕೊಡುಗೆಯಾಗಿದೆ. ೩ನೇ ಮತ್ತು ೪ನೇ ಶತಮಾನಗಳಲ್ಲಿ ಬೈಜಾಂಟಿಯನ್ ಚಕ್ರವರ್ತಿಗಳು ತಾವು ಕ್ರಿಶ್ಚಿಯನ್ ಧರ್ಮದ ಚಾಂಪಿಯನ್‌ಗಳೆಂದು ಹೇಳಿಕೊಂಡರು. ಇದೇ ರೀತಿ ಸಸ್ಸಾನಿಯನ್ ರಾಜರು ಜೂಡೋಸ್ಟ್ರಿಯನ್ ಧರ್ಮದ ಹುಟ್ಟಿಗೆ ಕಾರಣರಾದರು. ಇಸ್ಲಾಂ ಧರ್ಮದಿಂದಾಗಿ ಕ್ರಿಶ್ಚಿಯನ್ ಮತ್ತು ಜೂಡೋಸ್ಟ್ರಿಯನ್ ಧರ್ಮಗಳು ವಿರೋಧದಲ್ಲಿ ರಾಜಕೀಯ ಗುಣಲಕ್ಷಣವನ್ನು ಗಳಿಸಿಕೊಂಡವು.

ಬೈಜಾಂಟಿಯನ್ ಮತ್ತು ಸಸ್ಸಾನಿಯನ್ ಸಾಮ್ರಾಜ್ಯಗಳ ಹುಟ್ಟಿನಿಂದಾಗಿ ಇವುಗಳು ಪ್ರತಿನಿಧಿಸುವ ಧರ್ಮಗಳು ಎರಡು ಸಾಮ್ರಾಜ್ಯಗಳು ಧಾರ್ಮಿಕ ಏಕರೂಪ ಜನಸಂಖ್ಯೆಯನ್ನು ಹೊಂದಿದ್ದವು. ಇಡೀ ಪೂರ್ವದ ಬಳಿ ಯಹೂದಿಗಳ ಬಾರಿ ಜನಸಂಖ್ಯೆಯು ಹಂಚಿಹೋಯಿತು. ಅಲೆಕ್ಸಾಂಡ್ರಿಯಾ, ಆಂಟಿಖೋ, ಜೆರುಸಲೇಂ, ಹಮ್ಡಾನ್ ಮತ್ತು ಬೈಜಾಂಟಿಯನ್ ರಾಜಧಾನಿ ಕಾನ್‌ಸ್ಟಾಂಟಿನೋಪಲ್‌ಗಳಲ್ಲಿ ಯಹೂದಿಗಳು ಬಹುದೊಡ್ಡ ಸಂಖ್ಯೆಯಲ್ಲಿದ್ದರಲ್ಲದೆ ಇಬೇರಿಯನ್, ಪ್ಯಾಲೆಸ್ಟೈನ್ ಮತ್ತು ದಕ್ಷಿಣ ಮೆಸಪೊಟೋಮಿಯಾದಲ್ಲಿ ಯಹೂದಿಗಳು ನೆಲೆಯಾಗಿದ್ದರು.

ಈ ಶತಮಾನಗಳಲ್ಲಿ ಯಹೂದಿ ಶಿಕ್ಷಣವು ಯಹೂದಿಗಳು ತಮ್ಮ ಕಲಿಕೆಯ ಸಂಪ್ರದಾಯ ಮತ್ತು ಧಾರ್ಮಿಕ ಶಿಕ್ಷಣದೊಡನೆ ಅಸ್ತಿತ್ವದಲ್ಲಿದ್ದಾರೆ. ಕ್ರಿಶ್ಚಿಯನ್ನರು ಕೂಡ ಸಾಕಷ್ಟು ಸಂಖ್ಯೆಯಲ್ಲಿದ್ದು ೬ನೇ ಶತಮಾನದಲ್ಲಿ ಪಶ್ಚಿಮ ಏಷ್ಯನ್ನರ ಜನಸಂಖ್ಯೆಯು ಬಹುತೇಕ ಹೆಚ್ಚು ಸಂಖ್ಯೆಯಲ್ಲಿದ್ದರು. ಕ್ರಿಶ್ಚಿಯನ್ನರು ವಿಭಿನ್ನ ಪಂಥಗಳಾಗಿ ಹೋಳಾಗಿದ್ದು, ದೈವಿಕ ಅಂಶಗಳಲ್ಲಿ ವಿಭಿನ್ನವಾಗಿದ್ದರು ಹಾಗೂ ಪ್ರತಿ ಪಂಥಗಳು ತಾವು ನಿಜವಾದ ಸಂಪ್ರದಾಯಸ್ಥ (ಅಪ್ಪಟ ಧರ್ಮೀಯರು)ರೆಂದು ಕರೆದುಕೊಳ್ಳುತ್ತಿದ್ದರು. ಕ್ರಿಶ್ಚಿಯನ್ನರು ಇತರರನ್ನು ಪ್ರತ್ಯೇಕವಾಗಿ ತಿರಸ್ಕರಿಸಿದ್ದರು.

ಬೈಜಾಂಟಿಯನ್ ಅಥವಾ ಗ್ರೀಕ್‌ನ ಸಾಂಪ್ರದಾಯಿಕ ನಂಬಿಕೆಯು ಬೈಜಾಂಟಿಯನ್ ಸಾಮ್ರಾಜ್ಯದ ಅಧಿಕೃತ ಚರ್ಚೆ ಆಗಿದ್ದು ಗ್ರೀಸ್, ಬಲ್ಕಾನ್ಸ್‌ನಲ್ಲಿ ಸ್ಥಾಪಿತವಾಗಿದ್ದವು ಹಾಗೂ ಸಿರಿಯಾ, ಪ್ಯಾಲೆಸ್ಟೈನ್ ಮತ್ತು ಈಜಿಪ್ಟ್‌ಗಳಲ್ಲಿ ಅನಟೋಲಿಯಾ (ಪಶ್ಚಿಮ ಏಷ್ಯಾ)ದ ಗ್ರೀಕ್ ಭಾಷೆ ಮಾತನಾಡುವ ಜನಸಂಖ್ಯೆಯಲ್ಲಿ ಬೈಜಾಂಟಿಯನ್ ಚರ್ಚ್‌ಗಳು ಪಟ್ಟಣಕ್ಕೆ ಸೀಮಿತವಾಗಿತ್ತು. ಮೆಸಪೊಟೋಮಿಯಾ ಮತ್ತು ಇರಾಕ್‌ನಲ್ಲಿ ಕೂಡ ಬೈಜಾಂಟಿಯನ್ ಕ್ರಿಶ್ಚಿಯನ್ನರು ವಾಸವಾಗಿದ್ದರು.

ಕ್ರಿಶ್ಚಿಯನ್ನರು, ನೆಸ್ಟೋರಿಯನ್ ಬಿಷಪ್‌ನ ಬೋಧನೆಗಳನ್ನು ಅನುಸರಿಸುತ್ತಾರೆ. ಇದನ್ನು ನೆಸ್ಟೋರಿಯನ್‌ವಾದವೆಂತಲೂ ಕರೆಯುತ್ತಾರೆ. ೪೩೧ರ ಎಫೆಸ್ಸೆಸ್‌ನ ಕೌನ್ಸಿಲ್‌ನಿಂದ ಸಂಪ್ರದಾಯ ವಿರೋಧತ್ವಕ್ಕಾಗಿ ಇವನನ್ನು ಬೈಜಾಂಟಿಯನ್ ಸಾಮ್ರಾಜ್ಯದಿಂದ ಕೆಳಗಿಳಿಸಿ ಹೊರದಬ್ಬಲಾಯಿತು. ನೆಸ್ಟೋರಿಯನ್‌ಗಳು ಸಸ್ಸಾನಿಯನ್ ಸಾಮ್ರಾಜ್ಯದಲ್ಲಿ ನಿರಾಶ್ರಿತರಾಗಿರಬೇಕಾಯಿತು. ಇವರು ಮೆಸಪೊಟೋಮಿಯಾ, ಇರಾನ್ ಮತ್ತು ಮಧ್ಯ ಏಷ್ಯಾ ಗಡಿಗಳಲ್ಲಿ ಹಂಚಿಹೋಗಿದ್ದರು. ಕ್ರಿಶ್ಚಿಯನ್‌ನ ಮತ್ತೊಂದು ಪಂಥ ಮನೋಪೈಸಿಸ್ಸರು ಕ್ರಿ.ಶ. ೪೫೧ರಲ್ಲಿ ಚಲ್ಸೆಕ್ಸನ್ ಕೌನ್ಸಿಲ್‌ನಿಂದ ಸಂಪ್ರದಾಂಯ ವಿರೋಧಿಯೆಂದು ಘೋಷಿಸಲಾಯಿತು. ಹೀಗಾಗಿ ಮನೋಫಿಸಿಯವಾದವು ಆಕ್ಸಮ್, ಈಜಿಪ್ಟ್, ಸಿರಿಯಾ, ಪ್ಯಾಲೆಸ್ಟೈನ್ ಮೆಸಪೊಟೋಮಿಯಾ, ಅರ್ಮೇನಿಯಾ ಮತ್ತು ಇರಾನ್‌ಗಳ ಮೂಲನಿವಾಸಿ ಕ್ರಿಶ್ಚಿಯನ್‌ಗಳಲ್ಲಿ ಜೊರೋಸ್ಟ್ರಿಯನ್ ಧರ್ಮವು ಪ್ರಮುಖವಾಗಿದೆ. ಅಲ್ಲದೆ ಸಸ್ಸಾನಿಯನ್ ಸಾಮ್ರಾಜ್ಯದ ಹೊರಗಡೆಯಲ್ಲೂ ಜೊರೋಸ್ಟ್ರಿಯನ್ ಧರ್ಮವನ್ನು ಕಾಣಬಹುದು. ಈ ಮೂರು ಧರ್ಮಗಳು (ಕ್ರಿಶ್ಚಿಯನ್, ಜೂಡಾಯಿಸಂ ಮತ್ತು ಜೊರೋಸ್ಟ್ರಿಯನ್) ಸಮುದಾಯಗಳು ಮತಗ್ರಂಥ ಧರ್ಮಗಳೆಂತಲೂ ಕರೆಯಲಾಗಿದೆ. ಏಕೆಂದರೆ, ಇವುಗಳ ದೈವ ಆಕರ್ಷಿತ ಕಲ್ಪನೆಗಳನ್ನು ಹಂಚಿಕೊಂಡಿವೆ.

ಬೈಜಾಂಟಿಯನ್ನರು ಮತ್ತು ಸಸ್ಸಾನಿಯನ್ನರು ತಮ್ಮ ಸ್ವಂತ ಸಾಮ್ರಾಜ್ಯ ಎಲ್ಲೆಗಳನ್ನು ಗಳಿಸಿಕೊಳ್ಳಲು ಮತ್ತು ವಿಸ್ತರಿಸಲು ೪ನೇ ಮತ್ತು ೫ನೇ ಶತಮಾನಗಳ ನಡುವೆ ಅನೇಕ ಕದನಗಳನ್ನು ಮಾಡಿದ್ದಾರೆ.

ಮೆಸಪೊಟೋಮಿಯಾದ ಮೇಲ್ಭಾಗ ಮತ್ತು ಅರ್ಮೇನಿಯಾಗಳ ಪ್ರಮುಖ ನಿರ್ಬಂಧ ಪ್ರದೇಶಗಳಿಗಾಗಿ ಪ್ರಮುಖ ತೀವ್ರತೆಯಿಂದ ಸ್ಪರ್ಧಿಸಿ ಒಬ್ಬರಿಗೊಬ್ಬರು ಪ್ರಮುಖ ಪಟ್ಟಣಗಳನ್ನು ನಿಯಂತ್ರಣಕ್ಕೆ ತರಲು ನಿರ್ಬಂಧಿಸಲು ಪ್ರಯತ್ನಿಸುತ್ತಿದ್ದರು. ಅಲ್ಲದೆ ತೆರಿಗೆ, ಲಾಭದಾಯಕ ವಾಣಿಜ್ಯದ ಮೇಲೂ ನಿಯಂತ್ರಣವನ್ನು ಪಡೆಯಲು ಪ್ರಯತ್ನಿಸಿದ್ದರು. ಈ ವಾಣಿಜ್ಯವು ದಕ್ಷಿಣ ಅರೇಬಿಯನ್ನರಿಗೆ ಭಾರತದ ಸಮುದ್ರ ತೀರದಿಂದ ಮೆಡಿಟರೇನಿಯನ್ ಪ್ರಾಂತ್ಯದ ನಗರಗಳಿಗೆ ಸುಗಂಧ, ಚೈನಾ ಸಿಲ್ಕ್,

ಭಾರತದ ಮೆಣಸು ಮತ್ತು ಹತ್ತಿ, ಸಾಂಬಾರ ಪದಾರ್ಥಗಳನ್ನು ಹಾಗೂ ಇತರ ಸರಕುಗಳನ್ನು ಪಡೆಯುತ್ತಿದ್ದವು.

ಆ ಪ್ರದೇಶದಲ್ಲಿ ಚಿಕ್ಕರಾಜ್ಯಗಳ ಜೊತೆ ಒಪ್ಪಂದವನ್ನು ಸ್ಥಾಪಿಸುವ ಸದುಪಯೋಗಕ್ಕಾಗಿ ಬೈಜಾಂಟಿಯನ್ನರು ಮತ್ತು ಸಸ್ಸಾನಿಯನ್ನರು ಪ್ರಯತ್ನ ಮಾಡಿದ್ದರು. ಈ ಸಹ ರಾಜ್ಯಗಳ ಕದನದ ಪ್ರಮುಖ ವಿಚಾರವೆಂದರೆ, ಆಕ್ಸಮ ಕ್ರಿಶ್ಚಿಯನ್ ಸಾಮ್ರಾಜ್ಯದ ಜೊತೆ ಬೈಜಾಂಟಿಯನ್ನರು ಅನ್ಯೆತಿಕ ಒಪ್ಪಂದವನ್ನು ಸ್ಥಾಪಿಸಿದ್ದರು. ಅರೇಬಿಯಾದ ಹಂಚುಗಳನ್ನು ತಮ್ಮ ಪ್ರಾಂತ್ಯಗಳನ್ನಾಗಿಸಿಕೊಂಡು ವಾಸವಾಗಿದ್ದ ಬುಡಕಟ್ಟು ಗುಂಪುಗಳ ಜೊತೆ ಬೈಜಾಂಟಿಯನ್ನರು ಮತ್ತು ಸಸ್ಸಾನಿಯನ್ನರು ಕೂಡ ಒಪ್ಪಂದ ರಚಿಸಿಕೊಂಡಿದ್ದರು.

ಪರಾಮರ್ಶನ ಗ್ರಂಥಗಳು

೧. A.J. Arberry, Religion in the Middle East, Three Religion in Concord and Conflict, Vol-I, Judaism and Christianity, Cambridge University press, Britain - 1969.

೨. A.J. Arberry, Religion in the Middle East Three Religion in Concord and Conflict Vol-II, Islam, Cambridge University Press. Britain 1969.

❑

೬. ದಲಿತ ಚಳುವಳಿ : ಬಿ. ಬಸವಲಿಂಗಪ್ಪ

-ಎಸ್. ನಾಗರಾಜು

ದಲಿತ ಚಳುವಳಿ ಸ್ವಾತಂತ್ರ್ಯಾ ನಂತರದ ದಿನಗಳಲ್ಲಿ ಭಾರತದ ಹಲವು ರಾಜ್ಯದಲ್ಲಿ ಹುಟ್ಟಿಕೊಂಡು ಸಾರ್ವಜನಿಕರ, ರಾಜಕಾರಣಿಗಳ ಮತ್ತು ಮೇಧಾವಿಗಳ ಗಮನವನ್ನು ಸೆಳೆದಿದೆ. ದಲಿತರು ಚಳುವಳಿಯನ್ನು ಪ್ರಾರಂಭಿಸಿ ತಮ್ಮ ಮೇಲಾಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸತೊಡಗಿದರು. ದಲಿತ ಚಳುವಳಿ ಪ್ರಜ್ಞಾಪೂರ್ವಕ ಸಾಮಾಜಿಕ ಚಳುವಳಿಯಾಗಿದ್ದು, ಅದು ಭಾರತದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಅಸಮಾನತೆಯ ವ್ಯವಸ್ಥೆಗಳ ವಿರುದ್ಧ ದಲಿತರನ್ನು ಸಂಘಟಿಸುತ್ತಿದೆ. ಶತಶತಮಾನಗಳ ದಾರಿದ್ರ್ಯ, ದಬ್ಬಾಳಿಕೆ, ಶೋಷಣೆ ಈ ಎಲ್ಲಾ ಸಮಸ್ಯೆಗಳಿಗೆ ದಲಿತರು ಸಂಘಟನೆಯಿಂದ ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದರು. ೧೯೭೦ರ ದಶಕದಲ್ಲಿ ಕರ್ನಾಟಕದ ಈ ದಲಿತ ಚಳುವಳಿಗೆ ಸ್ಫೂರ್ತಿಯಾಗಿದ್ದವರು ಬಿ. ಬಸವಲಿಂಗಪ್ಪ ಎನ್ನುವುದು ಪ್ರಸ್ತುತ ವಿಚಾರದ ಉದ್ದೇಶವಾಗಿದೆ.

ಭಾರತೀಯ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಸ್ತರದಲ್ಲಿರುವ ವ್ಯಕ್ತಿಯೇ ದಲಿತ ಎಂದು ಹೇಳಬಹುದು. ಡಾ. ಬಿ.ಆರ್. ಅಂಬೇಡ್ಕರ್ ಅವರು ದಲಿತ ಎಂಬ ಪದಕ್ಕೆ ಪರ್ಯಾಯವಾಗಿ ಡಿಪ್ರೆಸ್ಡ್ ಎಂಬ ಪದವನ್ನು ತಮ್ಮ ಬರಹದಲ್ಲಿ ಬಳಸಿರುವುದನ್ನು ಕಾಣಬಹುದು. "ದಲಿತ ಎಂಬುದು ಒಂದು ಜಾತಿಯಲ್ಲ, ಅದೊಂದು ಸಾಮಾಜಿಕ, ಆರ್ಥಿಕವಾಗಿ ಶತಶತಮಾನಗಳಿಂದ ಶೋಷಣೆಗೆ ಒಳಗಾಗಿರುವ, ವರ್ಣ ಪದ್ಧತಿ ಜಾತಿ ವಿಂಗಡಣೆಗಳಲ್ಲಿ ಸೇರಿಸಲ್ಪಡದಿದ್ದ 'ಜಾತಿ ಬಾಹಿರ' ಎಂದು ಪರಿಗಣಿಸಲ್ಪಟ್ಟಿದ್ದ ಜನಸಮುದಾಯವನ್ನು ನಿರ್ದೇಶಿಸುವ, ಸಂಕೇತಿಸುವ, ಪ್ರತಿನಿಧಿಸುವ ಪದ. ದಲಿತ ಎಂಬುದು ಆ ಜನಸಮುದಾಯದ ಪಾಡನ್ನು, ಅವಸ್ಥೆಯನ್ನು ಸೂಚಿಸುವ ಪದವೇ ಹೊರತು ಜಾತಿ ಸೂಚಕ ಪದವಲ್ಲ."[೧] ಪ್ರೊ. ಅರವಿಂದ ಮಾಲಗತ್ತಿ ಅವರು "ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು. ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ, ಊರ ಹೊರಗೆ ವಾಸಿಸಿ

ಕೀಳು ವೃತ್ತಿಗೆ ಅವಲಂಬಿತರಾಗಿ, ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ"[೨] ಎಂದಿದ್ದಾರೆ.

ಕರ್ನಾಟಕದಲ್ಲಿ ದಲಿತ ಚಳುವಳಿಯ ಹುಟ್ಟಿಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮುಂತಾದ ಹಲವು ಕಾರಣಗಳಿವೆ. ಯಾವುದೇ ಒಂದು ಚಳುವಳಿ ಹುಟ್ಟಿಕೊಳ್ಳಬೇಕಾದರೆ ಕಾಲದ ಅನಿವಾರ್ಯತೆಯೂ ಮುಖ್ಯ ಕಾರಣವಾಗಿರುತ್ತದೆ. "ದಲಿತ ಪ್ರಜ್ಞೆಯನ್ನು ಮೂಡಿಸುವ ಕೆಲಸವನ್ನು ಪ್ರಾರಂಭದಲ್ಲಿ ಮಾಡಿದವರು ಭಾರತೀಯ ರಿಪಬ್ಲಿಕನ್ ಪಕ್ಷದ ನಾಯಕರು. ಈ ನಾಯಕರು ಅಂಬೇಡ್ಕರ್‌ರವರ ತತ್ತ್ವದ ನಿಷ್ಠಾವಂತ ಅನುಯಾಯಿಗಳು, ಕರ್ನಾಟಕ ವಿಧಾನಸಭೆಯಲ್ಲಿ ಈ ಪಕ್ಷದ ಸದಸ್ಯರು ದಲಿತರ ಹಕ್ಕುಗಳಿಗಾಗಿ ಹೋರಾಡಿ ರಾಜ್ಯದ ಗಮನವನ್ನು ಸೆಳೆದಿದ್ದರು."[೩] ದಲಿತ ಚಳುವಳಿ ಆರಂಭವಾಗುವುದಕ್ಕಿಂತ ಮೊದಲು "೧೯೭೦ರ ದಶಕದ ಆರಂಭದಲ್ಲಿ ಕರ್ನಾಟಕದಲ್ಲಿ ಜಾತಿ ವಿರೋಧಿ ಚಳುವಳಿ ಆರಂಭವಾಗಿತ್ತು. ಅವರು 'ಜಾತಿ ವಿನಾಶ ಸಮ್ಮೇಳನ' 'ಕರ್ನಾಟಕ ಬರಹಗಾರರ ಕಲಾವಿದರ ಒಕ್ಕೂಟ' ಪಾಂಚಾಲಿ ಪತ್ರಿಕೆ, ಇತ್ಯಾದಿಗಳ ಮೂಲಕ ಜಾತಿ ವಿರೋಧಿಸಿದ್ದರು."[೪] ಲಿಂಗಾಯಿತ-ಒಕ್ಕಲಿಗರ ನಾಯಕತ್ವದಲ್ಲಿ ಆರಂಭವಾದ ಈ ಚಳುವಳಿ ಕೇವಲ ಬ್ರಾಹ್ಮಣ ವಿರೋಧಿ ಚಳುವಳಿಯಾಗಿ ಮಾರ್ಪಟ್ಟಿತು. ಆರಂಭದ ದಿನದಲ್ಲಿ ದಲಿತ ಚಳುವಳಿಯೂ ಸಹ ಜಾತಿ ವಿರೋಧಿ ಚಳುವಳಿಯಾಗಿತ್ತು. ಬರುಬರುತ್ತ ದಲಿತ ಚಳುವಳಿ ಜಾತಿ ಹೋರಾಟದೊಂದಿಗೆ, ಮೂಲಭೂತ ಸಮಸ್ಯೆಗಳಾದ ಹಸಿವು, ಬಡತನ ದಲಿತರಲ್ಲಿ ತಾಂಡವವಾಡುತ್ತಿದ್ದು ತೀವ್ರ ಗಮನ ಸೆಳೆದವು. ಕೃಷಿ ಕೂಲಿಕಾರ್ಮಿಕರು ಮತ್ತು ಜೀತಮುಕ್ತರಿಗೆ ಪುನರ್‌ವ್ಯವಸ್ಥೆ, ಭೂಹೀನರಿಗೆ ಭೂಮಿ ಬಗರ್ ಹುಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿ, ಭೂ ಆಕ್ರಮಣ ಚಳುವಳಿ ನಿರಾಶ್ರಿತ ದಲಿತರಿಗೆ ನಿವೇಶನ. ವಸತಿಗಾಗಿ ಚಳುವಳಿಯನ್ನು ತೀವ್ರಗೊಳಿಸಲಾಯಿತು. ಒಟ್ಟಾರೆ ದಲಿತರಿಗೆ ತಮ್ಮ ಹಕ್ಕುಗಳನ್ನು ನೆನಪಿಸುವಂತೆ ಅಂಬೇಡ್ಕರ್ ಅವರ ಹೋರಾಟದ ಹೆಜ್ಜೆಗಳು ಕೆಲಸ ಮಾಡಿತು. ಹಾಗೆಯೇ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್‌ನಿಂದಲೂ ಪ್ರೇರಣೆ ಪಡೆಯಿತು.

ರಾಜ್ಯದ ದಲಿತ ನಾಯಕರಾಗಿ ಆ ಜನಾಂಗದ ಮನ ಗೆದ್ದವರಲ್ಲಿ ಬಿ. ಬಸವಲಿಂಗಪ್ಪ ಪ್ರಮುಖರು. ಕರ್ನಾಟಕದ ದಲಿತ ಚಳುವಳಿಗೆ ತಮ್ಮನ್ನೇ ಅರ್ಪಿಸಿಕೊಂಡವರು. ೧೯೭೨ರಲ್ಲಿ ದೇವರಾಜ ಅರಸು ಅವರ ಸಚಿವ ಸಂಪುಟದಲ್ಲಿ ಪೌರಾಡಳಿತ ಮತ್ತು ವಸತಿ ಸಚಿವರಾದಾಗ ಆ ಅವಕಾಶ ಮತ್ತು ಅಧಿಕಾರವನ್ನು ಉಪಯೋಗಿಸಿಕೊಂಡು ದಲಿತರು ತಲೆ-ತಲಾಂತರಗಳಿಂದ ಊರವರು ಮಾಡಿದ ಮಲ-ಮೂತ್ರಗಳನ್ನು ತಲೆಯ ಮೇಲೆ ಹೊತ್ತು ಸಾಗಿಸುವ ಅಮಾನವೀಯ

'ಮಲ ಹೊರುವ ಪದ್ಧತಿ'ಯನ್ನು ಇಡೀ ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ ರದ್ದುಗೊಳಿಸಿದ್ದರು. ಬಸವಲಿಂಗಪ್ಪ ಅವರು ರದ್ದುಗೊಳಿಸಿದ ಇಪ್ಪತ್ತು ವರ್ಷಗಳ ಬಳಿಕ ಕೇಂದ್ರ ಸರ್ಕಾರ ಪಿ.ವಿ. ನರಸಿಂಹರಾವ್ ಅವರ ಕಾಲದಲ್ಲಿ ಎಂಪ್ಲಾಯ್‌ಮೆಂಟ್ ಆಫ್ ಮ್ಯಾನುಯಲ್ ಸ್ಕೇವೆಜಿಂಗ್ ಅಂಡ್ ಕನ್‌ಸ್ಟ್ರಕ್ಷನ್ ಆಫ್ ಡ್ರೈಲ್ಯಾಟ್ರಿನ್ ಪ್ರೊಹಿಬಿಷನ್ ಆಕ್ಟ್ ೧೯೯೩ ಪ್ರಕಾರ ಈ ಪದ್ಧತಿಯನ್ನು ರದ್ದು ಮಾಡುವ ಕಾನೂನು ರೂಪಿಸಿತು. ಆ ಪ್ರಕರಣದಿಂದ ಬಸವಲಿಂಗಪ್ಪ ಅವರನ್ನು ಇಡೀ ರಾಷ್ಟ್ರ ಗಮನಿಸಿತು. ೧೯-೧೧-೧೯೭೩ರಂದು ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಭವನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್ಸ್ ಸಂಸ್ಥೆಯು ಏರ್ಪಡಿಸಿದ್ದ ಹೊಸ ಅಲೆಗಳು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದ ಬಸವಲಿಂಗಪ್ಪ ಅವರು ಮಾತನಾಡುತ್ತ : "ಕನ್ನಡ ಸಾಹಿತ್ಯದಲ್ಲಿ ಬೂಸಾನೆ ಹೆಚ್ಚಿದೆ" ಎಂದು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಮಂಡಿಸಿದರು. ಆದರೆ ರಾಜಕೀಯ ಕುತಂತ್ರ ಹಾಗೂ ಸಂಪ್ರದಾಯವಾದಿಗಳ ದಲಿತ ವಿರೋಧಿ ಧೋರಣೆಯಿಂದಾಗಿ ಆ ಮಾತಿನ ಅರ್ಥ ಬೇರೆ ಸ್ವರೂಪ ಪಡೆದುಕೊಂಡು ರಾಜೀನಾಮೆಗೆ ಒತ್ತಾಯಿಸಿದರು. ರಾಜ್ಯಾದ್ಯಂತ ಈ ಕುರಿತು ತೀವ್ರವಾದ ಪರ-ವಿರೋಧದ ಚಳುವಳಿಗಳು ಹುಟ್ಟಿಕೊಂಡವು. ಬಸವಲಿಂಗಪ್ಪ ಅವರು ದೇವರಾಜ ಅರಸು ಸರ್ಕಾರದಲ್ಲಿ ಮಂತ್ರಿಯಾಗಿದ್ದುಕೊಂಡು ಹೊಸ ಹೊಸ ಹೇಳಿಕೆಗಳನ್ನು ಕೊಟ್ಟು ಜನತೆಯನ್ನು ಎಚ್ಚರಿಸುತ್ತಿದ್ದರು. ಬಸವಲಿಂಗಪ್ಪ ಅವರನ್ನು ಬೆಂಬಲಿಸಿ ದಲಿತ ಸಮುದಾಯ ಪ್ರತಿ ಹೋರಾಟಕ್ಕೆ ನಿಂತವು. ಡಾ. ಸಿದ್ದಲಿಂಗಯ್ಯ ಅವರು "ನಾವು ಆಗ ಸಚಿವರಾಗಿದ್ದ ಬಿ. ಬಸವಲಿಂಗಪ್ಪನವರ ಬೆಂಬಲಕ್ಕೆ ನಿಂತೆವು. ಬೂಸಾ ಚಳುವಳಿಯಿಂದ ನಾನು ಅನೇಕ ಸಂಗತಿಗಳನ್ನು ಕಲಿತೆ. ಬಸವಲಿಂಗಪ್ಪನವರು ನನ್ನ ಗುರುಗಳಾದರು. ಅವರು ನನ್ನಲ್ಲಿ ವಿಶೇಷವಾದ ಧೈರ್ಯ ಉತ್ಸಾಹಗಳನ್ನು ತುಂಬಿದರು. ಅವರನ್ನು ಸಾವಿರಾರು ವಿದ್ಯಾರ್ಥಿಗಳು ಬೆಂಬಲಿಸಿದರು. ಬೆಂಗಳೂರಿನಲ್ಲಿ ನಡೆಸಿದ ಮೆರವಣಿಗೆಯ ನಾಯಕತ್ವವನ್ನು ನಾನು ವಹಿಸಿದ್ದೆ"[೨೨] ಎನ್ನುತ್ತಾರೆ. "ಬಸವಲಿಂಗಪ್ಪ ಅವರು ಸಭೆಯಲ್ಲಿ ಮಾತನಾಡುವಾಗ ಸಾರಾಸಗಟಾಗಿ ಕನ್ನಡ ಸಾಹಿತ್ಯವನ್ನು ಬೂಸಾ ಸಾಹಿತ್ಯವೆಂದು ಕರೆದಿರಲಿಲ್ಲ. ಹಿಂದಿನ ದಿನ ಶಿವಮೊಗ್ಗದಲ್ಲಿ ಮಾಡಿದ ಅವರ ಭಾಷಣವನ್ನು ಪತ್ರಿಕಾ ವರದಿಗಾರರು ತಪ್ಪಾಗಿ ಗ್ರಹಿಸಿ, ವಿಷಯ ತಿರುಚಿ ಬರೆದಿದ್ದರು. ಇದನ್ನು ಪತ್ರಿಕೆಯವರು ತಿರುಚಿ ಕನ್ನಡ ಎಂಬ ಪದ ಸೇರಿಸಿ ಬೂಸಾ ಎಂದು ಬರೆದರು. ಮೈಸೂರಿನಲ್ಲಿ ನಡೆದ ಅಂದಿನ ಸಭೆಯಲ್ಲಿ ಖುದ್ದಾಗಿ ಹಾಜರಿದ್ದ ಪ್ರೊ. ಜಿ.ಎಚ್. ನಾಯಕರು ಈ ವಿಷಯವನ್ನು ದೇವರಾಜ ಅರಸು ಅವರಿಗೆ ಶ್ರೀ ಚದುರಂಗರ ಮುಖಾಂತರ

ತಿಳಿಸಿದ್ದರು."[೬] ಆದರೂ ರಾಜೀನಾಮೆಯನ್ನು ತಡೆಯಲಿಕ್ಕಾಗಲಿಲ್ಲ. ೧೪-೧೨-೧೯೭೩ರಲ್ಲಿ ದೆಹಲಿಯಿಂದಲೇ ಬಸವಲಿಂಗಪ್ಪ ಅವರು ರಾಜೀನಾಮೆ ಪತ್ರ ಕಳುಹಿಸಿಕೊಟ್ಟರು. "ನಮ್ಮ ರಾಜ್ಯದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆದ ಮೊದಲ ಹಲ್ಲೆ ಇದಾಗಿತ್ತು." ರಾಜೀನಾಮೆ ನೀಡಿದ ನಂತರದ ದಿನದಲ್ಲಿ ರಾಷ್ಟ್ರಕವಿ ಕುವೆಂಪು ಅವರು ಈ ಬೂಸಾ ಸಾಹಿತ್ಯ ಅಂಥ ಯಾವುದನ್ನು ಕರೆಯುತ್ತೇವೆಯೋ ಅದು ಪ್ರಪಂಚದ ಎಲ್ಲಾ ಸಾಹಿತ್ಯದಲ್ಲಿಯೂ ಇರುತ್ತದೆ ಎಂದು ಸಮರ್ಥಿಸಿದರು. ಹಾಗೆಯೇ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಯು.ಆರ್. ಅನಂತಮೂರ್ತಿ ಅವರು ಸಹ ಬೆಂಬಲಿಸಿದರು. ಬೂಸಾ ಪ್ರಕರಣವಂತೂ ಜಾಗೃತಿಯನ್ನು ಮೂಡಿಸಿದಂತಹ ಚಳುವಳಿ. ಆ ದಿನಗಳಲ್ಲಿ ಕಷ್ಟವಾದರೂ ಆನಂತರದ ದಿನಗಳಲ್ಲಿ ಅದರಿಂದ ಒಳ್ಳೆಯ ಫಲ ಸಿಕ್ಕಿದೆ. ಈ ಚಳುವಳಿ ದಲಿತರು ಮತ್ತು ಪ್ರಗತಿಪರ ಚಿಂತನೆ ಇರುವ ದಲಿತೇತರರನ್ನು ಒಗ್ಗೂಡಿಸಿದ ಪ್ರಕರಣವಾಗಿದೆ. ಒಂದು ದೃಷ್ಟಿಯಲ್ಲಿ ಚಾರಿತ್ರಿಕವಾಗಿ ಇದು ದಲಿತ ಸಂಘಟನೆಗೆ ಮೂಲ ಪ್ರೇರಕ ಶಕ್ತಿಯಾಯಿತು.

ದಲಿತ ಹೋರಾಟದ ಇಂತಹ ಚಾರಿತ್ರಿಕ ಅನಿವಾರ್ಯತೆಯ ಮೊದಲ ಹೆಜ್ಜೆಯಾಗಿ "ಪ್ರೊ. ಬಿ. ಕೃಷ್ಣಪ್ಪ ಅವರು ೧೯೭೪ರಲ್ಲಿ 'ದಲಿತ ವೇದಿಕೆ' ಕಟ್ಟಿ ಅದೇ ವೇದಿಕೆಯ ಮೂಲಕ 'ಗಾಂಧೀಜಿ ಮತ್ತು ಅಸ್ಪೃಶ್ಯರು' ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದರು."[೭] ಹೋರಾಟದ ಕಿಡಿ ಹೊತ್ತು ಪ್ರೊ. ಬಿ. ಕೃಷ್ಣಪ್ಪ ಅವರಿಂದ ರಚಿತವಾದ ದಲಿತ ವೇದಿಕೆಯೊಂದಿಗೆ ಕಮ್ಯುನಿಸ್ಟ್ ಚಳುವಳಿಯಿಂದ ಬಿಡಿಸಿಕೊಂಡು ಬಂದ ಡಾ. ಸಿದ್ಧಲಿಂಗಯ್ಯ ಕೈ ಜೋಡಿಸಿದರು. ಇದರ ಒಟ್ಟು ಫಲಿತಾಂಶವೇ 'ದಲಿತ ಲೇಖಕರು ಮತ್ತು ಕಲಾವಿದರ ಒಕ್ಕೂಟದ' ರಚನೆ. ದೇವನೂರು ಮಹಾದೇವ. ಚಂದ್ರ ಪ್ರಸಾದ್ ತ್ಯಾಗಿ, ಇಂದೂಧರ ಹೊನ್ನಾಪುರ, ರಂಗಸ್ವಾಮಿ ಬೆಲ್ಲದಮಡು, ದೇವಯ್ಯಹರವೆ, ಎಚ್. ಜನಾರ್ದನ್ (ಜನ್ನಿ), ಎಚ್. ಗೋವಿಂದಯ್ಯ, ಮಾವಳ್ಳಿ ಶಂಕರ್ ಇನ್ನೂ ಮುಂತಾದ ಅಸಂಖ್ಯಾತ ಹೋರಾಟಗಾರರು ಇವರೊಟ್ಟಿಗೆ ಹೋರಾಟಕ್ಕಿಳಿದರು. ಸ್ವಾಭಿಮಾನ, ಆತ್ಮಗೌರವ, ಸಂಘರ್ಷ ಮತ್ತು ಪರಿವರ್ತನೆ ಎಂಬ ಸಿದ್ಧಾಂತವನ್ನು ಆಧಾರವಾಗಿಟ್ಟುಕೊಂಡು ೧೯೭೪ರ ಡಿಸೆಂಬರ್ ೨೮, ೨೯ ಮತ್ತು ೩೦ ರಂದು ಭದ್ರಾವತಿಯಲ್ಲಿ ದಲಿತರ ಪ್ರಥಮ ಸಮಾವೇಶ ನಡೆಸಲಾಯಿತು. ಈ ಸಮಾವೇಶವನ್ನು ಬಿ. ಬಸವಲಿಂಗಪ್ಪ ಅವರೇ ಉದ್ಘಾಟಿಸಿ ಮಾತನಾಡುತ್ತ : "ಛಲವಂತ ಸಾಹಿತಿಗಳೇ ಮತ್ತು ಛಲವಂತ ಸಭಿಕರೇ ಡಿಸೆಂಬರ್ ಹದಿನಾಲ್ಕನೇ ತಾರೀಖು ಬೂಸಾ ಗಲಭೆಯಿಂದ ನನ್ನ ರಾಜೀನಾಮೆಯನ್ನು ಒಪ್ಪಿಸಿದೆ. ಅಂದಿನಿಂದ ಈ ಹೊತ್ತಿನವರೆಗೆ ದೇಶದಾದ್ಯಂತ ಅದರಲ್ಲೂ ಯುವಕರಲ್ಲಿ ಒಂದು ಕ್ರಾಂತಿಯ ಮನೋಭಾವನೆ, ಸಿಟ್ಟಿನ ಮನೋಭಾವನೆ ಒಂದು ಧಾರ್ಮಿಕ

ಸಿಟ್ಟಿನ ಮನೋಭಾವನೆ ಎದ್ದು ಕಾಣುತ್ತಿದೆ. ನಾನು ಎಲ್ಲಿಗೆ ಹೋದರೂ ಕೂಡ ಯುವಕ ವೃಂದ ಸಿಟ್ಟಿಗೆದ್ದು ನಾನು ಏನು ಕನ್ನಡ ಸಾಹಿತ್ಯದ ಬಗ್ಗೆ ಮಾತನಾಡಿದ್ದೆ ಅದು ಸರಿ, ಸರಿ ಇಲ್ಲ ಎನ್ನುವಂತಹ ವಾದ ವಿವಾದ ನಡೆಸುತ್ತಾ ಇದ್ದಾರೆ. ನಾನು ಮಾಡಿರುವಂತಹ ಭಾಷಣ ಸರಿ ತಪ್ಪು ಎಂದು ಹೇಳುವಂತಹದು ಆ ಸಭೆಯಲ್ಲಿದ್ದ ಜನರಿಗೆ ಗೊತ್ತು. ಆದರೆ ಪತ್ರಕರ್ತರು ಮಾಡಿದ ಒಳಸಂಚೇನಿದೆ ಅದಕ್ಕೆ ಮೆಚ್ಚಬೇಕಾಗಿದೆ. ನನಗನ್ನಿಸುತ್ತದೆ ಇದು ಒಳ್ಳೆಯದಕ್ಕೇ ಆಯಿತು. ಯಾರು ಪತ್ರಕರ್ತರಿದ್ದಾರೆ ಅವರಿಗೆ ನಾನು ವೈಯಕ್ತಿವಾಗಿ ವಂದನೆಯನ್ನು ಸಲ್ಲಿಸುತ್ತೇನೆ. ಅದು ನನ್ನ ಜೀವನದಲ್ಲಿ ಮಹದಾನಂದವನ್ನು ಉಂಟು ಮಾಡಿದೆ. ಈ ಕ್ರಾಂತಿಯ ಸಂಕೇತ ಏನು? ಬಸವೇಶ್ವರ ತನ್ನ ಕಾಲದಲ್ಲಿ ಏನು ಬಸವಕಲ್ಯಾಣದಲ್ಲಿ ಪ್ರಾರಂಭ ಮಾಡಿದನೋ ಅದು ಈ ಹೊತ್ತು ಪ್ರಾರಂಭವಾಯಿತು ಅಂಥ ನನಗನ್ನಿಸುತ್ತದೆ. ಜಾತಿ ಭೇದವಿಲ್ಲದೆ ಮತಭೇದವಿಲ್ಲದೆ, ಇಪ್ಪತ್ತು ಮೂವತ್ತು ಸಾವಿರ ಜನ ಸಮೂಹ ಒಂದು ಕಡೆ ಸೇರಿ ಯಾವೊಬ್ಬ ಮನುಷ್ಯ ಸಂಕೇತ ರೂಪವಾಗಿ ಒಂದು ಸಮಾಜದಲ್ಲಿ ಬದಲಾವಣೆಯಾಗಬೇಕು, ವಿಚಾರಶಕ್ತಿ ಬದಲಾವಣೆಯಾಗಬೇಕು ಅಂಥ ಹೇಳಿಬಿಟ್ಟು ಸಂಕಲ್ಪ ಮಾಡಿ, ಹಟ ತೊಟ್ಟು ನಿಲುವನ್ನು ತಾಳಿದ್ದಾನೆ. ಅವನಿಗೆ ತೋರಿಸುವಂತಹ ಆದರ ಅದನ್ನು ನೋಡಿ ನನ್ನ ಎದೆ ಉಬ್ಬಿಹೋಯಿತು ಎಂದು ದಲಿತರ ಸಾಹಿತಿಗಳನ್ನು ಹುರಿದುಂಬಿಸುತ್ತಾರೆ. ತಮ್ಮನ್ನೆಲ್ಲ ನೋಡಿ ನನಗೆ ಬಹಳ ಆನಂದವಾಯಿತು. ತಾವು ಛಲವಂತರಾಗಿದ್ದೀರಿ. ನೀವು ಏನಾದರೂ ನಿಲುವನ್ನು ತಾಳಿ ಈ ಸಮಾಜದ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ವಿಚಾರ ಸರಣಿಯನ್ನು ಬದಲಾವಣೆ ಮಾಡಬೇಕು. ನೀವು ಇಂತಹ ಕೆಲಸ ಮಾಡುತ್ತೀರೆಂದು ನನಗೆ ಆಸೆ ಮೂಡಿದೆ. ನೀವೆಲ್ಲರೂ ಕೂಡ ಹೇಗೆ ಬಸವೇಶ್ವರ ಅನುಭವಮಂಟಪ ಅಂಥ ಮಾಡಿಬಿಟ್ಟು ಜಾತಿ ಹೋಗಬೇಕು ಎಂದು ಪ್ರಾರಂಭ ಮಾಡಿದ ಹಾಗೆ ಮಾಡಬೇಕು. ಎಲ್ಲ ತಾಯಿ ತಂದೆಗಳಿಗೂ ಹುಟ್ಟಿರುವಂತಹ ಮಕ್ಕಳನ್ನೆಲ್ಲ ಸೇರಿಸಿದ, ಯಾರಿಗೂ ವ್ಯತ್ಯಾಸವಿಲ್ಲ ಅಂಥ ಹೇಳಿದ, ಹೆಣ್ಣಿಗೂ ಗಂಡಿಗೂ ವ್ಯತ್ಯಾಸವಿಲ್ಲ ಅಂಥ ಹೇಳಿದ, ಅಂತಹ ಒಂದು ಮಾನವೀಯತೆಯ ಸಮಾಜವನ್ನು ಸೃಷ್ಟಿಮಾಡಬೇಕು ಅಂಥ ಹೇಳಿ ಆತ ಪ್ರಾರಂಭ ಮಾಡಿದ ಈ ಹೊತ್ತು ನಾವು ಪುನಃ ಅದನ್ನು ಪ್ರಾರಂಭ ಮಾಡಿದರೆ ನನಗನ್ನಿಸುತ್ತದೆ ಖಂಡಿತವಾಗಿಯೂ ಕೂಡ ನಮಗೆ ಯಶಸ್ಸು ದೊರಕುತ್ತದೆ"[೨೮] ಎಂದು ಹೇಳಿದ ಬಸವಲಿಂಗಪ್ಪ ಅವರು ದಲಿತ ಚಳುವಳಿಗಾರರಲ್ಲಿ ಆತ್ಮಸ್ಥೈರ್ಯ ಮೂಡಿಸಿದರು. ವಾಸ್ತವವಾಗಿ 'ದಲಿತ ಸಂಘರ್ಷ ಸಮಿತಿ' ಆರಂಭವಾದದ್ದು, ಈ ಸಮಾವೇಶದಲ್ಲೇ. ಆದರೆ ಅದನ್ನು 'ದಲಿತ ವೇದಿಕೆ' ಎಂದೇ ಕರೆಯಲಾಗುತ್ತಿತ್ತು. ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ಲೇಖಕರು ಮತ್ತು ಕಲಾವಿದರ

ಒಕ್ಕೂಟ, ದಲಿತ ಕ್ರಿಯಾ ವೇದಿಕೆ, ದಲಿತ ಪಂಥ, ದಲಿತ ಕ್ರಿಯಾ ಸಮಿತಿಗಳು ಬಲಿಷ್ಠವಾಗಿ ಐಕ್ಯಗೊಂಡು ಪೂರ್ಣ ಪ್ರಮಾಣದಲ್ಲಿ 'ದಲಿತ ಸಂಘರ್ಷ ಸಮಿತಿ' ಎಂದು ನಾಮಕರಣಗೊಂಡದ್ದು ೧೯೭೪ರ ಡಿಸೆಂಬರ್ ತಿಂಗಳಿನಲ್ಲಿ ಜರುಗಿದ ಚಿಕ್ಕಮಗಳೂರು ನಗರದಲ್ಲಿ ನಡೆದ ರಾಜ್ಯಮಟ್ಟದ ಸಮಾವೇಶದಲ್ಲಿ ಪ್ರೊ. ಬಿ. ಕೃಷ್ಣಪ್ಪ ಅವರು ಕಟ್ಟಿದ ದ.ಸಂ.ಸ.ದಲ್ಲಿ ತೊಡಗಿಕೊಂಡ ಆಗಿನ ಲೇಖಕರು, ಕಲಾವಿದರು ಮತ್ತು ಹೋರಾಟಗಾರರು ತುಂಬಾ ಕಟಿಬದ್ಧರಾಗಿ ನಿಂತು ದ.ಸಂ.ಸ.ವನ್ನು ತುಂಬಾ ಮುತುವರ್ಜಿಯಿಂದ ರೂಪಿಸಿದರು. ಪಂಚಮ, ಸುದ್ದಿ ಸಂಗಾತಿ, ಮುಂಗಾರು, ಮಾನವ, ರುಜುವಾತು, ಸಂಕ್ರಮಣ, ಅನ್ವೇಷಣೆ, ಲಂಕೇಶ್ ಮುಂತಾದ ಪತ್ರಿಕೆಗಳು ಇಂತಹ ಜನಪರ ಚಳುವಳಿಗಳ ಬೆನ್ನಿಗಿದ್ದವು. "೧೯೮೮ರ ವರೆಗೆ ದ.ಸಂ.ಸ.ಗೆ ತನ್ನದೇ ಆದ ಸಂವಿಧಾನವಿರಲಿಲ್ಲ, ದಿನಾಂಕ ೧೮-೧೧-೧೯೮೮ರಂದು ಧಾರವಾಡದ ಜೈಭೀಮ ನಗರದಲ್ಲಿ ಹೊಸ ಸಂವಿಧಾನವನ್ನು ಬಿಡುಗಡೆ ಮಾಡಲಾಯಿತು."[೯] ದಲಿತ ಸಂಘರ್ಷ ಸಮಿತಿ ಕರ್ನಾಟಕದ ದಲಿತ ಸಮುದಾಯದಲ್ಲಿ ಉಂಟು ಮಾಡಿದ ಎಚ್ಚರ ಅಸಾಧಾರಣವಾದುದಾಗಿದೆ.

ದಲಿತ ಚಳುವಳಿಯ ಆರಂಭದಲ್ಲಿ ಮರೆಯಲಾರದ ಅನುಭವಗಳನ್ನು ನೆನಪು ಮಾಡಿಕೊಳ್ಳುವುದಾದರೆ ಬಾಬಾಸಾಹೇಬರ ಆಶಯಗಳಲ್ಲಿ ಒಂದಾದ ಭೂ ರಾಷ್ಟ್ರೀಕರಣದ ಚಳುವಳಿಯ ಮುಂದುವರಿಕೆಯನ್ನು ೧೯೭೪ರಲ್ಲಿ ಬಿ. ಬಸವಲಿಂಗಪ್ಪ ಅವರು ಕಂದಾಯ ಮಂತ್ರಿಗಳಾಗಿ ಡಿ. ದೇವರಾಜು ಅರಸು ಅವರ ನಾಯಕತ್ವದಲ್ಲಿ ಭೂ ಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದು 'ಉಳುವವನೇ ಭೂಮಿಯ ಒಡೆಯ' ನಾಗಲು ಕಾರಣವಾದರು. ಹಾಗೆಯೇ ಗೇಣಿದಾರರ ಜೀವನದಲ್ಲಿ ನೆಮ್ಮದಿಯನ್ನು ತಂದಿದ್ದಾರೆ. ಶಾಸನ ಸಭೆಯಲ್ಲಿ ಮಾತನಾಡುತ್ತ : "ಇವತ್ತು ದೇಶ ಉದ್ಧಾರವಾಗಬೇಕಾದರೆ ಯಾವ ಕೊನೆ ಮನುಷ್ಯನಿದ್ದಾನೆ ಅವನಿಗೆ ಆಸ್ತಿ ಇಲ್ಲವೋ, ಉಳುಮೆ ಮಾಡುವುದಕ್ಕೆ ಜಮೀನು ಇಲ್ಲವೋ ಅಂಥವರಿಗೆ ಆಸ್ತಿ, ಜಮೀನು ಕೊಡುವುದಕ್ಕೆ ನಾವು ಪ್ರಯತ್ನಪಟ್ಟಿದ್ದೇಯಾದರೆ ಆಗ ನಿಜವಾಗಿಯೂ ದೇಶ ಮುಂದುವರಿಯುವುದಕ್ಕೆ ಸಾಧ್ಯವಾಗುತ್ತದೆ"[೧೦] ಎಂದು ತಿಳಿಸಿದರು. ಹೀಗೆ ಬಿ. ಬಸವಲಿಂಗಪ್ಪ ಅವರು ದಲಿತ ಚಳುವಳಿಯಲ್ಲಿನ ಹೋರಾಟದ ಪ್ರಮುಖಾಂಶಗಳಲ್ಲಿ ಒಂದಾದ ಭೂಹೋರಾಟಕ್ಕೆ ಮರುಜೀವ ಕೊಟ್ಟರು. ದಲಿತರ ಆರ್ಥಿಕ ಸಬಲೀಕರಣದ ಹೆಜ್ಜೆಯಲ್ಲಿ ಇದು ಬಸವಲಿಂಗಪ್ಪನವರಂತಹವರಿಂದ ಭೂಸ್ವಾಮ್ಯತೆ ಮುರಿಯುವಲ್ಲಿ ಸಾಧ್ಯವಾಯಿತು. ಇದು ದಲಿತ ಚಳುವಳಿಯ ಹೋರಾಟದ ಹೆಜ್ಜೆಯಾಯಿತು. ಡಾ. ಸಿದ್ದಲಿಂಗಯ್ಯ ಅವರ 'ಹೊಲೆಮಾದಿಗರ ಹಾಡು' ದಲಿತ ಚಳುವಳಿಗೆ ಧ್ವನಿಗೂಡಿಸಿತು. ಸ್ವತಃ ಸಿದ್ಧಲಿಂಗಯ್ಯ ಅವರೇ: "ಹೋರಾಟದ ಸಂದರ್ಭಗಳಲ್ಲಿ

ನನ್ನ ಹಾಡುಗಳನ್ನು ಜನ ಸಮುದಾಯ ದನಿತುಂಬಿ ಹಾಡಿದಾಗ ನಾನು ಸಂಕೋಚ ಸಂತೋಷಗಳನ್ನು ಒಟ್ಟಾಗಿ ಅನುಭವಿಸಿದ್ದೇನೆ" ಎನ್ನುತ್ತಾರೆ.

ಜಾತಿವಾದಿ, ಕೋಮುವಾದಿ, ಬಂಡವಾಳಶಾಹಿಗಳ ಹುನ್ನಾರವನ್ನು ಪ್ರಗತಿಪರ ಚಳುವಳಿಗಳು ವಿಫಲಗೊಳಿಸಬೇಕು ಎಂದು ಬಸವಲಿಂಗಪ್ಪನವರು ಕರೆಕೊಟ್ಟರು. ಇವರ ಸಾಮಾಜಿಕ ಚಳುವಳಿಗೆ ಬುದ್ಧ, ಬಸವಣ್ಣ, ಅಂಬೇಡ್ಕರ್ ಮತ್ತು ಸಮಾಜವಾದ ಚಿಂತನೆಗಳು, ತತ್ವಗಳು ಮುಖ್ಯವಾದವುಗಳಾಗಿವೆ. "ಚಳುವಳಿ ಎನ್ನುವುದು ಬಡವರ ಆಸ್ತಿ. ದುರ್ಬಲರಿಗೆ, ನಿರ್ಗತಿಕರಿಗೆ ಚಳುವಳಿಯೇ ಶ್ರೀಮಂತಿಕೆಯ ಸಾಧನ ಎಂದು ಹೇಳುತ್ತ, ಶೋಷಿತ ವರ್ಗದ ಜನರಲ್ಲಿ ಆತ್ಮವಿಶ್ವಾಸವನ್ನು ಬಿತ್ತಿದರು."[೧೧] ದಲಿತರ ಹೀನಾಯ ಸ್ಥಿತಿಗೆ ಕೇವಲ ಬಡತನ, ಅಜ್ಞಾನಗಳಷ್ಟೇ ಕಾರಣವಲ್ಲ, ತಾವಿರುವ ಹಿಂದೂ ಧರ್ಮದ ವ್ಯವಸ್ಥೆಯೇ ಕಾರಣ. ಹಿಂದೂಧರ್ಮ ನಿಂತಿರುವುದು ಪ್ರಚಾರದಲ್ಲಿರುವುದಕ್ಕೆ ಧರ್ಮ ಗ್ರಂಥಗಳು ಮತ್ತು ದೇವರುಗಳೇ ಕಾರಣವೆಂದು ಶೋಧಿಸಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಯನ್ನು ಬಿ. ಬಸವಲಿಂಗಪ್ಪ ಅವರು ಚೆನ್ನಾಗಿ ಗ್ರಹಿಸಿದ್ದರು. ಹಿಂದೂಧರ್ಮ ಆಘಾತಕ್ಕೊಳಗಾಗುವಂತೆ 'ಸ್ವಾಭಿಮಾನಿ ಚಳುವಳಿ'ಗೆ ಮಾರು ಹೋಗಿ 'ದೇವರ ಪಟಗಳನ್ನು ಚರಂಡಿಗೆ ಎಸೆಯಿರಿ' ಎಂದು ದಲಿತ ಜನಾಂಗಕ್ಕೆ ಕರೆಕೊಟ್ಟು ಅಂಬೇಡ್ಕರ್ ಬಯಸಿದ ಬೌದ್ಧ ಧರ್ಮದ ಕಡೆಗೆ ಸಾಗುವಲ್ಲಿ ಚಾಲನೆ ನೀಡಿ 'ಕರ್ನಾಟಕ ಬುದ್ಧ ಧಮ್ಮ ಸಮಿತಿ'ಯನ್ನು ಸ್ಥಾಪಿಸಿದರು.

ಇಂತಹ ಮಹಾನ್ ವ್ಯಕ್ತಿಗಳು ನೀರು ಹಾಕಿ ಬೆಳೆಸಿದ್ದ ದಲಿತ ಚಳುವಳಿ ಇಂದು ದಿಕ್ಕು ತಪ್ಪಿದ ಚಳುವಳಿಯಾಗಿದೆ. "ದಲಿತ ಸಂಘರ್ಷ ಸಮಿತಿಯು ೧೯೮೪ರ ಸಂದರ್ಭಕ್ಕೆ ಪ್ರಬಲವಾದ ಸಂಘಟನೆಯಾಗಿದ್ದು, ಅದರ ನಾಯಕತ್ವ ವಹಿಸಿಕೊಂಡಿದ್ದ ಪ್ರೊ. ಬಿ. ಕೃಷ್ಣಪ್ಪ ಅವರು ನಾಯಕತ್ವ ಬಿಟ್ಟು ಕೊಟ್ಟ ನಂತರ ಸಂಘಟನೆಯಲ್ಲಿ ನಾಯಕತ್ವದ ಕೊರತೆ ಎದುರಾಯಿತು. ಇದೇ ಸಮಯದಲ್ಲಿ ರಾಜ್ಯ ಸಂಚಾಲಕರಾಗಿದ್ದವರು ಆಳುವ ಪಕ್ಷದ ಆಮಿಷಕ್ಕೆ ಬಲಿಯಾದರು. ಸರ್ಕಾರದ ಸಮಿತಿಗಳಲ್ಲಿ ಸದಸ್ಯತ್ವ, ಅಧಿಕಾರಿಗಳ ವರ್ಗಾವಣೆ, ವಿಧಾನ ಪರಿಷತ್ ಸದಸ್ಯತ್ವ ಇತ್ಯಾದಿಗಳಿಗಾಗಿ ಆಳುವ ಪಕ್ಷದ ಹಾಗೂ ಸಚಿವರ ಸುತ್ತಮುತ್ತ ಗಿರಿಕಿ ಹೊಡೆಯ ತೊಡಗಿದರು. ಆಗ ಕಾರ್ಯಕರ್ತರಿಗೆ ಭ್ರಮನಿರಸನವಾಯಿತು. ಸರ್ಕಾರಿ ಕಾರ್ಯಕ್ರಮಗಳ ವೇದಿಕೆಗಳಲ್ಲಿ ವಿಜೃಂಭಿಸಿದರು. ಇದರ ಫಲವಾಗಿ ೧೯೮೫ರ ಚುನಾವಣೆಯಲ್ಲಿ ದ.ಸಂ.ಸ.ಯು ಆಳುವ ಪಕ್ಷದ ಪರವಾಗಿ ನಿರ್ಣಯ ತೆಗೆದುಕೊಂಡು ಚುನಾವಣೆಯಲ್ಲಿ ಆ ಪಕ್ಷಕ್ಕೆ ಕೆಲಸ ಮಾಡಲು ಮುಂದಾಗಿ ಕೊನೆಗೆ ದಲಿತ ಸಂಘರ್ಷ ಸಮಿತಿ ಇಬ್ಭಾಗವಾಗಲು ಕಾರಣವಾಯಿತು."[೧೨] ಹೀಗೆ ಇಬ್ಭಾಗವಾದ

ದ.ಸಂ.ಸ.ಯು ಇಂದು ಛಿದ್ರ ಛಿದ್ರವಾಗಿ ಹೋಗಿದೆ. ದಲಿತ ಚಳುವಳಿಯಲ್ಲಿ ಮೊದಲಿನ ಒಗ್ಗಟ್ಟು ಕಂಡುಬರುತ್ತಿಲ್ಲ. ಎಲ್ಲಾ ಸಂಘಟನೆಗಳನ್ನು ದುರ್ಬಲಗೊಳಿಸ ಬಹುದಾದ ಅಂಶಗಳು ಈ ಸಂಘಟನೆಯಲ್ಲೂ ಕಾಣಿಸಿಕೊಂಡಿದೆ. ಹೊಲೆಯ ಮಾದಿಗ ಎಂಬ ವಿಂಗಡಣೆ ತಲೆಯೆತ್ತಿರುವುದು ವಿಷಾದಕರ ಸಂಗತಿ. ಈ ಒಡಕನ್ನು ಮುಚ್ಚಿ ಶೋಷಿತ ವರ್ಗವನ್ನು ಒಗ್ಗೂಡಿಸದಿದ್ದರೆ ದಲಿತ ಚಳುವಳಿಗೆ ಭವಿಷ್ಯವಿಲ್ಲ. ಹೊಲೆ-ಮಾದಿಗರು ಮಾತ್ರವಲ್ಲ ಎಲ್ಲಾ ಅವಮಾನಿತ ಜಾತಿಗಳು ಒಂದಾಗಿ ಜಾತಿ ವಿನಾಶ ಚಳುವಳಿಯನ್ನು ಬಲಗೊಳಿಸಬೇಕಾಗಿದೆ. ಬಿ. ಬಸವಲಿಂಗಪ್ಪ ಅವರ ಸ್ಫೂರ್ತಿಯ ಚಿಲುಮೆಯಾಗಿ ಅಸ್ತಿತ್ವಕ್ಕೆ ಬಂದ ದಲಿತ ಚಳುವಳಿ ಇಂದು ಮತ್ತೆ ಮರುಜೋಡಣೆಯಾಗಬೇಕಿದೆ. ಕಲುಷಿತಗೊಂಡಿರುವ ಈ ರಾಜಕಾರಣದಲ್ಲಿ ದಲಿತರ ಸಮಸ್ಯೆಗಳನ್ನು ಕೇಳುವವರೇ ಇಲ್ಲವಾಗಿದ್ದಾರೆ. ಹಾಗೆಯೇ ದಲಿತರ ಕಷ್ಟಗಳು ಹೇಳತೀರದು. ಅಧಿಕಾರದ ದುರಾಸೆಯಿಂದ ಏನೆಲ್ಲಾ ವಾಮ ಮಾರ್ಗಗಳನ್ನು ಹಿಡಿದು ರಾಜಕಾರಣವನ್ನು ಪ್ರವೇಶಿಸುತ್ತಿದ್ದಾರೆ. ಜನಾಂಗದ ಹಿತಕ್ಕಾಗಿ ತಮ್ಮನ್ನೇ ಅರ್ಪಿಸಿಕೊಂಡ ಬಿ. ಬಸವಲಿಂಗಪ್ಪ ಅವರಂತಹ ಚಳುವಳಿಗಾರರು ಮತ್ತೆ ಹುಟ್ಟಿಬರಬೇಕೆನಿಸುತ್ತದೆ. ಹಾಗೂ ಇವರಂತೆ ಜನಾಂಗೀಯ ಕಳಕಳಿ ಉಳ್ಳವರು ಪ್ರಸ್ತುತ ರಾಜಕಾರಣಕ್ಕೆ ಅನಿವಾರ್ಯವಾಗಿದೆ.

ಅಡಿಟಿಪ್ಪಣಿ

೧. ಪ್ರೊ. ಜಿ. ಎಚ್. ನಾಯಕ (೨೦೦೪). ದಲಿತ ಹೋರಾಟ : ಗಂಭೀರ ಸವಾಲುಗಳು, ದ.ಸಂ.ಸ, ಬೆಂಗಳೂರು, ಪುಟ-೦೭
೨. ಪ್ರೊ. ಅರವಿಂದ ಮಾಲಗತ್ತಿ (೨೦೦೪). ಸಾಂಸ್ಕೃತಿಕ ದಂಗೆ, ರಾಜ್ ಪ್ರಕಾಶನ, ಮೈಸೂರು. ಪುಟ-೦೯.
೩. ಡಾ. ಸಿದ್ಧಲಿಂಗಯ್ಯ (೨೦೦೭). ಜನ ಸಂಸ್ಕೃತಿ, ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪುಟ-೧೪೨.
೪. ಪ್ರೊ. ಬಿ. ಕೃಷ್ಣಪ್ಪ, (೨೦೦೦) ಚಳುವಳಿಗಳು ಮತ್ತು ಬರಹಗಳು, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್ (ರಿ.), ಬೆಂಗಳೂರು, ಪುಟ-೦೧.
೫. ಡಾ. ಸಿದ್ಧಲಿಂಗಯ್ಯ (೨೦೦೭), ಪುಟ. ೧೪೪.
೬. ಪ್ರೊ. ಜಿ.ಎಚ್. ನಾಯಕ, ಗುಣಗೌರವ, ಪುಟ-೪೮.
೭. ವಡ್ಡಗೆರೆ ನಾಗರಾಜಯ್ಯ (೨೦೦೭). ದಲಿತ ಹೋರಾಟದ ಹೆಜ್ಜೆಗಳು : ಒಂದು ನೋಟ

ನವಬಂದರು ಹಡಗು ನಿಲ್ದಾಣ ಪ.ಜಾತಿ/ಪ.ಪಂ.ನೌಕರರ ಸಂಘ, ಮಂಗಳೂರು. ಪುಟ-೮೭.

೮. ಡಾ. ಮೊಗಳ್ಳಿ ಗಣೇಶ್ (ಸಂ), (೨೦೦೨), ದಲಿತ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ ಪುಟ-೦೧.೦೨,

೯. ತಬಂಡ ವಿಜಯ್ ಪೂಣಚ್ಚ (ಸಂ), (೨೦೦೧), ವಿಶ್ವಕೋಶ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪುಟ-೮೨೪.

೧೦. ೧೯೭೯ನೇ ಮೇ ೩೧ರಂದು ನಡೆದಿರುವ ವಿಧಾನಸಭಾ ನಡವಳಿಕೆ, ಪುಟ-೭೭೬.

೧೧. ಲಕ್ಷ್ಮೀನಾರಾಯಣ ನಾಗವಾರ (ಸಂ), (೨೦೦೦), ಬೂಸಾ ಸಾಹಿತ್ಯದ ಕಾಲು ಶತಮಾನ, ಡಿ.ಎಸ್.ಎಸ್. ಬೆಂಗಳೂರು. ಪುಟ-೪೬.

೧೨. ಡಾ.ಡಿ. ಗುರುರತ್ನ ಬಾಬು (೨೦೦೭), ದಲಿತ ಚಳುವಳಿಯ ಪರಿಣಾಮಗಳು, ರಚನಾ ಪ್ರಕಾಶನ, ಮೈಸೂರು, ಪುಟ-೧೯೬.

❑

೭. ಇಮ್ಮಡಿ ದೇವರಾಯ (ಕ್ರಿಶ. ೧೪೨೪–೧೪೪೬)

–ಡಾ. ಕೆ.ಎಂ. ಮಹದೇವಸ್ವಾಮಿ

ವೀರವಿಜಯರಾಮ ಮರಣ ಹೊಂದಿದಾಗ ಅವನ ಮಗನಾದ ಎರಡನೇ ದೇವರಾಯನು ಪಟ್ಟಕ್ಕೆ ಬಂದನು. ಇವನಿಗೆ ಅಭಿನವ ದೇವರಾಯ, ಇಮ್ಮಡಿ ವೀರದೇವರಾಯ, ಪ್ರತಾಪ ದೇವರಾಯ ಮತ್ತು ಪ್ರೌಢದೇವರಾಯ ಎಂಬ ಹೆಸರುಗಳಿತ್ತು. ಇಮ್ಮಡಿ ದೇವರಾಯನ ಆಳ್ವಿಕೆಯ ಕಾಲವು ವಿಜಯನಗರದ ಕೀರ್ತಿಯನ್ನು ಉತ್ತುಂಗ ಶಿಖರಕ್ಕೇರಿಸಿದ ಕಾಲವೆಂದರೆ ಅತಿಶಯೋಕ್ತಿಯಾಗಲಾರದು.

ಕ್ರಿಶ. ೧೪೨೦ರಲ್ಲಿ ಕೊಂಡವೀಡು ಅರಸನಾದ ಪೆದ್ದಕೋಮಟಿ ವೇಮನು ಮೃತನಾದ ಮೇಲೆ ಆ ರಾಜ್ಯವು ವಿಘಂಟಿತಾವಸ್ಥೆಗೆ ಬಿದ್ದಿತು. ಹಾಗೆ ಅರಾಜಕವಾಗಿದ್ದ ರಾಜ್ಯವನ್ನು ೨ನೇ ದೇವರಾಯನು ಕ್ರಿಶ. ೧೪೨೮ರಲ್ಲಿ ಗೆದ್ದುಕೊಂಡನು.

ಕೊಂಡವೀಡು ಕೈ ಸೇರಿದೊಡನೆ ೨ನೇ ದೇವರಾಯನು ಒರಿಸ್ಸಾದ ಗಜಪತಿ ಭಾನುದೇವರಾಯನ ರಾಜ್ಯವನ್ನು ಆಕ್ರಮಿಸಿದನು. ಕೊಂಡವೀಡನ್ನು ಸೂರೆ ಮಾಡಿದ ಕಾರಣ, ೨ನೇ ದೇವರಾಯನು ಗಜಪತಿಯ ಸಾಮಂತರೊಡನೆ ಘರ್ಷಣೆಗೆ ಬಂದಿರಬೇಕು. ಈ ಘರ್ಷಣೆಯೇ ಗಜಪತಿ ರಾಜ್ಯದ ಆಕ್ರಮಣಕ್ಕೂ ಕಾರಣ ವಾಗಿರಬೇಕು. ಯುದ್ಧವು ನಿರ್ಣಾಯಕ ಹಂತಕ್ಕೆ ಬರುವ ಮೊದಲೇ ರಾಜ ಮಹೇಂದ್ರಿಯ ಅಲ್ಲಾಡರೆಡ್ಡಿಯು ಈ ಯುದ್ಧಕ್ಕೆ ಮಧ್ಯಸ್ಥಗಾರನಾಗಿ ಒಂದು ಎರಡು ಕಡೆಗಳಲ್ಲೂ ಸಂಧಿ ಕುದುರಿಸಿದನು ಆದರೆ ಬಹು ಬೇಗನೆ ಅಲ್ಲಾಡರೆಡ್ಡಿಯು ಮೃತನಾದನು. ಅವನ ಮಕ್ಕಳಾದ ವೇಮನು ವೀರಭದ್ರನು ತಂದೆಯ ಆಕ್ರಮಣ ನೀತಿಯನ್ನೇ ಮುಂದುವರಿಸಿ ಕಳಿಂಗ (ಒರಿಸ್ಸಾ) ರಾಜ್ಯಕ್ಕೆ ನುಗ್ಗಿ ಬಂದರು. ಕ್ರಿಶ. ೧೪೩೫ರಲ್ಲಿ ಕಪಿಲ್ಲೇಶ್ವರನೆಂಬ ಸಾಹಸಿಯು ಕಳಿಂಗ ರಾಜ್ಯದಲ್ಲಿ ಪಟ್ಟಕ್ಕೆ ಬಂದೊಡನೆ ಗಜಪತಿಯು ರಾಜಮಹೇಂದ್ರಿಯನ್ನು ಮುತ್ತಿದನು. ರಾಜ ಮಹೇಂದ್ರಿಯ ಅರಸರು ವಿಜಯನಗರದ ಅರಸರೊಡನೆ ರಾಜಕೀಯ ಸಂಬಂಧ ಮಾತ್ರವಲ್ಲ, ರಕ್ತ ಸಂಬಂಧ ಹೊಂದಿದ್ದರಿಂದ ಅವರು ವಿಜಯನಗರದ ಸಹಾಯ ಯಾಚನೆ ಮಾಡಿದರು. ತಕ್ಷಣ ೨ನೇ ದೇವರಾಯನ ಸಹಾಯ ಸಿದ್ಧವಾಗಿಯೇ ಬಂದಿತು. ವಿಜಯನಗರದ

ಸೈನ್ಯ ಕಳಿಂಗ ಸೈನ್ಯವನ್ನು ಹಿಮ್ಮೆಟ್ಟಿಸಿ, ರಾಜಮಹೇಂದ್ರಿಯ ಸೈನ್ಯಕ್ಕೆ ಕೊಂಚ ವಿಶ್ರಾಂತಿ ನೀಡಿತು. ಆದರೆ ೨ನೇ ದೇವರಾಯನ ಮರಣಾನಂತರ ಕಪಿಲ್ಲೇಶ್ವರನು ರಾಜಮಹೇಂದ್ರಿಯನ್ನು ಮುತ್ತಿದನು.

ಇಮ್ಮಡಿ ದೇವರಾಯನು ಕೇರಳವನ್ನು ವಶಪಡಿಸಿಕೊಳ್ಳಲು ಸೈನ್ಯ ಸಮೇತನಾಗಿ ಹೋದನು. ಕೇರಳದ ಕ್ವಿಲಾನ್ ಮತ್ತು ಬೇರೆ ನಾಡುಗಳ ಅರಸರನ್ನು ಜಯಿಸಿದನು. ಆದರೆ ಕಲ್ಲಿಕೋಟೆಯ ಜಾಮೋರೀನ್ ಮಾತ್ರ ದೇವರಾಯನಿಗೆ ಸುಲಭವಾಗಿ ಮಣಿಯಲಿಲ್ಲ. ಅವನ ಸ್ವಾತಂತ್ರ್ಯಕ್ಕೆ ಹೆಚ್ಚಿನ ಭಂಗ ತಂದಿರಲಿಲ್ಲ. ಜಾಮೋರೀನನು ೨ನೇ ದೇವರಾಯನ ಪ್ರಭುತ್ವಕ್ಕೆ ಅಧೀನನಾಗಿಲ್ಲದಿದ್ದರೂ ದೇವರಾಯನ ಬಗ್ಗೆ ಭಯಭೀತಿಯುಳ್ಳವನಾಗಿದ್ದನೆಂದು ಪರ್ಷಿಯ ದೇಶದ ರಾಯಭಾರಿಯನ್ನು ತನ್ನಲ್ಲಿಗೆ ಕಳುಹಿಸಿಕೊಡಬೇಕೆಂದು ದೇವರಾಯನಿಂದ ಅಪ್ಪಣೆ ಬಂದೊಡನೆ ಶಿರಸಾ ವಹಿಸಿದನೆಂದು ದೇವರಾಯನ ಆಳ್ವಿಕೆಯ ಕಾಲದಲ್ಲಿ ದಕ್ಷಿಣ ಭಾರತಕ್ಕೆ ಬಂದ ಅಬ್ದುಲ್ ರಜಾಕ್ ಬರೆದಿರುತ್ತಾನೆ. ೨ನೇ ದೇವರಾಯನು "ದಕ್ಷಿಣ ಭಾರತದ ಸಾರ್ವಭೌಮ ಪ್ರಭುವಾಗಿದ್ದನೆಂದೂ, ಸಿಂಹಳದಿಂದ ಕಲ್ಬುರ್ಗಿಯವರೆಗೂ ಬಂಗಾಳದಿಂದ ಮಲಬಾರಿನವರೆಗೂ ಅವನ ರಾಜ್ಯವು ವಿಸ್ತರಿಸಿತ್ತೆಂದೂ ಸಹ ಅಬ್ದುಲ್‌ರಜಾಕ್ ಹೇಳುತ್ತಾನೆ. ಕ್ವಿಲಾನ್, ಪುಲಿಕಾಟ್, ಪೆಗು ಮೊದಲಾದ ರಾಜ್ಯಗಳಿಂದಲೂ ೨ನೇ ದೇವರಾಯನು ಕಪ್ಪ ಕಾಣಿಕೆ ಸಂಗ್ರಹಿಸಿದನೆಂದು ನ್ಯೂನಿಸ್ ಹೇಳುತ್ತಾನೆ.

ಬಹುಮನಿ ರಾಜ್ಯಕ್ಕೂ ೨ನೇ ದೇವರಾಯನಿಗೂ ಎಂದೂ ಸ್ನೇಹ ಕುದುರಲಿಲ್ಲ. ಕ್ರಿ.ಶ. ೧೪೩೬ರಲ್ಲಿ ೨ನೇ ಅಲ್ಲಾವುದ್ದೀನನು ಬಹುಮನಿ ಸುಲ್ತಾನನಾದಾಗ ಪೊಗದಿ ಬಾಕಿಯ ವಸೂಲಿಗಾಗಿ ೨ನೇ ದೇವರಾಯನ ಮೇಲೇರಿ ಹೋದನು. ಈ ಯುದ್ಧದಲ್ಲಿ ದೇವರಾಯನು ಸೋತು ಪೊಗದಿ ಸಲ್ಲಿಸಬೇಕಾಯಿತು. ಹೀಗೆ ಹೋದಲ್ಲಿ ಬಂದಲ್ಲಿ ಎಲ್ಲೆಲ್ಲೂ ಬಹುಮನಿ ಸೈನ್ಯಗಳೇ ಜಯಿಸುವುದನ್ನು ಕಂಡು ದಿಗ್ಭ್ರಮೆಗೊಂಡ ದೇವರಾಯನು ತನ್ನ ಆಸ್ಥಾನದ ಸಾಮಂತರನ್ನು ಸೇನಾಧಿಪತಿಗಳನ್ನು ಕರೆಯಿಸಿ, ಮಹಮದೀಯರ ವಿರೋಧವನ್ನು ತಡೆಗಟ್ಟುವ ವಿಧಾನವನ್ನು ಕುರಿತು ಅಭಿಪ್ರಾಯ ವಿನಿಮಯ ನಡೆಸಿದನು. ಈ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಮಹಮದೀಯರಿಗೆ ಅದುವರೆಗೂ ಇದ್ದ ಕುಂದುಕೊರತೆಗಳು ಅಂದಿನಿಂದ ಮಾಯವಾದವು. ಸೈನ್ಯದಲ್ಲಿ ಅಧಿಕಾರಿಗಳಾಗಿ ಮುಸ್ಲಿಮರು ನಿಯುಕ್ತರಾದರು. ಅವರ ಪರಮಾಧಿಕಾರಕ್ಕೆ ಗೌರವ ಲಭಿಸಿತು. ಮಹಮದೀಯರು ತನಗೂ ಅವರ ಧರ್ಮ ಗ್ರಂಥಕ್ಕೂ ಏಕಕಾಲದಲ್ಲೇ ವಂದಿಸಲಾಗುವಂತೆ ೨ನೇ ದೇವರಾಯನು ತನ್ನ ಸಿಂಹಾಸನದ ಮುಂದುಗಡೆ ಒಂದು "ಕುರಾನ್" ಗ್ರಂಥವನ್ನು ಇರಿಸಿದನು.

ಅದರ ಜೊತೆಗೆ ಹಿಂದೂ ಸೈನಿಕರಿಗೆ ಇನ್ನಷ್ಟೂ ತೀವ್ರವಾಗಿ ಯುದ್ಧ ಶಿಕ್ಷಣ ಮುಖ್ಯವಾಗಿ ಮಹಮದೀಯರಿಂದ ಧನುರ್ವಿದ್ಯೆ ಬಿಲ್ಲುಗಾರಿಕೆ ದೊರೆಯುವಂತೆ ಏರ್ಪಾಡು ಮಾಡಿದನು. ಈ ಬಗೆಯ ಸೈನ್ಯ ಪುನರ್ ವ್ಯವಸ್ಥೆಯಿಂದ ೨ನೇ ದೇವರಾಯನ ಸೈನ್ಯವು ಇನ್ನಷ್ಟು ಸುಸಜ್ಜಿತವಾಯಿತು.

ಕ್ರಿ.ಶ. ೧೪೪೩ರಲ್ಲಿ ೨ನೇ ದೇವರಾಯನು ಕಲ್ಲಿಕೋಟೆಯಲ್ಲಿದ್ದಾಗ ಭೋಜನ ಸಮಾರಂಭವೊಂದರಲ್ಲಿ ಅವರ ಕೊಲೆ ಮಾಡುವ ಪ್ರಯತ್ನ ನಡೆಯಿತೆಂದು ಅಬ್ದುಲ್ ರಜಾಕ್ ಹೇಳುತ್ತಾನೆ. ಆದರೆ ಅನಾರೋಗ್ಯದ ಕಾರಣವನ್ನು ಮುಂದೊಡ್ಡಿ ಇಮ್ಮಡಿ ದೇವರಾಯನು ಸಮಾರಂಭದಿಂದ ತಪ್ಪಿಸಿಕೊಂಡಿದ್ದರಿಂದ, ಅವನ ಕೊಲೆ ಪ್ರಯತ್ನವು ವಿಫಲವಾಯಿತು. ಆದರೂ ಅವನ ಹಲವಾರು ಸರದಾರರು ಈ ಹಂಚಿಕೆಗೆ ಬಲಿಯಾದರು. ಬಹುಮನಿಯ ೨ನೇ ಅಲ್ಲಾವುದ್ದೀನನು ಈ ಸಂಚನ್ನು ಬಲ್ಲವನಾಗಿದ್ದನು. ಆದುದರಿಂದ ಇದರ ಪ್ರಯೋಜನ ಪಡೆಯಲೆತ್ನಿಸಿ, ದೇವರಾಯನನ್ನು ೭ ಲಕ್ಷ ವರಹಗಳನ್ನು ಸಲ್ಲಿಸಬೇಕೆಂದು ಅಲ್ಲಾವುದ್ದೀನನು ಆಗ್ರಹಪಡಿಸಿದನು. ದೇವರಾಯನು ಈ ಕೋರಿಕೆಯನ್ನು ತಿರಸ್ಕರಿಸಿದುದಷ್ಟೇ ಅಲ್ಲದೆ ರಾಯಚೂರು-ದೋ-ಅಬ್ ಪ್ರದೇಶವನ್ನು ಆಕ್ರಮಿಸಿದನು. ಮೊದ ಮೊದಲು ದೇವರಾಯನಿಗೆ ಗೆಲ್ಲುವ ಸೂಚನೆ ಕಂಡುಬಂದಿತು. ಮದ್ಗಲವು ಅವನ ಕೈವಶವಾಯಿತು. ರಾಯಚೂರು ಬಂಕಾಪುರ ನಗರಗಳೂ ಅವನ ಕೈವಶವಾದವು. ಬಿಜಾಪುರದವರೆಗಿನ ಪ್ರಾಂತ್ಯಗಳೆಲ್ಲವೂ ನೆಲಸಮವಾಯಿತು. ಆದರೆ ಕೊನೆಗೆ ಮುಸ್ಲಿಮರ ಸೇನೆಗಳು ಸುಸಂಘಟಿತವಾಗಿ ದ್ವಿಗುಣಿತೋತ್ಸಾಹವಾಗಿ ಕಾದಿದವು. ಫಲವಾಗಿ ದೇವರಾಯನು ಮದ್ಗಲಕ್ಕೆ ಹಿಂಜರಿಯಬೇಕಾಯಿತು. ಯುದ್ಧದ ಕೊನೆಯ ೩ ಹಂತಗಳಲ್ಲಿ ದೇವರಾಯನ ಹಿರಿಯ ಮಗನು ಮೃತನಾದನು. ಅವನ ಸೇನೆಗಳು ಮದ್ಗಲ ಕೋಟೆಗೆ ಹಿಂಜರಿದುವು. ಹೀಗಿದ್ದರೂ ದೇವರಾಯನು ಇಬ್ಬರು ಮುಸ್ಲಿಂ ಸೇನಾನಿಗಳನ್ನು ಸೆರೆಹಿಡಿದನು. ಅವರನ್ನು ಬಂಧಮುಕ್ತಗೊಳಿಸದೆ ಹೋದರೆ ಹಿಂದೂ ಜನ ಸಮುದಾಯ ಸಮಸ್ತವನ್ನು ಕಗ್ಗೊಲೆ ಮಾಡುವುದಾಗಿ ಸುಲ್ತಾನನು ಬೆದರಿಸಿದನು. ಅವನ ಬೆದರಿಕೆಯನ್ನು ಎದುರಿಸಲು ೨ನೇ ದೇವರಾಯನಿಗೆ ಧೈರ್ಯ ಸಾಲದಾಯಿತು.

೨ನೇ ದೇವರಾಯನಿಗೆ ಪೊನ್ನಾಲದೇವಿ ಮತ್ತು ಭೀಮಾದೇವಿ ಎಂಬ ಇಬ್ಬರು ರಾಣಿಯರಿದ್ದರು. ಭೀಮಾದೇವಿಯಲ್ಲಿ ರಾಜನಿಗೆ ಸಂತಾನ ಪ್ರಾಪ್ತಿಯಾಗಿರಲಿಲ್ಲ. ಪೊನ್ನಾಲದೇವಿಯುಲ್ಲಿ ಮಲ್ಲಿಕಾರ್ಜುನನೆಂಬ ಪುತ್ರನು ಜನಿಸಿದನೆಂದು ತಿಳಿದುಬರುತ್ತದೆ. ಕ್ರಿ.ಶ. ೧೪೪೩ರಲ್ಲಿ ಕಲಬುರ್ಗಿ (ರಾಯಚೂರು) ವಿರುದ್ಧವಾಗಿ ನಡೆದ ಯುದ್ಧದಲ್ಲಿ ೨ನೇ ದೇವರಾಯನ ಜೇಷ್ಠ ಪುತ್ರನು ಮೃತನಾದನೆಂದು

ಚರಿತ್ರ ಲೇಖಕ ಫೆರಿಸ್ತನು ಹೇಳುತ್ತಾನೆ. ಆದರೆ ಡಾ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್‌ರವರ ಅಭಿಪ್ರಾಯವೆಂದರೆ ಮಲ್ಲಿಕಾರ್ಜುನ ಆ ಯುದ್ಧದಲ್ಲಿ ಗಾಯಗೊಂಡನೇ ಹೊರತು ಮೃತನಾಗಲಿಲ್ಲ. ೨ನೇ ದೇವರಾಯನ ಮರಣಾನಂತರ ಮಲ್ಲಿಕಾರ್ಜುನನೇ ರಾಜ್ಯಕ್ಕೆ ಉತ್ತರಾಧಿಕಾರಿಯಾದನು. ೨ನೇ ದೇವರಾಯನಿಗೆ ಪ್ರೌಢದೇವರಾಯನೆಂಬ ತಮ್ಮನೊಬ್ಬನಿದ್ದನು. ಅವನು ಕ್ರಮವಾಗಿ ಮುಳಬಾಗಿಲು, ಪೆನುಗೊಂಡು ಪ್ರಾಂತ್ಯಗಳ ಮಾಂಡಲೀಕನಾಗಿದ್ದನು. ದೇವರಾಯನಿಗೆ ಹರಿಣಾ ಎಂಬ ತಂಗಿಯಿದ್ದಳು. ಈಕೆ ಮುತ್ತಿನ ರಾಜ್ಯಾಪಹಾರಕನಾದ ೧ನೇ ನರಸಿಂಹನ ಕುಟುಂಬದ ತಿಪ್ಪರಾಜನನ್ನು ವಿವಾಹವಾಗಿದ್ದಳು. ದೇವರಾಯನ ಭಾವನಾದ ಈ ತಿಪ್ಪರಾಜನು ಮಹಾ ಮಾಂಡಲೇಶ್ವರ, ಕಠಾರಿ ಸಾಳುವ, ತ್ರಿಭುವನರಾಯ, ಶಂಭುರಾಯ ಪ್ರತಿಷ್ಠಾಪಕ, ದಕ್ಷಿಣ ಸುರಾಷ್ಟ್ರ ಇತ್ಯಾದಿಯಾಗಿ ಶಾಸನಗಳಲ್ಲಿ ವರ್ಣಿತನಾಗಿದ್ದಾನೆ.

ಇಮ್ಮಡಿ ದೇವರಾಯನ ಕೀರ್ತಿ ವೈಭವ

ವಿಜಯನಗರ ಇತಿಹಾಸದಲ್ಲಿ ೨ನೇ ದೇವರಾಯನ ಆಳ್ವಿಕೆಯ ಕಾಲವು ಒಂದು ಯುಗ ಪ್ರವರ್ತಕ ಕಾಲ. ಇತಿಹಾಸ ಪ್ರಸಿದ್ಧ ಕೃಷ್ಣದೇವರಾಯನ ಕಾಲದ ಸತ್ಯ ಹಿಮೆಯು ಸಾಂಸ್ಕೃತಿಕ ವೈಭವವು ೨ನೇ ದೇವರಾಯನ ರಾಜ್ಯಭಾರದಿಂದ ಸ್ಯೂತವಾಗಿ ಬಂದ ಪರಿಣಾಮ ದಕ್ಷಿಣ ಭಾರತದ ಇತಿಹಾಸದಲ್ಲಿ ೧೬ನೇ ಮಾನದಲ್ಲಿ ಕೃಷ್ಣದೇವರಾಯನಿಗೆ ಯಾವ ಬಗೆಯ ಉನ್ನತ ಸ್ಥಾನವಿತ್ತೋ ಬಗೆಯ ಗೌರವ ಸ್ಥಾನವು ೧೫ನೇ ಶತಮಾನದಲ್ಲಿ ೨ನೇ ದೇವರಾಯನಿಗೆ ಕೃಷ್ಣದೇವರಾಯನು ಬಹುಮನಿ ರಾಜ್ಯಗಳ ಮೇಲೆ ಕೈಗೊಂಡ ದಿಗ್ವಿಜಯದ ಆಕ್ರಮಣ ನೀತಿಯು ೨ನೇ ದೇವರಾಯನ ವಿಜಯ ಸಾಧನೆಗಳ ಪುನರಾವರ್ತನೆಯಲ್ಲದೆ ಬೇರೇನೂ ಅಲ್ಲ. ಕಟ್ಟುನಿಟ್ಟಾದ ರಾಜಧರ್ಮಾನುಷ್ಠಾನದಿಂದ ೨ನೇ ದೇವರಾಯನು ಭಾರತದ ವಿಖ್ಯಾತ ರಾಜರೊಡನೆ ಸಮಾನ ವ್ಯಕ್ತಿಯಾಗಿದ್ದಾನೆ.

೨ನೇ ದೇವರಾಯನು ಪ್ರಜಾನುರಾಗಿಯಾಗಿದ್ದ ಮಹಾಚಕ್ರವರ್ತಿ ಹಲವು ಶಾಸನಗಳು ಅವನ ಉದಾತ್ತ ಗುಣಗಳನ್ನು ಅವನ ರಾಜೋಚಿತ ರೀತಿನೀತಿಗಳನ್ನು ಹಲವು ಬಗೆಯಾಗಿ ಶ್ಲಾಘಿಸಿವೆ. ಸಂಸ್ಕೃತ, ಕನ್ನಡ, ತೆಲುಗು, ತಮಿಳು ಕವಿಗಳು ಒಕ್ಕೊರಲಿನಿಂದ ಅವನ ಗುಣಗಾನ ಮಾಡಿದ್ದಾರೆ. ಚಂದ್ರಗುಪ್ತ ೧೮ ಕಂಪಣದ ಗುರಿಕಾರನಾದ ಪೃಥ್ವೀಸೆಟ್ಟಿ ಎಂಬುವವನು ೨ನೇ ದೇವರಾಯನ ಮರಣ ವಾರ್ತೆಯಿಂದ ಎದೆಬಿರಿದು ಕೋಡಕಣಿಗೆ ತೆರಳಿ ಅಲ್ಲಿ ದೇವಸನ್ನಿಧಿಯಲ್ಲಿ ಮರಣ ಹೊಂದಿದನೆಂದು ಕ್ರಿ.ಶ. ೧೪೪೮ರ ಶಾಸನವೊಂದರಲ್ಲಿ ಹೇಳಿದೆ. ಪೃಥ್ವೀಸೆಟ್ಟಿಗೆ ತನ್ನ ಒಡೆಯನ ಮೇಲಿದ್ದ ಅಪಾರ ಭಕ್ತಿ ಗೌರವಗಳು ಈ ಹೇಳಿಕೆಯಿಂದ ವ್ಯಕ್ತವಾಗುತ್ತದೆ.

೨ನೇ ದೇವರಾಯನ ಲೋಕಪ್ರಿಯತೆಯನ್ನು ಶ್ರವಣಬೆಳಗೊಳದ ೩೭ನೆಯ ಶಾಸನವು ಕೊಂಡಾಡಿ ಅವನನ್ನು ಪ್ರತಾಪ ನಿಧಿ ದೇವರಾ ಎಂದು ಕರೆದಿದೆ.

೨ನೇ ದೇವರಾಯನು ಭವ್ಯಾಕಾರ ಸಂಪನ್ನನಾಗಿದ್ದನು. ಅವನ ದೇಹ ಒಲವು ಅವನ ನಾಣ್ಯಗಳಿಂದಲೇ ಸೂಚಿತವಾಗುವುದು. ಅವನ ತಾಮ್ರ ನಾಣ್ಯಗಳಲ್ಲಿ ಹೆಚ್ಚಾಗಿ ಆನೆಯ ಚಿತ್ರವು ಯುದ್ಧ ಸಿದ್ಧನಾದ ರಾಜನ ಚಿತ್ರವು ಕಂಡುಬರುತ್ತದೆ. ಪಳಗಿದ ಆನೆಯ ಚಿತ್ರವು ಅರ್ಥಪೂರ್ಣವಾಗಿದೆ. ಮದ್ದಾನೆಯೊಡನೆ ಏಕಾಂಗಿಯಾಗಿ ಹೋರಾಡಿ ಅವನ್ನು ಪಳಗಿಸುವ ಶಕ್ತಿ ೨ನೇ ದೇವರಾಯನಿಗಿತ್ತೆಂದು ಆ ನಾಣ್ಯ ಚಿತ್ರಗಳ ಸೂಚನೆ ಆಗಿದೆ. ಅದರಂತೆ ಅವನ "ಗಜವೇಂಟೇಕಾರ" ಎಂಬ ಬಿರುದು ಅರ್ಥವತ್ತಾಗಿದೆ. ಭೀಮಬಲನಾದ ೨ನೇ ದೇವರಾಯನು ಅಪರಿಮಿತವಾದ ಆತ್ಮವಿಶ್ವಾಸವಿದ್ದವನಾದ್ದರಿಂದ ಯುದ್ಧ ಸೇನೆಗಳ ಮೇಲ್ವಿಚಾರಣೆಯನ್ನು ತಾನೇ ನಡೆಸುತ್ತಿದ್ದನು. ಪ್ರಬಲವಾದ ವ್ಯಕ್ತಿತ್ವ ಶಕ್ತಿಯಿದ್ದ ೨ನೇ ದೇವರಾಯನು ಯುದ್ಧ ರಂಗದಲ್ಲಿ ಮಾತ್ರವಲ್ಲ ಶಾಂತಿಯ ಕಾಲದಲ್ಲೂ ತನ್ನ ವೀರ ವರ್ತನೆಯಿಂದ ಪ್ರಜೆಗಳ ಅನುರಾಗಕ್ಕೆ ಪಾತ್ರನಾಗಿದ್ದನು.

೨ನೇ ದೇವರಾಯನು ಕೈಗೊಂಡ ಅನೇಕ ದಂಡಯಾತ್ರೆಗಳು ಪ್ರಾಯಶಃ ಪ್ರತಿಯೊಂದರಲ್ಲೂ ಗಳಿಸಿದ ವಿಜಯವು ತನ್ನ ವೈರಿ ತನಗಿಂತಲೂ ಬಲಶಾಲಿ ಯಾಗಿದ್ದಾಗ ಸಾಧಿಸಿಕೊಂಡ ಗೌರವಯುತವಾದ ಸಂಧಿಯು ಅವನ ಶೌರ್ಯವನ್ನು ಸಮಯ ಸ್ಫೂರ್ತಿಯನ್ನು ನಿದರ್ಶಿಸುತ್ತದೆ. ರಾಜನನ್ನು ಕೊಲ್ಲಲು ಒಳಸಂಚು ಮಾಡಿದ ವಿಶ್ವಾಸ ಘಾತಕಿಗಳಿಂದ ತಪ್ಪಿಸಿಕೊಂಡ ರೀತಿಯು ಅವನ ಸಮಯ ಸ್ಫೂರ್ತಿಯನ್ನು ವ್ಯಕ್ತಪಡಿಸುತ್ತದೆ. ೨ನೇ ದೇವರಾಯನು ಈ ಸಂಶಪ್ತ ನಾಯಕರೊಡನೆ ಏಕಾಂಗಿಯಾಗಿ ಹೋರಾಡಬೇಕಾಯಿತೆಂದು ಅದರಲ್ಲಿ ಹೋರಾಡಿ ಗೆದ್ದನೆಂದು ಅವನ ಸಮಕಾಲೀನರಾದ ಅಬ್ದುಲ್‌ರಜಾಕನು ಮತ್ತು ೧೬ನೇ ಶತಮಾನದ ನ್ಯೂನಿಸನು ಹೇಳಿದ್ದಾರೆ.

೨ನೇ ದೇವರಾಯನ ಕಾಲದಲ್ಲಿ ಸಾಹಿತ್ಯ ಕಲೆಗಳಿಗೆ ದೊರೆತ ಉದಾರಾಶ್ರಯವು ದೇವಾಲಯಗಳಿಗೂ ಮಠೀಯ ಸಂಸ್ಥೆಗಳಿಗೂ ಅವನು ನೀಡಿದ ಉಂಬಳಿಗಳು ಪ್ರತಿಭಾಶಾಲಿಗಳಿಗೆ ಅವನು ನೀಡಿದ ದಾನದತ್ತಿಗಳು ತತ್ವಜ್ಞಾನ ಚಿಂತನೆಯಲ್ಲಿ ಅವನಿಗಿದ್ದ ಅಪಾರ ಆಸಕ್ತಿಯು ಅವನ ಸಾಂಸ್ಕೃತಿಕ ಜೀವನ ಮಹಿಮೆಗೆ ದ್ಯೋತಕವಾಗಿದೆ. ೨ನೇ ದೇವರಾಯನ ಕಾಲವು ತೀವ್ರವಾದ ಸಾಹಿತ್ಯ ನಿರ್ಮಾಣ ಕಾಲ. ವಿದ್ವಾಂಸರಿಗೂ, ಕವಿಗಳಿಗೂ, ದಾರ್ಶನಿಕರಿಗೂ ಅವನ ಆಸ್ಥಾನವು ಸದಾ ಮುಕ್ತ ದ್ವಾರವಾಗಿತ್ತು. ಅಲ್ಲಿ ತಮ್ಮ ವಿದ್ವತ್ತನ್ನು ಕಾವ್ಯ ರಚನಾ ವೈದಗ್ಧವನ್ನು ಪ್ರಕಟಪಡಿಸಿ ತಮ್ಮ ಶ್ರೇಷ್ಠತೆಯನ್ನು ಸ್ಥಾಪಿಸಿಕೊಳ್ಳಲು ಅವರು ಹೇಳುತ್ತಿದ್ದರು. ಆಸ್ಥಾನದಲ್ಲಿ

ನಡೆಯುವ ವಾಕ್ಯಾರ್ಥ ಸಂದರ್ಭಗಳಲ್ಲಿ ಸ್ವತಃ ರಾಜನೇ ಮಧ್ಯಸ್ಥನಾಗಿ ವಾದಗಳಲ್ಲಿ ಅವರವರ ಯೋಗ್ಯತೆಯನ್ನು ನಿರ್ಣಯಿಸುತ್ತಿದ್ದನು.

ತೆಲುಗು ಕವಿಯಾದ ಶ್ರೀನಾಥನು ೨ನೇ ದೇವರಾಯನ ಆಸ್ಥಾನ ಕವಿಯಾದ ದಂಡಡಿಂಡಿಗನನ್ನು ವಾದದಲ್ಲಿ ಜಯಿಸಿದ್ದು ಪ್ರಸಿದ್ಧ ಘಟನೆಯಾಗಿತ್ತು. ವಾದದಲ್ಲಿ ಗೆದ್ದ ತೆಲುಗು ಕವಿಯನ್ನು ಇಮ್ಮಡಿ ದೇವರಾಯನು ಸಮಸ್ತ ವಿದ್ವಾಂಸರ ಸಮ್ಮುಖದಲ್ಲಿ ಸುಪ್ರಸಿದ್ಧ ಮುಕ್ತ ಭವನದಲ್ಲಿ ಸ್ವರ್ಣತಟಾಕಗಳಲ್ಲಿ ಸ್ನಾನ ಮಾಡಿಸುವಂತೆ ಆಜ್ಞಾಪಿಸಿದನಂತೆ. ಕನ್ನಡ ಕವಿಗಳಾದ ಕುಮಾರವ್ಯಾಸ, ಚಾಮರಸ ೨ನೇ ದೇವರಾಯನ ಆಸ್ಥಾನದಲ್ಲಿದ್ದ ಕವಿಗಳು. ಇವರಿಬ್ಬರ ಕವಿಶ್ರೇಷ್ಠರ ಕೃತಿಗಳನ್ನು ಪರೀಕ್ಷೆಯ ಒರೆಗಲ್ಲಿನಲ್ಲಿ ಪರೀಕ್ಷಿಸಿ ನೋಡಿದ ೨ನೇ ದೇವರಾಯನು ಅದರೊಳಗೆ ಚಾಮರಸನೇ ಶ್ರೇಷ್ಠ ಕವಿಯೆಂದು ತೀರ್ಮಾನಿಸಿದನು ೨ನೇ ದೇವರಾಯನು ಸ್ವತಃ ಉದ್ದಾಮ ಕವಿಯಾಗಿದ್ದನು. ಮಹಾನಾಟಕ ಸುಧಾನಿಧಿಯನ್ನು ಬಾದರಾಯಣನ ಬ್ರಹ್ಮಸೂತ್ರಗಳ ಮೇಲೆ ಒಂದು ವೃತ್ತಿಯನ್ನು ಸಂಸ್ಕೃತದಲ್ಲಿ ರಚಿಸಿದ ಪಂಡಿತ ಶ್ರೇಷ್ಠ. ಹೀಗೆ ೨ನೇ ದೇವರಾಯನು ಸ್ವತಃ ಸಾಹಿತ್ಯ ವಿದ್ಯಾಪಾರಂಗತನಾಗಿ ವಿದ್ವಾಂಸರಿಗೆ ಯಥೇಚ್ಛ ದಾನದತ್ತಿಗಳನ್ನು ನೀಡಿದ ಪಂಡಿತ ನಿಷ್ಪಕ್ಷಪಾತಿ ಮಾದುದರಿಂದ ಅವನ ಆಸ್ಥಾನಕ್ಕೆ ನಾನಾಕಡೆಗಳಿಂದ ವಿದ್ವಾಂಸರು ಅಪಾರ ಖ್ಯೆಯಲ್ಲಿ ಬರುತ್ತಿದ್ದರು. ಇತರ ರಾಜರ ಆಶ್ರಯದಲ್ಲಿದ್ದ ಕವಿಗಳು ನಾನಾ ಗಳಿಗೆ ಹೋಗಿ ಅಲ್ಲಲ್ಲಿ ತಾವು ಪಡೆದ ಅನುಭವಗಳನ್ನು ತಮ್ಮ ಕೃತಿಗಳಲ್ಲಿ ಂಬಿಸಿದ್ದಾರೆ. ಅವರ ಕೃತಿಗಳಲ್ಲಿ ಅಂದಿನ ಸಾಮಾಜಿಕ ಹಾಗೂ ಆರ್ಥಿಕ ಗತಿಗಳು ಸ್ಪಷ್ಟವಾಗಿ ಚಿತ್ರಿತವಾಗಿವೆ. ೨ನೇ ದೇವರಾಯನು ಯಾವ ಒಂದೇ ಭಾಷೆಯ ಕವಿಗಳಿಗಾಗಲಿ, ಯಾವ ಒಂದೇ ಧರ್ಮದ ಕವಿಗಳಿಗಾಗಲಿ ಪಕ್ಷಪಾತ ತೋರಿದವನಲ್ಲ. ಇದರಿಂದ ಅವನ ಕಲಾ ಪ್ರೀತಿಯು ಕಲಾ ಶಕ್ತಿ, ಎಲ್ಲಿ ಯಾರಲ್ಲಿದ್ದರೂ ಅದಕ್ಕೆ ಮಾನ್ಯತೆ ನೀಡುವ ಅವನ ಹೃದಯ ವೈಶಾಲ್ಯವು ವ್ಯಕ್ತವಾಗುತ್ತದೆ.

೨ನೇ ದೇವರಾಯನ ಔದಾರ್ಯಕ್ಕೆ ಮಿತಿಯೇ ಇರಲಿಲ್ಲ. ಪ್ರಜೆಗಳ ಕುಂದು ಕೊರತೆಗಳನ್ನು ಕಷ್ಟನಿಷ್ಠುರಗಳನ್ನು ವಿಚಾರಿಸುವುದಕ್ಕೆ ಅವನು ಸದಾ ಸಿದ್ಧನಾಗಿದ್ದನು. ಕಷ್ಟಕಾಲದಲ್ಲಿ ಜನರಿಗೆ ಕರವಿಮುಕ್ತಿ ಅನುಕಂಪ ಮಾತ್ರವಲ್ಲ ಅವನ ರಾಜಕೀಯ ದೂರ ದೃಷ್ಟಿಯೂ ಸೂಚಿತವಾಗುವುದು.

೨ನೇ ದೇವರಾಯನು ತುಲಾ ಪುರುಷದಾನಗಳನ್ನು ಮಾಡಿದವನೆಂದು ಎಂದರೆ ತನ್ನನ್ನು ಚಿನ್ನದಲ್ಲಿ ತೂಗಿ ಅಷ್ಟು ಚಿನ್ನವನ್ನು ಅಮೂಲ್ಯ ರತ್ನಾದಿಗಳನ್ನು ಬ್ರಾಹ್ಮಣ ಬಡಬಗ್ಗರಿಗೂ ದಾನ ಮಾಡಿದನೆಂದು ತೋರುವುದು. ಒಮ್ಮೆ ದೇವರಾಯನು ಪೂರ್ಣ ರಚಿತವಾದ ದನವೊಂದನ್ನು ಚಿನ್ನಾಭರಣಗಳಿಂದ ಅಲಂಕರಿಸಿ ಅದನ್ನು ಮತ್ತು ಒಂದು ಅಗ್ರಹಾರವನ್ನು ಬ್ರಾಹ್ಮಣರಿಗೆ ದಾನ ಕೊಟ್ಟನಂತೆ.

ಈ ಘಟನೆಯು ಕ್ರಿ.ಶ. ೧೪೩೦ರ ಶಾಸನವೊಂದರಲ್ಲಿ ನಿರೂಪಿತವಾಗಿದೆ. ವಿಶೇಷ ಸಂದರ್ಭಗಳಲ್ಲಿ ೨ನೇ ದೇವರಾಯನು ತನ್ನ ಮಂತ್ರಿಗಳಿಗೂ, ಉನ್ನತಾಧಿಕಾರಿಗಳಿಗೂ ವಿಶಿಷ್ಟ ಸಂಭಾವನೆಯನ್ನು ಅನುಗ್ರಹಿಸುತ್ತಿದ್ದನು. ಅವನ ಆಸ್ಥಾನಕ್ಕೆ ಬಂದ ಪರ್ಷಿಯಾ ರಾಯಭಾರಿಯಾದ ಅಬ್ದುಲ್ ರಜಾಕ್ ವಿವಿಧ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದನು. ಕೊನೆಗೆ ಆಬ್ದುಲ್ ರಜಾಕನು ಆಸ್ಥಾನವನ್ನು ಬಿಟ್ಟು ಹೊರಡುವ ಕಾಲಕ್ಕೆ ೨ನೇ ದೇವರಾಯನು ಅವನ ಬಳಿಗೆ ಬಂದು, ತನ್ನ ಕೆಲವು ಅಧಿಕಾರಿಗಳ ಕರ್ತವ್ಯಲೋಪದ ಫಲವಾಗಿ ಸಂಭವಿಸಿರಬಹುದಾದ ತೊಂದರೆಗಳನ್ನು ಮನ್ನಿಸಬೇಕೆಂದು ವಿನಂತಿಸಿಕೊಂಡನಂತೆ.

೨ನೇ ದೇವರಾಯನ ಕಾಲದಲ್ಲಿ ಕನ್ನಡ, ತಮಿಳು, ತೆಲುಗು ಮೊದಲಾದ ದೇಶಭಾಷೆಗಳು ಅಭಿವೃದ್ಧಿಗೆ ಬಂದವು. ಇವನ ಕಾಲದಲ್ಲಿ ಕನ್ನಡ ಭಾಷೆಗೆ ವಿಶೇಷ ಪ್ರೋತ್ಸಾಹ ಲಭಿಸಿತು. ೨ನೇ ದೇವರಾಯನು ದೇಶಭಾಷೆಗಳಿಗೆ ಪ್ರೋತ್ಸಾಹ ಕೊಟ್ಟಿದ್ದರೂ ಸಂಸ್ಕೃತ ಸಾಹಿತ್ಯಾಭಿವೃದ್ಧಿಯನ್ನು ಕಡೆಗಣಿಸಿರಲಿಲ್ಲ. ಅವನ ಆಳ್ವಿಕೆಯ ಕಾಲದಲ್ಲಿ ದೇವಾಲಯಗಳ ನಿರ್ಮಾಣಕ್ಕೂ ಉತ್ತೇಜನ ದೊರಕಿತು.

೨ನೇ ದೇವರಾಯನ ಮತ ವಿಚಾರವು ಕುತೂಹಲದ ವಿಷಯವಾಗಿದೆ. ಕನ್ನಡ ಕವಿ ಚಾಮರಸನ ಪ್ರಭುಲಿಂಗಲೀಲೆಯು ೨ನೇ ದೇವರಾಯನು ವೀರಶೈವನಾಗಿ ಮತಾಂತರ ಹೊಂದಿದವನೆಂಬ ಊಹೆಗೆ ಅವಕಾಶ ನೀಡಿದೆ. ಅವನ ರಾಜ್ಯಭಾರದ ಕಾಲವು ವೀರಶೈವ ಧರ್ಮದ ಅಭಿವೃದ್ಧಿಯ ಕಾಲವಾಗಿತ್ತು. ೨ನೇ ದೇವರಾಯನು ಕ್ರಿ.ಶ. ೧೪೨೬ರಲ್ಲಿ ತನ್ನ ಅರಮನೆಯ ಸಮೀಪದಲ್ಲಿ ಜೈನ ಬಸದಿಯೊಂದನ್ನು ಕಟ್ಟಿಸಿದನು. ಇದರಿಂದ ಅವನು ಜೈನನೆಂದೇ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ೨ನೇ ದೇವರಾಯನು ವಾಸ್ತವವಾಗಿ ಪಾಶುಪತ ಪಂಥದ ಶೈವಮತಕ್ಕೆ ಸೇರಿದ್ದನು. ಉತ್ಕಟ ಶೈವನಾದರು ಅವನು ಪರಮಸಹಿಷ್ಣುತನಾಗಿದ್ದನು. ಒಂದನೇ ಹರಿಹರನ ಮತ್ತು ಅವನ ಉತ್ತರಾಧಿಕಾರಿಗಳ ಗುರುವಾಗಿದ್ದ ಕಾಶಿವಿಲಾಸ ಕ್ರಿಯಾಶಕ್ತಿಯು ಪಾಶುಪತ ಪಂಥದವನಾಗಿದ್ದನು. ಅವನ ದೃಷ್ಟಿಯಲ್ಲಿ ಮಾನವನ ಉದ್ಧಾರವೇ ಸಕಲ ಧರ್ಮಗಳ ಮೂಲ ಉದ್ದೇಶ. ಇಂತಹ ಉದಾತ್ತ ದೃಷ್ಟಿಯಿಂದ ಅವನು ರಾಜಕುಟುಂಬದ ಇತರರು ಭಿನ್ನ ಭಿನ್ನ ಧಾರ್ಮಿಕ ಸಂಸ್ಥೆಗಳಿಗೂ ದೇವಾಲಯಗಳಿಗೂ ಉಂಬಳಿಕೊಟ್ಟ ಹಲವಾರು ಶಿಲಾಶಾಸನಗಳು ತಾಮ್ರ ಫಲಕಗಳು ದೊರೆತಿವೆ. ಅದ್ವೈತ ಮತ ಸ್ಥಾಪನಾಚಾರ್ಯರಾದ ಶಂಕರಾಚಾರ್ಯರು ಸ್ಥಾಪಿಸಿದ ಶೃಂಗೇರಿ ಮಠಕ್ಕೆ ೨ನೇ ದೇವರಾಯನು ತನ್ನ ಪೂರ್ವಜರಂತೆ ಕಾಣಿಕೆ ಸಲ್ಲಿಸುತ್ತಿದ್ದನು. ರಾಜ್ಯ ಸ್ಥಾಪನೆಯ ಪ್ರಾರಂಭಕಾಲದಲ್ಲಿ ಸಂಗಮ ವಂಶಕ್ಕೂ ಶೃಂಗೇರಿ ಮಠಕ್ಕೂ ನಿಕಟ ಸಂಬಂಧವಿತ್ತು. ವಿಜಯನಗರದ ಅರಸರಲ್ಲಿ

ಮಹಮದೀಯರ ಬಗೆಗೂ ಪರಮತ ಸಹಿಷ್ಣುತೆಯನ್ನು ಮೊಟ್ಟಮೊದಲು ತೋರಿಸಿದವನು ೨ನೇ ದೇವರಾಯ. ಈ ನೀತಿಯ ಹಿಂದೆ ರಾಜಕೀಯ ಮಹತ್ವವೇನೂ ಇರಲಿಲ್ಲ. ಮಹಮದೀಯರು ತಮ್ಮ ಧರ್ಮನಿಷ್ಠೆಗೆ ಭಂಗ ತಾರದೆ ತನಗೂ ವಂದಿಸಲಾಗುವಂತೆ ೨ನೇ ದೇವರಾಯನು ರಾಜ ಸಿಂಹಾಸನದ ಮುಂದೆ ಕುರಾನ್ ಗ್ರಂಥವನ್ನು ಇರಿಸಿದ್ದನು. ಇದರಿಂದ ಮಹಮದೀಯರ ಮತಕ್ಕೆ ೨ನೇ ದೇವರಾಯನು ಎಷ್ಟೊಂದು ಗೌರವ ನೀಡಿದ್ದನೆಂದು ತಿಳಿದುಬರುತ್ತದೆ. ಅದೂ ಅಲ್ಲದೆ ಅವನ ರಾಜಧಾನಿಯಲ್ಲಿ ಒಂದು ಮಸೀದಿಯನ್ನೂ ನಿರ್ಮಿಸಿದನು ಮತ್ತು ರಾಜ್ಯಾಧಿಕಾರಿಗಳಿಂದಲೇ ಆಗಲಿ ಪ್ರಜಾವರ್ಗದವರಿಂದಲೇ ಆಗಲಿ ಮಹಮದೀಯರ ಧರ್ಮಾಚರಣೆಗೆ ಯಾವ ಬಗೆಯಲ್ಲೂ ಆತಂಕ ಉಂಟಾಗುವುದಿಲ್ಲವೆಂದು ಹೇಳಿದ್ದನು. ಇದು ೨ನೇ ದೇವರಾಯನು ಧರ್ಮವಿಚಾರದಲ್ಲಿ ಎಷ್ಟೊಂದು ಉದಾರನಾಗಿದ್ದನೆಂಬುದನ್ನು ತಿಳಿಸುತ್ತದೆ. ಹಿಂದೂ ಜನರು ಮಹಮದೀಯರು ಈ ಕಾಲದಲ್ಲಿ ತಮ್ಮ ತಮ್ಮ ಮತ ಧರ್ಮಗಳಲ್ಲಿ ದ್ವೇಷ ಅಸೂಯೆಗಳಿಗೆ ಎಡೆ ಇಲ್ಲವೆಂದು ಅರಿತುಕೊಂಡಿದ್ದರು. ೨ನೇ ದೇವರಾಯನ ಈ ಮತ ಸಾಮರಸ್ಯವು ಅಂದಿನ ದಕ್ಷಿಣ ಭಾರತದ ಸಮಾಜದಲ್ಲಿ ಅಪಾರ ಪ್ರಭಾವ ಬೀರಿತು.

೨ನೇ ದೇವರಾಯನ ರಾಜಕೀಯ ಹಾಗೂ ಸಾಮಾಜಿಕ ಕಲ್ಪನೆಗಳಿಗೆ ಪರಂಪರಾಗತ ತತ್ವಗಳೇ ಆಧಾರವಾಗಿದ್ದವು. ಪ್ರಾಚೀನ ಧರ್ಮಶಾಸ್ತ್ರಕಾರರು ನಿರೂಪಿಸಿದ ತತ್ವಗಳನ್ನು ೨ನೇ ದೇವರಾಯನು ಸರ್ವಸಾಧಾರಣವಾಗಿ ಅನುಮೋದಿಸಿದನು. ರಾಜಸ್ವ ಪ್ರಶಾಸನ ವಿಚಾರದಲ್ಲಂತೂ ೨ನೇ ದೇವರಾಯನು ಹಿಂದೂ ಧರ್ಮಶಾಸ್ತ್ರಕಾರರ ತತ್ವಗಳನ್ನೇ ಪೂರ್ಣವಾಗಿ ಅನುಷ್ಠಾನಕ್ಕೆ ತಂದಿದ್ದನು. ಕ್ಷಾಮ, ನೆರೆಹಾವಳಿ ಮೊದಲಾದ ವಿಪತ್ತುಗಳಿಂದ ಜನರು ಕಷ್ಟನಷ್ಟಗಳಿಗೆ ಗುರಿಯಾದ ಕಾಲದಲ್ಲಿ ಜನರ ಪರಿಸ್ಥಿತಿಯನ್ನು ಸ್ವತಃ ರಾಜನೇ ಪರಿಶೀಲಿಸಿ ಸೂಕ್ತ ಸಂದರ್ಭಗಳಲ್ಲಿ ತೆರಿಗೆಗಳನ್ನು ವಸೂಲು ಮಾಡುತ್ತಿದ್ದನು.

ಸಾಹಿತ್ಯ ಕಲೆಗಳಿಗೆ ಉತ್ತೇಜನ ನೀಡುವ ವಿಚಾರದಲ್ಲಿ ೨ನೇ ದೇವರಾಯನು ಮತ್ತು ಕೃಷ್ಣದೇವರಾಯನು ಪರಸ್ಪರ ಸ್ಪರ್ಧೆ ಹೂಡಿದ್ದರೇನೋ ಎಂಬಂತೆ ತೋರುತ್ತದೆ. ಇವರಿಬ್ಬರೂ ಕೇವಲ ಸಾಹಿತ್ಯ ಪೋಷಕರಷ್ಟೇ ಅಲ್ಲ. ತಾವೇ ಸ್ವತಃ ವಿದ್ವಾಂಸರಾಗಿದ್ದರು. ಅವರ ಉದ್ದಾಮ ವಿದ್ವತ್ತಿನಿಂದಲೂ ಪರಮತ ಸಹಿಷ್ಣುತೆಯಿಂದಲೂ ವಿಜಯನಗರದ ಆಸ್ಥಾನಕ್ಕೆ ದೂರ ದೂರ ದೇಶಗಳ ಕವಿಗಳು ವಿದ್ವಾಂಸರು ದಾರ್ಶನಿಕರು ಆಕರ್ಷಿತರಾಗಿದ್ದರು. ಇಮ್ಮಡಿ ದೇವರಾಯನ ಕಾಲದಲ್ಲಿ ವಿಜಯನಗರದ ಇತಿಹಾಸದಲ್ಲಿ ಹಿಂದೆಂದೂ ಕಾಣದಷ್ಟು ಕನ್ನಡ ಸಾಹಿತ್ಯ ಸೃಷ್ಟಿಯಾಯಿತು.

ವಾಸ್ತು ನಿರ್ಮಾಣಕ್ಕೂ ಸಂಗೀತ, ಚಿತ್ರಕಲೆ ಮುಂತಾದ ಲಲಿತಕಲೆಗಳಿಗೂ ಇವರಿಬ್ಬರೂ ಉತ್ತೇಜನ ನೀಡಿದ್ದರು. ಆದರೆ ಕೃಷ್ಣದೇವರಾಯನ ಕಾಲಕ್ಕಿಂತ ೨ನೇ ದೇವರಾಯನ ಕಾಲವೇ ಹೆಚ್ಚು ಶಾಂತಿ ಪೂರ್ಣವಾಗಿತ್ತು. ಹಜಾರ ರಾಮಸ್ವಾಮಿ ದೇವಾಲಯ ಹಾಗೂ ಹಂಪೆಯ ವಿಠಲ ದೇವಾಲಯದ ನಿರ್ಮಾಣ ಕಾಲವು ಬಹುಶಃ ೨ನೇ ದೇವರಾಯನ ಕಾಲದಲ್ಲೇ ಪ್ರಾರಂಭವಾಗಿದ್ದಿರಬೇಕು. ಹಜಾರ ರಾಮಸ್ವಾಮಿ ದೇವಾಲಯದ ವರ್ಣ ಚಿತ್ರಗಳು ಮತ್ತು ಅರಮನೆಯೊಳಗಿನ ಚಿತ್ರ ವಿನ್ಯಾಸಗಳು ಅಂದಿನ ಕಲಾಭಿರುಚಿಯ ಸಂಕೇತಗಳಾಗಿವೆ.

ಹೀಗೆ ೨ನೇ ದೇವರಾಯ ಭಾರತದ ಪ್ರಸಿದ್ಧ ಅರಸರಲ್ಲಿ ಅಗ್ರಗಣ್ಯನಾಗಿದ್ದಾನೆ. ಇವನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ವಿಸ್ತಾರಗೊಂಡು ಅದು ಎಲ್ಲಾ ಕ್ಷೇತ್ರಗಳಲ್ಲಿ ಉತ್ತುಂಗ ಶಿಖರವನ್ನು ಏರಿತ್ತು. ಇವನ ೨೪ ವರ್ಷಗಳ ದರ್ಪ, ವೈಭವ ಹಾಗೂ ಇತಿಹಾಸ ಪರಂಪರೆಯಲ್ಲಿ ಒಂದು ವಿಶಿಷ್ಟಸ್ಥಾನ ಪಡೆದುಕೊಂಡಿತು. ವಿದೇಶಿ ಪ್ರವಾಸಿಗನಾದ ಅಬ್ದುಲ್‌ರಜಾಕನು ದೇವರಾಯನ ರಾಜ್ಯದಲ್ಲಿ ನೆಲೆಸಿದ್ದ ಶಾಂತಿ ಸಮೃದ್ಧಿಯನ್ನು ನೋಡಿ "ಅಲ್ಲಿಯವರೆಗೆ ಯಾರೂ ಕಣ್ಣಿಂದ ನೋಡದ ಕಿವಿಯಿಂದ ಕೇಳದ ಸಾಮ್ರಾಜ್ಯ" ಎಂದು ಮುಕ್ತಕಂಠದಿಂದ ಹೊಗಳಿದ್ದಾನೆ. ಇವನು ದಕ್ಷಿಣ ಭಾರತದ ಸಾರ್ವಭೌಮನಾಗಿ ಮೆರೆದು ಇತಿಹಾಸದ ಪುಟಗಳಲ್ಲಿ ಇವನ ಹೆಸರು ಪ್ರಜ್ವಲಿಸುವಂತಾಗಿದೆ.

❑

೮. ಗಾಂಧೀಜಿಯವರ ದೃಷ್ಟಿಯಲ್ಲಿ ಸರ್ವೋದಯ ಸಿದ್ಧಾಂತದ ಪ್ರಸ್ತುತತೆ

-ಎನ್.ಮಲ್ಲಿಕಾರ್ಜುನ

-ಪ್ರೊ. ಎಂ. ರಾಮಚಂದ್ರ

ಪೀಠಿಕೆ

ಮಹಾತ್ಮ ಗಾಂಧೀಜಿಯವರು ಮಹಾನ್ ಆಧ್ಯಾತ್ಮಿಕಜೀವಿ, ಅಪ್ರತಿಮ ಮುತ್ಸದ್ದಿ, ಮಹಾತ್ಮ, ಮಹಾಮಾನವತಾವಾದಿ. ಮನುಕುಲದ ಕಲ್ಯಾಣಕ್ಕಾಗಿ, ಶ್ರೇಯಸ್ಸಿಗಾಗಿ ಅವಿರತವಾಗಿ ದುಡಿದು ಪೂರ್ಣ ಸಮರ್ಪಿಸಿಕೊಂಡರು. ಭಾರತೀಯರ ಅಪ್ರತಿಮ ಅನುಪಮ ನಂದಾದೀಪ, ತಮಸ್ಸನ್ನು, ಗುಲಾಮಗಿರಿಯನ್ನು ನಿರ್ಮೂಲನೆ ಮಾಡಿದ ಜಗತ್‌ಜ್ಯೋತಿ, ಜಾತ್ಯತೀತ ಸಮಾಜವಾದಿ, ಮಹಾತ್ಮರದು ಅದ್ವಿತೀಯವಾದ ವೈಖರಿಯ ಪ್ರಕರಬುದ್ಧಿ ಅಪೂರ್ವ ಅಂತರ್ದೃಷ್ಟಿ, ಸಮಾಜದ ಸರ್ವಾಂಗೀಣ ಸಮರಸ ಸಹಬಾಳ್ವೆಗಾಗಿ, ನವಸಮಾಜ ನಿರ್ಮಾಣಕ್ಕಾಗಿ, ನಿಸ್ವಾರ್ಥತೆಯಿಂದ ನಿರಂತರವಾಗಿ ದುಡಿದವರು. ಸರ್ವಧರ್ಮ ಸಮನ್ವಯಕಾರರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸವಿಟ್ಟವರು, ಮಾನವ ಜನಾಂಗದ ಕಣ್ಣು ತೆರೆಸಿದ ದಿವ್ಯದಾರ್ಶನಿಕ, ಅಖಂಡ ಭಾರತದ ಸಮಗ್ರ ಸುಧಾರಕರು, ಭಾರತೀಯ ದಾಸ್ಯ ವಿಮೋಚನೆಯ ಕಾರಣ ಪುರುಷರು. ಮಹಾತ್ಮರು ಭವ್ಯ ಭಾರತದ ಸರ್ವೋದಯ ಸಾಮಾಜಿಕ ಚಿಂತನೆಗೆ ನೀಡಿರುವ ಕೊಡುಗೆ ಮತ್ತು ಸರ್ವಕ್ಷೇತ್ರಗಳಲ್ಲೂ ಸರ್ವೋದಯ ಸಿದ್ಧಾಂತದ ಮಹತ್ವತೆಯನ್ನು ಪ್ರತಿಪಾದಿಸಿ ಅನುಷ್ಠಾನಕ್ಕೆ ತಂದವರು.

ಸಹಸ್ರಾರು ವರ್ಷಗಳ ಹಿಂದೆಯೇ ಭಾರತೀಯ ಸಮಾಜದಲ್ಲಿಯೇ ಬುದ್ಧ, ಮಹಾವೀರರಿಂದ ಸ್ಥಾಪಿಸಲ್ಪಟ್ಟ, ಹಲವಾರು ಸಾಧುಸಂತರಿಂದ ಪ್ರತಿಪಾದಿಸಲ್ಪಟ್ಟ ವಿಶೇಷ ದರ್ಶನವೇ ಸರ್ವೋದಯವಾದರೂ, ಸರ್ವೋದಯ ಎಂಬ ಪದದ ಸೃಷ್ಟಿಯು ಮುಖ್ಯವಾಗಿ ಗಾಂಧೀಜಿಯವರಿಂದಾಗಿದ್ದು, ಗಾಂಧೀಜಿಯವರ ವಿಚಾರ ಧಾರೆಯಿಂದಲೇ ವಿಪುಲವಾಗಿ ದೊರೆಯುತ್ತದೆ.

ಸರ್ವೋದಯ ಪದದ ಸೃಷ್ಟಿಯೂ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಸಂಜಾತರ ಹಕ್ಕುಬಾಧ್ಯತೆಗಳಿಗಾಗಿ ಹೋರಾಡುತ್ತಿದ್ದ ಕಾಲದಲ್ಲೇ ಶರೀರ ಶ್ರಮದ ಅನ್ನಕಾಯದ ಮಹತ್ವವನ್ನು ಅರಿತುಕೊಂಡಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಹೋರಾಟ ನಡಸುತ್ತಿರುವಾಗ ಒಮ್ಮೆ ಜೋಹಾನ್ಸ್‌ಬರ್ಗ್‌ನಿಂದ ಡರ್ಬಾನಿಗೆ ರೈಲಿನಲ್ಲಿ ಹೋಗಬೇಕಾಗಿತ್ತು. ಆಗ ಗೆಳೆಯ ಪೋಲಕ್ ಜಾನ್‌ರಸ್ಕಿನ್ನನ "Unto this last" ಪುಸ್ತಕವನ್ನು ಗಾಂಧೀಜಿಯ ಕೈಗೆ ಕೊಟ್ಟರು. ಗಾಂಧೀಜಿಯವರು ಪುಸ್ತಕವನ್ನು ಓದಿದ ಮೇಲೆ ಅವರ ಜೀವನ ಮಾರ್ಗವೇ ಅಪಾರವಾಗಿ ಬದಲಾಯಿತು. ಗಾಂಧೀಜಿಯವರ ಅಂತರಾಳದಲ್ಲಿ ಮದುಗಿದ್ದ ಮುಖ್ಯ ಅನಿಸಿಕೆಗಳೆಲ್ಲಾ ರಸ್ಕಿನ್‌ರವರ ಗ್ರಂಥದಲ್ಲಿ ಪ್ರತಿಬಿಂಬಿತವಾಗಿದ್ದವು. ರಸ್ಕಿನ್‌ರವರು ಪ್ರತಿಪಾದಿಸಿದ ಈ ಮೂರು ಮೂಲಸೂತ್ರಗಳು ಗಾಂಧೀಜಿಯವರ ಜೀವನ ಸೂತ್ರಗಳಾದವು.

೧) ಎಲ್ಲರ ಒಳಿತಿನಲ್ಲಿ ಪ್ರತಿಯೊಬ್ಬನ ಒಳಿತೂ ಅಡಗಿದೆ.

೨) ನ್ಯಾಯವಾದಿಯ ವೃತ್ತಿಯಾಗಲೀ ನಾಯಿಂದನ ವೃತ್ತಿಯಾಗಲೀ ಎರಡೂ ಸಮಾನ ಬೆಲೆಯುಳ್ಳವು. ಏಕೆಂದರೆ ಸಮಾಜಕ್ಕೆ ಎಲ್ಲರ ಸೇವೆಯೂ ಅಗತ್ಯ.

೩) ಕೃಷಿಕನ ಹಾಗೂ ಕುಶಲಕರ್ಮಿಯ ದುಡಿಮೆಯೇ ಸಾರ್ಥಕ ದುಡಿಮೆ.

ಈ ಸೂತ್ರ ತ್ರಯವೇ ಸರ್ವೋದಯ ಸಿದ್ಧಾಂತದ ತಿರುಳಾಯಿತು.

ಮೊದಲನೇ ವಿಚಾರ ವ್ಯಕ್ತಿಯ ಶ್ರೇಯಸ್ಸು ಸಮಷ್ಟಿಯ ಶ್ರೇಯಸ್ಸಿನಲ್ಲಿ ಎಂದಿರುವುದು ಹೊಸ ವಿಚಾರವೇನಲ್ಲ. 'ಸರ್ವಭೂತ ಹಿತೇರತಾಃ' 'ಸರ್ವೇಜನಾಃ ಸುಖಿನೋಭವಂತು' ಈ ವಾಕ್ಯಗಳನ್ನು ಸಾವಿರಾರು ವರ್ಷಗಳಿಂದ ಹೇಳುತ್ತಲೇ ಬಂದಿದ್ದೇವೆ. ಆದರೆ ಆಚರಣೆಗೆ ತಂದಿಲ್ಲ. ನಮ್ಮ ರೀತಿ-ನೀತಿ, ನಡವಳಿಕೆ-ಸ್ವಭಾವ, ಬದುಕುವ ದಾರಿ ಆ ಮಟ್ಟಕ್ಕೆ ಏರಲೇಇಲ್ಲ. ಆದರೆ ಇದನ್ನೆಲ್ಲ ಆಚರಣೆಗೆ ತಂದರೆ ಸರ್ವೋದಯ ಸಮಾಜ ಸೃಷ್ಟಿಯಾಗುವುದರಲ್ಲಿ ಯಾವುದೇ ಸಂದೇಹ ಇಲ್ಲ. ನಮ್ಮದು ಬಂಗಾರದ ಬದುಕಾಗುತ್ತಿತ್ತು.

ಎರಡನೇ ವಿಚಾರ ವೃತ್ತಿಯಲ್ಲಿ ಅಸಮಾನತೆಯ ಭೇದಗಳನ್ನು ತೊಡೆದು ಹಾಕಿದ್ದರು. ಜಾನ್‌ರಸ್ಕಿನ್, ನ್ಯಾಯಾಧೀಶ, ವಕೀಲ, ವೈದ್ಯ, ಭಂಗಿ ಯಾರು ಯಾವುದೇ ವೃತ್ತಿಯಲ್ಲಿದ್ದರೂ ಅವರು ಸರಿಸಮಾನರು. ಅವರ ವೃತ್ತಿ ಇರುವುದು ಸಮಾಜ ಸೇವೆಗಾಗಿ, ಲೋಕೋಪಕಾರಕ್ಕಾಗಿ, ಸೇವೆಯಲ್ಲಿ ಅಂತರ ಉಂಟೆ? ಶರೀರದ ಅಂಗಾಂಗಗಳಲ್ಲಿ ಹಿರಿದು-ಕಿರಿದು ಎನ್ನಲಾದೀತೆ? ಹಾಗೇನಾದರೂ ಆಗಿದ್ದಲ್ಲಿ ಶರೀರದ ಕ್ರಿಯೆಯೇ ನಿಂತು ಹೋದೀತು. ಇದು ಜೀವನದ ನಿರ್ವಹಣೆಗೆ ಅನ್ವಯಿಸುತ್ತವೆ. ನಮ್ಮ ವೇತನ ಶ್ರೇಣಿಯಲ್ಲಿ ಒಬ್ಬ ವ್ಯಕ್ತಿಗೆ ಅಗತ್ಯವಿರುವಷ್ಟು

ದೊರೆಯುವುದೇ ಇಲ್ಲ. ಆತನ ಮನೆಯಲ್ಲಿ ಹಸಿದ ಜನ, ಬಟ್ಟೆಬರೆ, ವಸತಿಯ ಲೆಕ್ಕ ಹಾಕುವುದೇ ಇಲ್ಲ. ಆತ ಝಾಡಮಾಲಿಯಾಗಿದ್ದರೆ, ಗುಮಾಸ್ತನಾಗಿದ್ದರೆ, ಕಡಿಮೆ ದರ್ಜೆಯವನೆಂದು ಕಡಿಮೆ ವೇತನ ಶ್ರೇಣಿ ಗೊತ್ತುಮಾಡುವುದು. ಇನ್ನೊಂದು ಕಡೆ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಗೆ ದೊರೆಯುವ ವೇತನ ಅಧಿಕ. ಆತನ ಮನೆಯಲ್ಲಿ ಹಸಿದಿರುವವರ ಸಂಖ್ಯೆ ಕಡಿಮೆಯಿದ್ದರೂ ಅದು ಗಣನೆಗೆ ಬಾರದು. ಇಂತಹ ವೇತನ ತಾರತಮ್ಯ ನಿವಾರಣೆ ಆದಾಗ ಮಾತ್ರ ಸರ್ವೋದಯ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ.

ಮೂರನೆಯ ವಿಚಾರ, ಶ್ರಮಿಕ, ರೈತ, ಕಸುಬುದಾರರ ಜೀವನವೇ ಸರ್ವೋತ್ಕೃಷ್ಟವಾದುದು. ಪರಿಶ್ರಮ ಮಾಡುವುದು ನಿಕೃಷ್ಟ ಎಂಬ ಭಾವನೆ ಅನಾದಿಕಾಲದಿಂದಲೂ ರೂಢಿಗ್ರಸ್ತವಾಗಿದೆ. ಶ್ರಮಿಕ ದುಡಿಮೆಗಾರನಿಗೆ ಗೌರವವಿಲ್ಲ, ಬೆಲೆಯಿಲ್ಲ, ಆತನದು ನಿಕೃಷ್ಟ ಜೀವನ ಎನ್ನುವ ಭಾವನೆ ಎಲ್ಲರ ಮನದಲ್ಲಿ ಬೇರೂರಿತು. ಇಂತಹ ವರ್ಗಭೇದವನ್ನು ಅಲ್ಲಗಳೆಯುತ್ತ ಪ್ರತಿಯೊಬ್ಬ ಮನುಷ್ಯ ಕಾಯಕ ಮಾಡಬೇಕು. ಕೈ-ಕಾಲು ಆಡಿಸಬೇಕು, ಪ್ರತಿಯೊಬ್ಬರಿಂದಲೂ ಉತ್ಪಾದನೆಯ ಕೆಲಸ ನಡೆಸಬೇಕು. ಈ ನಿಯಮ ಪಾಲಿಸಿದರೆ ಉಚ್ಚ-ನೀಚ, ಧಣಿ-ಆಳು ಎಂಬ ಭೇದ ಮಾಯವಾಗಿ ಪರಿಶ್ರಮದ ಜೀವನ ಸರ್ವೋತ್ಕೃಷ್ಟ ಎಂಬ ಭಾವನೆ ಬೆಳೆದು ಸರ್ವೋದಯ ಸಮಾಜ ನಿರ್ಮಾಣವಾಗುತ್ತದೆ.

ಸರ್ವೋದಯವೆಂದರೆ ಈ ಜಗತ್ತಿನ ಸಮಸ್ತರ ಉದಯ. ಇವೆಲ್ಲರ ಸಮರ್ಪಕ ಉದ್ಧಾರವೇ ಸರ್ವೋದಯದ ಗುರಿ. ಮಾನವರೆಲ್ಲರೂ ಒಂದೇ. ಈ ಭೂಮಿಯ ಮೇಲೆ ಜನಿಸಿದ ಎಲ್ಲರಿಗೂ ಇಲ್ಲಿ ಜೀವಿಸಲು ಹಕ್ಕಿದೆ. ಅವರೆಲ್ಲರಿಗೂ ಇಲ್ಲಿ ಬದುಕಲು ಅವಕಾಶ ಮಾಡಿಕೊಡಬೇಕು ಎಂಬುದೇ ಸರ್ವೋದಯದ ಧೋರಣೆ, ನಮ್ಮ ಭಾರತ ದೇಶಕ್ಕೆ ಸಂಬಂಧಿಸಿದಂತೆ ಈ ಸರ್ವೋದಯ ತತ್ವಾಚರಣೆ ಹೆಚ್ಚಿನ ಪ್ರಭಾವ ಬೀರಿದೆ. ಅನೇಕರ ಮನೋಭಾವವನ್ನು, ಜೀವನದ ಧೋರಣೆಯನ್ನು ಬದಲಿಸಿದೆ. ಸರ್ವೋದಯದಲ್ಲಿ ಆಳು--ಅರಸು, ಹಿಂದೂ-ಮುಸಲ್ಮಾನ, ಸ್ಪೃಶ್ಯ-ಅಸ್ಪೃಶ್ಯ, ಬಿಳಿಯ-ಕರಿಯ, ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಎಂಬ ತಾರತಮ್ಯ ವಿರುವುದಿಲ್ಲ. ಇಲ್ಲಿ ಎಲ್ಲರೂ ಸಮಾನರು, ಎಲ್ಲರಿಗೂ ಸಮಾನ ಅವಕಾಶಗಳಿರುತ್ತವೆ. ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ, ಶೈಕ್ಷಣಿಕ ಸ್ವಾತಂತ್ರ್ಯಗಳನ್ನು ನೀಡಿ ಗ್ರಾಮೀಣ ಜನರ ಪ್ರಗತಿ, ಅಧಿಕಾರ ವಿಕೇಂದ್ರೀಕರಣ. ಜನರು ತಮ್ಮ ಜವಾಬ್ದಾರಿ ಅರಿತು ಹೊಣೆಗಾರಿಕೆಯಿಂದ ಸರ್ಕಾರದ ಅಭಿವೃದ್ಧಿ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ತಯಾರು ಮಾಡುವುದು, ಮೊದಲಾದವು ಸರ್ವೋದಯದ ಗುರಿಗಳಾಗುವುವು.

ಸರ್ವೋದಯದಲ್ಲಿ ಅಂತ್ಯೋದಯವೂ ಸೇರಿದೆ, ಸರ್ವೋದಯದಲ್ಲಿ ಭಂಗಿಯ ಉದಯವೂ ಇದೆ, ಬಡತನದ ಉದಯವೂ ಇದೆ. ಅದರಲ್ಲಿ ಎಲ್ಲ ವರ್ಗಗಳ ಒಟ್ಟಿನಲ್ಲಿ ಇಡೀ ಮಾನವ ಕುಲದ ಉದಯವೇ ಅಡಕವಾಗಿರುವುದು. ಸರ್ವರ ಉದಯವೇ ಸರ್ವೋದಯ. ಇದರಲ್ಲಿ ಸರ್ವರ ಏಳಿಗೆ, ಸರ್ವರ ಪ್ರಗತಿ, ಸರ್ವರ ಅಭ್ಯುದಯ ಅಡಕವಾಗಿದೆ.

ಗಾಂಧೀಜಿಯವರ ದೃಷ್ಟಿಯಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಕ್ರಾಂತಿ ಆದಾಗ ಮಾತ್ರ ವರ್ಗರಹಿತ, ಶೋಷಣೆರಹಿತ, ಜಾತ್ಯತೀತ, ಹಿಂಸಾತೀತ, 'ವಿಶ್ವಮಾನವ' ಸರ್ವೋದಯ ಸಮಾಜ ನಿರ್ಮಾಣವಾಗುತ್ತದೆ.

ಸರ್ವೋದಯದ ರಾಜಕೀಯ ಸಿದ್ಧಾಂತವೂ ಮೌಲಿಕವಾದದ್ದು, Individual of Supreme Consideration' ಎಂದು ಗಾಂಧೀಜಿ ವ್ಯಕ್ತಿಯ ಪಾರಮ್ಯವನ್ನು ಎತ್ತಿಹಿಡಿದರು. ವ್ಯಕ್ತಿಯ ಸುಧಾರಣೆಯಿಂದ ಸಮಾಜದ ಸುಧಾರಣೆ ಆಗಬೇಕೆಂದರು. ಸರ್ಕಾರ ಈಗ ಹಿಂಸೆಯ ಪ್ರತೀಕ. ಕೇಂದ್ರೀಕೃತ ರಾಜಕೀಯ ವ್ಯವಸ್ಥೆಯಲ್ಲಿ ಅದು ಬಂಡವಾಳ ವ್ಯವಸ್ಥೆಯಾಗಲೀ ಸಮತಾವಾದಿ ವ್ಯವಸ್ಥೆಯಾಗಲೀ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ವಿಕಾಸ ಕುಂಠಿತವಾಗುತ್ತದೆ. ಅಧಿಕಾರವೆಲ್ಲ ಕೇಂದ್ರೀಕೃತವಾಗಿರುವುದು ಮೇಲ್ಮಟ್ಟದಲ್ಲಿ ಜನಸಾಮಾನ್ಯರಿಗೆ ದಿನನಿತ್ಯದ ಆಡಳಿತ ವ್ಯವಹಾರಗಳಲ್ಲಿ ಯಾವ ಪಾಲೂ ಇಲ್ಲ. ಇದು ಪ್ರಜಾತಂತ್ರದ ಅಣಕ. ನಿಜವಾದ ಪ್ರಜಾತಂತ್ರವೆಂದರೆ ಜನತೆ ಪಾಲುಗೊಳ್ಳುವ ಪ್ರಜಾತಂತ್ರ participatory democracy, ವಿಕೇಂದ್ರೀಕೃತ ರಾಜಕೀಯ ಆಡಳಿತ ವ್ಯವಸ್ಥೆಯಲ್ಲಿ ಅದು ಸಾಧ್ಯ. ಆದುದರಿಂದ ಗಾಂಧೀಜಿ ಹೇಳಿದರು, ಮೊದಲು ಗ್ರಾಮಸ್ವರಾಜ್ಯ ಆಗಲಿ, ಇದನ್ನು ಅವರು 'ರಾಮರಾಜ್ಯ' ಅರ್ಥಾತ್ 'ದೇವರಾಜ್ಯ' ಎಂದು ಕರೆದರು. ಅಲ್ಲಿ ಸರ್ವರ ಉದಯವಾಗುತ್ತದೆ. ಅಂದರೆ ಗ್ರಾಮದ ಆಡಳಿತ ನಿರ್ವಹಣೆ ಚುನಾಯಿತ ಪಂಚಾಯಿತಿ ಮೂಲಕ ಗ್ರಾಮದಲ್ಲಿ ಉದ್ಭವವಾಗುವ ತಕರಾರುಗಳು, ವಿವಾದಗಳು ನ್ಯಾಯ ಪಂಚಾಯಿತಿಗಳಲ್ಲಿ ಇತ್ಯರ್ಥವಾಗಲಿ; ಅನ್ನ, ಬಟ್ಟೆ, ವಸತಿ ಮುಂತಾದ ಮೂಲಭೂತ ಅವಶ್ಯಕತೆಗಳ ಬಗ್ಗೆ ಗ್ರಾಮ ಸ್ವಾವಲಂಬಿಯಾಗಿರಲಿ; ಭಾರತ ಗ್ರಾಮ ಸ್ವರಾಜ್ಯದ ಸ್ವಾಯತ್ತ ಸಮುದಾಯ ಘಟಕಗಳ ಸಂಯುಕ್ತ ಗಣರಾಜ್ಯವಾಗಲಿ, ಹಾಗೆಯೇ ಸ್ವತಂತ್ರ ರಾಷ್ಟ್ರಗಳ ಸ್ವಯಂಪ್ರೇರಿತ ಒಕ್ಕೂಟವಾಗಿ ವಿಶ್ವಸರ್ಕಾರ ಮೂಡಿಬರಲಿ; ಶಾಶ್ವತವಾದ ವಿಶ್ವಶಾಂತಿಗೆ ನಾಂದಿಯಾಗಲಿ ಆಗ ಪ್ರಜಾತಂತ್ರಕ್ಕೆ ಪುಷ್ಟಿ ಬರುತ್ತದೆ ಎಂದು ಗಾಂಧೀಜಿ ಬಯಸಿದರು.

ಸರ್ವೋದಯದ ಸಾಮಾಜಿಕ ನೆಲೆಗಟ್ಟು ಸಮಾನತೆ, ವರ್ಗ, ಜಾತಿ, ವರ್ಣ, ಅಂತಸ್ತು ಈ ಭೇದಭಾವನೆಗಳಿಂದ ಸಮಾಜ ಛಿದ್ರವಾಗಿದೆ, ಅಶಾಂತಿಗೆ ಕಾರಣವಾಗಿದೆ. ಭೇದಭಾವನೆಗಳ ಗೋಡೆಗಳನ್ನು ಒಡೆದು ಸಮಾಜದಲ್ಲಿ ಸಮಾನತೆಯ ಆಧಾರದ ಮೇಲೆ ಒಗ್ಗಟ್ಟನ್ನು ಬೆಳೆಸಬೇಕು. ದುಡಿಮೆಯ ನೀತಿ ಮತ್ತೆ – work ethics ಯನ್ನು ಅರಿತುಕೊಳ್ಳಬೇಕು. ಆವಾಗ ಸಮಾಜದಲ್ಲಿರುವ ಮೇಲು–ಕೀಳು, ಉಚ್ಚ–ನೀಚ, ಸ್ಪೃಶ್ಯ–ಅಸ್ಪೃಶ್ಯ, ಮಡಿ–ಮೈಲಿಗೆ ಎಂಬ ಭೇದ ಸರ್ವತಾ ಅಳಿಯಬೇಕು, ಅದು ಸರ್ವೋದಯದಿಂದ ಮಾತ್ರ ಸಾಧ್ಯ.

ಸರ್ವೋದಯ ಸೈದ್ಧಾಂತಿಕ ದೃಷ್ಟಿಯಿಂದ ಸಮಾಜದಲ್ಲಿ ತರಬೇಕಾದ ಪರಿವರ್ತನೆಯ ಆರಂಭ ವೈಯಕ್ತಿಕ ಜೀವನದಲ್ಲಿ ಮೊದಲು ಆಗಬೇಕು. "ಸರ್ವೋದಯದ ಸರ್ವೋತ್ತಮ ಪ್ರಚಾರ ಸ್ವಯಂ ಜೀವನದಲ್ಲಿ ನಾವು ಮಾಡಿದ ಆಚಾರ" ಎಂದು ಗಾಂಧೀಜಿ ಅಭಿಪ್ರಾಯಪಟ್ಟಿರುವರು. ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ ನಾವು ಅಸತ್ಯ ಹಾಗೂ ಹಿಂಸೆಗಳನ್ನು ಬಳಸುವುದೇ ಇಲ್ಲವೆಂದು ಶಪಥ ಮಾಡಬೇಕು. ಏಕೆಂದರೆ ಸರ್ವೋದಯ ಸಮಾಜದ ಆಧಾರ ಸತ್ಯ ಮತ್ತು ಅಹಿಂಸೆ; ಸಮಾಜದ ವಿವಿಧ ಕ್ಷೇತ್ರಗಳಲ್ಲಿನ ವಿಷಮತೆಯನ್ನು ನಾವು ಸತ್ಯ ಮತ್ತು ಅಹಿಂಸೆಯಿಂದಲೇ ದೂರ ಮಾಡಬೇಕು.

ವ್ಯಕ್ತಿ ತನ್ನದು ಎನಿಸಿದ್ದೆಲ್ಲವನ್ನೂ ಸಮಾಜಕ್ಕೆ ನೀಡಬೇಕು. ಆಮೇಲೆ ಸಹಜವಾಗಿರಲು ಉಳಿದ ಅಲ್ಪದರಲ್ಲಿ ಸಂತುಷ್ಟನಾಗಬೇಕು. ಅದೇ ಸರ್ವೋದಯದ ಸ್ಪಷ್ಟ ಅರ್ಥ. ಮನುಷ್ಯರಲ್ಲಿ ಅಸುರೀವೃತ್ತಿ ಇಲ್ಲದಿದ್ದರೆ ಸಾಲದು, ಉತ್ತಮ ಮಾನವೀ ಮನೋವೃತ್ತಿ ಬೇಕು, ನನಗಿಂತ ಮೊದಲು ಉಳಿದವರು, ಪಡೆಯುವುದರಲ್ಲಿ ಎಲ್ಲರಿಗಿಂತ ಹಿಂದೆ ನಾನು ಎಂಬುದು ಮಾನವೀ ವೃತ್ತಿ. ಇದು ಸರ್ವೋದಯಕ್ಕೆ ಅಗತ್ಯವಾಗಿ ಇರಬೇಕಾದ ಮನೋವೃತ್ತಿ.

ನಮಗೆ ಸರ್ವರ ಹಿತವೂ ಬೇಕು ಜೊತೆಗೆ ಸ್ವಹಿತವೂ ಬೇಕು. ಆದರೆ ಇವುಗಳಲ್ಲಿ ನಮಗೆ ಯಾವುದು ಮೊದಲು ಬೇಕು ಎಂಬುದೇ ಪ್ರಶ್ನೆ, ಮೊದಲು ನನ್ನ ಹಿತವಾಗಲಿ ಆಮೇಲೆ ಸರ್ವರದು ಎಂದರೆ ಅದು ಎಂದಿಗೂ ಸರ್ವೋದಯ ಮನೋವೃತ್ತಿ ಯಾಗುವುದಿಲ್ಲ. ಮೊದಲು ಸರ್ವರದು ಅನಂತರ ನನ್ನ ಹಿತ ಎಂದರೆ ಅದು ಸರ್ವೋದಯ ಮನೋವೃತ್ತಿ, ಮೊದಲು ಸರ್ವರ ಉದಯವಾಗಲೀ ಅದರಲ್ಲಿಯೇ ನನ್ನ ಉದಯವಿದೆ ಎಂಬುದೇ ಸರ್ವೋದಯ ಮನೋವೃತ್ತಿ, ಸರ್ವರ ಉದಯವಾಗುವ ತನಕ ನನ್ನ ಉದಯವೂ ಬೇಡ. ಒಬ್ಬ ತಾಯಿಯನ್ನು ಗಮನಿಸೋಣ "ನನ್ನ ಮಕ್ಕಳಿಗೆಲ್ಲ ನೀರು ಸಿಗುವವರೆಗೂ ನಾನು ನೀರು ಕುಡಿಯೆ" ಎಂಬ ಮನೋಭಾವ ಆ ಮಾತೆಯದು. ಕೊಡದ ತುಂಬಾ ನೀರಿದ್ದರೂ ಮಕ್ಕಳಿಗೆಲ್ಲಾ

ಹಂಚುವವರೆಗೂ ಆಕೆ ಕುಡಿಯಳು, ಅದರಲ್ಲಿಯೇ ಆಕೆಯ ತಾಯ್ತನ. ಮಕ್ಕಳ ಬಗ್ಗೆ ತಾಯಿಯ ಭಾವನೆ ಸರ್ವೋದಯ ಭಾವನೆ. ಇದರ ಅರ್ಥ ಸರ್ವರ ಹಿತಕ್ಕಾಗಿ ತ್ಯಾಗ ಮಾಡಲು ಸಿದ್ಧರಾಗಬೇಕು. ತ್ಯಾಗದಿಂದ ಆಗುವ ಬಾಹ್ಯದುಃಖದಲ್ಲಿ ಆಂತರಿಕ ಸುಖ ಅನುಭವವಾಗುತ್ತದೆ. ಇದೇ ಸರ್ವೋದಯದ ಮನೋವೃತ್ತಿ.

ಸರ್ವೋದಯದ ಆರ್ಥಿಕ ವ್ಯವಸ್ಥೆಯು ವಿಕೇಂದ್ರೀಕೃತ ಸ್ವರೂಪದ್ದು. ಕೋಟಿ, ಕೋಟಿ ಕುಟೀರಗಳಲ್ಲಿ ಲಕ್ಷ, ಲಕ್ಷ ಹಳ್ಳಿಗಳಲ್ಲಿ ಜನರ ಶ್ರಮಬಲದಿಂದ ಗ್ರಾಹಕ ವಸ್ತುಗಳು ಉತ್ಪಾದಿತವಾಗಬೇಕು. ಶ್ರಮನಿಷ್ಠ ದುಡಿಮೆಗೆ ಪೋಷಕವಾಗುವಂತಹ ತಂತ್ರಜ್ಞಾನ ಮತ್ತು ವಿಜ್ಞಾನದ ಬಳಕೆಯಾಗಬೇಕು. ತಂತ್ರಜ್ಞಾನ ಮತ್ತು ವಿಜ್ಞಾನದ ಬಳಕೆಯು ಬೃಹತ್ ಉದ್ಯಮಗಳ ಸ್ಥಾಪನೆಗೆ, ಮಾರಕಾಸ್ತ್ರಗಳ ಉತ್ಪಾದನೆಗೆ, ಬಂಡವಾಳಗಾರರ ಶಕ್ತಿಯ ವರ್ಧನೆಗೆ, ಶಸ್ತ್ರಾಸ್ತ್ರಗಳ ಬಳಕೆಗೆ ಬಳಸದೆ ಪ್ರಪಂಚದಲ್ಲಿರುವ ಜನರ ಹಸಿವು, ರೋಗರುಜಿನ, ಅಜ್ಞಾನಗಳನ್ನು ಹೋಗಲಾಡಿಸುವ ಕಲ್ಯಾಣಕಾರಿ ಸಾಧನವನ್ನಾಗಿ ಬಳಸಿಕೊಳ್ಳಬೇಕು. ಭಾರತದಂತಹ ಜನಬಾಹುಳ್ಯವುಳ್ಳ ದೇಶದಲ್ಲಿ ನಿರುದ್ಯೋಗ ಮತ್ತು ಬಡತನ ದೊಡ್ಡ ಸಮಸ್ಯೆ. ಪರಿಹಾರಕ್ಕೆ ಖಾದಿ, ಗ್ರಾಮೋದ್ಯೋಗಗಳು ಬೆಳೆಯಬೇಕು. ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಪ್ರತಿಯೊಂದು ಮನೆಯೂ ಉತ್ಪಾದನಾ ಕೇಂದ್ರವಾದಾಗ ಮಾತ್ರ ಗಾಂಧೀಜಿಯವರ ಶೋಷಣೆರಹಿತ ಮತ್ತು ಆರ್ಥಿಕ ವಿಷಮತೆರಹಿತ ಸರ್ವೋದಯ ಸಮಾಜ ನಿರ್ಮಾಣ ಸಾಧ್ಯ

ಸರ್ವೋದಯ ಧಾರ್ಮಿಕತೆಯಲ್ಲಿ ಹಿಂದೂ, ಮುಸಲ್ಮಾನ, ಕ್ರೈಸ್ತ ಮೊದಲಾದ ಮತ ಭೇದಗಳು, ಧರ್ಮಾಂಧತೆಗಳು ಅಳಿಯಬೇಕು. ಬೇರೆ ಬೇರೆ ಧರ್ಮಗಳು ಬೇರೆ ಬೇರೆ ಉಪಾಸನೆಯ ದಾರಿಗಳು ಎಂಬುದನ್ನು ತಿಳಿಯಬೇಕು. ಧರ್ಮವೆಂದರೆ ವ್ಯಕ್ತಿಯನ್ನು ಸತ್ಯಕ್ಕೆ ಬದ್ಧನನ್ನಾಗಿ ಮಾಡುವ ತತ್ವ. ಮನುಷ್ಯನು ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು, ಮೋಕ್ಷವನ್ನು ಪಡೆಯಲು ಸಾದಕವಾಗುವುದು ಧರ್ಮ. ಎಲ್ಲ ಧರ್ಮಗಳ ಗುರಿಯೂ ಒಂದೇ. ಅದು ಸತ್ಯ ಶೋಧನೆ ಮತ್ತು ಸತ್ಯದ ಸಾಕ್ಷಾತ್ಕಾರ. ದೇವರು ಒಬ್ಬನೇ, ಭಗವಂತ ಅನಂತ ಗುಣಗಳುಳ್ಳವನು, ಅನಂತ ಹೆಸರಿನಿಂದ ಕರೆಯಲಿ, ಅನಂತ ಆಕಾರದಲ್ಲಿ ಭಾವಿಸಲಿ, ಅನಂತ ಪ್ರಕಾರಗಳಲ್ಲಿ ಪೂಜಿಸಲಿ, ಪ್ರಾರ್ಥಿಸಲಿ, ಉತ್ಸವ ನಡೆಸಲಿ ಅದಕ್ಕೇಕೆ ಮಾತ್ಸರ್ಯ ? ಅವರವರ ಧರ್ಮಗಳ ತತ್ತ್ವಗಳನುಸಾರವಾಗಿ ಜೀವನ ನಡೆಸಲಿ ಎಂಬ ಸರ್ವಧರ್ಮ ಸಮಭಾವವನ್ನು ಎಲ್ಲರೂ ಬೆಳೆಸಿಕೊಂಡರೆ ಜಗತ್ತಿನಲ್ಲಿ ಸಹಬಾಳ್ವೆ, ಸಹಿಷ್ಣುತೆ, ಹೊಂದಾಣಿಕೆ, ಸಾಮರಸ್ಯ, ಶಾಂತಿ ಇವು ಸಿದ್ಧಿಸಲ್ಪಟ್ಟಾಗ ಸರ್ವೋದಯ ಸಮಾಜ ನಿರ್ಮಿಸಲ್ಪಡುವುದು.

ಸರ್ವೋದಯ ಶಿಕ್ಷಣ ಪದ್ಧತಿಯಲ್ಲಿ ಪ್ರತಿಯೊಬ್ಬನ ಜೀವನವೂ ಹಸನಾಗಬೇಕು. ಸಮಾಜ ಶುಭ್ರವಾಗಬೇಕು. ಈ ಗುರಿಯ ಸಾಧನೆಯಲ್ಲಿ ಶಿಕ್ಷಣದ ಪಾತ್ರ

ಅಮೂಲ್ಯವಾದದ್ದು. ಶಿಕ್ಷಣದ ಮೂಲ ಉದ್ದೇಶ ಚಾರಿತ್ರ್ಯ ನಿರ್ಮಾಣ. ಅದಕ್ಕೆ ಗಾಂಧೀಜಿ ವಿಶೇಷ ಆದ್ಯತೆ ಕೊಟ್ಟು ೧೯೩೭ರಲ್ಲಿ ಮೂಲ ಶಿಕ್ಷಣವನ್ನು ಜಾರಿಗೆ ತಂದರು. ಜ್ಞಾನ ಮತ್ತು ಕೌಶಲ್ಯವನ್ನು ಕಲಿಸಿ ಸಮಾನತೆಯ ಮನೋಧರ್ಮವನ್ನು ಮೂಡಿಸುವ ಶಿಕ್ಷಣ ಪದ್ಧತಿ ಜಾರಿಗೆ ತರಬೇಕು. ಸರ್ವೋದಯ ಸಮಾಜ ರಚನೆಗೆ ಒಳ್ಳೆಯ ಶಿಕ್ಷಣವೇ ಬುನಾದಿ.

ಜೀವನವನ್ನು ಸಮಗ್ರವಾಗಿ ನೋಡಿ ವ್ಯಕ್ತಿ ಹಾಗೂ ಸಮಾಜದ ಸರ್ವಾಂಗೀಣ ವಿಕಾಸಕ್ಕೆ ಮಾರ್ಗ ತೋರುವ ಸರ್ವೋದಯ ಶಿಕ್ಷಣ ಸಿದ್ಧಾಂತ ಮಹತ್ವ ಪೂರ್ಣ ಸಿದ್ಧಾಂತವಾಗಿದೆ.

ಉಪಸಂಹಾರ

ಗಾಂಧೀಜಿಯವರು ವಿಶ್ವಶಾಂತಿಗಾಗಿ ನೀಡಿದ ಜೀವಂತ ವಿಚಾರ ಸರ್ವೋದಯ ಸಿದ್ಧಾಂತ ಸಮಾಜವು ಸತ್ಯ-ಅಹಿಂಸೆಯ ಆಧಾರದ ಮೇಲೆ ನಿಲ್ಲಬೇಕು. ಸರ್ವೋದಯವು ಭಾರತದ ಸಮಸ್ತ ಬೆಳೆವಣಿಗೆಯ ಪ್ರಗತಿಗೆ ಸಹಾಯಕವಾಗಿದೆ. ಇದು ಅಹಿಂಸಾತ್ಮಕ ಕ್ರಾಂತಿಗೆ ನೆರವಾಗಬಲ್ಲದು. ಸರ್ವೋದಯ ಸಿದ್ಧಾಂತವು ಕ್ರಿಯಾತ್ಮಕ ರೀತಿಯಲ್ಲಿ ಆಂತರಿಕ ಪರಿವರ್ತನೆಗೆ ನೆರವಾಗುತ್ತದೆ. ಸರ್ವೋದಯವು ಅನ್ಯಾಯ ಮತ್ತು ಕೆಡಕನ್ನು ಶ್ರೇಷ್ಠ ಮಾನವೀಯ ಮೌಲ್ಯಗಳಿಗೆ ಚ್ಯುತಿಬಾರದ ಹಾಗೆ ತಡೆಯುವ ಒಂದು ಅತ್ಯುತ್ತಮ ವಿಧಾನ. ಸರ್ವೋದಯ ಸಿದ್ಧಾಂತವು ಭಾರತದಲ್ಲಿ ನಡೆಸಿದ ಅಹಿಂಸಾತ್ಮಕ ಕ್ರಾಂತಿಯ ಪ್ರಯತ್ನಗಳು ಹೊಸ ಜಗತ್ತಿನ ವ್ಯವಸ್ಥೆಯ ದೆಸೆಯಲ್ಲಿ ಒಂದು ಮಹತ್ತರ ಕೊಡುಗೆಯಾಗಿದೆ. ಸಾಮಾಜಿಕ ಅಸಮಾನತೆಯ ನಿರ್ಮೂಲನೆ ಸರ್ವೋದಯದ ಮೂಲತತ್ವ, ಸರ್ವೋದಯಕ್ಕೆ ಮೂಲ ಸಮಗ್ರತೆ, ಮಾನವೀಯ ಸಿದ್ಧಾಂತ ಇದು ನಮ್ಮನ್ನು ವಿಶ್ವಮಾನವತ್ವ ವಿಶ್ವಪ್ರೇಮ, ವಿಶ್ವಶಾಂತಿಗೆ ಕೊಂಡೊಯ್ಯುವ ದಾರಿದೀಪ.

ಪರಾಮರ್ಶಿಸಿದ ಗ್ರಂಥಗಳು

೧. ಪಾಶ್ಚಿಮಾತ್ಯ ಹಾಗೂ ಭಾರತೀಯ ಸಾಮಾಜಿಕ ಚಿಂತನೆ – ಭೈರಪ್ಪ – ೧೯೯೨
೨. ಭಾರತೀಯ ಸಾಮಾಜಿಕ ಸಂಸ್ಥೆಗಳು – ಎಂ. ನಂಜಮ್ಮಣ್ಣಿ – ೧೯೮೨
೩. ಆಚಾರ್ಯ ವಿನೋಬಾರವರ – ಸರ್ವೋದಯ ವಿಚಾರ – ಅನುವಾದಕರು ಸಿದ್ಧವನಹಳ್ಳಿ ಕೃಷ್ಣಶರ್ಮ, ಅ. ರಾಮಮೂರ್ತಿ
೪. ಗಾಂಧಿ ಚಿಂತನೆ – ಪ್ರೊ. ಬಿ.ಆರ್. ಪ್ರಾಣೇಶರಾವ್ – ೧೯೯೬
೫. ಸರ್ವೋದಯ – ಗಾಂಧೀಜಿ – ಅನುವಾದ – ಸಿದ್ಧವನಹಳ್ಳಿ ಕೃಷ್ಣಶರ್ಮ–೧೯೯೩.

3

೯. ಕನ್ನಡ ಬೀರೆ – ದೈವತ್ವಕ್ಕೇರಿದ ಸುಬೇದಾರ

–ಲಕ್ಷ್ಮಿ ಜಿ. ಪ್ರಸಾದ್

ತುಳುನಾಡು ವಿಶಿಷ್ಟ ಸಂಸ್ಕೃತಿಯ ಬೀಡು. ಭೂತಾರಾಧನೆ, ತುಳುನಾಡಿನ ಆರಾಧನಾ ಸಂಪ್ರದಾಯವಾಗಿದೆ. ಸುಮಾರು ನಾನ್ನೂರು ಭೂತಗಳ ಹೆಸರನ್ನು ಡಾ. ಚಿನ್ನಪ್ಪಗೌಡ, ಡಾ. ವಿವೇಕ ರೈ ಮೊದಲಾದ ವಿದ್ವಾಂಸರು ಪಟ್ಟಿ ಮಾಡಿದ್ದಾರೆ. ಆದರೆ ಈ ಪಟ್ಟಿಯಲ್ಲಿ ದಾಖಲಾಗದ ಅನೇಕ ದೈವಗಳೂ ಇವೆ. ಇಂತಹ ದೈವಗಳಲ್ಲಿ 'ಕನ್ನಡ ಬೀರೆ' ಎಂಬುದು ಒಂದು ಭೂತ.

ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣದ ಗಡಿಯಾಗಿ ಗುರುತಿಸಲ್ಪಟ್ಟಿರುವ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಕಾಸರಗೋಡು ಜಿಲ್ಲೆಗೆ ಸೇರಿದ ಮೀಯಪದವು, ಮದಂಗಲ್ಲು ಬೆಜ್ಜ, ಭಟ್ಟ ಪದವು ಮುಂತಾದ ಪ್ರದೇಶಗಳಲ್ಲಿ 'ಕನ್ನಡ ಬೀರ' ದೈವಕ್ಕೆ ಆರಾಧನೆ ಇದೆ. ಧೂಮಾವತಿ ದೈವಕ್ಕೆ ಆರಾಧನೆ ಮಾಡುವ ಸಂದರ್ಭದಲ್ಲಿ ಈ ದೈವತ್ವ ಆರಾಧನೆ ಮಾಡುತ್ತಾರೆ. ಈ ಪ್ರದೇಶದಲ್ಲಿ ಈತನನ್ನು ಧೂಮಾವತಿ ದೈವದ ಬಂಟನೆಂದು ಪರಿಗಣಿಸುತ್ತಾರೆ.

'ಕನ್ನಡ ಬೀರೆ' ಎಂದರೆ ಕನ್ನಡ ವೀರ ಎಂದರ್ಥ. ಕನ್ನಡ ಬೀರನಿಗೆ ಸಂಬಂಧಿಸಿ ಒಂದು ಐತಿಹ್ಯ ಪ್ರಚಲಿತವಿದೆ. ಮೀಯಪದವಿನ ಸಮೀಪದ 'ಪೊಳ್ಳ ಕಜೆ' ಎಂಬುದು ದುರ್ಗಾದೇವಿಯ ಆರಾಧನೆಯ ಸ್ಥಳ. ಪೊಳ್ಳಕಜೆ ಕುಟುಂಬದಲ್ಲಿ ಈಗ ಹಿರಿಯರಾಗಿರುವ ಶ್ರೀ ಗೋವಿಂದಭಟ್ಟರು ದುರ್ಗೆಯ ಆರಾಧನೆಯನ್ನು ನಡೆಸುತ್ತಿದ್ದಾರೆ. ಈ ಹಿಂದೆ ಅಂದರೆ ಸುಮಾರು ೭೫–೧೦೦ ವರ್ಷಗಳ ಮೊದಲು ಈ ಕುಟುಂಬದವರ ಜಾಗವನ್ನು ಜಪ್ತಿ ಮಾಡಲು ಅಥವಾ ಜಪ್ತಿ ನೋಟೀಸನ್ನು ತಲುಪಿಸಲು ಇಬ್ಬರು ಸುಬೇದಾರರನ್ನು ಬ್ರಿಟಿಷ್ ಅಧಿಕಾರಿಗಳು ಕಳುಹಿಸಿದರಂತೆ. ಆ ಸುಬೇದಾರರಲ್ಲಿ ಒಬ್ಬ ಕನ್ನಡ ಮಾತನಾಡುವ ಕನ್ನಡಿಗನಾಗಿದ್ದ. ಇವರಿಬ್ಬರು ಪೊಳ್ಳ ಕಜೆಗೆ ತಲುಪುವ ವೇಳೆಯಲ್ಲಿ ಮನೆಯ ಯಜಮಾನರು ದೇವಿಗೆ ಪೂಜೆ ಮಾಡುತ್ತಿದ್ದರು. ಯಜಮಾನರ ಹೆಂಡತಿ ಬಂದು 'ಜಪ್ತಿ ಮಾಡಲು ಸುಬೇದಾರರು ಬಂದಿರುವ ವಿಷಯವನ್ನು ತಿಳಿಸುತ್ತಾರೆ. ಆಗ ಅವರು ಆಯಿತು ಎಲ್ಲ ದೇವಿಯ

ಇಚ್ಛೆ ಇದ್ದಂತಾಗಲಿ. ಅವರಿಗೆ ಊಟ ಬಡಿಸು' ಎನ್ನುತ್ತಾರೆ. ಅಂತೆಯೇ ಅವರು ಬಂದ ಆ ಇಬ್ಬರು ಸುಬೇದಾರರಿಗೆ ಎಲೆ ಹಾಕಿ ಅನ್ನ ಬಡಿಸಿ ಒಳ ಹೋಗಿ ಹೊರಬರುವಷ್ಟರಲ್ಲಿ ಒಬ್ಬ ಸುಬೇದಾರ ಮಾಯಕವಾಗುತ್ತಾನೆ. ಇದನ್ನು ನೋಡಿ ಹೆದರಿದ ಇನ್ನೊಬ್ಬ ಸುಬೇದಾರ ಓಡಿ ಹೋಗುತ್ತಾನೆ. ಹೀಗೆ ಮಾಯಕವಾದ ಕನ್ನಡಿಗ ಸುಬೇದಾರನೇ 'ಕನ್ನಡ ಬೀರ' ಎಂಬ ದೈವವಾಗಿ ಆರಾಧನೆ ಪಡೆಯುತ್ತಾನೆ.



ಚಿತ್ರ-೧, ಕನ್ನಡ ಬೀರ ಭೂತ

'ಕನ್ನಡ ಬೀರ' ಭೂತದ ವೇಷ-ಭೂಷಣಗಳು ಇತರ ಭೂತಗಳಿಗಿಂತ ವಿಶಿಷ್ಟವಾಗಿದೆ. 'ಕನ್ನಡ ಬೀರ'ನಿಗೆ ಇತರ ದೈವಗಳಂತೆ ಅಡಿಕೆ ಹಾಳೆಯ ಕಾವಿ ಪಟ್ಟ, ತೆಂಗಿನ ತಿರಿಯ ಅಲಂಕಾರವಿರುವುದಿಲ್ಲ. ಕೆಂಪು ಅಂಗಿ, ಬಿಳಿ ಪಂಚೆಯ ಕಚ್ಚೆ ಹಾಕಿದ ಸರಳ ವೇಷ ಈತನದು. ತಲೆಗೆ ಬಿಳಿ ಬಟ್ಟೆಯ ವಿಶಿಷ್ಟ ಮುಂಡಾಸು ಇದೆ. ಮುಖಕ್ಕೆ ಬಿಳಿ ಹಳದಿ ಬಣ್ಣವನ್ನು ಹಚ್ಚುತ್ತಾರೆ. ಕಪ್ಪು ಬಣ್ಣ ಹಾಕುವುದಿಲ್ಲ. ಇದು ಆತ ಕೆಳವರ್ಗಕ್ಕೆ ಸೇರಿದವನಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ (ಚಿತ್ರ-೧). ಈತನಿಗೆ ಆಯುಧ ಕಗ್ತಲೆ, ಕೈಗೆ ಚಾಮರ ಇರುತ್ತದೆ.

ಪೊಳ್ಳ ಕಜೆ ಮನೆಯ ಸಮೀಪ ಹರಿಯುವ ಸಣ್ಣ ತೊರೆಯೊಂದರ ಬದಿಯಲ್ಲಿ ಕನ್ನಡ ಬೀರನ ಬನವಿದೆ. ಈ ಬನದಲ್ಲಿ ಒಂದು ಕಲ್ಲು ಇದ್ದು, ಇದನ್ನು ಕನ್ನಡ ಬೀರನ ಕಲ್ಲು ಎನ್ನುತ್ತಾರೆ (ಚಿತ್ರ-೨). ಕನ್ನಡ ಬೀರನಿಗೆ ಈ ಬನದಲ್ಲಿ ಪ್ರತಿವರ್ಷ ತಂಬುಲ ಮಾಡುತ್ತಾರೆ. ಕನ್ನಡ ಬೀರನ ಬನವಿರುವ ಪ್ರದೇಶ ಬೆಣ್ಣೆ ಮನೆ

ಗೋಪಾಲಕೃಷ್ಣ ಭಟ್ಟರಿಗೆ ಸೇರಿದ್ದು, ಪ್ರತಿ ವರ್ಷ ಕನ್ನಡ ಬೀರನಿಗೆ ತಂಬುಲವನ್ನು ತಪ್ಪದೆ ನಡೆಸಿಕೊಂಡು ಬರುತ್ತಿದ್ದಾರೆ.



ಚಿತ್ರ-೨. ಕನ್ನಡ ಬೀರನ ಕಲ್ಲು

ತುಳುನಾಡಿನಲ್ಲಿ ಅಸಾಮಾನ್ಯವೀರರು ಅಸಹಜ ಮರಣವನ್ನಪ್ಪಿದಾಗ ದೈವತ್ವಕ್ಕೇರಿ ಆರಾಧಿಸಲ್ಪಡುವುದು ಸಾಮಾನ್ಯ ವಿಚಾರವಾಗಿದೆ. ಆದರೆ ಸಾಮಾನ್ಯ ಸುಬೇದಾರನೊಬ್ಬ ದೈವತ್ವಕ್ಕೇರಿ 'ಕನ್ನಡ ಬೀರ'ನೆಂಬ ಹೆಸರಿನಲ್ಲಿ ಆರಾಧನೆ ಪಡೆಯುತ್ತಿರುವುದು ಬಹಳ ವಿಶೇಷವಾಗಿದೆ. ಯಾವುದಾದರೊಂದು ದೈವದ ಆಗ್ರಹಕ್ಕೊಳಗಾಗಿ ಮಾಯವಾಗುವವರು ಆ ದೈವದ ಸೇರಿಗೆಯಲ್ಲಿ ಸಲ್ಲುತ್ತಾರೆ. ಅಂತೆಯೇ 'ಕನ್ನಡ ಬೀರ' ಕೂಡ 'ತನ್ನ ಭಕ್ತನ ಮನೆಯ ಜಪ್ತಿಗೆ ಬಂದದ್ದಕ್ಕಾಗಿ ಕೋಪಗೊಂಡ ದುರ್ಗೆಯ ಆಗ್ರಹಕ್ಕೆ ತುತ್ತಾಗಿ ಮಾಯವಾದ ಕನ್ನಡ ಸುಬೇದಾರ" ಧೂಮಾವತಿಯ ಸೇರಿಗೆಯಲ್ಲಿ ಸಂದಿರಬಹುದು ಎಂದು ಕಲ್ಪಿಸಬಹುದು.

ಈ ಪ್ರದೇಶದಲ್ಲಿ ಧೂಮಾವತಿ ದೈವದ ನೇಮದಂದು ಕನ್ನಡ ಬೀರನಲ್ಲದೆ ಕುಲಪೆರ್ಗಡೆ ಎಂಬ ಒಂದು ದೈವಕ್ಕೂ ಆರಾಧನೆ ಇದೆ. ಕೋಳ್ಯೂರು ದೇವರ ಕೆರೆಯ ಪಕ್ಕದಲ್ಲಿ ಕುಲಪೆರ್ಗಡೆ ದೈವಕ್ಕೆ ಸಣ್ಣ ಮಾಡವಿದೆ. ದೈವದ ಪ್ರತೀಕವಾಗಿ ಒಂದು ಕಲ್ಲು ಇದೆ. ಇಲ್ಲಿ ಕೂಡ ಪ್ರತಿ ವರ್ಷ ತಂಬುಲ ಮಾಡಿ ಆರಾಧಿಸುತ್ತಾರೆ.

೧೦. ಲೋಕಪಾವನಿ ನದಿ ತೀರದ ಪ್ರಾಚ್ಯಾವಶೇಷಗಳು – ಒಂದು ಅಧ್ಯಯನ

–ಡಾ. ಎಸ್. ಜಿ. ರಾಮದಾಸರೆಡ್ಡಿ

ಮನುಕುಲದ ಇತಿಹಾಸ ಹಾಗೂ ಸಂಸ್ಕೃತಿಯ ಅಧ್ಯಯನ ನಡೆಸುವವರಿಗೆ ಪರಿಸರದ ಪ್ರಾಮುಖ್ಯತೆ ಬಗ್ಗೆ ಅರಿವು ಉಂಟಾಗುತ್ತದೆ. ಭೌಗೋಳಿಕವಾಗಿ ವಿವಿಧ ಪ್ರದೇಶಗಳಲ್ಲಿ ನೆಲೆಸಿರುವ ಮಾನವರು ತಮ್ಮದೇ ಆದ ವೈಶಿಷ್ಟ್ಯತೆಯನ್ನು ಹೊಂದಿದ್ದುದು ಗೋಚರವಾಗುತ್ತದೆ. ನದಿಯ ತೀರಗಳಲ್ಲಿ, ಒಳ ಪ್ರದೇಶಗಳಲ್ಲಿ ವಾಸಿಸಲಾರಂಭಿಸಿದ ಬಗ್ಗೆ ಪ್ರಾಚೀನ ನೆಲೆಗಳು ಮಾಹಿತಿ ನೀಡುತ್ತಿವೆ.

ಪಂಚನದಿಗಳ[೧] ನಾಡೆಂಬ ಹೆಗ್ಗಳಿಕೆಗೆ ಪಾತ್ರವಾದ ಮಂಡ್ಯ ಜಿಲ್ಲೆಯಲ್ಲಿ ಕಾವೇರಿ, ಹೇಮಾವತಿ, ಶಿಂಷಾ, ವೀರವೈಷ್ಣವಿ, ಲೋಕಪಾವನಿ ನದಿಗಳು ಹರಿಯುತ್ತಿವೆ. ಲೋಕಪಾವನಿ[೨] ನದಿಯು ನಾಗಮಂಗಲ ನಗರದಿಂದ ಪಶ್ಚಿಮಕ್ಕೆ ಪಡುವಲ ಪಟ್ಟಣದ ಹತ್ತಿರ ಇರುವ ಬಸವನ ಬೆಟ್ಟದಲ್ಲಿ ಹುಟ್ಟಿ, ಬೋಗಾದಿಯ[೩] ಸುತ್ತಮುತ್ತಲ ಪ್ರದೇಶದಿಂದ ಹರಿದು ಬರುವ ನೀರು ಹೂಣಕೆರೆ (ಹೊನ್ನುಕೆರೆ), ಚಿಣ್ಯ, ಮಾಚಲ ಘಟ್ಟ, ಚಿಕ್ಕಗಂಗವಾಡಿ, ಕಾಳೇನಹಳ್ಳಿ, ಹುಲಿಕೆರೆ, ಸುಂಕತೊಣ್ಣೂರು, ಮೇಲುಕೋಟೆ, ನುಗ್ಗಿಹಳ್ಳಿ, ಕುಂತಿಬೆಟ್ಟ, ಚಿಕ್ಕಮರಳಿ ಇತರ ಹಳ್ಳಿಗಳ ಮುಖಾಂತರ ಹರಿಯುವಾಗ, ಮೋತಿತಲಾಬ್‌ನಿಂದ ಹರಿಯುವ ಹಳ್ಳವನ್ನು ಕೂಡಿಕೊಂಡು ಶ್ರೀರಂಗಪಟ್ಟಣ ತಾಲ್ಲೂಕು ಇತಿಹಾಸ ಪ್ರಸಿದ್ಧ ಕರಿಘಟ್ಟದ[೪] ಹತ್ತಿರ ಸಂಗಮದಲ್ಲಿ ಕಾವೇರಿ ನದಿ ಜೊತೆ ಸೇರುತ್ತದೆ.

ಜಿಲ್ಲೆಯು ಭಾರತದ ಪರ್ಯಾಯ ದ್ವೀಪದ[೫] ಒಂದು ಭಾಗವಾಗಿದ್ದು, ಆರ್ಕಿಯನ್ ಕಲ್ಪಕ್ಕೆ ಸೇರಿದ್ದು, ಧಾರವಾಡ ಶಿಲಾಸ್ತೋಮ ಮತ್ತು ಕ್ಲೋಸ್‌ಪೇಟೆ ಶಿಲಾಸಮೂಹದ ಭಾಗವಾಗಿದೆ. ನದಿಯ ಪರಿಸರವು ಗ್ರಾನೈಟ್, ನೈಸು, ಶಿಸ್ಟ್‌ಗಳ ಜೊತೆಗೆ ಕ್ವಾರ್ಟ್ಸೈಟ್ ಮತ್ತು ಸುಣ್ಣಶಿಲೆಯಂತಹ ಇತರ ಶಿಲಾ ವಿಧಗಳು ಕಾಣಸಿಗುತ್ತವೆ. ನದಿ ಪರಿಸರವು ಬಹುತೇಕ ಸಮತಟ್ಟಾದ[೬] ಬಯಲು ಪ್ರದೇಶವಾಗಿದ್ದು, ಅಲ್ಲಲ್ಲಿ ಆದಿಚುಂಚನಗಿರಿ, ಬೇಬಿಬೆಟ್ಟ, ಬೆಳ್ಳಿಬೆಟ್ಟ, ಸೀತಾಬೆಟ್ಟ, ಬಸವನಬೆಟ್ಟ, ಹಾಲತಿಬೆಟ್ಟ, ಹದ್ದಿನಕಲ್ಲು

ಹನುಮಂತರಾಯನ ಬೆಟ್ಟ, ಕುಂತಿಬೆಟ್ಟ ಮೊದಲಾದ ಬೆಟ್ಟಗುಡ್ಡಗಳನ್ನು ಹೊಂದಿದ್ದು[೭] ಸಮುದ್ರಮಟ್ಟದಿಂದ ೭೬೦ ರಿಂದ ೯೨೦ ಮೀಟರುಗಳಷ್ಟು ಎತ್ತರದಲ್ಲಿದೆ.

ನದಿಭೂಭಾಗವು ಬಹುತೇಕ ಭೂಕಂಪ ಮುಕ್ತವಲಯವಾಗಿದ್ದು[೮] ಅದರಲ್ಲಿ ೧೯೬೭, ೧೯೬೮, ೧೯೬೯, ೧೯೭೦, ೧೯೭೧ರವರೆಗೆ ಅಲ್ಪ ಪ್ರಮಾಣದಲ್ಲಿ ಆದ ಬಗ್ಗೆ ವರದಿಯಾಗಿದ್ದರೆ, ೧೯೭೨ರಲ್ಲಿ ೪.೨ ರಿಂದ ೪.೫ರ ಪ್ರಮಾಣದಲ್ಲಿ ದೊಡ್ಡೇಗೌಡನಕೊಪ್ಪಲಿನಲ್ಲಿ ಸಂಭವಿಸಿದ ಭೂಕಂಪ ಪ್ರಮುಖವಾಗಿದ್ದು ಯಾವುದೇ ಸಾವುನೋವು ಆದ ಬಗ್ಗೆ ವರದಿಯಾಗಿಲ್ಲ. ಈ ಭಾಗದ ಉಷ್ಣತೆ ೩೯° ಸೆಲ್ಸಿಯಸ್ ನಿಂದ ೧೬° ಸೆಲ್ಸಿಯಸ್ ಇರುತ್ತದೆ.

ಜಿಲ್ಲೆಯಲ್ಲಿ ವಾರ್ಷಿಕ ಸರಾಸರಿ ವಾಡಿಕೆ ಮಳೆಯ ಪ್ರಮಾಣ ೬೯೧.೨ ಮಿ.ಮೀ. ಆದರೆ ನದಿ ತೀರದ ನಾಗಮಂಗಲ, ಪಾಂಡವಪುರ, ಶ್ರೀರಂಗಪಟ್ಟಣ ತಾಲ್ಲೂಕುಗಳ ನದಿತೀರದ ಭೂಭಾಗದಲ್ಲಿ ೨೪ ಗಂಟೆಗಳಲ್ಲಿ ಅತಿಹೆಚ್ಚು ಮಳೆ ಕ್ರಮವಾಗಿ ೧೯೨೫ ನವೆಂಬರ್ ೧ ರಂದು ೨೦೦.೭ ಮಿ.ಮೀ. ಆದರೆ, ೧೯೫೧ ಸೆಪ್ಟೆಂಬರ್ ೨೮ರಂದು ೧೧೨.೫ ಮಿ.ಮೀ. ಆದರೆ, ೧೯೫೭ ಮೇ ೨೨ ರಂದು ೧೬೭.೬ ಮಿ.ಮೀ. ಮಳೆ ಆದ ಬಗ್ಗೆ ವರದಿಯಾಗಿದೆ.[೯] ಈ ಪರಿಸರವು ಕೃಷಿಯೋಗ್ಯ ಭೂಮಿಯ ಬಹುಪಾಲನ್ನು ಒಳಗೊಂಡಿರುವ ಬಯಲು ಪ್ರದೇಶ ಅಡಿಗಡಿಗೆ ಬರಗಾಲಕ್ಕೆ ಈಡಾಗುತ್ತಿದೆ. ಈ ಭಾಗದಲ್ಲಿ ಅತ್ಯಂತ ದಾಖಲೆ ಪಡೆದಿರುವ ಮಳೆಯ ವೈಫಲ್ಯ ಕ್ರಿ.ಶ. ೧೩೯೬ರಲ್ಲಿ ಆರಂಭವಾಗಿ ಇಡೀ ದಕ್ಷಿಣ ಭಾರತದಲ್ಲೇ ಆವರಿಸಿ ೧೨ ವರ್ಷ ಇತ್ತೆಂದು ದಾಖಲಾಗಿದೆ. ೧೬ನೇ ಶತಮಾನದ ಕೊನೆಯಲ್ಲಿ 'ಸುಣ್ಣದಕ್ಕಿ ಬರ'[೧೦] ಬಹಳ ಭೀಕರವಾಗಿದ್ದು ಸುಮಾರು ೭ ವರ್ಷ ಸತತವಾಗಿ ಮಳೆ ಬೀಳದೆ ಗಿಡ, ಮರ, ಬಳ್ಳಿ, ತೋಟಗಳೆಲ್ಲ ನಾಶವಾಗಿ ಪ್ರಾಣಿ, ಪಕ್ಷಿಗಳಿಗೆ ಆಹಾರ, ನೀರು, ನೆರಳಿಲ್ಲದೆ ಸತ್ತು ಜನರು ವಿಧಿಯಿಲ್ಲದೆ ಬಿದಿರಕ್ಕಿ ಮತ್ತು ಕತ್ತಾಳೆ ಗೆಡ್ಡೆಗಳನ್ನು ತಿಂದು ಜೀವನ ಸಾಗಿಸುತ್ತಿದ್ದರು. ಕ್ರಿ.ಶ. ೧೭೯ರಲ್ಲಿ ಕಾಲರಾ, ಪ್ಲೇಗು ಬಂದು ೧,೫೦,೦೦೦ ಇದ್ದ ಜನಸಂಖ್ಯೆ ಕ್ರಿ.ಶ. ೧೮೦೦ರ ವೇಳೆಗೆ ಮೈಸೂರು ಸಂಸ್ಥಾನದಲ್ಲಿ ೩೨,೦೦೦ಕ್ಕೆ ಇಳಿಯಿತೆಂದು ಬುಕನ್ನನ್ ವಿವರಿಸಿದ್ದಾನೆ. ೧೮೭೯ರಲ್ಲಿ ಸಂಭವಿಸಿದ ಬರಗಾಲ ನಾಗಮಂಗಲದಲ್ಲಿ ಅಡಿಕೆ ಮರ ನಾಶವಾಗಿ ತೆಂಗು ಮಾತ್ರ ಉಳಿದಿತ್ತೆಂದು ಹಯವದನರಾವ್ ಉಲ್ಲೇಖಿಸಿದ್ದಾರೆ. ನಾಗಮಂಗಲ ತಾಲ್ಲೂಕಿನಲ್ಲಿ ೧೮೯೧-೯೨, ೧೮೯೮-೯೯, ೧೯೦೧-೦೨, ೧೯೦೮-೦೯ರಲ್ಲಿ ಮಳೆಯಿಲ್ಲದೆ ನದಿ ಪರಿಸರದ ಭೂಭಾಗವು 'ಮಳೆಯ ನೆರಳಿನ ಭೂಭಾಗವಾಗಿ' ಮಳೆಯಿಲ್ಲದೆ ಸದಾ ಸಂಕಷ್ಟಕ್ಕೆ ಈಡಾಗುತ್ತಿರುತ್ತದೆ. ಇದು ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮ ಬೀರಿತ್ತು.

ಪಾಂಡವಪುರ ತಾಲ್ಲೂಕು ಪಶ್ಚಿಮ ದಿಕ್ಕಿನಲ್ಲಿ ಹರಿಯುವ ಲೋಕಪಾವನಿ ನದಿಗೆ ಹರಿದು ಹೋಗುವ ಹಳ್ಳದ ದಂಡೆಗಳಲ್ಲಿ ಹಾಗೂ ಸುತ್ತ ಮುತ್ತಲ ನೆಲೆಗಳಲ್ಲಿ ಅಂತ್ಯ ಹಳೇಶಿಲಾಯುಗ, ನವಶಿಲಾಯುಗ ಸಂಸ್ಕೃತಿ, ಬೃಹತ್ ಶಿಲಾಯುಗ ಸಂಸ್ಕೃತಿ ಮತ್ತು ಇತಿಹಾಸ ಆರಂಭ ಕಾಲದ ಅವಶೇಷಗಳು, ವೀರಮಾಸ್ತಿ ಕಲ್ಲುಗಳು ಇತರೇ ಅವಶೇಷಗಳು ದೊರಕಿವೆ. ಇತಿಹಾಸ ಪ್ರಸಿದ್ಧ 'ಕುಂತಿ ಬೆಟ್ಟವು' ಸಮುದ್ರಮಟ್ಟದಿಂದ ೨೮೮೨ ಅಡಿಗಳಷ್ಟು ಎತ್ತರದಲ್ಲಿದ್ದು ಲೋಕಪಾವನಿ ನದಿ ದಡದಲ್ಲಿದೆ. ಬೆಟ್ಟದಿಂದ ದಕ್ಷಿಣಕ್ಕೆ ಇಳಿಜಾರಾದ ಸಮತಟ್ಟಾದ ಭೂಭಾಗದಲ್ಲಿ ಚಿಕ್ಕಾಡೆ ಗ್ರಾಮದ ನೆಲೆ, ಉತ್ತರಕ್ಕೆ ಹಿರೇಮರಳಿ ಗ್ರಾಮದ ನೆಲೆ, ಕುಂತಿಬೆಟ್ಟ ಮತ್ತು ಒನಕೆ ಬೆಟ್ಟದ ಮಧ್ಯೆ ಜೀರ್ಣೋದ್ಧಾರಗೊಳ್ಳುತ್ತಿರುವ ಅನ್ನಪೂರ್ಣೇಶ್ವರಿ ದೇವಸ್ಥಾನದ ತಳಪಾಯದ ಭೂಭಾಗದ ನೆಲೆ ಹಾಗೂ ಕುಂತಿಬೆಟ್ಟದ ಮೇಲೆ ಭೀಮನಪಾದದ ಸುತ್ತಮುತ್ತ ಸುಮಾರು ೧೦೦೦ ಅಡಿ ಎತ್ತರದಲ್ಲಿ ಸಮತಟ್ಟಾದ ಒಂದು ಹೆಕ್ಟೇರು ಭೂಭಾಗದಲ್ಲಿ ಹಾಗೂ ನೈಸರ್ಗಿಕ ಗುಹೆಗಳಲ್ಲಿ, ಕಲ್ಲಾಸರೆಗಳಲ್ಲಿ ಭಾರಿ ಅವಶೇಷಗಳು ದೊರಕಿವೆ. ಈ ನೆಲೆಗಳು ಪೂರ್ವಕ್ಕೆ ಪಾಂಡವಪುರ ತಾಲ್ಲೂಕು, ಪಶ್ಚಿಮಕ್ಕೆ ಮಂಡ್ಯ ತಾಲ್ಲೂಕು, ಉತ್ತರಕ್ಕೆ ನಾಗಮಂಗಲ, ದಕ್ಷಿಣಕ್ಕೆ ಶ್ರೀರಂಗಪಟ್ಟಣ ತಾಲ್ಲೂಕುಗಳಿಂದ ಸುತ್ತುವರಿದಿದ್ದು, ಪಾಂಡವಪುರದ ಪಶ್ಚಿಮಕ್ಕೆ ೨ ಕಿ. ಮೀ. ದೂರದಲ್ಲಿದೆ. ಕೆಂಪು, ಮರಳು ಮಿಶ್ರಿತ ಬೂದಿಮಣ್ಣಿನಿಂದ ಕೂಡಿದ ಭೂಭಾಗದಲ್ಲಿ ನೆಲೆಗಳಿವೆ.

ದಿನಾಂಕ ೨೭-೬-೨೦೦೮ರಂದು ಸರ್ಕಾರಿ ಪ್ರಥಮದರ್ಜೆ ಕಾಲೇಜು, ಪಾಂಡವಪುರ, ಮಂಡ್ಯ ಜಿಲ್ಲೆ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಬಿ.ಎಸ್. ಮಂಜುನಾಥ್, ವಿದ್ಯಾರ್ಥಿಗಳಾದ ಚನ್ನಮಾದೇಗೌಡ, ಸಿ.ಡಿ. ಪ್ರತಾಪ, ಚನ್ನಕೇಶವ, ಮಂಜು, ಸುರೇಶ, ಚಿಕ್ಕಾಡೆ ಗ್ರಾಮದ ಹೆಚ್. ಗಿರಿರಾಜು ಅವರ ಸಹಕಾರದೊಂದಿಗೆ ಚಿಕ್ಕಾಡೆ ಗ್ರಾಮದಿಂದ ಕುಂತಿ ಬೆಟ್ಟಕ್ಕೆ ಹೋಗುವ ದಾರಿಯ ಪಕ್ಕದಲ್ಲಿ, ಬೆಟ್ಟದ ಇಳಿಜಾರಾದ ಭೂಭಾಗದಲ್ಲಿ ಕ್ಷೇತ್ರ ಕಾರ್ಯಕ್ಕೆ ಹೋದೆವು. ಈ ನೆಲೆಯಲ್ಲಿ ರಾಬರ್ಟ್ ಬ್ರೂಸಿಫ್ಲೂಟ್[೧] ಅವರು ಪರಿವೀಕ್ಷಣಾ ಸಮಯದಲ್ಲಿ ನವಶಿಲಾಯುಗ ಸಂಸ್ಕೃತಿ, ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದ ಇದೇ ನೆಲೆಯಲ್ಲಿ ಡಾ. ಎಂ.ಎಸ್. ಕೃಷ್ಣಮೂರ್ತಿ[೨] ಅವರು ಆದಿ ಹಳೇಶಿಲಾಯುಗ, ಮಧ್ಯ ಹಳೇ ಶಿಲಾಯುಗ, ನವ ಶಿಲಾಯುಗ ಸಂಸ್ಕೃತಿ, ಬೃಹತ್ ಶಿಲಾಯುಗ ಸಂಸ್ಕೃತಿ ಮತ್ತು ಇತಿಹಾಸ ಆರಂಭ ಕಾಲದ ಅವಶೇಷಗಳನ್ನು ಸಂಗ್ರಹಿಸಿ, ಈ ನೆಲೆಯಲ್ಲಿ ರಾಬರ್ಟ್ ಬ್ರೂಸಿಫ್ಲೂಟ್ ಅವರಿಗೆ ನವಶಿಲಾಯುಗ ಸಂಸ್ಕೃತಿಯ ಉಪಕರಣಗಳು ದೊರಕಿದ್ದು ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಈ ಸಂಸ್ಕೃತಿಗೆ

ಸೇರಿದ ಒಂದು ಕಲ್ಲಿನ ಕೊಡಲಿಯು ದೊರೆಯಲಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದೇ ನೆಲೆಯಲ್ಲಿ ನಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹೊಳಪುಳ್ಳ ಮೊನೆಯಿರುವ ಡಾಲೋರೈಟ್ ಡೈಕ್ ಶಿಲೆಯ ಮುರಿದ ಕಲ್ಲಿನ ಕೊಡಲಿ ದೊರಕಿದ್ದು ಟಿ. ನರಸೀಪುರ[೧೩] ಉತ್ಖನನದ ಕಲ್ಲಿನ ಕೊಡಲಿಯ ಹಾಗೆ ಹೋಲಿಕೆಯಿದೆ ಮತ್ತು ಕಲ್ಲಿನ ಕೊಡಲಿಗಳನ್ನು ಮಾಡಿಕೊಳ್ಳಲು ಚಕ್ಕೆ ತೆಗೆದಿರುವ ೧೭ ಸೆಂ.ಮೀ. ಉದ್ದ, ೭ ಸೆಂ.ಮೀ. ಅಗಲದ ಮತ್ತು ೨೦ ಸೆಂ.ಮೀ. ಉದ್ದದ ಎರಡು ಅಪೂರ್ಣಗೊಂಡ ಕಲ್ಲಿನಾಯುಧಗಳು ದೊರಕಿದ್ದು, ಈ ತರಹದ ಚಕ್ಕೆ ತೆಗೆದ ಕಲ್ಲಿನಾಯುಧಗಳು ವೇದಾವತಿ ನದಿ ತೀರದ ಪಿ. ಮಹದೇವಪುರದ[೧೪] ನೆಲೆಯಲ್ಲಿ ಹಾಗೂ ಪಿಲ್ಲಲಪಲ್ಲಿ, ವಿಟ್ಲಂಪಲ್ಲಿ, ಯಟಗಲ್ (ಕಲ್ಯಾಣದುರ್ಗ ತಾಲ್ಲೂಕು) ನೆಲೆಗಳಲ್ಲಿ ವಿ. ರಾಮಿರೆಡ್ಡಿ[೧೫] ಅವರು ಸಂಗ್ರಹಿಸಿದ್ದು ಸಾಮ್ಯತೆ ಇವೆ ಹಾಗೂ ಹಳ್ಳೂರು,[೧೬] ಟಿ. ನರಸೀಪುರ[೧೭] ಉತ್ಖನನಗಳಲ್ಲಿ ದೊರಕಿದ ಚಕ್ಕೆ ತೆಗೆದ ಕಲ್ಲಿನಾಯುಧಗಳ ಹಾಗೆ ಹೋಲಿಕೆ ಇವೆ. ಜೊತೆಗೆ ಆಯುಧ ಮಸೆಯುವ ಕಲ್ಲುಗಳು, ಅರೆಯುವ ಕಲ್ಲುಗಳು, ಕಲ್ಲಿ ಮಚ್ಚು,



ಚಿತ್ರ–೧, ಲೋಕಪಾವನಿ ನದಿ ತೀರದ ಶಿಲಾಯುಗದ ಅವಶೇಷಗಳು

ಕಲ್ಲಿನ ಒನಕೆಗಳು, ಕವಣೆಕಲ್ಲು, ಕುಟ್ಟುವ ಕಲ್ಲುಗಳು ನೆಲೆಯಲ್ಲಿ ಹೇರಳವಾಗಿ ದೊರಕಿದ್ದು, ಈ ಅಂಶಗಳ ಆಧಾರದ ಮೇಲೆ ನೆಲೆಯ "ಆಯುಧ ತಯಾರಿಕಾ ಕೇಂದ್ರ"ವಾಗಿತ್ತೆಂದು ಹೇಳಬಹುದು. (ಚಿತ್ರ–೧)

ಕಲ್ಲಿನ ಮಚ್ಚು : ೧೦ ಇಂಚು ಉದ್ದ, ಮೇಲ್ಭಾಗ ೨ ಇಂಚು, ದಪ್ಪ ಮಧ್ಯ ೩ ಇಂಚು, ಹಿಡಿಯಲು ಚಕ್ಕೆ ತೆಗೆದಿದ್ದು ಸುತ್ತಳತೆ ೬ ಇಂಚು, ಕಲ್ಲಿನ ಮುಂಭಾಗ ಚಕ್ಕೆ


ತೆಗೆದು ಹರಿತ ಮಾಡಿಕೊಂಡಿದ್ದಾನೆ. ಈ ಆಯುಧವನ್ನು ನೋಡಿದರೆ ಗಿಡ, ಮಾಂಸ ಕತ್ತರಿಸಲು ಇಲ್ಲವೇ, ದೈನಂದಿನ ಚಟುವಟಿಕೆಗಳಿಗೆ ಬಳಸಿದ ಆಯುಧವಾಗಿದೆ. ಆಯುಧ ಒರಟಾಗಿದ್ದು ವಿಶೇಷವಾದ ಆಯುಧವಾಗಿವೆ.



ಚಿತ್ರ-೨ ಅಂತ್ಯ ಹಳೇಶಿಲಾಯುಗದ ಕಲ್ಲಿನಾಯುಧ

ಅಂತ್ಯ ಹಳೇ ಶಿಲಾಯುಗ : ಈ ನೆಲೆಯಲ್ಲಿ ಇಲ್ಲಿಯವರೆಗೂ ದೊರೆಯದೇ ಇರುವ ಈ ಸಂಸ್ಕೃತಿಯ ಎರಡು ಕಲ್ಲಿನಾಯುಧಗಳು ದೊರಕಿವೆ (ಚಿತ್ರ ೨). ಉದ್ದ ೯ ಸೆಂ.ಮೀ. ಅಗಲ ೬ ಸೆಂ.ಮೀ. ಸುತ್ತಳತೆ ೨೦ ಸೆಂ.ಮೀ. ಇರುವ ಆಯುಧಗಳು ದೊರಕಿದ್ದು ಮೊದಲನೇ ಆಯುಧದ ಮೇಲೆ ಚಿಕ್ಕ ಚಿಕ್ಕ ಚಕ್ಕೆ ತೆಗೆದು ಒಂದು ಕಡೆ ಮೊನೆ ಚೂಪು ಮಾಡಿದರೆ ಎರಡನೇ ಆಯುಧಕ್ಕೆ ಮೂರು ಮೊನೆಗಳಿದ್ದು ಒಂದು ಚೂಪಾಗಿದ್ದು ಮೈಮೇಲೆ ಚಕ್ಕೆ ತೆಗೆದಿದೆ. ಆಯುಧಗಳು ಬಿಜಾಪುರ ಜಿಲ್ಲೆ ಸಾಲ್ವಾಡಗಿ[೧೮,೧೯] ನೆಲೆಯಲ್ಲಿ ದೊರಕಿದ್ದು ಸಾಮ್ಯತೆ ಇವೆ. ಹಾಗೂ ಈ ಪರಿಸರದಲ್ಲಿ ದೊರೆತ ಪ್ರಥಮ ಅಂತ್ಯ ಹಳೇಶಿಲಾಯುಗ ಸಂಸ್ಕೃತಿಯ ನೆಲೆ ಮತ್ತು ಅವಶೇಷಗಳಾಗಿವೆ ಎಂದು ಹೇಳಬಹುದು.

ಜೊತೆಗೆ "ಬೃಹತ್ ಶಿಲಾಯುಗ ಸಂಸ್ಕೃತಿಯ" ಕೆಂಪು, ಕಪ್ಪು, ಕೆಂಪು ಮತ್ತು ಕಪ್ಪು ಬಣ್ಣದ ಮಡಕೆಯ ತುಂಡುಗಳು, ತಳದ ಭಾಗಗಳು, ಕಂಠದ ಭಾಗಗಳು, ಅಲಂಕಾರಭರಿತ ಮಡಕೆ ಭಾಗಗಳು, ಹೊಳಪುಳ್ಳ ಕಪ್ಪು, ಕೆಂಪು ಬಣ್ಣದ ಮಡಕೆ ಭಾಗಗಳು, ಒಳಭಾಗ ಹೊಳಪುಳ್ಳ ಮಡಕೆಯ ತಳಭಾಗ, ಕಬ್ಬಿಣದ ತುಂಡು ಇತರೆ ಅವಶೇಷಗಳು ದೊರಕಿವೆ ಹಾಗೂ "ಇತಿಹಾಸ ಆರಂಭ ಕಾಲದ" ಮಡಕೆಯ ಭಾಗಗಳು, ಅಲಂಕಾರಭರಿತ ಮಡಕೆ ಭಾಗ ದೊರಕಿದ್ದು ಮೂರು ಗೆರೆಗಳನ್ನು ಇಂಗ್ಲಿಷ್



ಚಿತ್ರ-೩ ಲೋಕಪಾವನಿ ನದೀ ತೀರದಲ್ಲಿ ದೊರೆತ ಹಳ್ಳುಮಣೆ ಅವಶೇಷ

ಅಕ್ಷರದ 'V' ಆಕಾರದಲ್ಲಿ ಅಲಂಕರಿಸಿದ್ದಾರೆ. ಈ ತರಹ ಸಾಮ್ಯತೆಯಿರುವ ಅಲಂಕಾರ ಗೊಂಡ ಮಡಕೆ ಭಾಗ ವೇದಾವತಿ ನದಿಯ ತೀರದ ನಾಗಪ್ಪನಹಳ್ಳಿ[೨೦] (ಕಲ್ಯಾಣದುರ್ಗ ತಾಲ್ಲೂಕು) ನೆಲೆಯಲ್ಲಿ ದೊರಕಿದೆ. ಹಾಗೂ ನಯವಾದ ದುಂಡಾದ ಮುರಿದ ಕಲ್ಲಿನ ಗುಂಡು ದೊರಕಿದ್ದು ಈ ಗುಂಡನ್ನು ತೂಕದ ಗುಂಡಾಗಿ ಬಳಸಿರಬಹುದು. ಸುಟ್ಟ ಮಣ್ಣಿನ 'ಹಳ್ಳುಮಣೆ' (ಚಿತ್ರ ೩) ೧೩ ಸೆಂ.ಮೀ. ಅಗಲ, ೭ ಸೆಂ.ಮೀ. ಉದ್ದವಿದ್ದು (ಮುರಿದಿದೆ) ಮಣೆಯ ಒಂದೊಂದು ಕುಳಿ ೧ ಇಂಚು, ೧/೨ ಇಂಚು ಅಳತೆಯ ೨ ಮುರಿದ, ೨ ಚೆನ್ನಾಗಿರುವ ಕುಳಿಗಳಿರುವ ಸುಟ್ಟ ಮಣ್ಣಿನ ಹಳ್ಳುಮಣೆ ದೊರಕಿದ್ದು, ಹಳ್ಳುಮಣೆ ವಿಶೇಷವಾಗಿದೆ. ವಿರಾಮದ ವೇಳೆ ಕಳೆಯಲು, ಮನರಂಜನೆಗಾಗಿ, ಜೂಜಾಡಲು ಬಳಸುತ್ತಿರಬಹುದು.

ದುಂಡಾದ ಕಲ್ಲಿನ ಪಾತ್ರೆಗಳು : ದುಂಡಾದ, ನಯವಾದ ಕಲ್ಲಿನ ಪಾತ್ರೆಗಳು ದೊರಕಿದ್ದು, ಸುತ್ತಳತೆ ೧೦೧/೨ ಇಂಚು, (ಅರ್ಧ ಭಾಗ ಮುರಿದಿದೆ) ಎತ್ತರ ೫ ಸೆಂ. ಮೀ., ಕಂಠದಿಂದ ಮಧ್ಯದ ಆಳ ೩ ಸೆಂ. ಮೀ., ತಳಭಾಗ ನಯವಾಗಿದೆ, ಪಾತ್ರೆ ನಯವಾಗಿದೆ. ಈ ಪಾತ್ರೆಯನ್ನು ಔಷಧಿ ಸಸಿಗಳನ್ನು ಅರೆಯಲು, ಪುಡಿಮಾಡಿಕೊಳ್ಳಲು ಬಳಸಿರಬಹುದು. ಈ ತರಹದವು ನೆಲೆಯಲ್ಲಿ ಎರಡು ದೊರಕಿವೆ, ವಿಶೇಷವಾಗಿವೆ.

"ಅನ್ನಪೂರ್ಣೇಶ್ವರಿ ದೇವಾಲಯದ ತಳಪಾಯದ ನೆಲೆಯು" ಕುಂತಿ ಬೆಟ್ಟ ಮತ್ತು ಒನಕೆ ಬೆಟ್ಟಗಳ ಮಧ್ಯದ ಸಮತಟ್ಟಾದ ಭೂಭಾಗದಲ್ಲಿ ಅಂದರೆ ಬಸವಣ್ಣ, ಗಣೇಶ ಮೂರ್ತಿ, ಮಲ್ಲಿಕಾರ್ಜುನ ದೇವಾಲಯ, ನೀರಿನ ಕೊಳ ಈ ಪ್ರಮುಖ ಅಂಶಗಳ ಮಧ್ಯ ಅನ್ನಪೂರ್ಣೇಶ್ವರಿ ದೇವಾಲಯವಿದೆ. ಸ್ಥಳೀಯರು ದೇವಾಲಯವನ್ನು ಜೀರ್ಣೋದ್ಧಾರ ಮಾಡಲು ಕಿತ್ತು ಬುನಾದಿ ಹಾಕಲು ಜೆ.ಸಿ.ಬಿ.ಯ ಯಂತ್ರದಿಂದ ಸುಮಾರು ೪ ಅಡಿ ಆಳದ ಪಾಯ ತೆಗೆದಿದ್ದಾರೆ. ಈ ಪಾಯದ ಸ್ಥಳದಲ್ಲಿ ನವಶಿಲಾಯುಗ ಸಂಸ್ಕೃತಿ, ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ದೊರಕಿವೆ.



ಚಿತ್ರ–೪. ಲೋಕ ಪಾವನಿ ನದಿ ಪರಿಸರದ ಕುಂತಿಬೆಟ್ಟದ ಅನ್ನಪೂರ್ಣೇಶ್ವರಿ ದೇವಾಲಯದ ನೆಲೆಯಲ್ಲಿ ದೊರೆತಿರುವ ಆಹಾರಧಾನ್ಯ ಅರೆಯುವ ಅಡಿಗಲ್ಲಿನ ಆಯುಧ

"ನವಶಿಲಾಯುಗ ಸಂಸ್ಕೃತಿ"ಯ ಬೂದು. ಬೂದುಮಿಶ್ರಿತ ಕೆಂಪು, ಕೆಂಪು, ಕಪ್ಪುಬಣ್ಣದ ಮಡಕೆ ತುಣುಕುಗಳು, ಆಹಾರಧಾನ್ಯ ಅರೆಯಲು ಬಳಸಿರುವ ಅಡಿಗಲ್ಲು (ಚಿತ್ರ ೪) ಉದ್ದ ೧ ೧/೨ ಅಡಿ, ಅಗಲ ೧ ಅಡಿ, ಮಧ್ಯದ ಆಳ ೫ ೧/೨ ಸೆಂ.ಮೀ., ಆಯುಧ ಒಂದು ಭಾಗ ೯ ಸೆಂ.ಮೀ. ಉಬ್ಬು ಇದ್ದು ಇನ್ನೊಂದು ಭಾಗ ಸಂಪೂರ್ಣವಾಗಿ ಸವೆದು ಹೋಗಿರುವುದು ದೊರಕಿದೆ. ಈ ತರಹ ಅನಂತಪುರ ಜಿಲ್ಲೆಯ ಬೂದಿಹಾಳ್[21] ನೆಲೆಯಲ್ಲಿ ರಾಬರ್ಟ್ ಬ್ರೂಸಿಫೂಟ್ ಅವರು ಸಂಗ್ರಹಿಸಿ ಆಹಾರಧಾನ್ಯ ಅರೆಯಲು ಬಳಸಿದ್ದಾರೆಂದು ಅಭಿಪ್ರಾಯಪಟ್ಟಿದ್ದಾರೆ ಮತ್ತು ವೇದಾವತಿ ನದೀತೀರದ ವಿಡುಪಲಕುಂಟೆ,[22] ಮದನಕುಂಟೆ,[23] ಓಲಿನೆಥೆಸ್[24] ನೆಲೆಗಳಲ್ಲೂ ಸಹ ದೊರಕಿದ್ದು ಆಹಾರಧಾನ್ಯ ಅರೆಯಲು, ದೈನಂದಿನ ಆಯುಧಗಳನ್ನು ಮೊನೆ ಮಾಡಲು ಬಳಸಿರಬಹುದು, ಆಯುಧ ವಿಶೇಷವಾಗಿದೆ. ಡೊಲೆರೈಟ್ ಕಲ್ಲಿನಿಂದ ತಯಾರಿಸಿದ ಹಂತವಾದ ಮುರಿದ ಕಲ್ಲಿನ ಕೊಡಲಿ, ೫ ಸೆಂ.ಮೀ. ಉದ್ದ, ೪ ಸೆಂ.ಮೀ. ಅಗಲವಿದ್ದು ಟಿ. ನರಸೀಪುರದ[25] ಉತ್ಖನನದಲ್ಲಿ ದೊರೆತ ಆಯುಧದ ಹಾಗೆ ಸಾಮ್ಯತೆ ಇದೆ. ಹಾಗೂ ನೇರ ಚಕ್ಕೆ ತೆಗೆದಿರುವ ಕಲ್ಲಿನಾಯುಧಗಳು ೩ ದೊರಕಿದ್ದು ಇವುಗಳನ್ನು ಕಲ್ಲಿನ ಕೊಡಲಿ ತಯಾರಿಸಲು ಹದ ಮಾಡಿರುವಂತೆ ಇದ್ದು, ಈ ತರಹದ ಚಕ್ಕೆ ತೆಗೆದ ಆಯುಧಗಳು ಆರಂಭ ನವ ಶಿಲಾಯುಗ ಸಂಸ್ಕೃತಿಯ ಕಾಲಕ್ಕೆ ಸೇರಿದುದಾಗಿದೆ ಎಂದು ಹೇಳಬಹುದು. ಈ ಕಲ್ಲಿನಾಯುಧಗಳು ಪಿಕ್ಲಿಹಾಳ್[26] ಉತ್ಖನನದಲ್ಲಿ ದೊರಕಿರುವ ಹಾಗೆ ಸಾಮ್ಯತೆ ಇದೆ. ಹಾಗೂ ಅರೆಯುವ ಕಲ್ಲುಗಳು, ಕುಟ್ಟುವ ಕಲ್ಲುಗಳು, ಕಲ್ಲಿನ ಒನಕೆಗಳು, ಕವಣೆ ಕಲ್ಲುಗಳು, ಉಳಿಗಳನ್ನು ತಯಾರಿಸಲು ಹದಮಾಡಿಕೊಂಡ ಕಲ್ಲಿನಾಯುಧಗಳು, ಬೂದಿಮಣ್ಣು ಇನ್ನಿತರೆ ಅವಶೇಷಗಳು ದೊರಕಿವೆ.

"ಬೃಹತ್ ಶಿಲಾಯುಗ ಸಂಸ್ಕೃತಿ"ಯ ಕೆಂಪು, ಕಪ್ಪು, ಕೆಂಪು ಮತ್ತು ಕಪ್ಪು ಬಣ್ಣದ ಮಡಕೆಯ ಭಾಗಗಳು, ಚಿಕ್ಕ, ಮಧ್ಯಮ ಗಾತ್ರದ ಮಡಕೆಗಳ ತಳದ ಭಾಗಗಳು, ಸುಟ್ಟಮಣ್ಣಿನ ಚಿಕ್ಕ ಕುಡಿಕೆ, ಗಾಜಿನಂತೆ ಹೊಳೆಯುವ ಕೆಂಪು, ಕಪ್ಪುಬಣ್ಣದ ಮಡಕೆ ತುಣುಕುಗಳ ಮೇಲೆ ಗ್ರಾಫಿಟಿ ಗುರುತುಗಳಿರುವ ಮಡಕೆ ತುಂಡುಗಳು, ಅರ್ಧ ಮಡಕೆ ಭಾಗ, ಕಂಠದ ಭಾಗಗಳು, ಅಲಂಕಾರ ಭರಿತ ಮಡಕೆ ಭಾಗಗಳು, ಕಪ್ಪೆ ಚಿಪ್ಪಿನ ತುಂಡುಗಳು, ಸುಟ್ಟಮಣ್ಣಿನ ಮುರಿದ ಕೊಳವೆ ಭಾಗ, ಕಬ್ಬಿಣ ಕರಗಿಸಿದ ನಂತರ ಉಳಿಯುವ ಕಿಟ್ಟ, ಕಬ್ಬಿಣದ ಅದಿರು, ಕಬ್ಬಿಣದ ತುಂಡುಗಳು, ಮೂಳೆ ಭಾಗಗಳು, ಹಲ್ಲಿನ ಭಾಗಗಳು, ಅಲಂಕಾರಿಕ ಮಡಕೆ ಭಾಗಗಳು ಹಾಗೂ ಇತರೆ ಅವಶೇಷಗಳು ದೊರಕಿವೆ.



ಚಿತ್ರ-೫ ಚಿಕ್ಕ ಮಡಕೆ, ಗ್ರಾಫಿಟಿ ಗುರುತು, ಸುಟ್ಟಮಣ್ಣಿನ ಕೊಳವೆ ಅವಶೇಷಗಳು

ನೆಲೆಯಲ್ಲಿ ದೊರಕಿರುವ "ಚಿಕ್ಕ ಮಡಕೆಯ" ಹಾಗೆ ವೇದಾವತಿ ನದೀ ತೀರದ ನೆಲೆಗಳಾದ ರಂಗನಾಥಪುರ, ಬೊಮ್ಮನಕುಂಟೆ[೨೭] ಇನ್ನಿತರೇ ನೆಲೆಗಳಲ್ಲಿ ದೊರಕಿದ್ದು ಸಾಮ್ಯತೆ ಇದೆ. ಕೆಂಪು, ಕಪ್ಪು ಬಣ್ಣದ ಮಡಕೆ ತುಂಡುಗಳ ಮೇಲೆ ಗ್ರಾಫಿಟಿ ಗುರುತುಗಳು ಇರುವುವು ದೊರಕಿದ್ದು ವೇದಾವತಿ ನದೀತೀರದ ಸೂರನಹಳ್ಳಿ[೨೮] ನೆಲೆಯಲ್ಲಿ (ಚಿತ್ರ ೫) ಹಾಗೂ ಇದೇ ತರಹ ಸಾಮ್ಯತೆ ಇರುವ ಗ್ರಾಫಿಟಿ ಗುರುತುಗಳು ಟಿ. ನರಸೀಪುರ,[೨೯] ಬ್ರಹ್ಮಗಿರಿ[೩೦] ಉತ್ಖನನ ನೆಲೆಗಳಲ್ಲಿ ದೊರಕಿವೆ. "ಸುಟ್ಟಮಣ್ಣಿನ ಕೊಳವೆ" ದೊರಕಿದ್ದು, ಮುರಿದು ಹಾಳಾಗಿದ್ದು ಮೂತಿ ಮಾತ್ರ ಉಳಿದಿದೆ. ಈ ಕೊಳವೆ ಕುಲುಮೆಯಲ್ಲಿ ಬಳಸಿ ತೆಗೆದುಹಾಕಿದ ಕೊಳವೆಯಂತಿದ್ದು, ನೆಲೆಯಲ್ಲಿ ಕುಲುಮೆಗಳಿದ್ದು, ಕಬ್ಬಿಣದ ವಸ್ತುಗಳನ್ನು ಇಲ್ಲೇ ತಯಾರಿಸಿಕೊಳ್ಳುತ್ತಿದ್ದನೆಂಬುದಕ್ಕೆ ದೊರಕಿರುವ ಕಬ್ಬಿಣದ ಅದಿರು, ಕಬ್ಬಿಣತುಂಡು, ಕಬ್ಬಿಣ ಕರಗಿಸಿದ ನಂತರ ಉಳಿದಿರುವ ಕಿಟ್ಟ ಪೂರಕವಾಗಿವೆ. ಈ ತರಹದ ಕೊಳವೆಗಳು ವೇದಾವತಿ ನದೀ ತೀರದ ಯಾದಗಲಟ್ಟೆ, ಬೇತೂರು[೩೧] ನೆಲೆಯ ಕೊಳವೆಗಳ ಹಾಗೆ ಹೋಲಿಕೆಯಿದೆ. ಕಬ್ಬಿಣದ ತುಂಡುಗಳು ವೇದಾವತಿ ನದಿ ತೀರದ ಚಿಗತನಹಳ್ಳಿ[೩೨] ನೆಲೆಯಲ್ಲಿ ದೊರಕಿರುವ ಕಬ್ಬಿಣದ ತುಂಡಿನ ಹಾಗೆ ಸಾಮ್ಯತೆ ಇದೆ. ನೆಲೆಯ ಪೂರ್ವ,



ಚಿತ್ರ-೬ ಲೋಕಪಾವನಿ ನದಿತೀರದಲ್ಲಿ ದೊರೆತ ಕುಂಬಾರ ಮಡಿಕೆ ತಯಾರಿಸಲು ಬಳಸುವ ತಟ್ಟೊತ್ತಿಗೆ

ಪಶ್ಚಿಮಕ್ಕೆ ಗುಡ್ಡಗಳು, ಪಕ್ಕದಲ್ಲೇ ಗುಹೆಗಳು, ಕಲ್ಲಾಸರೆಗಳಿದ್ದು ಸಿಕ್ಕಿರುವ ಅವಶೇಷಗಳ ಆಧಾರದ ಮೇಲೆ "ವಾಸದ ಪ್ರಮುಖ ನೆಲೆ"ಯಾಗಿತ್ತೆಂದು ಹೇಳಬಹುದು. ಈ ನೆಲೆ ಪ್ರಥಮ ಶೋಧವಾಗಿದ್ದು, ಸಮತಟ್ಟಾದ ಈ ಭೂಭಾಗವನ್ನು ಉತ್ಖನನ ಮಾಡಿದರೆ ನವಶಿಲಾಯುಗ ಸಂಸ್ಕೃತಿ, ಬೃಹತ್ ಶಿಲಾಯುಗ ಸಂಸ್ಕೃತಿಗಳ ಮೇಲೆ ಬೆಳಕು ಚೆಲ್ಲುವ ಮಹತ್ವ ಪೂರ್ಣ ಮಾಹಿತಿಗಳು ಹೊರಚೆಲ್ಲಬಹುದು.

ಲೋಕಪಾವನಿ ನದಿಗೆ ಹರಿದು ಹೋಗುವ ಹಳ್ಳದ ಎಡದಂಡೆಯ ಮೇಲಿರುವ "ಹಿರೇಮರಳಿ ಗ್ರಾಮದ ನೆಲೆಯು", ಗ್ರಾಮದ ದಕ್ಷಿಣಕ್ಕೆ ಸಮತಟ್ಟಾದ ಭೂಭಾಗ ಮತ್ತು ಕುಂತಿಬೆಟ್ಟದ ಇಳಿಜಾರಾದ ಭೂಭಾಗದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯಿದ್ದು ಕೆಂಪು, ಕಪ್ಪು, ಕೆಂಪು ಮತ್ತು ಕಪ್ಪು ಬಣ್ಣದ ಮಡಕೆ ಚೂರುಗಳು, ಅಲಂಕಾರಭರಿತ ಮಡಕೆ ತುಂಡುಗಳು, ದುಂಡಾದ ಕೆಂಪು ಬಿಲ್ಲೆಗಳು, ದುಂಡಾದ ಅಲಂಕಾರ ಭರಿತ ಕೆಂಪು ಬಿಲ್ಲೆಗಳು, ಕಬ್ಬಿಣ ಕರಗಿಸಿದ ನಂತರ ಉಳಿಯುವ ಕಿಟ್ಟ, ಅರೆಯುವ ಕಲ್ಲುಗಳು, ಕುಟ್ಟುವ ಕಲ್ಲುಗಳು, ಕವಣೆ ಕಲ್ಲುಗಳು, ತೆಳ್ಳಗೆ ಗಾಜಿನಂತೆ ಹೊಳೆಯುವ ಮಡಕೆ ತುಂಡುಗಳು, ಮಡಕೆಗಳನ್ನು ತಯಾರಿಸಲು ಬಳಸುವ ಅಪರೂಪವಾದ ಮುರಿದ ತಟ್ಟೊತ್ತಿಗೆ (ಚಿತ್ರ ೬) ಇನ್ನಿತರೆ ಅವಶೇಷಗಳು ದೊರಕಿವೆ.

ತಟ್ಟೊತ್ತಿಗೆ ಉದ್ದ ೯ ಸೆಂ.ಮೀ. ಹಿಡಿಯ ಉದ್ದ ೬ ಸೆಂ.ಮೀ. ಆಯುಧದ ಮುಂಭಾಗದ ಸುತ್ತಳತೆ ೧೨ ಸೆಂ.ಮೀ. ಇದ್ದು (ಮುರಿದಿದೆ) ತುಂಬಾ ನಯವಾಗಿ ತಯಾರಿಸಿದ್ದಾರೆ. ಈ ತಟ್ಟೊತ್ತಿಗೆ ಮಧ್ಯಕ್ಕೆ ನೇರವಾಗಿ ಒಡೆದು ಹೋಗಿದ್ದು ಇನ್ನೊಂದು ತುಂಡು ಕ್ಷೇತ್ರ ಕಾರ್ಯದಲ್ಲಿ ದೊರೆಯಲಿಲ್ಲ. ತಟ್ಟೊತ್ತಿಗೆಯು ನೆಲೆಯಲ್ಲಿ ದೊರಕಿರುವುದರಿಂದ ನೆಲೆಯು ಮಾನವನು ಮಡಕೆಗಳನ್ನು ಇಲ್ಲೇ ತಯಾರಿಸಿಕೊಳ್ಳುತ್ತಿದ್ದು, "ಮಡಕೆಗಳ ತಯಾರಿಕಾ ಕೇಂದ್ರ"ವಾಗಿತ್ತೆಂದು ಹೇಳಬಹುದು. ಈ ತರಹದ ತಟ್ಟೊತ್ತಿಗೆಗಳು ವೇದಾವತಿ ನದಿ ತೀರದ ರಂಗನಾಥಪುರ,[೩೩] ದೊಡ್ಡ ಉಳ್ಳಾರ್ತಿ ಇನ್ನಿತರೆ ನೆಲೆಗಳಲ್ಲಿ ದೊರಕಿವೆ. ಆಯುಧವನ್ನು ನೋಡಿದ ಡಾ. ಅ. ಸುಂದರ[೩೪] ಅವರು ಇದೊಂದು ಅಪರೂಪವಾದ ತಟ್ಟೊತ್ತಿಗೆಯಾಗಿದೆಯೆಂದು ಅಭಿಪ್ರಾಯಪಟ್ಟರು. ನೆಲೆಯ ಪಕ್ಕದಲ್ಲಿ ಕಲ್ಲಾಸರೆ, ಕುಂತಿಬೆಟ್ಟದ ಗುಹೆಗಳಿದ್ದು

ನೆಲೆಯನ್ನು "ವಾಸದ ನೆಲೆ"ಯನ್ನಾಗಿ ಮಾಡಿಕೊಂಡು ವಾಸಿಸುತ್ತಿದ್ದನೆಂದು ಹೇಳಬಹುದು.

ಇದೇ ದಿನ ಈ ನೆಲೆಯಿಂದ ಗುಡ್ಡದ ಮೇಲಿರುವ "ಭೀಮನ ಪಾದ", "ಸೀತೆಯ ಸೆರಗು" ಎಂದು ಕರೆಯುವ ಸ್ಥಳದ ಕಡೆ ವಿದ್ಯಾರ್ಥಿಗಳಾದ ಎಂ.ಎ. ಮಂಜು, ಸಿ.ಡಿ. ಪ್ರತಾಪ, ಚನ್ನಮಾದೇಗೌಡ, ಸುರೇಶ, ಕುಮಾರ, ಚನ್ನಕೇಶವ, ಮಂಜ, ಚೇತನ, ಪ್ರೊ ಬಿ.ಎಸ್.ಮಂಜುನಾಥ್ ಅವರೊಂದಿಗೆ ಹಿರೇಮರಳಿ ಗ್ರಾಮದ ಕಡೆಯಿಂದ ಹೆಬ್ಬಂಡೆಗಳ ಮಧ್ಯಭಾಗದಲ್ಲಿ ನುಸುಳಿಕೊಂಡು ಸುಮಾರು ೫೦೦ ಅಡಿ ಎತ್ತರದ ಗುಡ್ಡದ ಮೇಲೆ ಹೋಗುವ ದಾರಿಯ ಮಧ್ಯದಲ್ಲಿಯೇ ಕಪ್ಪು, ಕೆಂಪು, ಕಪ್ಪು ಮತ್ತು ಕೆಂಪು ಬಣ್ಣದ ಮಡಕೆ ತುಂಡುಗಳು ಕಾಣಲಾರಂಭಿಸಿದವು. ಎಲ್ಲಾ ಗುಹೆಗಳನ್ನು, ಕಲ್ಲಾಸರೆಗಳನ್ನು ವಿದ್ಯಾರ್ಥಿಗಳು, ನಾವು ನೋಡುತ್ತಾ ಮುಂದೆ ಸಾಗಿದೆವು. ಸುಮಾರು ೧/೨ ಎಕರೆ ಸಮತಟ್ಟಾದ ಭೂಭಾಗ ಸುತ್ತಲೂ ಹೆಬ್ಬಂಡೆಗಳಿಂದ ಆವೃತಗೊಂಡ ಗುಡ್ಡದ ಮಧ್ಯಭಾಗದಲ್ಲಿ ವಿವಿಧ ಬಣ್ಣಗಳ ಬೃಹತ್ ಶಿಲಾಯುಗ ಸಂಸ್ಕೃತಿಯ ಮಡಕೆ ಚೂರುಗಳು, ಮೂಳೆ ತುಂಡುಗಳು, ಹಾಳಾದ ಕುಲುಮೆ ಕಂಡುಬಂದಿತು. "ಕುಲುಮೆ" ಸುತ್ತಮುತ್ತ ಕುಲುಮೆಗೆ ಬಳಸುವ ಮುರಿದ ಸುಟ್ಟಮಣ್ಣಿನ ಕೊಳವೆಗಳು, ಕಬ್ಬಿಣದ ಅದಿರು, ಕಬ್ಬಿಣದ ತುಂಡುಗಳು, ಕಬ್ಬಿಣ ಕರಗಿಸಿದ ನಂತರ ಉಳಿಯುವ ಕಿಟ್ಟ, ಕುಲುಮೆಯ ಸುತ್ತ ಬಳಸಿರುವ ಸುಟ್ಟಮಣ್ಣಿನ ಉಂಡೆಗಳು, ಬೂದಿ, ಇದ್ದಿಲು ದೊರಕಿತು. ಈ ತರಹದ ಕುಲುಮೆ ಹಾಗೂ ಇತರೆ ಅವಶೇಷಗಳು ವೇದಾವತಿ ನದೀ ತೀರದ ಯಾದಲಗಟ್ಟೆ[೩೫] ಬೇತೂರು, ಬೊಮ್ಮನಕುಂಟೆ ನೆಲೆಗಳಲ್ಲಿ ದೊರಕಿದ್ದು ಸಾಮ್ಯತೆ ಇದೆ. ಈ ಅಂಶದ ಆಧಾರದ ಮೇಲೆ ಈ ಸಂಸ್ಕೃತಿಯ ಮಾನವನು ಇಲ್ಲೇ "ಕಬ್ಬಿಣವನ್ನು ತಯಾರಿಸಿಕೊಂಡು, ದೈನಂದಿನ ಜೀವನಕ್ಕೆ ಬೇಕಾಗುವ ಕಬ್ಬಿಣದ ವಸ್ತುಗಳನ್ನು ತಯಾರಿಸಿಕೊಂಡು" ಜೀವನ ಸಾಗಿಸುತ್ತಿದ್ದನೆಂದು ಹೇಳಬಹುದು. ಸ್ವಲ್ಪ ಮುಂದೆ ಸಾಗಿದರೆ ಕಪ್ಪೆಚಿಪ್ಪಿನ ತುಂಡುಗಳು, ದುಂಡಾದ ಚಿಕ್ಕ, ದೊಡ್ಡ ಸುಟ್ಟಮಣ್ಣಿನ ಬಿಲ್ಲೆಗಳು, ಕಲ್ಲುಕುಪ್ಪೆ[೩೬] ಸಮಾಧಿ (Cairn circles) ಗೋಚರಿಸಿತು. ಈ ತರಹ ಸಾಮ್ಯತೆ ಇರುವ ಸಮಾಧಿಗಳು ಚಂಗಲ್‌ಪೇಟೆ ಜಿಲ್ಲೆಯ ಕುನ್ನತ್ತೂರು, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ[೩೭] ನೆಲೆಯಲ್ಲಿ ಹಾಗೂ ಕರ್ನಾಟಕದ ಇನ್ನಿತರೇ ನೆಲೆಗಳಲ್ಲಿ ಕಂಡುಬಂದಿವೆ.[೩೮]

ಸಮಾಧಿಗಳು ಈ ಪರಿಸರದಲ್ಲಿ ಪತ್ತೆಯಾಗಿರುವುದು ಮೊದಲ ಶೋಧನೆಯಾಗಿದೆ. ಸಮಾಧಿಯನ್ನು ಗಮನಿಸಿಕೊಂಡು ಮುಂದೆ ಸಾಗಿದರೆ ಮತ್ತೆ ೧/೨ ಎಕರೆ ವಿಸ್ತೀರ್ಣದ ಸಮತಟ್ಟಾದ ಭೂಭಾಗದಲ್ಲಿ ಅದೇ ತರಹದ ಅವಶೇಷಗಳು ಗೋಚರಿಸಿದವು. ಮುಂದೆ ಸಾಗಿದಾಗ ಮಾನವ ನಿರ್ಮಿತ ಕಲ್ಲಿನ ಕಟ್ಟಡವಿದ್ದು, ಎರಡು ನೈಸರ್ಗಿಕ

ಹೆಬ್ಬಂಡೆಗಳ ಗುಡ್ಡಗಳ ಮಧ್ಯೆ ಕಲ್ಲುಗಳನ್ನು ಜೋಡಿಸಿ ಕಟ್ಟೆ ಕಟ್ಟಿದ್ದಾರೆ. ಈ ಸ್ಥಳವನ್ನು ಸೂಕ್ಷ್ಮವಾಗಿ ಗಮನಿಸಿದರೆ ಗುಡ್ಡದ ಮೇಲಿಂದ ಹರಿದು ಬಂದ ನೀರನ್ನು ಇಲ್ಲಿ ಶೇಖರಿಸಿಕೊಂಡು ದೈನಂದಿನ ಕಾರ್ಯಕ್ಕೆ, ಕೃಷಿಗೆ ಬಳಸಲು ನಿರ್ಮಿಸಿಕೊಂಡಿರಬಹುದು. ಈ ಸ್ಥಳ ಬಿಟ್ಟರೆ ಬೇರೆ ಗುಡ್ಡದ ಯಾವ ಭಾಗದಲ್ಲೂ ನೀರು ನಿಲ್ಲುವ ಅಥವಾ ಸಂಗ್ರಹಿಸಿಕೊಂಡಿರುವ ಸ್ಥಳ ಇಲ್ಲದೇ ಇರುವುದರಿಂದ ಇಲ್ಲಿಯ ನೀರನ್ನು ಈ ನೆಲೆಯ ಮಾನವನು ತನ್ನ ದೈನಂದಿನ ಕಾರ್ಯ ಕಲಾಪಗಳಿಗೆ ಬಳಸಿಕೊಂಡಿರುವ ಸಾಧ್ಯತೆ ಇದ್ದು ಹೆಚ್ಚಿನ ಮಾಹಿತಿ ಅರಿಯಲು ಉತ್ಖನನದ ಅಗತ್ಯವಿದೆ.

ಮುಂದೆ ಭೀಮನಪಾದ, ಸೀತೆ ಸೆರಗು ಎಂದು ಕರೆಯುವ ಸ್ಥಳವನ್ನು ನೋಡಿಕೊಂಡು ಗುಡ್ಡದ ಮೇಲೆ ನಿಂತು ನೋಡಿದರೆ ಪೂರ್ವಕ್ಕೆ ಪಾಂಡವಪುರ ಪಟ್ಟಣ ಕಾಣುತ್ತದೆ. ಗುಡ್ಡದ ಕೆಳಗೆ ಲೋಕಪಾವನಿ ನದಿಗೆ ಹರಿದುಹೋಗುವ ಪಾಂಡವಪುರದ ಕೆರೆ ಇದೆ. ಮೇಲೆ ಸ್ವಲ್ಪ ಮುಂದೆ ಭೀಮನ ಕೊಳ ಎಂದು ಕರೆಯುವ ಕೊಳವಿದ್ದು, ಕೊಳದ ಮೇಲೆ ಬೃಹತ್ ಗಾತ್ರದ ಗುಂಡು ಚಾಚಿ ಕೊಳವನ್ನೂ ಮುಚ್ಚಿದೆ. ಗುಂಡಿನ ಮುಂದೆ ಜಾಗವಿದ್ದು, ಪೂರ್ವ ಪಶ್ಚಿಮವಾಗಿ ಇಳಿಯಲು ಮಾನವನಿಂದ ಕತ್ತರಿಸಲ್ಪಟ್ಟ ದೊಡ್ಡ ಬಂಡೆಗಳನ್ನು ಅಗಲವಾಗಿ ಮೆಟ್ಟಿಲುಗಳ ಹಾಗೆ ಹಾಸಿದ್ದಾರೆ. ಕೊಳದ ಆಳ ಮೇಲ್ನೋಟಕ್ಕೆ ಸುಮಾರು ೧೦ ಅಡಿಗಿಂತ ಹೆಚ್ಚಿದೆ. ಅಲ್ಲಿಂದ ಕೊಳದ ಹಿಂಭಾಗಕ್ಕೆ ಬಂದರೆ ಹುಟ್ಟುಗುಂಡಿನ



ಚಿತ್ರ-೭ ಕುಂತಿಬೆಟ್ಟದ ಭೀಮನ ಪಾದದ ಸುತ್ತಮುತ್ತಲ ಇಳಿಜಾರಾದ ನೆಲೆಯ ಅವಶೇಷಗಳ ದೃಶ್ಯ

ಮಧ್ಯೆ ಇಕ್ಕಟ್ಟಾದ ಜಾಗದಲ್ಲಿ ಭೀಮ ನೀರು ಕುಡಿಯುತ್ತಿದ್ದ ಕೊಳ ಎನ್ನುವ ಇನ್ನೊಂದು ಕೊಳವಿದ್ದು ಈ ಕೊಳವು ಸಹ ಸುಮಾರು ೧೦ ಅಡಿಗೂ ಹೆಚ್ಚು ಆಳವಿದೆ. ಈ ಎರಡು ಕೊಳಗಳ ಆಳದ ನಿಖರತೆಯ ಬಗ್ಗೆ ಸಂಶೋಧನೆ ಆಗಬೇಕಾಗಿದೆ. ಈ ಕೊಳಗಳ ನೀರನ್ನು ನೆಲೆಗಳ ಮಾನವನು ಅಂದೇ ತನ್ನ ದೈನಂದಿನ ಗೃಹಕೃತ್ಯಗಳಿಗೆ ಬಳಸಿರುವ ಸಾಧ್ಯತೆ ಇದೆ. ಈ ಕೊಳಗಳನ್ನು ಬಿಟ್ಟರೆ ಬೆಟ್ಟದಲ್ಲಿ ಕುಡಿಯುವ ನೀರಿಗೆ ಬೇರೆ ಯಾವ ಸೌಕರ್ಯವೂ ಇಲ್ಲ.

ಈ ಕೊಳಗಳಿರುವ ಬಂಡೆಗಳಿಂದ ಕೆಳಗೆ ಇಳಿಜಾರಾದ ಸ್ಥಳದಲ್ಲಿ ಕತ್ತರಿಸಿ ಹಾಕಲ್ಪಟ್ಟ ಬಂಡೆಗಳು ಅಲ್ಲಲ್ಲಿ ಬಿದ್ದಿವೆ. ಈ ಬಂಡೆಗಳನ್ನು ಈ ಸಂಸ್ಕೃತಿಯ ಮಾನವನು ಸಮಾಧಿಗಳನ್ನು ನಿರ್ಮಿಸಲು ಬಳಸಿರುವ ಸಾಧ್ಯತೆ ಇದೆ. ಹಾಗೂ



ಚಿತ್ರ-೮ ಭೀಮನಪಾದದ ಸುತ್ತಮುತ್ತಲ ಅವಶೇಷಗಳು

ಭೀಮನ ಕೊಳದ ಮೆಟ್ಟಿಲುಗಳನ್ನು ಈ ಮಾನವನೇ ನಿರ್ಮಿಸಿಕೊಂಡಿದ್ದಾನೆಯೇ ಎಂಬುದರ ಬಗೆಗೆ ಹೆಚ್ಚಿನ ಸಂಶೋಧನೆ ಆಗಬೇಕಿದೆ. ಇಲ್ಲಿಂದ ಮುಂದೆ ಸುಮಾರು ೫೦ ಅಡಿ ಎತ್ತರದತ್ತ ಸಾಗಿದರೆ ಬೃಹದಾಕಾರದ ಗುಹೆ, ಕಲ್ಲಾಸರೆಗಳಲ್ಲಿ ಗಿಡಬಳ್ಳಿಗಳಿಂದ ಮುಚ್ಚಿದ್ದು ವಿದ್ಯಾರ್ಥಿಗಳ ಸಹಕಾರದೊಂದಿಗೆ ಕತ್ತರಿಸಿ ಒಳ ನಡೆದರೆ ರಾಶಿ ರಾಶಿ ಕೆಂಪುಬಣ್ಣದ, ಕಪ್ಪುಬಣ್ಣದ, ಕೆಂಪು ಮತ್ತು ಕಪ್ಪುಬಣ್ಣದ ಮಡಕೆ ತುಂಡುಗಳು, ಮೂಳೆ ಭಾಗಗಳು, ತೆಳ್ಳನೆಯ ಮಡಕೆ ತುಂಡುಗಳು, ಅಲಂಕಾರಗೊಂಡ ಮಡಕೆ ಭಾಗಗಳು ದೊರಕಿದ್ದು ಎಲೆಯ ರೆಂಬೆಯಾಕಾರದ,

ಕಾಲುವೆಯಾಕಾರದ, ಅಡ್ಡ ಪಟ್ಟಿಯಾಕಾರದ, ಕಂಠಗಳ ಮೇಲೆ ಬೆರಳಿನ ಮೊನೆಯಿಂದ ಒತ್ತಿರುವ, ಕಂಠದಿಂದ ಕೆಳಕ್ಕೆ ನೇರಗೆರೆ ಎಳೆದು ಅಲಂಕರಿಸಿರುವ ಮತ್ತು ಮೇಲೆ ಕೆಂಪು ಬಣ್ಣ ಲೇಪನ ಮಾಡಿರುವ ಇತರೇ ಅಲಂಕಾರಗೊಂಡ ಮಡಕೆ ಭಾಗಗಳು ದೊರಕಿದ್ದು, ಇವು ಅಂತ್ಯ ಬೃಹತ್ ಶಿಲಾಯುಗ ಸಂಸ್ಕೃತಿಯ ಮಡಕೆಯ ತುಂಡುಗಳಾಗಿವೆ. ಈ ತರಹದ ಮಡಕೆಯ ತುಂಡುಗಳು ಟಿ. ನರಸೀಪುರ[೩೯] ಅಲಂಕಾರಿಕ ಮಡಕೆಗಳ ಹಾಗೆ ಸಾಮ್ಯತೆ ಇದೆ. ಮೂಳೆಗಳು, ದುಂಡಾದ ಮಣ್ಣಿನ ಬಿಲ್ಲೆಗಳು, ಕಬ್ಬಿಣ ಕರಗಿಸಿದ ನಂತರ ಉಳಿಯುವ ಕಿಟ್ಟ ಚಿಕ್ಕ ಮಡಕೆ ತಳದ ಭಾಗಗಳು, ಕಬ್ಬಿಣದ ಅದಿರು, ಕಬ್ಬಿಣದ ತುಂಡುಗಳು ಇತರೇ ಅವಶೇಷಗಳು ಹೇರಳವಾಗಿದ್ದು ಸಂಗ್ರಹಿಸಿಕೊಂಡು ಮುಂದೆ ನಡೆದೆವು. ಅಲ್ಲಿಂದ ಸುಮಾರು ೫೦ ಅಡಿ ಮೇಲೆ ಹೆಬ್ಬಂಡೆಯ ಕಲ್ಲಾಸರೆಯ ಪಕ್ಕದಲ್ಲಿ ಕತ್ತರಿಸಿ ಹಾಕಲ್ಪಟ್ಟ ಬಂಡೆಗಳು, ಬಂಡೆಗಳನ್ನು ಎತ್ತಿ ನೋಡಿದರೆ ಈ ಸಂಸ್ಕೃತಿಯ ವಿವಿಧ ನಮೂನೆಯ ಅವಶೇಷಗಳು ದೊರಕಿದವು. ಪಕ್ಕದಲ್ಲೇ ಹುಟ್ಟುಗುಂಡಿನ ಮೇಲೆ ಒರಳುಕಲ್ಲು ಇದ್ದು ಗೃಹ ಕಾರ್ಯದಲ್ಲಿ ಉಪಯೋಗಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ಇಲ್ಲಿಂದ ಮುಂದೆ ಸಾಗಿದರೆ ಬೆಳೆದ ಹುಲ್ಲಿನ ಮಧ್ಯ ಭಾಗದಲ್ಲಿ ಕೈ ಬೀಸಿ ಕರೆಯುವಂತಿದ್ದ ರಾಶಿಗಟ್ಟಲೇ ಅವಶೇಷಗಳು ನಮ್ಮನ್ನು ದಿಗ್ಭ್ರಮೆಗೊಳಿಸಿದವು (ಚಿತ್ರ ೭). ಇಲ್ಲಿಯ ಸ್ವಲ್ಪ ಮಣ್ಣನ್ನು ಸಡಿಲಿಸಿದಾಗ ಪೂರ್ಣ ಪ್ರಮಾಣದ ಕೆಂಪು ಮತ್ತು ಕಪ್ಪುಬಣ್ಣದ ಮಡಕೆ (ಚಿತ್ರ ೮) ದೊರಕಿದ್ದು ಚಂದ್ರವಳ್ಳಿ,[೪೦] ಬ್ರಹ್ಮಗಿರಿ,[೪೧] ಹೆಗ್ಗಡೆಹಳ್ಳಿ,[೪೨] ಟಿ, ನರಸೀಪುರ[೪೩] ಉತ್ಖನನಗಳ ಮಡಕೆಗಳ ಹಾಗೆ ಹೋಲಿಕೆ ಇದೆ. ಹಾಗೂ ದೊಡ್ಡ ಮಡಕೆಗಳ ಭಾಗಗಳು, ತಳದ ಭಾಗಗಳು, ತೆಳ್ಳನೆಯ ಕೆಂಪು, ಕಪ್ಪುಬಣ್ಣದ ಮಡಕೆ ಭಾಗಗಳು, ಗಾಜಿನಂತೆ ಹೊಳೆಯುವ ಮಡಕೆ ಭಾಗಗಳು, ಕಾಲಿನ ಉದ್ದನೆಯ ಮೂಳೆ ಈ ತರಹದ ಮೂಳೆ ಟಿ. ನರಸೀಪುರದಲ್ಲಿ[೪೪] ದೊರಕಿದ್ದು ಸಾಮ್ಯತೆ ಇದೆ. ಇತರೆ ಮೂಳೆ ಭಾಗಗಳು, ದುಂಡಾದ ಕೆಂಪುಬಣ್ಣದ ಬಿಲ್ಲೆ,[೪೫] ದುಂಡಾದ ಕಲ್ಲಿನ ಬಿಲ್ಲೆ, ಸಮಾಧಿಗಳಲ್ಲಿ ಬಳಸುವ ದಪ್ಪ ಮಡಕೆ ಭಾಗಗಳು ನೀರಿನ ಹೂಜಿಗಳನ್ನು ಮುಚ್ಚಲು ಬಳಸುವ ಕಪ್ಪು ಬಣ್ಣದ ಮುಚ್ಚಳ, ಸಮಾಧಿಗಳಲ್ಲಿ ಬಳಸುವ ಕಲ್ಲುಗಳು, ಸಮಾಧಿ ಮೇಲೆ ಇಡುವ ಉದ್ದನೆಯ ಕಲ್ಲು ಇತರೆ ಅವಶೇಷಗಳು ದೊರಕಿದ್ದು, ಈ ಸ್ಥಳ "ಹಾಳಾದ ಸಮಾಧಿ ಸ್ಥಳ"ವೆಂದು ಹೇಳಬಹುದು. ಈ ಸ್ಥಳದ ಸುತ್ತಮುತ್ತ ಪರಿಶೀಲಿಸಿದರೆ ಅವಶೇಷಗಳ ರಾಶಿ ರಾಶಿ ಗೋಚರಿಸುತ್ತದೆ. ಮುಂದೆ ತುಟ್ಟತುದಿಯ ಏಕಶಿಲೆಯ ಗುಡ್ಡದ ಕಡೆಗೆ ನಡೆದಾಗ ಈ ಗುಡ್ಡ ಹತ್ತಲೂ ಅಸಾಧ್ಯವಾದಾಗ ಸುತ್ತಮುತ್ತಲ ಗುಹೆಗಳನ್ನು ಪರಿಶೀಲಿಸಿ ಪಶ್ಚಿಮಾಭಿಮುಖವಾಗಿ ಗುಡ್ಡದಿಂದ ಕೆಳಗೆ ಇಳಿಯಲಾರಂಭಿಸಿದೆವು. ಮತ್ತೆ ಸ್ವಲ್ಪ ಸಮತಟ್ಟಾದ ಪ್ರದೇಶದ ಕಲ್ಲಾಸರೆಗಳಲ್ಲಿ

ಮಡಕೆ ತುಣುಕುಗಳು, ಮೂಳೆ ಭಾಗಗಳು, ಸಮತಟ್ಟಾದ ಭೂಭಾಗದ ಮಧ್ಯದಲ್ಲಿರುವ ಬಂಡೆಗಳ ಮೇಲೆ ಎರಡು ಒರಳು ಕಲ್ಲುಗಳು ಕಂಡುಬಂದವು. ಸುತ್ತ ನೋಡಿದಾಗ ಕಡಿದಾದ ಹೆಬ್ಬಂಡೆಗಳು ಕೆಳಗೆ ಕಲ್ಲಾಸರೆ, ಗುಹೆಗಳ ಹತ್ತಿರ ಹೋದಾಗ ಸುತ್ತಮುತ್ತ ಚೆಲ್ಲಾಡಿದ ಅವಶೇಷಗಳು ಕಂಡುಬಂದವು. ಹಾಗೂ "ತ್ರಿಭುಜಾಕಾರದ ನೈಸರ್ಗಿಕ ಗುಹೆ ಮನೆಯಾಕಾರದಲ್ಲಿರುವುದು" ಪತ್ತೆಯಾಯಿತು. ಇಲ್ಲಿ ಮಾನವ ವಾಸದ ಸ್ಪಷ್ಟವಾದ ಕುರುಹುಗಳು ಕಂಡುಬಂದವು. ಮುಂದೆ ಕಡಿದಾದ ಗುಡ್ಡ ಇಳಿಯುತ್ತಾ ಸಾಗುತ್ತಿರುವಾಗ ಮಡಕೆ ಚೂರುಗಳದೇ ದರ್ಬಾರು. "ಒಟ್ಟಾರೆ ಇಡೀ ಗುಡ್ಡವೇ ಬೃಹತ್ ಶಿಲಾಯುಗ ಸಂಸ್ಕೃತಿಯ ಮಾನವನ ಅವಶೇಷಗಳಿಂದ ಆವರಿಸಿರುವುದು ಭೂ ಅನ್ವೇಷಣೆಯಿಂದ ತಿಳಿದುಬಂದಿತು. ಇಷ್ಟೆಲ್ಲಾ ಗುಡ್ಡವನ್ನು ಪರಿಶೀಲಿಸಿದರೂ ಯಾವುದೇ ಶಾಸನವಾಗಲಿ, ಬಣ್ಣದ ಚಿತ್ರಗಳಾಗಲಿ ಕಂಡುಬರಲಿಲ್ಲ. ಆದರೆ ಕುಂತಿಬೆಟ್ಟ ಒನಕೆಬೆಟ್ಟಗಳಲ್ಲಿ ತಲಾ ಒಂದು ಕುಟ್ಟಿ ತಯಾರಿಸಿದ್ದೆರಡು ನವಿಲು ರೇಖಾ ಚಿತ್ರಗಳುಕಂಡುಬಂದವು.

ಸುಮಾರು ೧೦೦೦-೧೫೦೦ ಅಡಿ ಎತ್ತರದ ಈ ಗುಡ್ಡದ ಮೇಲೆ ಯಾವ ಭಾಗಕ್ಕೆ ಹೋದರೂ ಬೃಹತ್ ಶಿಲಾಯುಗದ ಅವಶೇಷಗಳೇ ಕಂಡುಬರುತ್ತಿದ್ದು ಇಷ್ಟು ಪ್ರಮಾಣದಲ್ಲಿ ಯಾವ ಗುಡ್ಡದ ಮೇಲೆಯೂ ಕಂಡುಬಂದಿಲ್ಲವೇನೋ ಎಂದು ಭಾಸವಾಗುತ್ತದೆ. ಒಟ್ಟಾರೆ "ಭೀಮನಪಾದದ ಸುತ್ತಮುತ್ತಲ" ಭೂಭಾಗದಲ್ಲಿ ಈ ಸಂಸ್ಕೃತಿಯ ಮಡಕೆಗಳು ಹೇರಳವಾಗಿ ದಪ್ಪ, ಒರಟಾದ, ವಿವಿಧ ಬಣ್ಣಗಳ ಮಡಕೆಗಳು ದೊರಕಿದರೆ, ಅಲ್ಪ ಪ್ರಮಾಣದಲ್ಲಿ ಗಾಜಿನಂತೆ ಹೊಳೆಯುವ ಮಡಕೆ ಭಾಗಗಳು, ಕೆಂಪು ಬಣ್ಣ ಲೇಪನ ಮಾಡಿರುವ ಮಡಕೆ ಭಾಗಗಳು, ಗ್ರಾಫಿಟಿ ಗುರುತು ಇಲ್ಲದಿರುವ ಮಡಕೆ ಭಾಗಗಳು ದೊರಕಿವೆ. "ಅನ್ನಪೂರ್ಣೇಶ್ವರಿ ದೇವಾಲಯದ ನೆಲೆಯಲ್ಲಿ" ಗಾಜಿನಂತೆ ಹೊಳೆಯುವ ಕಪ್ಪು, ಕೆಂಪು, ಕೆಂಪು ಮತ್ತು ಕಪ್ಪುಬಣ್ಣದ ಮಡಕೆತುಂಡುಗಳು ಗ್ರಾಫಿಟಿ ಗುರುತುಗಳು ಇರುವ ಮಡಕೆ ಭಾಗಗಳು, ಬಣ್ಣ ಲೇಪನ ಮಾಡಿರುವ ಅಲಂಕಾರಗೊಂಡ ಮಡಕೆ ಭಾಗಗಳು ಹೆಚ್ಚಿಗೆ ದೊರಕಿದ್ದು, ಕರ್ನಾಟಕದಲ್ಲಿ ಉತ್ಖನನಗೊಂಡ ಪ್ರಮುಖ ನೆಲೆಗಳಲ್ಲಿ ದೊರೆತ ಗ್ರಾಫಿಟಿ ಗುರುತುಗಳ ಹಾಗೆ ಸಾಮ್ಯತೆ ಇದೆ. ಗುಡ್ಡದ ಮೇಲಿನ ಮನುಷ್ಯ ಬಳಸಿರುವ ಅವಶೇಷಗಳಿಗೂ, ಗುಡ್ಡದ ಕೆಳಗಿನ ಮನುಷ್ಯ ಬಳಸಿರುವ ಅವಶೇಷಗಳಿಗೂ ವ್ಯತ್ಯಾಸವಿದ್ದು ಈ ನೆಲೆಗಳ ಮಾನವನ ಬಗ್ಗೆ ಸ್ಪಷ್ಟ ಮಾಹಿತಿ ತಿಳಿಯಲು ಕಾಲಮಾನ ತಿಳಿಯಲು ಅಗತ್ಯವಾಗಿ ಈ ನೆಲೆಗಳಲ್ಲಿ ಉತ್ಖನನದ ಅಗತ್ಯತೆ ಇದೆ.

ಬೃಹತ್ ಶಿಲಾಯುಗದ ಸಂಸ್ಕೃತಿಯ ಅವಶೇಷಗಳಿರುವ ಗುಡ್ಡದ ಮೇಲಿನ ಈ ನೆಲೆ ಕರ್ನಾಟಕದ ಅಪರೂಪ ನೆಲೆಗಳಲ್ಲಿ ಒಂದಾಗಿದ್ದು ಈ ನೆಲೆ ನೈಸರ್ಗಿಕವಾಗಿ ಅಲ್ಪಸ್ವಲ್ಪ ಹಾಳಾಗಿರುವುದು ಬಿಟ್ಟರೆ, ಉಳಿದ ಭಾಗ ಯಾವುದೇ ಹಾನಿಯಾಗದೇ ಯಥಾಸ್ಥಿತಿ ಉಳಿದುಬಂದಿದೆ. ಕಾರಣ ಇಷ್ಟು ಎತ್ತರದ ಕಡಿದಾದ ಬೆಟ್ಟದ ಹೆಬ್ಬಂಡೆಗಳನ್ನು ದಾಟಿ ಬರಲು ಪ್ರಾಣಿಗಳಿಗೆ, ಸಾಮಾನ್ಯ ಮನುಷ್ಯರಿಗೆ ಅಸಾಧ್ಯವಾಗಿರುವುದರಿಂದ ನೆಲೆ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬಂದಿದೆ.

ನೆಲೆಯ ಪರಿಸರವು ಆದಿ ಹಳೇಶಿಲಾಯುಗದ ಮಾನವನಿಂದ ಹಿಡಿದು ಇಂದಿನವರೆಗೂ ಜನವಾಸ್ತವ್ಯದ ಪ್ರದೇಶವಾಗಿದ್ದು ಬೆಟ್ಟದ ನೆಲೆಯನ್ನು ಕೇಂದ್ರ, ರಾಜ್ಯ ಪುರಾತತ್ವ ಇಲಾಖೆಗಳು ಇತ್ತ ಕಡೆ ಗಮನಹರಿಸಿ ಇಡೀ ಕರ್ನಾಟಕದಲ್ಲಿ ಗುಡ್ಡದ ಮೇಲಿನ ಅಪರೂಪದ ನೆಲೆಗಳಲ್ಲಿ ಒಂದಾದ ಈ ನೆಲೆಯನ್ನು ಅತಿ ಜರೂರಾಗಿ ಉತ್ಖನನ ಮಾಡುವುದು ಅತಿ ಅಗತ್ಯವಾಗಿದೆ.

ಅಡಿಟಿಪ್ಪಣಿಗಳು

೧. ಮಂಡ್ಯ ಜಿಲ್ಲಾ ಗೈಜೆಟಿಯರ್, ೨೦೦೩, ಪುಟ ೩೨.
೨. ದೇಜಗೌ, ಸಿರಿಯೊಡಲು, ಮಂಡ್ಯ, ೧೯೯೪, ಪುಟ ೨೫-೨೬
೩. ವಿದ್ಯಾರ್ಥಿಗಳೊಂದಿಗೆ ಕ್ಷೇತ್ರ ಕಾರ್ಯ ಮಾಡಿ ಮಾಹಿತಿ ಸಂಗ್ರಹಿಸಿದ್ದೇನೆ.
೪. ಮಂಡ್ಯ ಜಿಲ್ಲಾ ಗೈಜೆಟಿಯರ್, ೨೦೦೩, ಪುಟ ೧೩
೫. ಕರ್ನಾಟಕ ಪರಂಪರೆ ಭಾಗ-೧, ೧೯೭೦, ಪುಟ ೧೩
೬. ಅದೇ, ಪುಟ ೧೬
೭. ಅದೇ, ಪುಟ ೩೨
೮. ಅದೇ, ಪುಟ ೧೫-೧೬
೯. ಅದೇ, ಪುಟ ೨೫
೧೦. ಅದೇ, ಪುಟ ೪೮೯-೪೯೦
೧೧. ಫೂಟ್.ಆರ್.ಬಿ. : ದಿ ಫೂಟ್ ಕಲೆಕ್ಷನ್ ಆಫ್ ಪ್ರಿ ಹಿಸ್ಟಾರಿಕ್ ಅಂಡ್ ಪ್ರೋಟೋಹಿಸ್ಟಾರಿಕ್ ಆ್ಯಂಟಿಕ್ವಿಟೀಸ್ ಮದ್ರಾಸ್, ೧೯೧೬, ಪು. ೭೩-೭೪.
೧೨. ಡಾ. ಎಂ.ಎಸ್. ಕೃಷ್ಣಮೂರ್ತಿ : ಇತಿಹಾಸ ದರ್ಶನ, ಕುಂತಿಬೆಟ್ಟದ ಪ್ರಾಕ್ತಾನಾನ್ವೇಷಣೆ, ಒಂದು ಟಿಪ್ಪಣಿ ಪುಟ ೧-೩, ೧೯೮೯
೧೩. ಶೇಷಾದ್ರಿ .ಎಂ. : ರಿಪೋರ್ಟ್ ಆನ್ ದಿ ಎಕ್ಸ್‌ಕವೇಶನ್ಸ್ ಅಟ್ ಟಿ. ನರಸೀಪುರ - ೧೯೭೧, ಪು. ೧೩೪-೧೩೫
೧೪. ರಾಮದಾಸರೆಡ್ಡಿ ಎಸ್.ಜಿ. : ವೇದಾವತಿ ನದಿಯ ತೀರದ ಒಂದು ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ ಮಹಾ ಪ್ರೌಢಪ್ರಬಂಧ) ೨೦೦೬, ಪುಟ ೧೧೨
೧೫. ರಾಮಿರೆಡ್ಡಿ. ವಿ : ಎ ಸ್ಟಡಿ ಆಫ್ ದಿ ನಿಯೋಲಿಥಿಕ್ ಕಲ್ಚರ್ ಆಫ್ ಸೌತ್ ವೆಸ್ಟ್ರನ್ ಆಂಧ್ರಪ್ರದೇಶ, ೧೯೭೮, ಪುಟ ೫೨, ಚಿತ್ರ ೪, ನಂ. ೧೯

೧೬. ಎಂ.ಎಸ್. ನಾಗರಾಜರಾವ್ : ಪ್ರೋಟೋ ಹಿಸ್ಟಾರಿಕ್ ಕಲ್ಚರ್ಸ್ ಆಫ್ ತುಂಗಭದ್ರ ವ್ಯಾಲಿ, ೧೯೮೪, ಪ್ಲೇಟು VIII

೧೭. ನರಸಿಂಹಮೂರ್ತಿ. ಎ.ವಿ. : ಆರ್ಕಿಯಾಲಜಿ ಆಫ್ ಕರ್ನಾಟಕ, ೧೯೭೮, ಪ್ಲೇಟು VII

೧೮. ಡಿ.ವಿ. ದೇವರಾಜು, ಬಿ.ಆರ್. ಗೋಪಾಲ್, ಶೇಷ ಚಂದ್ರಿಕ – ೧೯೯೫, ಪುಟ ೨೨೪, ೨೨೬, ಚಿತ್ರ ೪

೧೯. ರಾಮದಾಸರೆಡ್ಡಿ ಎಸ್.ಜಿ. : ವೇದಾವತಿ ನದಿಯ ತೀರದ ಒಂದು ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ ಮಹಾಪ್ರಬಂಧ) ೨೦೦೬, ಪ್ಲೇಟು VII

೨೦. ಫೂಟ್. ಆರ್.ಬಿ. : ಪೂರ್ವೋಕ್ತ, ೧೯೧೬, ಪುಟ ೯೮, ಪ್ಲೇಟು ನಂ. ೮–೧೮೨

೨೧. ರಾಮದಾಸರೆಡ್ಡಿ ಎಸ್.ಜಿ. : ಪೂರ್ವೋಕ್ತ, ೨೦೦೬, ಪುಟ ೧೦೫, ಚಿತ್ರ ೧೫

೨೨. ರಾಮದಾಸರೆಡ್ಡಿ ಎಸ್.ಜಿ. : ಪೂರ್ವೋಕ್ತ, ೨೦೦೬, ಚಿತ್ರ ೧೬

೨೩. ಮೈಲೋನಸ್ ಈ ಜಾರ್ಜ್ : ಎಕ್ಸ್‌ಕವೇಷನ್ ಅಟ್ ಒಲಿನ್‌ಥಸ್ (Olynthus) ೧೯೨೯, ಪುಟ ೭೮–೭೯, ಚಿತ್ರ ೮೩

೨೪. ಡಾ. ಆಲ್ಚಿನ್. ಎಫ್.ಆರ್. : ಪಿಕ್ಲಿಹಾಳ್ ಎಕ್ಸ್‌ಕವೇಷನ್ಸ್, ೧೯೬೦, ಪುಟ ೮೭, ಪ್ಲೇಟು ೪೯b

೨೫. ಶೇಷಾದ್ರಿ ಎಂ. ಪೂರ್ವೋಕ್ತ, ೧೯೭೧, ಪ್ಲೇಟು ೧೩೪–೧೩೫

೨೬ ಡಾ. ಆಲ್ಚಿನ್ ಎಫ್.ಆರ್. : ಪೂರ್ವೋಕ್ತ, ೧೯೬೦, ಪುಟ ೮೭, ಪ್ಲೇಟು ೪೪, ೪೬

೨೭. ರಾಮದಾಸರೆಡ್ಡಿ ಎಸ್.ಜಿ. : ಪೂರ್ವೋಕ್ತ, ೨೦೦೬, ಚಿತ್ರ ೬೮, ೬೯.

೨೮. ಅದೇ, ಚಿತ್ರ ೬೬, ಪ್ಲೇಟು ೩–೪

೨೯. ಶೇಷಾದ್ರಿ ಎಂ. : ಪೂರ್ವೋಕ್ತ ೧೯೭೧, ಪುಟ ೧೬೬–೧೬೮

೩೦. ಮಾರ್ಟಿಮರ್ ವ್ಹೀಲರ್. : ಏನ್ಷಿಯೆಂಟ್ ಇಂಡಿಯಾ ೪, ೧೯೪೭, ಪು. ೨೧೦

೩೧. ರಾಮದಾಸರೆಡ್ಡಿ. ಎಸ್.ಜಿ. : ಪೂರ್ವೋಕ್ತ, ೨೦೦೬, ಚಿತ್ರ ೭೫, ೭೯

೩೨. ಅದೇ, ೨೦೦೬, ಚಿತ್ರ ೯೨

೩೩. ಅದೇ, ೨೦೦೬, ಚಿತ್ರ ೪೮

೩೪. ಡಾ. ಅ. ಸುಂದರ ಅವರೊಂದಿಗೆ ಸಂದರ್ಶನ

೩೫. ರಾಮದಾಸರೆಡ್ಡಿ ಎಸ್.ಜಿ. : ಪೂರ್ವೋಕ್ತ, ೨೦೦೬, ಪುಟ ೧೭೦, ಚಿತ್ರ ೭೪, ೭೫

೩೬. I.A.R. ೧೯೫೬–೫೭, ಪುಟ ೩೧–೩೪ ಮತ್ತು ೧೯೫೭–೫೮, ಪುಟ ೩೪

೩೭. ವ್ಹೀಲರ್, ಆರ್.ಇ.ಎಂ. : ೧೯೪೮, ಪೂರ್ವೋಕ್ತ, ಪುಟ ೧೯೪–೧೯೯

೩೮. ಗುರುರಾಜರಾವ್. ಬಿ.ಕೆ. : ದಿ ಮೆಗಲಿಥಿಕ್ ಕಲ್ಚರ್ ಇನ್ ಸೌತ್ ಇಂಡಿಯಾ, ೧೯೭೨, ಪುಟ ೨೪೨–೨೪೩

೩೯. ಶೇಷಾದ್ರಿ ಎಂ. : ಪೂರ್ವೋಕ್ತ, ೧೯೭೧, ಪುಟ ೧೬೨–೧೬೪

೪೦. ವ್ಹೀಲರ್. ಆರ್.ಇ.ಎಂ. : ೧೯೪೮, ಚಂದ್ರವಳ್ಳಿ, ಪುಟ ೨೭೫

೪೧. ಅದೇ, ಬ್ರಹ್ಮಗಿರಿ, ಪುಟ ೨೩೩–೨೩೪

೪೨. ದೇವರಾಜ್, ಡಿ.ವಿ. ಜೋಶಿ. ಎಸ್.ವಿ.ಸಿ.ಎಸ್. ಪಾಟೀಲ್, ಗಂಗಾಧರ, ಹೆಗ್ಗಡಹಳ್ಳಿ ಎರಿಪೋರ್ಟ್ ಅನ್ ಮೆಗಲಿಥಿಕ್ ಎಕ್ಸ್‌ಕವೇಶನ್, ೧೯೯೫, ಪುಟ ೨೦, ಚಿತ್ರ ೨೭

೪೩. ಶೇಷಾದ್ರಿ ಎಂ. : ಪೂರ್ವೋಕ್ತ, ೧೯೭೧, ಪುಟ ೧೬೪, ಪ್ಲೇಟು ೬೭

೪೪. ಅದೇ, ಪುಟ ೧೫೧, ಪ್ಲೇಟು ೪೪ ಬಿ.

೧೧. ಬಾಳ ಮುಸ್ಸಂಜೆಯ ನೋವುಗಳು

– *ಜೆ. ಲೋಹಿತ್*

ಹುಟ್ಟಿದ ಪ್ರತಿಯೊಬ್ಬ ಮನುಷ್ಯನೂ ಬಾಲ್ಯ, ಯೌವನ ಮತ್ತು ಮುಪ್ಪು ಎಂಬ ಮೂರು ಅವಸ್ಥೆಗಳನ್ನು ಹೊಂದಲೇಬೇಕು. ಹುಟ್ಟಿದ ಮೇಲೆ ಸಾವು ಹೇಗೆ ಖಚಿತವೋ ಸೂರ್ಯೋದಯವಾದ ಮೇಲೆ ಸೂರ್ಯಾಸ್ತವಾಗುವುದು ಎಷ್ಟು ಸತ್ಯವೋ ಹಾಗೆಯೇ ಈ ಮೂರೂ ಅವಸ್ಥೆಗಳು ಒಂದಾದ ಮೇಲೆ ಒಂದು ಮನುಷ್ಯನನ್ನು ಆವರಿಸುವುದೂ ಅಷ್ಟೇ ಖಚಿತ. ಇದರಲ್ಲಿ ಎರಡು ಮಾತಿಲ್ಲ.

ಮಾನವನಿಗೆ ದೇವರು ಕೊಟ್ಟಿರುವುದು ೧೦೦ ವರ್ಷದ ಪೂರ್ಣ ಆಯಸ್ಸನ್ನು. ಇದರಲ್ಲಿ ಬಾಲ್ಯಾವಸ್ಥೆ ಆಡುತ್ತಾ ಆಡುತ್ತಾ ಕಳೆದು ಹೋಗಿರುತ್ತದೆ. ಇನ್ನು ೧೮ ವರ್ಷ ತುಂಬಿದ ಮೇಲೆ ಪ್ರೌಢಾವಸ್ಥೆಗೆ ಕಾಲಿಟ್ಟಾಗ ದೇಹದಲ್ಲಿ ಜೀವಕೋಶಗಳ ಬೆಳೆವಣಿಗೆಯಿಂದ ಬದುಕಿನಲ್ಲಿ ಸ್ಫೂರ್ತಿ, ಉತ್ಸಾಹಗಳು ಹೆಚ್ಚುತ್ತಾ ಹೋಗುತ್ತವೆ. ಈ ಸಮಯದಲ್ಲಿ ಓದಿ ವಿದ್ಯಾವಂತನಾಗಿ, ವೃತ್ತಿನಿರತನಾಗಿ, ವಿವಾಹಿತನಾಗಿ ಹೆಂಡತಿ, ಮಕ್ಕಳು, ತಾಯಿ, ತಂದೆ ಎಂದು ಸಂಸಾರ ಜೀವನಕ್ಕೆ ಕಾಲಿಟ್ಟು ಅಲ್ಲಿ ಸುಖವನ್ನು ಅರಸಲು ಪ್ರಯತ್ನಿಸುತ್ತಾನೆ. ಮುಂದೆ ಮನುಷ್ಯನಿಗೆ ಇದೇ ಪ್ರೌಢಾವಸ್ಥೆ-ತಾರುಣ್ಯ ಇರುವುದಿಲ್ಲ. ಅವನಿಗೆ ೪೦-೪೫ ವರ್ಷವಾಗುತ್ತಿದ್ದಂತೆ ಜೀವಕೋಶಗಳ ಬೆಳೆವಣಿಗೆಯಲ್ಲಿ ಕುಂಠಿತವಾಗುತ್ತದೆ. ಅಂದರೆ ಜೀವನದಲ್ಲಿ ದೈಹಿಕ ಶಕ್ತಿ, ಸ್ಫೂರ್ತಿ ಉತ್ಸಾಹ-ಹುಮ್ಮಸ್ಸುಗಳೆಲ್ಲಾ ತನಗೆ ತಾನೇ ಇಳಿಮುಖವಾಗುತ್ತಾ ಹೋಗುತ್ತದೆ. ನಂತರ ೬೦ ವರ್ಷ ತುಂಬುತ್ತಿದ್ದಂತೆ ಮನುಷ್ಯನನ್ನು "ಮುಪ್ಪು" ಆವರಿಸುತ್ತದೆ. ಆಗ ಆತನಿಗೆ ಮುದುಕ, ಹಿರಿಯ ಎಂಬಂತಹ ಪಟ್ಟ ಪ್ರಾಪ್ತವಾಗಿ ಆತನ ಚಟುವಟಿಕೆಗಳೆಲ್ಲ ಸ್ಥಗಿತಗೊಂಡು ಮೂಲೆಗುಂಪಾಗುತ್ತಾನೆ.

ಬಾಲ್ಯ, ಯೌವ್ವನದಲ್ಲೆಲ್ಲಾ ಚೆಲ್ಲಾಟವಾಡುತ್ತಾ, ವಿಲಾಸೀ ಜೀವನವನ್ನು ನಡೆಸುತ್ತಾ, ಕಾಲ ಹೀಗೆಯೇ ಇರುತ್ತದೆ. ನನ್ನ ಶಕ್ತಿ ಉತ್ಸಾಹಗಳು ಹೀಗೆಯೇ ಇರುತ್ತವೆ ಎಂಬ ಅಹಂನಿಂದ ಹಲವು ಚಟಗಳಿಗೆ, ದುರಭ್ಯಾಸಗಳಿಗೆ ಒಳಗಾಗಿರುತ್ತಾನೆ. ಇವುಗಳ ಸವಿ ಸವಿದವನಿಗೆ ಮುಪ್ಪು ಆವರಿಸಿದಾಗ ಅವನ ಬದುಕು ಮೂರಾಬಟ್ಟೆಯಾಗುತ್ತದೆ.

ನೋವು, ಚಿಂತೆಗಳು ಮನವನ್ನು ಮುತ್ತಿಕೊಂಡು ಕಿತ್ತು ತಿನ್ನುವಾಗ ಬದುಕೇ ದುರ್ಭರವಾಗುತ್ತದೆ. ಅಸಹ್ಯವಾಗುತ್ತದೆ.

ಋಗ್ವೇದದಲ್ಲಿ "ಶತಂ ಜೀವ ಪರದೋ ವರ್ಧಮಾನಃ"-ನೀನು ನೂರು ಕಾಲ ಅಭಿವೃದ್ಧಿ ಹೊಂದುತ್ತಾ ಬಾಳು - ಎನ್ನುತ್ತದೆ.

ಆದರೆ ಕೆಟ್ಟ ಅಭ್ಯಾಸಕ್ಕೆ, ಮನಸ್ಸಿನಲ್ಲಿ ಕಹಿ ಭಾವನೆಗಳಿಗೆ, ಅಹಂಗಳಿಗೆ, ನಾನತ್ವಗಳಿಗೆ ಜಾಗ ಕೊಟ್ಟಾಗ ೧೦೦ ವರ್ಷ ಆರೋಗ್ಯವಾಗಿ ಬಾಳುವುದೆಲ್ಲಿಂದ ಬರಬೇಕು.

ಮುಪ್ಪು ಪ್ರತಿಯೊಂದು ಜೀವಿಯ ಕೊನೆಯ ಹಂತ. ಈ ಮುಪ್ಪು ಯಾರಿಗೆ ತಾನೇ ಪ್ರಿಯವಾದುದಾಗಿದೆ ಹೇಳಿ? ಇದು ಯೌವನದ ಶತ್ರು, ನನಗೆ ಯೌವನಾವಸ್ಥೆ ಬೇಕು, ಈ ಮುದಿಯಾವಸ್ಥೆ ಬೇಡ ಎಂದು ಕೇಳುವ ಹಕ್ಕು ಯಾರಿಗೂ ಇಲ್ಲ. ಹಾಗೆಯೇ ಯೌವನಾವಸ್ಥೆಯನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯೂ ಯಾರಿಗೂ ಇಲ್ಲ. ಇದನ್ನು ಯಾರಿಂದಲೂ ತಪ್ಪಿಸಲಾಗದು, ತಡೆಯಲಾಗದು. ಇದು ದೈವ ನಿಯಾಮಕವೂ ಹೌದು! ಪ್ರಕೃತಿಯ ನಿಯಮವೂ ಹೌದು!

ಮುಪ್ಪನ್ನು ವೃದ್ಧಾಪ್ಯ, ವಾರ್ಧಕ್ಯ, ಮುದಿತನ, ಇಳಿವಯಸ್ಸು, ಇಳಿಗಾಲ ಎನ್ನುವರು. ಮುಪ್ಪು ಆವರಿಸಿದವರನ್ನು ಸ್ಥವಿರ, ಮುದುಕ-ಮುದುಕಿ, ವೃದ್ಧ-ವೃದ್ಧೆ, ಹಿರಿತಲೆಯವರು ಎಂದೆಲ್ಲಾ ಹೇಳಲಾಗುವುದು.

"ನಂದಂತ್ಯುದಿತ ಆದಿತ್ಯೇ ನಂದಂತ್ಯಸ್ತ ಮಿತೇ ರವೌ।

ಆತ್ಮನೋ ನಾವ ಬುದ್ಧಂತೇ ಮನುಷ್ಯಾ ಜೀವಿತಕ್ಷಯಮ್"॥

-ಜನರು ಸೂರ್ಯ ಉದಯಿಸುವಾಗಲೂ ಸಂತೋಷಪಡುತ್ತಾರೆ. ಸೂರ್ಯ ಅಸ್ತಮಿಸುವಾಗಲೂ ಸಂತೋಷಪಡುತ್ತಾರೆ. ಇದರಲ್ಲಿ ಒಂದು ಅಗೋಚರವಾದ ಸತ್ಯವಡಗಿದೆ. ಏನೆಂದರೆ ಸೂರ್ಯೋದಯ ಮತ್ತು ಸೂರ್ಯಾಸ್ತಗಳ ಜೊತೆಯಲ್ಲೇ ನಮ್ಮ ಯೌವನವೂ ಕಳೆದು ಹೋಗುತ್ತಿದೆ ಎಂಬುದರ ಅರಿವು ನಮಗಿರುವುದಿಲ್ಲ. ನಾವು ಸೂರ್ಯೋದಯ ಮತ್ತು ಸೂರ್ಯಾಸ್ತಗಳನ್ನು ನೋಡಲು, ಅದರ ಸೊಬಗನ್ನು ಸವಿಯಲು ಕಾತುರರಾಗಿರುತ್ತೇವೆ. ನಮಗೆ ಸೂರ್ಯೋದಯ ಮತ್ತು ಸೂರ್ಯಾಸ್ತಗಳೆರಡೂ ಸಂತಸತರುವ ಕ್ಷಣಗಳಾಗಿರುತ್ತವೆ. ಆದರೆ ಸೂರ್ಯೋದಯ ನಮ್ಮ ಯೌವನದ ಒಂದು ದಿನವನ್ನು ಕಿತ್ತುಕೊಂಡರೆ ಸೂರ್ಯಾಸ್ತವು ಯೌವನದ ಇನ್ನೊಂದು ದಿನವನ್ನು ಕಿತ್ತುಕೊಳ್ಳುವ ಸನ್ನಾಹದಲ್ಲಿರುತ್ತದೆ. ನಮಗೆ ಅದರ ಪರಿವೇ ಇಲ್ಲದೆ ಅವುಗಳ ರಂಗುರಂಗಿನ ಚಿತ್ತಾರಗಳತ್ತ ಮನಸೆಳೆದಿರುತ್ತದೆ. ಆಗಸದತ್ತ ಮುಖ ಮಾಡಿದರೇ ಸಾಕು, ಅಲ್ಲಿನ ಸೊಬಗನ್ನು ಆಸ್ವಾದಿಸುತ್ತಾ ಬೇರೆಲ್ಲ ಜಂಜಡಗಳನ್ನು ಮರೆತು ಮನ ಹಗುರವಾಗಿ ತೇಲುತ್ತಿರುತ್ತೇವೆ. ಎಲ್ಲಾ ಸಂತಸದ ಹಿಂದೆಯೂ ಒಂದು ನೋವು ಸದಾ ಕಾಯುತ್ತಿರುತ್ತದೆ ಎಂಬುದರ ಅರಿವು ಆ

ಕ್ಷಣದಲ್ಲಿ ನಮಗೆ ಗೋಚರಿಸುವುದೇ ಇಲ್ಲ. ಪ್ರಕೃತಿಯ ಈ ನಿಯಮ ಎಷ್ಟೊಂದು ನಿಗೂಢ! ಎಷ್ಟೊಂದು ನಿಬ್ಬೆರಗಲ್ಲವೇ?

ಎಲ್ಲಾ ಕಾಲವೂ ವಸಂತವಾದರೆ, ಎಲ್ಲಾ ವಯಸ್ಸೂ ಯೌವನವಾದರೆ ಬದುಕು ಹೇಗಿರಬಹುದು? ಒಮ್ಮೆ ಯೋಚಿಸಿದರೇ ಸಾಕು, ಮೈ ನವಿರೇಳುವುದು. ಆದರೆ ಜೀವನದಲ್ಲಿ "ಒಂದೇ ಬಾಲ್ಯ, ಒಂದೇ ಹರಯ, ಒಂದೇ ಮುಪ್ಪು". ಅದರಲ್ಲಿ ಯಾವ ಬದಲಾವಣೆಯೂ ಇಲ್ಲ.

ಹಿಂದೆ ಹಲವು ರಾಜರುಗಳಲ್ಲಿ ಹಾಗೂ ತತ್ವಜ್ಞಾನಿಗಳಲ್ಲಿ ತಾವು ಜೀವನಪರ್ಯಂತ ತರುಣರಾಗಿರಬೇಕೆಂಬ ಹಂಬಲವಿದ್ದುದು ಇತಿಹಾಸ ಪ್ರಸಿದ್ಧ ವಿಷಯ. ಆದರೆ ಅದು ಇಂದಿನ ಈ ವೈಜ್ಞಾನಿಕ ಯುಗದವರೆಗೂ ಫಲಿಸಲಾಗಿಲ್ಲವೆಂಬುದೂ ಅಷ್ಟೇ ಸತ್ಯ. 'ಪುರು' ವಿನಂತಹವರು ಸಿಗುವಂತಿದ್ದರೆ ಎಲ್ಲರೂ 'ಯಯಾತಿ'ಗಳಾಗ ಬಹುದಿತ್ತೇನೋ?

ಬಾಲ್ಯ ಎನ್ನುವ ಪೊರೆ ಕಳಚಿ ಹರಯ ಎನ್ನುವ ಅಂಗಳಕ್ಕೆ ಕಾಲಿಡಲು ಎಲ್ಲರಿಗೂ ಆತುರ–ಕಾತುರ. ಆದರೆ ಮುಪ್ಪಿಗೆ ಕಾಲಿಡಲು ಎಲ್ಲರಿಗೂ ಬೇಸರ, ಜಿಗುಪ್ಸೆ. ನಳನಳಿಸುವ ಬಾಲ್ಯ, ಜಗಮಗಿಸುವ ಯೌವನವನ್ನು ಆತ್ಮೀಯತೆಯಿಂದ, ಸಂತೋಷದಿಂದ 'ಬಾ' ಎಂದು ಸ್ವಾಗತಿಸಲು ಮನ ಕಾತರಿಸುವಂತೆ ಮುಪ್ಪನ್ನು 'ತೆರೆದಿದೆ ಮನೆ ಓ ಬಾ ಅತಿಥಿ' ಎಂದು ಸ್ವಾಗತಿಸುವವರು ಯಾರಾದರೂ ಇದ್ದಾರೆಯೇ? ಇಲ್ಲ. ಏಕೆಂದರೆ ಈ ಮುಪ್ಪು ಯಾರಿಗೂ ಬೇಡದ ಅತಿಥಿ. ಇದು ಯಾವುದೇ ಸೌಂದರ್ಯೋಪಾಸನೆಯೂ ಇಲ್ಲದ ಒಂದು ಕುರೂಪಾವಸ್ಥೆ. ಇದನ್ನು ಯಾರೂ ಸ್ವೀಕರಿಸಲು, ಆತ್ಮೀಯತೆಯಿಂದ ಆಹ್ವಾನಿಸಲು ತಯಾರಿಲ್ಲ. ಅದಕ್ಕೆ ಬದಲು ಯೌವನಸ್ಥರಂತೆ ಕಾಣಲು ಜಾಹೀರಾತಿನ ಮೂಲಕ ಪ್ರಚಾರದಲ್ಲಿರುವ ಬಿಳಿಯ ಕೂದಲಿಗೆ ಕಪ್ಪು ಬಣ್ಣವನ್ನು, ಮುಖ ಸುಕ್ಕಾಗದಂತೆ ಕಾಣಲು ಎಲ್ಲಾ ಕಾಸ್ಮೆಟಿಕ್ಸ್‌ಗಳನ್ನು ಬಳಸಿ ಗ್ಲಾಮರ್ ಆಗಿ ಕಾಣಲು ಹಾತೊರೆಯುವರು. ಬ್ಯೂಟಿಪಾರ್ಲರ್‌ಗಳಿಗೆ ಹೋಗಿ ಮೇಕಪ್ ಮಾಡಿಸಿಕೊಳ್ಳುವರು.

ಕವಿ ಷೇಕ್ಸ್‌ಪಿಯರ್ ಅಂತೂ ಮುಪ್ಪನ್ನು ದ್ವೇಷಿಸುತ್ತಾ "ನೀನು ಬರಲೇಬೇಡ ನಿಲ್ಲು" ಎಂದು ಎಚ್ಚರಿಕೆ ನೀಡುತ್ತಾನೆ. ಆದರೆ ಆತ ಎಚ್ಚರಿಸಿದ ಎಂದ ಮಾತ್ರಕ್ಕೆ ಮುಪ್ಪು ಬರದೇ ಇರುವುದೇ ? ಅದು ನಮ್ಮನ್ನು ನೆರಳಿನಂತೆ ಹಿಂಬಾಲಿಸುವುದು.

ಮಹಾಭಾರತದಲ್ಲಿ ಮುಪ್ಪಡರಿರುವ ಭೀಷ್ಮರಿಗೆ ಕೌರವನು ಪಟ್ಟ ಕಟ್ಟಿದಾಗ ಕರ್ಣನು ಯೌವನಾವಸ್ಥೆಯಲ್ಲಿರುವ ತನಗೆ ಪಟ್ಟಕಟ್ಟದೆ ಮುದುಕರಾದ ಭೀಷ್ಮರಿಗೆ ಪಟ್ಟಕಟ್ಟಿದನಲ್ಲ ಎಂದು ಆಕ್ಷೇಪವೆತ್ತುತ್ತಾನೆ. "ತೊಗಲು ಸಡಿಲಿ, ಗಲ್ಲಬತ್ತಿ, ಹಲ್ಲುಬಿದ್ದು, ಎಲುಬು ಎದ್ದು, ತಲೆನಡುಗುವ, ಕೈ ಅಲ್ಲಾಡುವ ಈ ಮುಪ್ಪಿನ ಮುದುಕನಿಂದ

ಏನಾದೀತು?" ಎಂದು ಜರೆಯುವನು. ಆ ನಿಂದನೆಯನ್ನು ಕೇಳಿ ಆ ಮುಪ್ಪಿನಲ್ಲಿಯೂ ಭೀಷ್ಮರು ಆವೇಶದಿಂದ "ಯುದ್ಧದಲ್ಲಿ ಕೃಷ್ಣನು ಚಕ್ರ ಹಿಡಿಯುವಂತೆ, ಅರ್ಜುನನ ರಥ ಹಿಂದೋಡುವಂತೆ ಮಾಡುವೆನು. ದಿನವೊಂದಕ್ಕೆ ಹತ್ತುಸಾವಿರ ಶತ್ರುರಾಜರ ತಲೆಯುರುಳಿಸುವೆನು" ಎಂದು ಶಪಥ ಮಾಡಿ ನುಡಿದಂತೆ ನಡೆದರು. ಆದರೆ ಇಲ್ಲಿ ಭೀಷ್ಮರು ಕರ್ಣನ ಕಠೋರ ನುಡಿಗಳಿಗೆ ಬೇಸತ್ತು ತಮ್ಮ ಮುಪ್ಪನ್ನು ಕಿತ್ತೆಸೆದು ಯೌವನವನ್ನು ಪಡೆಯಲಾಗಲಿಲ್ಲ. ಏಕೆಂದರೆ ಮುಪ್ಪು ತಾನಾಗಿಯೇ ನಮ್ಮನ್ನು ಆವರಿಸಿಕೊಳ್ಳುವ ಸಹಜ ಪ್ರಕ್ರಿಯೆ. ಇದನ್ನು ಕಿತ್ತೆಸೆಯಲು, ಕೊಡವಿಕೊಳ್ಳಲು, ಬೇಡವೆಂದು ತಡೆಹಿಡಿಯಲು ನಾವ್ಯಾರು? ನಮ್ಮ ಕೈಯ್ಯಲ್ಲೇನಿದೆ? ಈ ಮುಪ್ಪು "ಹೊಗಳಲಿ, ಬಯ್ಯಲಿ, ದ್ವೇಷಿಸಲಿ, ಏನು ಬೇಕಾದರೂ ಮಾಡಲಿ ಅದೊಂದು ಸ್ಥಿತಪ್ರಜ್ಞಸ್ಥಿತಿ".

ವೃದ್ಧ ಎಂಬ ಪದಕ್ಕೆ 'ಬೆಳೆದಿರುವ' ಎಂಬ ಅರ್ಥವೂ ಇದೆ. ವಯಸ್ಸಿನಿಂದ ವೃದ್ಧತ್ವ ಬಂದರೆ 'ವಯೋವೃದ್ಧ' ಎಂತಲೂ, ಜ್ಞಾನದಿಂದ ವೃದ್ಧತ್ವ ಬಂದರೆ 'ಜ್ಞಾನವೃದ್ಧ' ಎಂತಲೂ, ಹಾಗೆಯೇ ತಪಸ್ಸಿನಿಂದ ವೃದ್ಧತ್ವ ಬಂದರೆ 'ತಪೋವೃದ್ಧ' ಎಂತಲೂ ಕರೆಯುವರು. ವಯೋವೃದ್ಧರೆಲ್ಲ ಜ್ಞಾನವೃದ್ಧರಲ್ಲ, ಜ್ಞಾನವೃದ್ಧರೆಲ್ಲ ವಯೋವೃದ್ಧರಲ್ಲ. ಉದಾ: ಆಂಗಿರಸನು ಇನ್ನೂ ಶಿಶುವಾಗಿರುವಾಗಲೇ ಹಿರಿಯರಿಗೆ 'ಮಕ್ಕಳಿರಾ' ಎಂದು ಸಂಬೋಧಿಸಿ ಬೋಧನೆ ಮಾಡಿದನಂತೆ ಎನ್ನುತ್ತದೆ ಮನುಸ್ಮೃತಿ. ಅಂದರೆ ವೃದ್ಧತ್ವ ಬರುವುದು ಬರಿಯ ಬಿಳೀ ಕೂದಲಿನಿಂದಲ್ಲ. ಯುವಕನಾದರೂ ಯಾವನು ಅಧ್ಯಯನಶೀಲನಾಗಿರುತ್ತಾನೋ ಆತನನ್ನು 'ಸ್ಥವಿರ'ನೆಂದೇ ದೇವತೆಗಳು ಹೇಳುವರು. ಪಾರ್ವತಿಯು ಉಗ್ರವಾದ ತಪಸ್ಸನ್ನು ಕೈಗೊಂಡಾಗ ಅವಳನ್ನು ಕಾಣಲೆಂದು ಋಷಿಗಳೇ ಅವಳಲ್ಲಿಗೇ ಬಂದರಂತೆ! ಇಲ್ಲಿ ಪಾರ್ವತಿ ಚಿಕ್ಕವಳಾಗಿದ್ದರೇನು? ಅವಳು ಕೈಗೊಂಡ ತಪಸ್ಸು ಹಿರಿದಲ್ಲವೇ? ಆದ್ದರಿಂದಲೇ ಕಾಳಿದಾಸನು "ನ ಧರ್ಮ ವೃದ್ಧೇಷು ವಯಃ ಸಮೀಕ್ಷ್ಯತೇ"– ಧರ್ಮವೃದ್ಧರಲ್ಲಿ ವಯಸ್ಸಿನ ಲೆಕ್ಕವಿಲ್ಲ ಎನ್ನುತ್ತಾನೆ.

ಇಲ್ಲಿ ವಯಸ್ಸಿನ ವಿಚಾರದಲ್ಲಿ ಮುಪ್ಪು ಅನಿವಾರ್ಯವೇ ಹೊರತು ಅಪೇಕ್ಷಣೀಯವಲ್ಲ. ಜ್ಞಾನದ ವಿಷಯದಲ್ಲಿ, ತಪಸ್ಸಿನ ವಿಷಯದಲ್ಲಿ ಮುಪ್ಪು ಅಪೇಕ್ಷಣೀಯ, ಅನಿವಾರ್ಯವಲ್ಲ. ಇಲ್ಲಿ ವೃದ್ಧತ್ವ ತಾನಾಗಿಯೇ ಬರುವುದಿಲ್ಲ. ಇದನ್ನು ಕಷ್ಟಪಟ್ಟು ಆರ್ಜಿಸಿ ಸಂಪಾದಿಸಿಕೊಳ್ಳಬೇಕಾಗುತ್ತದೆ. ವಿದ್ವಾಂಸರ ವಲಯದಲ್ಲಿ ವೃದ್ಧರೆಂದರೆ ಜ್ಞಾನವೃದ್ಧರೇ ಹೊರತು ವಯೋವೃದ್ಧರಲ್ಲ. ಕಾರಣವಿಷ್ಟೇ, ವಯಸ್ಸಾದವರೆಲ್ಲ ವೃದ್ಧರಲ್ಲ. ಏಕೆಂದರೆ ವೃದ್ಧರಾಗಿದ್ದರೂ ವಯಸ್ಸಿಗೆ ತಕ್ಕ ಘನತೆ, ಗಾಂಭೀರ್ಯವಿಲ್ಲದಿದ್ದರೆ ಅವರನ್ನು ವೃದ್ಧರೆನ್ನುವುದಾದರೂ ಹೇಗೆ? ಅವರ ದೇಹಕ್ಕೆ

ಮುಪ್ಪು ಬಂದಿರುವುದಷ್ಟೇ ಹೊರತು ಮನಸ್ಸಿಗೆ ಬಂದಿರುವುದಿಲ್ಲ. ಆದ್ದರಿಂದ ಯಾವಾಗಲೂ ಮನಸ್ಸು ಮಾಗಿ, ಹಿರಿತನದ ಘನತೆ ಬರುವವರೆಗೂ ಅವರು ಬಾಲಕರೇ ಹೊರತು ವೃದ್ಧರಲ್ಲ. ಹಿರಿತನ ಎಂದರೆ ಎಲ್ಲ ಮೋಹಗಳನ್ನೂ ಆಸೆಗಳನ್ನೂ ಬಿಡುತ್ತಾ ಹೋಗುವ ಸ್ಥಿತಿ.

ಕವಿಗಳ ದೃಷ್ಟಿಯಲ್ಲಿ ಮುಪ್ಪು ತ್ಯಾಜ್ಯವಾದುದೂ ಅಲ್ಲ, ಭಾರವಾದುದೂ ಅಲ್ಲ, ಈ ದೇಹದ ನಶ್ವರತೆಯ ಅರಿವು ಉಂಟಾಗಿ ಮನಸ್ಸು ಆತ್ಮಚಿಂತನೆಗೆ ತೊಡಗುವು ದೆಂದರ್ಥ. ಅಂದರೆ ಮುಪ್ಪು ದೇಹಕ್ಕೆ ಮಾತ್ರವೇ ಹೊರತು ಮನಸ್ಸಿಗೂ ಅಲ್ಲ, ಆತ್ಮಕ್ಕೂ ಅಲ್ಲ ಎಂಬ ಅರಿವು ಸ್ಫುರಿಸುತ್ತದೆ. ಹಾಗೆಯೇ ವೃದ್ಧ ಎಂದರೆ ದೇಹದ ಬೆಳೆವಣಿಗೆಯನ್ನು ಮಾತ್ರ ಸೂಚಿಸುತ್ತದೆ. ಮುದುಕ, ಮುದಿಯ ಎನ್ನುವುದು ಪಕ್ವತೆ, ಹಣ್ಣಾಗಿರುವುದನ್ನು ಸೂಚಿಸಿದರೆ, ಯೌವನವು ಚಿಗುರು, ಹೀಚು, ಅಪಕ್ವ ಎಂಬುದನ್ನು ಸೂಚಿಸುತ್ತದೆ. ಹಣ್ಣು ಹಣ್ಣು ಮುದುಕ, ಹಣ್ಣು ಹಣ್ಣು ಮುದುಕಿ ಎಂಬ ಮಾತು ಅರ್ಥಪೂರ್ಣವಾದುದಾಗಿದೆ. ಹಣ್ಣು ಮಾಗಿ, ಕಳಿತು ರಸಪೂರ್ಣವಾಗಿರುವಂತೆ ಮುತ್ತ ಮುದುಕ ಪಕ್ವವಾದ ಅನುಭವದ ಮೂಲಕ ತುಂಬು ತಿಳಿವಳಿಕೆ, ಜ್ಞಾನ ಪಡೆದಿರುತ್ತಾನೆ. ಇಂತಹ ಪರಿಪಕ್ವವಾದ ಅನುಭವಕ್ಕೆ ಮುಪ್ಪು ತಕ್ಕ ರೂಪವಾಗಿದೆ.

ಮುಪ್ಪು ಆವರಿಸಿರುವ ವೃದ್ಧನು ಹೇಗಿರುವನೆಂಬ ವಿಡಂಬನೆಗಳನ್ನು ನೋಡೋಣ: ಶಂಕರರ ಭಜಗೋವಿಂದದಲ್ಲಿ ಈ ರೀತಿ ವರ್ಣಿತವಾಗಿದೆ :

> "ಅಂಗಂ ಗಲಿತಂ ಪಲಿತಂ ಮುಂಡಂ ದಶನವಿಹೀನಂ ಜಾತಂ ತುಂಡಮ್।
> ವೃದ್ಧೋಯಾತಿ ಗೃಹೀತ್ವಾ ದಂಡಂ ತದಪಿನ ಮುಂಚತ್ಯಾಶಾಪಿಂಡಮ್"॥

–ಅಂಗಗಳು ಹಣ್ಣಾಗಿವೆ, ತಲೆ ಬೆಳ್ಳಗಾಗಿದೆ, ಬಾಯಲ್ಲಿ ಹಲ್ಲಿಲ್ಲ, ಕೋಲು ಹಿಡಿದು ನಡೆಯಬೇಕಾಗಿದೆ. ಆದರೂ ಆಶೆ ಮಾತ್ರ ಇನ್ನೂ ಬಿಟ್ಟಿಲ್ಲ!

ಬಸವಣ್ಣನವರೂ ಸಹಾ ತಮ್ಮ ವಚನದಲ್ಲಿ ಮುಪ್ಪಿನ ಚಿತ್ರಣವನ್ನು ಈ ರೀತಿ ನೀಡಿದ್ದಾರೆ :

> "ನರೆ ಕೆನ್ನೆಗೆ, ತೆರೆಗಲ್ಲಕೆ ಶರೀರಗೂಡುವೋಗದ ಮುನ್ನ
> ಹಲ್ಲು ಹೋಗಿ ಬೆನ್ನುಬಾಗಿ ಅನ್ಯರಿಗೆ ಹಂಗಾಗದ ಮುನ್ನ
> ಕಾಲ ಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ
> ಮೊಪ್ಪಿನಿಂದೊಪ್ಪವಳಿಯದ ಮುನ್ನ ಮೃತ್ಯು ಮುಟ್ಟದ ಮುನ್ನ
> ಪೂಜಿಸು ನಮ್ಮ ಕೂಡಲಸಂಗಮದೇವನ"

ಭರ್ತೃಹರಿಯ ವೈರಾಗ್ಯ ಶತಕದಲ್ಲಿ ಮುಪ್ಪಾದವರನ್ನು ಧರೆಯ ಮೇಲಿರುವ ಮರ ಎಂದು ಹೇಳಲಾಗಿದೆ.

"ಎತ್ತಿ ಸಲಹಿದ ತಂದೆ ತಾಯ್ಗಳು ಗತಿಸಿಹೋದರು ಮೊದಲೊಳೆ
ಪ್ರೀತಿಸುವ ಸಹಜಾತರೆಲ್ಲರು ನೆನಪಿನೊಳಗುಳಿದಿರ್ಪರು
ಈಗ ನಮಗಾಗಿಹುದು ಬೀಳುವ ದಿನವ ಲೆಕ್ಕಪ ಕೆಲಸವು
ಹೊಳೆಯ ಹೊಡೆತದ ಮಳಲದಿಬ್ಬದ ಮರವ ಹೋಲಡಲಿರ್ಪೆವು"

ನಾಗವರ್ಮನು ತನ್ನ ಕಾದಂಬರಿ ಸಂಗ್ರಹದಲ್ಲಿ

"ಜರೆಯಿಂದಂ ಕೂಡಿ ಬೆಳ್ಪಂ ತಲೆಯೇ ತಲೆ" ಎಂದು ವೃದ್ಧಾಪ್ಯಕ್ಕೆ ಗೌರವ ಕೊಟ್ಟಿದ್ದಾನೆ.

"ಗಾತ್ರಂ ಸಂಕುಚಿತಂ ಗತಿರ್ವಿಗಲಿತಾ ಭ್ರಷ್ಟಾ ಚ ದಂತಾವಲೀಃ।
ದೃಷ್ಟಿರ್ನಶ್ಯತಿ ವರ್ಧತೇ ಬಧಿರತಾ ವಕ್ತ್ರಂಚಲಾಲಾಯತೇ।
ವಾಕ್ಯಂನಾಪ್ರಿಯತೇ ಚ ಬಾಂಧವಜನೈರ್ಭಾರ್ಯಾನ ಶುಶ್ರೂಯತೇ।
ಹಾ ಕಷ್ಟಂ ಪುರುಷಸ್ಯ ಜೀರ್ಣವಯಸಃ ಪುತ್ರೋಷ್ಯ ಮಿತ್ರಾಯತೇ॥

– ದೇಹ ಸಣ್ಣದಾಗಿದೆ. ನಡೆ ನಿಧಾನವಾಗಿದೆ. ಹಲ್ಲುಗಳು ಬಿದ್ದು ಹೋಗಿವೆ. ಕಣ್ಣು ಮಂಜಾಗಿದೆ, ಕಿವಿ ಮಂದವಾಗಿದೆ, ಬಾಯಿ ಸೋರುತ್ತಿದೆ, ಬಂಧುಗಳು ದೂರವಾಗಿದ್ದಾರೆ. ದೇವರೇ ಮುಪ್ಪೆಂಬ ಈ ಸ್ಥಿತಿ ಯಾರಿಗೂ ಬೇಡ – ಎಂದು ವೃದ್ಧರು ಪರಿತಪಿಸುವುದು ಸಾಮಾನ್ಯ.

ಬೆನ್ನು ಬಾಗಿಸಿಕೊಂಡು ಹುಟ್ಟಿಸಿದ ದೇವರಿಗೆ ತಲೆಬಾಗುತ್ತಾ ಮುಪ್ಪು ಬರುವಾಗ ಅದನ್ನು ಹೊಡೆದೋಡಿಸಲೆಂದು ದೊಣ್ಣೆ ಕೈಗೆ ತೆಗೆದುಕೊಂಡಾಗಲೇ ಎಲ್ಲರೂ ಆತನನ್ನು 'ಅಜ್ಜಾ' ಎಂದು ಕರೆಯುವರು – ಮೊಮ್ಮಕ್ಕಳು ಅಜ್ಜನ ಕೋಲಿದು ನನ್ನಯ ಕುದುರೆ ಎಂದು ಅಜ್ಜನ ಕೋಲು ಹಿಡಿದು ಆಡುವರು – ಇಂತಹ ದೊಣ್ಣೆ ವೃದ್ಧರಿಗೆ ಊರುಗೋಲಾಗಿ ಕಾಲುಗಳು ನಿಶ್ಶಕ್ತವಾಗುತ್ತವೆ.

ಹೀಗೆ ಮುಪ್ಪಿನಿಂದ ಎಲ್ಲರಿಗೂ ಕಳವಳ, ಅಂಜಿಕೆ, ಅಭದ್ರತೆ ಮುತ್ತುತ್ತದೆ. ಅತ್ಯುತ್ತಮ ಕಾಲ ಕಳೆದುಹೋಗಿ ನಿಕೃಷ್ಟ ಕಾಲ ಬಂತಲ್ಲ ಎನ್ನುವ ಚಿಂತೆ ಆವರಿಸುತ್ತದೆ. ಜೊತೆಗೆ ಪ್ರತಿಯೊಬ್ಬರ ಶರೀರದಲ್ಲಿಯೂ ಬದಲಾವಣೆಗಳಾಗುತ್ತವೆ. ಚರ್ಮ ಸುಕ್ಕುಗಟ್ಟುತ್ತದೆ, ಬೆನ್ನು ಬಾಗುತ್ತದೆ, ಕೂದಲು ಉದುರಿ ತಲೆ ಬೋಳಾಗುತ್ತದೆ. ಕಪ್ಪು ಕೂದಲು ಬೆಳ್ಳಗಾಗುತ್ತದೆ, ಧ್ವನಿ ನಡುಗುತ್ತದೆ, ಹಲ್ಲುಗಳು ಉದುರಿ ಬಾಯಿ ಬೋಡಾಗುತ್ತದೆ. ಇದರಿಂದ ಆಹಾರ ಅಗಿದು ತಿನ್ನಲಾಗದೆ ಅನೇಕ ತೊಂದರೆಗಳಿಗೆ ಒಳಗಾಗಬೇಕಾಗುತ್ತದೆ. ಕಣ್ಣಿನ ಪೊರೆಯಿಂದ ದೃಷ್ಟಿ ಮಂದವಾಗುತ್ತದೆ. ಕಿವಿಯ ಗ್ರಹಿಸುವ ಶಕ್ತಿ ಕುಂದಿ ಹೋಗಿ ಕಿವುಡುತನ ಉಂಟಾಗುತ್ತದೆ. ವಾಸನೆ, ರುಚಿಗಳ ಅರಿವೂ ಇರುವುದಿಲ್ಲ. ಮೂಳೆಗಳು ಸವೆದು ಮಂಡಿನೋವು, ಕೀಲು ನೋವುಗಳು ಉಂಟಾಗುವುದು. ಸಂವೇದನಾಂಗಗಳ ಶಕ್ತಿ ಕುಂದುತ್ತದೆ. ಒಟ್ಟಿನಲ್ಲಿ ಮುಪ್ಪು ಆವರಿಸುತ್ತಿದ್ದಂತೆ ಶ್ರವಣೇಂದ್ರಿಯ, ಘ್ರಾಣೇಂದ್ರಿಯ, ರಸನೇಂದ್ರಿಯ, ಸ್ಪರ್ಶೇಂದ್ರಿಯಗಳಲ್ಲಿರುವ ಉಜ್ವಲತೆ ಕಡಿಮೆಯಾಗುವುದು, ಚಿತ್ತೈಕಾಗ್ರತೆ ದೃಢತೆಯನ್ನು

ಕಳೆದುಕೊಂಡು ಚಂಚಲವಾಗುವುದು. ನೆನಪಿನ ಶಕ್ತಿ ಕುಂದಿ ಮರೆವು ಹೆಚ್ಚಾಗುವುದು. ಸುಮ್ಮ ಸುಮ್ಮನೆ ಎಲ್ಲರ ಮೇಲೂ ರೇಗಾಡುವುದು, ಚಿಕ್ಕ ಮಕ್ಕಳು ಅತ್ತರೆ, ಯಾರಾದರೂ ಮನೆಗೆ ಬಂದರೆ, ಬಂದವರು ಇವರನ್ನು ವಿಚಾರಿಸದಿದ್ದರೆ, ಎಲ್ಲರೂ ಜೋರಾಗಿ ಮಾತನಾಡಿಕೊಂಡು ನಗುತ್ತಿದ್ದರೆ ಸಹಿಸಲಾರದಷ್ಟು ದುರ್ಬಲರಾಗುವರು. ಕೈಕಾಲುಗಳಲ್ಲಿ ನಡುಕ ಉಂಟಾಗಿ ಕೆಲಸಕಾರ್ಯಗಳು ಅಸ್ತವ್ಯಸ್ತವಾಗುವುವು. ಲೈಂಗಿಕಾಸಕ್ತಿ ಕುಂದುವುದು. ಒಂಟಿತನವನ್ನನುಭವಿಸುವರು. ಹೀಗೆ ಸದ್ದಿಲ್ಲದೆ ನಮ್ಮನ್ನು ಹಿಂಬಾಲಿಸಿಕೊಂಡು ಬರುವ ಈ ಮುಪ್ಪು ಒಂದು ರೀತಿಯ ಅಸಹಾಯಕತೆ ಮತ್ತು ಪರಾವಲಂಬನೆಯಾಗಿದೆ.

"ಮುಪ್ಪು ಆವರಿಸುತ್ತಿದ್ದಂತೆ ಸಮಾಜ ಹಾಗೂ ಜಗತ್ತಿನೊಂದಿಗೆ ಸಂಬಂಧ ಕಳಚಿಕೊಳ್ಳುತ್ತಾರೆ. ಅವರಿಗೆ ಕ್ರಮೇಣ ಜಗತ್ತು ಕಿರಿದಾಗುತ್ತಲಿದೆ ಅನಿಸುತ್ತದೆ. ಮುಪ್ಪು ವ್ಯಕ್ತಿಯನ್ನು ದ್ವೀಪವನ್ನಾಗಿಸಿ ಬಿಡುತ್ತದೆ."

'ವೃದ್ಧ' ಎಂಬ ಶಬ್ದ ಅರ್ಹತೆ-ಅನರ್ಹತೆ, ಸ್ತುತಿ-ನಿಂದೆಗಳೆರಡಕ್ಕೂ ಪಾತ್ರವಾದುದಾಗಿದೆ. ಗಾದೆಗಳಲ್ಲಿ ಮುಪ್ಪಾದವರ ದುರವಸ್ಥೆಗಳನ್ನು, ಸ್ಥಿತಿಗತಿಗಳನ್ನು, ಸ್ಥಾನ-ಮಾನಗಳನ್ನು ಪದರ ಪದರವಾಗಿ ತೆರೆದಿಡಲಾಗಿದೆ.

ಉದಾ: "ಒಲೆಗೊಂದು ಒದೆಗೊರಡು, ಮನೆಗೊಂದು ಮುದಿಗೊರಡು"
"ಮುಪ್ಪಾದ ಮೇಲೆ ಮೂರು ದಿನವಿರಬಾರದು"
"ಮುದುಕನಿಗೆ ಮುದ್ದೆ ಕೇಡು, ಹಳೇ ಬಟ್ಟೆಗೆ ತ್ಯಾಪೆ ಕೇಡು"
"ಮುದುಕನಾದರೂ ತಡಕೋದು ಬಿಡಲಿಲ್ಲ"
"ಮುದಿಡೊಂಬನ ಲಾಗ"
"ಮುದುಕನ ಬಾಳು ತೀರಿದ ಮೇಲೆ, ಬದುಕು ಬಾಳು ಇದ್ದು ಫಲವೇನು ?
"ಮುದುಕನಾದರೂ ತದಕು ಬಿಡಲಿಲ್ಲ"
"ಮುದುಕ ಮುದುಕ ಅಂತಾನೆ ಮೂರು ಮುದ್ದೆ ಉಣ್ತಾನೆ"
"ಮುದುಕನಿಗೂ ಮುದುಕಿಗೂ ಎಲ್ಲಿ ಏಕಾಂತ ಅಂದ್ರೆ ಮುತ್ತುಗದ ಮರದ ಅಂಡಲ್ಲಿ"
"ಮುದುಕರಿಗೆ ಮೂರಾನೆ ಬಲ, ಹರೇದವರಿಗೆ ಒಂದು ಕೂರೆ ಬಲ"
"ಮುದುಕಿಗೆ ಮೂರಾನೆ ಶಕ್ತಿ ಕೋರೀಗೆ ಮೂರು ಕೋಳಿ ಶಕ್ತಿ"
"ಮುದುಕೀಗೆ ಯಾಕೆ ಮಡಲಕ್ಕಿ"
"ಮುದುಕೀನ ಕರೆಯೋದು ಮುದಿ ಎತ್ತುಕೊಂಡಂಗೆ"
"ಮುತ್ತು ಮುದುಕಿಗೆ ಯಾಕೆ ? ತೊತ್ತೇಕೆ ಗುರುಗಳಿಗೆ"
"ಮುದಿ ಎತ್ತಿನಾರಂಭ, ಮುದಿ ಸೂಳೆಯೊಡನಾಟ"
"ಮುದುಕನಿಗೆ ಮದ್ವೆ ಕೇಡು, ಹಳೇ ಬಟ್ಟೆಗೆ ನೂಲು ಕೇಡು"
"ಮುದಿಗಂಡನ್ನ ಮಗ್ಗುಲಿಗಾಕ್ಕೊಂಡ್ರೆ ಎದ್ದೂ ಮಾಡಲ್ಲ, ನಿದ್ದೇನೂ ಕೊಡೋಲ್ಲ"
"ಮುದುಕನಿಗೆ ಮರುಕವೇ ಗತಿ"
"ಮುದುಕನಿಗೆ ಏಕೆ ಮುತ್ತಿನಂಥ ಹೆಂಡತಿ"
"ಮುಪ್ಪಾದರೂ ಬಿಡಲಿಲ್ಲ ಮುದಬೆಡಗ"
"ಮುಪ್ಪಿನ ಕಾಲದ ಮಗ ಹೆಗಲಿಗೆ ಭಾರ"

"ಮುಪ್ಪಿನ ಸಾವು ಮದುವೆಗೆ ಸಮಾನ"
"ಮುಪ್ಪಿನ ಮುತ್ತೈದೇನ ಮೂಸಿ ಮುತ್ತಿಕ್ಕೋರ್‍ಯಾರು"
"ಮುಪ್ಪಿನಲ್ಲಿ ಮುದುಕಿಯೂ ಪತಿವ್ರತೆ"
"ಮುಪ್ಪಿನ ಸೊಂಟಕ್ಕೆ ಕಚ್ಚೆಯೇ ಭಾರ"
"ಮುಪ್ಪಲ್ಲಿ ಬಂತಂತೆ ಮುದಿ ಬೆಡಗು"
"ಮುಪ್ಪಾದ ಸೂಳೆಗೆ ಜೋಳಿಗೆಯೇ ಗತಿ"
"ಮುಪ್ಪಿನ ಕುದುರೆಗೆ ಬಣ್ಣದ ಲಗಾಮು"
"ಮುದಿ ಎತ್ತಿಗೆ ಬೆಟ್ಟದ ತುದಿಯ ಹುಲ್ಲು ಯಾತಕ್ಕೆ ?
"ಅರವತ್ತಕ್ಕೆ ಅರಳೋ ಮರಳೋ"
"ಹುಣಿಸೇ ಮರ ಮುಪ್ಪಾದರೂ ಹುಳಿಗೆ ಮುಪ್ಪೇ"
"ಮುಪ್ಪು ಮರುಬಾಲ್ಯ" ಎಂಬ ನಾಣ್ಣುಡಿಯೂ ಇದೆ.

ಇದಲ್ಲದೆ ಮುಪ್ಪನ್ನು ಅವಹೇಳನಾರ್ಥದಲ್ಲಿಯೂ, ಬಯ್ಗುಳಗಳಲ್ಲಿಯೂ ಬಳಸಲಾಗುತ್ತದೆ. ವಿಶೇಷವಾಗಿ ಬಯ್ಗುಳಗಳಲ್ಲಿ ಪ್ರಾಣಿಗಳಿಗೆ ಹೋಲಿಸಿಕೊಂಡು ಬಯ್ಯುವುದು ರೂಢಿಯಲ್ಲಿದೆ. ಉದಾ: " ಮುದಿಗೂಬೆ, ಮುದಿಕಪಿ, ಮುದಿಗಡವ, ಮುದಿಕೋತಿ, ಮುದಿಕತ್ತೆ, ಮುದಿಗುದುರೆ, ಮುದಿಗೊಡ್ಡು" ಇತ್ಯಾದಿ. ಅವಹೇಳನಾರ್ಥದಲ್ಲಿ "ಲೇ ಮುದುಕ, ಲೇ ಮುದುಕಿ, ಲೇ ಮುದಿಯ, ಲೇ ಮುದಿನನ್ಮಗನೇ, ಲೇ ಮುದಿಸೂಳೆ, ಲೇ ಮುದಿಮುಂಡೆ, ಮುದಿ ವಯಸ್ಸಲ್ಲೂ ಪ್ರಾಯದವಳ ಹಾಗೆ ಆಡ್ತಾಳೆ, ಮುದಿ ವಯಸ್ಸಲ್ಲೂ ಕಪಿಚೇಷ್ಟೆಗಿಳಿದಿದ್ದಾನೆ. ಕತ್ತೆಗೆ ವಯಸ್ಸಾದಂತೆ ಆಗಿದೆ ನಿನಗೆ ಬುದ್ಧಿ ಬೇಡ್ವ" – ಹೀಗೆ ಅನೇಕ ರೀತಿಯಲ್ಲಿ ಮುಪ್ಪಾದವರನ್ನು ಹೀಯಾಳಿಸಲಾಗುತ್ತದೆ.

ಯೌವನದಲ್ಲಿದ್ದಾಗ ಹಾಡಿ ಹೊಗಳುತ್ತಿದ್ದವರು ವಯಸ್ಸಾದ ಕೂಡಲೇ ಅವರಿಂದ ಏನೂ ಉಪಯೋಗವಿಲ್ಲವೆಂದು ತಿಳಿದು ಛೇಡಿಸುತ್ತಾರೆ. ಅವಮಾನಿಸುತ್ತಾರೆ. ಹೀಗೆ ಮಾಡುವವರಿಗೆ ಮುಂದೊಂದು ದಿನ ನಾವೂ ಕೂಡ ಇದೇ ಸ್ಥಾನಕ್ಕೆ ಬರುತ್ತೇವೆ ಎಂಬ ಅರಿವು ಸ್ಫುರಿಸುವುದಿಲ್ಲವೇನೋ?

ತಂದೆ-ತಾಯಿಗಳು ದೇವರ ಸಮಾನ ಎನ್ನುವ ಹಿನ್ನೆಲೆಯಿರುವ, ಆ ಭಾವನೆ ತುಂಬಿರುವ ಪುರಾಣ ಪ್ರಸಿದ್ಧವಾದ ದೇಶ ನಮ್ಮದು. ಪಿತೃವಾಕ್ಯ ಪರಿಪಾಲನೆಗಾಗಿ ವನವಾಸಕ್ಕೆ ತೆರಳಿದಂತಹ ಶ್ರೀರಾಮ ನಮಗೆ ಆದರ್ಶವಾಗಿದ್ದಾನೆ. ಹಾಗೆಯೇ ವೃದ್ಧರಾದ ತಂದೆ-ತಾಯಿಗಳನ್ನು ದೇವರೆಂದು ತಿಳಿದು ಸೇವೆ ಮಾಡುತ್ತಾ ಅವರನ್ನು ಅಡ್ಡೆಯಲ್ಲಿ ಹೊತ್ತುಕೊಂಡು ತಿರುಗುತ್ತಿದ್ದ ಶ್ರವಣನ ಮಾತಾಪಿತೃ ಭಕ್ತಿ ಮೆಚ್ಚುವಂತಹುದಾಗಿದೆ. ಹಾಗೆಯೇ ಮಹಾಭಕ್ತನಾದ ಪುಂಡರೀಕನು ತನ್ನ ತಂದೆ-ತಾಯಿಗಳ ಸೇವೆಗಿಂತಲೂ ಮಿಗಿಲಾದ ಜಪ-ತಪಗಳಿಲ್ಲವೆಂದು ನಂಬಿ ನಿರಂತರ ಅವರ ಸೇವೆ ಮಾಡುತ್ತಿದ್ದುದನ್ನು ಮೆಚ್ಚಿ ಶ್ರೀಮನ್ನಾರಾಯಣನು ಪುಂಡರೀಕನನ್ನು

ಪರೀಕ್ಷಿಸಲು ಅವನ ಮನೆಯ ಬಾಗಿಲಿಗೆ ಬಂದಾಗ ಆ ಸಮಯದಲ್ಲಿ ಪುಂಡರೀಕ ತಂದೆ-ತಾಯಿಗಳಿಗೆ ಊಟ ಮಾಡಿಸುತ್ತಿದ್ದನು. ಆ ಕ್ಷಣದಲ್ಲಿ ಪುಂಡರೀಕನು ಭಗವಂತನ ಕಡೆಗೆ ಅಲ್ಲಿಯೇ ಇದ್ದ ಒಂದು ಇಟ್ಟಿಗೆಯನ್ನು ಅವರ ಮುಂದಿಟ್ಟು ಇದರ ಮೇಲೆ ನಿಂತಿರಿ. ನಾನು ನನ್ನ ಸೇವಾ ಕೈಂಕರ್ಯ ಮುಗಿಸಿ ಬರುತ್ತೇನೆ ಎಂದು ಹೇಳುವನು. ಇಲ್ಲಿ ಅವನಿಗೆ ತಂದೆ-ತಾಯಿಗಳ ಸೇವೆ ಮಾಡುವ ಕರ್ತವ್ಯದ ಕಡೆಗೆ ಗಮನವಿತ್ತೇ ಹೊರತು ಬೇರೆ ಯಾವ ರೀತಿಯ ಪ್ರತಿಫಲದ ಮೇಲೂ ಇರಲಿಲ್ಲ. ಅವನು ನಾನು ದೇವರ ಪೂಜೆ ಮಾಡುತ್ತಿದ್ದೇನೆ ಎಂಬ ಭಗವದ್ಭಾವನೆ ಯಿಂದಲೇ ತಂದೆ-ತಾಯಿಯರ ಸೇವೆ ಮಾಡುತ್ತಿದ್ದ. ಅವನಿಗೆ ಅವರ ಸೇವೆಗಿಂತ ಮಿಗಿಲಾದ ಜಪ-ತಪ, ಯಾಗ-ಯಜ್ಞಗಳಿರಲಿಲ್ಲ.

ಉಪನಿಷತ್ತಿನಲ್ಲಿರುವ "ಮಾತೃದೇವೋಭವ, ಪಿತೃದೇವೋಭವ" ಎಂಬ ಉಕ್ತಿಯ ಪರಂಪರೆಯವರು ನಮ್ಮ ಹಿಂದಿನವರು. "ಮುಪ್ಪು ತುಂಬು ಬಾಳಿಗೆ ಕಿರೀಟವಿದ್ದಂತೆ, ಅನುಭವಕ್ಕೆ ಹಣ್ಣು ಬಿಟ್ಟಂತೆ' ಎಂಬ ಅನುಭವದಿಂದ ಮುಪ್ಪಾದವರನ್ನು ಪ್ರೀತಿಸುತ್ತಿದ್ದರು, ಗೌರವಿಸುತ್ತಿದ್ದರು, ಮನ್ನಣೆ ನೀಡುತ್ತಿದ್ದರು, ಸೇವಾ ಭಾವನೆಯನ್ನು ಹೊಂದಿದ್ದರು. ಅವರಿಗೆ ಪೂಜ್ಯವಾದ, ಗೌರವಯುತವಾದ ಸ್ಥಾನಮಾನವನ್ನು ನೀಡಿದ್ದರು. ಅವರ ಸೇವೆಯೇ ಜಪ-ತಪ, ಯಾಗ-ಯಜ್ಞ, ಪೂಜೆ-ಪುನಸ್ಕಾರಗಳೆಂದು ತಿಳಿದು ಮುಪ್ಪಾದವರನ್ನು ಬಹಳ ಜತನದಿಂದ ಕಾಪಾಡುತ್ತಿದ್ದರು. ಅವರೇ ನಮ್ಮ ಆಸ್ತಿ ಎಂದು ತಿಳಿದಿದ್ದರು.

ವಿದ್ಯಾವಂತರಲ್ಲದ ಹಳ್ಳಿಯ ಮುಗ್ಧ ಜನಪದರು ತಂದೆ-ತಾಯಿಗಳಲ್ಲೇ ದೇವರನ್ನು ಕಾಣುತ್ತಾರೆ.

> "ಕಾಸೀಗೆ ಹೋಗಲಾಕ ಏಸೊಂದು ದಿನ ಬೇಕಾ
> ತಾಸ್ಹೊತ್ತಿನ್ಹಾದಿ ನಡೆದಾರಾ ! ತಾಸ್ಹೊತ್ತಿನ್ಹಾದಿ ನಡೆದಾರಾ
> ತವರಾಗ ಕಾಸೀ ಕುಂತಾಳ ಹಡದವ್ವ" ॥
>
> "ತಂದೇಯ ನೆನೆದಾರೆ ತಂಗಾಳ ಬಿಸಿಯಾಯ್ತು
> ಗಂಗಾದೇವಿಯಂತ ಹಡದವ್ವನ ನೆನೆದಾರೆ
> ಮಾಸೀದ ತಲೆಯು ಮಡಿಯಾಯ್ತು"॥

"ತಾಯಿಗಿಂತ ಮಿಗಿಲಾದ ದೇವರಿಲ್ಲ, ತಂದೆಗಿಂತ ಮಿಗಿಲಾದ ಬಂಧುವಿಲ್ಲ" – ಎನ್ನುವ ಹೃದಯ ತುಂಬಿದ ಮಾತುಗಳಲ್ಲಿ ಅವರ ಮುಗ್ಧತೆ, ನಂಬಿಕೆ, ಸಜ್ಜನಿಕೆ, ಗೌರವ ಎಲ್ಲವನ್ನೂ ಮೈಗೂಡಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

ವಿನಾಯಕನು ತಂದೆ-ತಾಯಿಗಳನ್ನೇ ದೇವರೆಂದು ತಿಳಿದು ಮೂರು ಲೋಕಗಳನ್ನು ಸುತ್ತಿ ಬರುವುದರ ಬದಲು ತಂದೆ-ತಾಯಿಗಳನ್ನೇ ಮೂರು ಸುತ್ತು ಪ್ರದಕ್ಷಿಣೆ ಬಂದು ಅವರಿಗೆ ನಮಸ್ಕರಿಸಿ ಅವರ ಪಕ್ಕದಲ್ಲಿ ಕುಳಿತು ಅಗ್ರಮನ್ನಣೆಗೆ,

ಅಗ್ರಪೂಜೆಗೆ ಅರ್ಹನಾದನು. ಅದೇ ಸುಬ್ರಹ್ಮಣ್ಯ ನವಿಲನ್ನೇರಿ ಮೂರು ಲೋಕಗಳನ್ನು ಸುತ್ತಿ ಬರಲು ಹೊರಟನು. ಅವನಿಗೆ ವಿನಾಯಕನ ಸ್ಥಾನಮಾನ ದೊರೆಯಲಿಲ್ಲ. ಅಂತಹ ಶಕ್ತಿ ತಂದೆ-ತಾಯಿಗಳ ಸೇವೆಯಲ್ಲಿದೆ ಎನ್ನುವುದರ ಅರಿವಾಗುತ್ತದೆ ಇಲ್ಲಿ.

ಸರ್ವಜ್ಞನು

'ಅಜ್ಜಯಿಲ್ಲದ ಮನೆ, ಮಜ್ಜಿಗಿಲ್ಲದ ಊಟ ಇದ್ದರೇನು ?
ಇಲ್ಲದಿದ್ದರೇನು ?" ಎಂದಿದ್ದಾನೆ. ಹಾಗೆಯೇ
"ನ ಸಾ ಸಭಾ ಯತ್ರ ನಸಂತಿ ವೃದ್ಧಾಃ" -
ವೃದ್ಧರಿಲ್ಲದುದು ಸಭೆಯಲ್ಲ ಎಂದಿದ್ದಾರೆ. ಮನುಸ್ಮೃತಿಯಲ್ಲಿ,
"ಯಂ ಮಾತಾಪಿತರಾ ಕ್ಲೇಶಂ ಸ ಹೇತೇ ಸಂಭವೇ ನೃಣಾಮ್ ।
ನ ತಸ್ಯ ನಿಷ್ಕೃತಿಃ ಶಕ್ಯಾ ಕರ್ತುಂ ವರ್ಷಶತೈರಪಿ"

-ಯಾವ ಮಕ್ಕಳನ್ನು ಬೆಳೆಸಲು ಎಷ್ಟೆಲ್ಲ ಕಷ್ಟಗಳನ್ನು ಸಹಿಸಿ ಏನೆಲ್ಲಾ ತ್ಯಾಗಗಳನ್ನು ತಂದೆ-ತಾಯಿಗಳು ಮಾಡಿರುತ್ತಾರೋ ಅಂತಹ ತಾಯ್ತಂದೆಯರ ಋಣವನ್ನು ಮಕ್ಕಳು ನೂರು ವರ್ಷಗಳಲ್ಲೂ ತೀರಿಸಲಾಗುವುದಿಲ್ಲ - ಎನ್ನುವ ಮಾತಿದೆ.

ತಾಯಿಯಾದವಳು ನವಮಾಸಗಳ ಕಾಲಗರ್ಭದಲ್ಲಿ ಹೊತ್ತು ಹೆತ್ತು ಎದೆಹಾಲಿನ ಮೂಲಕ ಅಮೃತವನುಣ್ಣಿಸಿ ಪೋಷಿಸುವ ಸಹನಾ ಧರಿತ್ರಿ, ತನ್ನ ನೋವಿನಲ್ಲೂ ತನ್ನ ಮಗುವಿಗಾಗಿ ನಗುವನ್ನು ಚಿಮ್ಮಿಸುವ ಸಹನಾ ಮೂರ್ತಿ. ತನ್ನ ಕರುಳ ಕಂದನ ಏಳಿಗೆಗಾಗಿ, ಹಿರಿಮೆಗಾಗಿ, ಉನ್ನತಿಗಾಗಿ ಹಗಲಿರುಳೂ ಶ್ರಮಿಸುವಳು. "ಹೊಟ್ಟೆಯಲ್ಲಿ ಹೊತ್ತು ತಾಯಿ ಬೆಟ್ಟದಷ್ಟು ಕಷ್ಟವನ್ನು ಗಟ್ಟಿ ಮನದಿ ತಾಳ್ವಲಲ್ತೆ ಕಂದಗೋಸುಗ । ಬಿಟ್ಟು ಸುಖವ ತಾಳ್ವಲವಳು ಬಂದ ದುಃಖವ । ಕಂದ ಬಳಲಿ ಬಂದನೆಂದು ನೊಂದುಕೊಂಡು ಬೇಗ ಮಮತೆಯಿಂದ ನಗುತ ನುಡಿಸುತಮೃತ ಬಿಂದುವೆರೆವಳು । ಬೆಂದ ಮನದ ಬೇಗೆಯಳಿಸಿ . . . . ಎನ್ನ ಚಿನ್ನ ತಣ್ಣಗಿರಲಿ, ಎನ್ನ ರನ್ನ ಸುಖವ ಪಡೆಯಲೆನ್ನ ಮುದ್ದು ಕಂದ ಕೀರ್ತಿವಡೆದು ಬಾಳಲಿ, ಎನ್ನುತಾಶಿಸುವಳು ತಾಯಿ . . . ."

ಇಂತಹ ತಾಯಿಗೆ ವಯಸ್ಸಾದಾಗ ಆಕೆಯ ನೋವು, ತಂದೆಯ ದೀನ ಕೂಗು "ಮೀಸೆ ಬಂದಾಗ ದೇಶ ಕಾಣದು" ಎಂಬಂತೆ ಮಕ್ಕಳ ಕಣ್ಣಿಗೆ ಕಾಣಿಸುವುದಿಲ್ಲ, ಹೃದಯಕ್ಕೆ ಕೇಳಿಸುವುದಿಲ್ಲ. ಅವರುಗಳು ತಿರಸ್ಕಾರದ ವಸ್ತುಗಳಾಗುತ್ತಾರೆ.

ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಕುಟುಂಬ ಇರಬೇಕೆಂಬ ಹಂಬಲ ಇದ್ದೇ ಇರುವುದು. ಅವನ ಜೀವನ ಪರಿಪೂರ್ಣವಾಗಬೇಕಾದರೆ ಸಂತೃಪ್ತಗೊಳ್ಳಬೇಕಾದರೆ, ಸಾರ್ಥಕ್ಯ ಪಡೆಯಬೇಕಾದರೆ ಅವನಿಗೆ ಮಕ್ಕಳಿರಬೇಕು. ಆ ಕರುಳು ಕುಡಿಗಾಗಿ ಹಂಬಲಿಸಿ, ಹಾತೊರೆದು ವ್ರತನೇಮ ನಿಷ್ಠೆಗಳನ್ನನುಸರಿಸಿ, ಉಪವಾಸ ಮಾಡಿ, ಹರಕೆಗಳನ್ನು ಹೊತ್ತು, ಮಕ್ಕಳನ್ನು ಪಡೆದು ಅವರನ್ನು ಮುದ್ದಿಸಿ,

ಲಾಲಿಸಿ, ಪೋಷಿಸಿ ವಿದ್ಯಾಭ್ಯಾಸ ಕೊಡಿಸಿ ಅವರ ಕಾಲ ಮೇಲೆ ಅವರು ಸ್ವತಂತ್ರವಾಗಿ ನಿಲ್ಲುವಂತೆ ರೂಪಿಸಲು ಶ್ರಮಿಸುತ್ತಾರೆ. ತಾವು ಕಷ್ಟಪಟ್ಟಂತೆ ತಮ್ಮ ಮಕ್ಕಳು ಕಷ್ಟಪಡಬಾರದು, ಅವರು ಸುಖವಾಗಿರಬೇಕು. ಎಂದು ಬಂದ ನೋವು-ಸಂಕಟಗಳನ್ನೆಲ್ಲ ನುಂಗಿ ಹಗಲಿರುಳು ದುಡಿದು ಮಕ್ಕಳಿಗೆ ಯಾವ ಕೊರತೆಯೂ ಕಾಣದಂತೆ ತಮ್ಮ ದೇಹವನ್ನು ದಂಡಿಸಿ, ಗಂಧದ ಕೊರಡಿನಂತೆ ತೇದು, ಕಬ್ಬಿನಂತೆ ಅರೆದು ಹಿಂಡುತ್ತಾರೆ. ಅವರ ಆಶಯ, ಕನಸು ಒಂದೇ. ತಮ್ಮ ಮಕ್ಕಳ ಬದುಕು ಸುಖವಾಗಿರಬೇಕು, ಸುಂದರವಾಗಿರಬೇಕು ಆನಂದವಾಗಿರಬೇಕು, ಅರಳಿ ನಳನಳಿಸಬೇಕು, ನಮ್ಮನ್ನು ಮುಪ್ಪಿನಲ್ಲಿ ಚೆನ್ನಾಗಿ ನೋಡಿಕೊಳ್ಳಬೇಕು ಎಂಬ ನಿಸ್ಪೃಹ ಆಸೆ ಅವರದು. ನಾವು ಮಕ್ಕಳಿಗಾಗಿ ಏನೂ ಮಾಡಿಡದಿದ್ದರೆ ಮುಂದೆ ಅವರೇನು ಮಾಡುತ್ತಾರೆ ಎಂದು ಮಕ್ಕಳಿಗಾಗಿ ಮುಚ್ಚಟೆಯಿಂದ ಗಳಿಸಿಕೂಡಿಡುವರು.

ಮಕ್ಕಳಿಗಾಗಿ ಏನನ್ನೂ ತಮ್ಮ ಬದುಕಿನಲ್ಲಿ ಮಾಡಿಡದಿದ್ದರೆ ಮುಂದೆ ಮಕ್ಕಳು ನೀವು ನಮಗಾಗಿ ಏನು ಮಾಡಿಟ್ಟಿದ್ದೀರಿ ? ನಮಗೇನು ವಿದ್ಯೆ ಕೊಟ್ಟಿರಾ ? ಆಸ್ತಿ ಇಟ್ಟಿದ್ದೀರಾ ? ಏನೂ ಇಲ್ಲವಲ್ಲ ! ದುಡಿದಿದ್ದನ್ನೆಲ್ಲಾ ಚೆನ್ನಾಗಿ ತಿಂದುಂಡು ಮಜಾ ಮಾಡಿದಿರಿ. ನಿಮ್ಮ ಹೆಣ್ಣು ಮಕ್ಕಳಿಗೆಲ್ಲಾ ಕೊಟ್ಟಿರಿ. ನಮಗಾಗಿ ಸಾಲಾ ಒಂದನ್ನು ಇಟ್ಟಿದ್ದೀರಿ ? ಈಗ ಸಾಲ ತೀರಿಸಬೇಕೋ ? ವಯಸ್ಸಾದ ನಿಮ್ಮನ್ನು ನೋಡಿ ಕೊಳ್ಳಬೇಕೋ ? ನಮಗೂ ಸಂಸಾರವಿದೆ, ಮಕ್ಕಳಿವೆ. ಅವರನ್ನು ನೋಡಿಕೊಳ್ಳ ಬೇಡವೇ ? ವಿದ್ಯೆ ಕಲಿಸಬೇಡವೇ ? ಮನೆ ಬಾಡಿಗೆ, ಖರ್ಚು ವೆಚ್ಚಗಳನ್ನೆಲ್ಲಾ ಪೂರೈಸುವುದು ಹೇಗೆ ? ಎನ್ನುವ ಬೃಹದಾಕಾರದ ಪ್ರಶ್ನೆಯನ್ನು ಹಾಕಿ ತಮ್ಮ ಕರ್ತವ್ಯದಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಹೀಗೆ ತಂದೆ-ತಾಯಿಗಳು ಮಕ್ಕಳಿಗಾಗಿ ಏನೂ ಮಾಡಿಡದಿದ್ದರೂ ಬೈಯುತ್ತಾರೆ. ಮಾಡಿಟ್ಟರೂ ಬೈಯುತ್ತಾರೆ. ನೀವು ಏನೂ ಮಾಡಿಟ್ಟಿಲ್ಲವಲ್ಲ ಎಂದು ನಾವೇನೂ ಕೇಳುತ್ತಿರಲಿಲ್ಲ. ನೀವು ಚೆನ್ನಾಗಿ ತಿಂದುಂಡು ಸಂತೋಷವಾಗಿರಬೇಕಿತ್ತು. ನೀವು ಕಷ್ಟಪಟ್ಟು ಹೊಟ್ಟೆಗೂ ತಿನ್ನದೇ ಒಳ್ಳೆಯಬಟ್ಟೆ ಬರೆಗಳನ್ನೂ ಹಾಕಿಕೊಳ್ಳದೆ ನಮಗೂ ಕಷ್ಟಕೊಟ್ಟು ಆಸ್ತಿ, ಹಣ ಮಾಡಿಡಿ ಎಂದೇನಾದರೂ ಹೇಳಿದ್ದೆವಾ ? ಎನ್ನುವರು. ನಾವೇನಾದರೂ ಈ ಭೂಮಿಗೆ ಬರುತ್ತೇವೆ ಎಂದು ನಿಮ್ಮನ್ನು ಅಂಗಲಾಚಿ ಬೇಡಿಕೊಂಡಿದ್ದೆವಾ ? ಏಕಿಷ್ಟು ಮಕ್ಕಳನ್ನು ಮಾಡಿಕೊಂಡಿರಿ ? ನಿಮಗೆ ಪ್ರಜ್ಞೆ ಇರಲಿಲ್ಲವಾ ? ಎಂದು ಮೂದಲಿಸುವರು. ಹೆಣ್ಣು ಮಕ್ಕಳಿಗೆ ಏನಾದರೂ ಮಾಡಿದರೆ ಎಲ್ಲವನ್ನೂ ಅವರಿಗೇ ಮಾಡುತ್ತೀರಿ, ಮಗ ಹಾಳಾದರಾಗಲಿ ಎಂದು, ನೀವು ಮಾಡಿದ ಸಾಲ ತೀರಿಸುವುದರಲ್ಲೇ ನಮ್ಮ ಆಯಸ್ಸು ಕಳೆದು ಹೋಗುತ್ತದೆ. ಇಷ್ಟೆಲ್ಲಾ ಹೆಣ್ಣು ಮಕ್ಕಳಿಗೆ ಮಾಡಿದ ಮೇಲೆ ಅವರ ಮನೆಯಲ್ಲೇ ಇರಿ. ಅವರಿಗೆ ಮಾಡುವುದಕ್ಕೆ ಗೊತ್ತು ಅವರಿಂದ ಮಾಡಿಸಿಕೊಳ್ಳಲು ಗೊತ್ತಿಲ್ಲವೇ ? ಎಂದು ಅಣಕವಾಡುವರು.

ಹೀಗೆ ವಯಸ್ಸಾದ ಮೇಲೆ ಮಕ್ಕಳು ತಂದೆ-ತಾಯಿಗಳನ್ನು ಚೆಂಡಾಡುವರು. ಆದರೆ ಒಂದು ವಿಷಯ, ಎಲ್ಲಾ ಮಕ್ಕಳು ತಂದೆ-ತಾಯಿಗಳನ್ನು ಇದೇ ರೀತಿ ನೋಯಿಸುತ್ತಾರೆ ಎಂದು ತಿಳಿಯಬೇಡಿ! ಒಳ್ಳೆಯ ಮಕ್ಕಳು ಇದ್ದೇ ಇರುವರು. ತಂದೆ-ತಾಯಿಗಳು ಏನೂ ಮಾಡಿಡದಿದ್ದರೂ ಸಹಾ ಅವರಿಗೆ ಬೇಸರವಿಲ್ಲ. ನಮಗೆ ತಂದೆ-ತಾಯಿಗಳೇ ಮುಖ್ಯ. ಅವರೇ ನಮಗೆ ಆಸ್ತಿ, ಒಡವೆ ವಸ್ತುಗಳೆಲ್ಲ. ಅವರ ಆಶೀರ್ವಾದವೊಂದಿದ್ದರೇ ಸಾಕು. ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಹೆಂಡತಿ ಈಗ ಬಂದಿರುವವಳು. ಅವಳಿಗಾಗಿ ನಮಗೆ ಜನ್ಮ ಕೊಟ್ಟವರನ್ನು ತಿರಸ್ಕರಿಸಬಾರದು ಎನ್ನುವ ಮಕ್ಕಳೂ ಇದ್ದಾರೆ. ಆದರೆ ದಿನೇ ದಿನೇ ಇಂತಹ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದು ದೌರ್ಭಾಗ್ಯದ ವಿಷಯವೇ ಸರಿ !

ಹೆಣ್ಣು ಹುಟ್ಟಿದಾಗ ತಂದೆ-ತಾಯಿಗಳ ಅಧೀನ. ಯೌವನದಲ್ಲಿ ಗಂಡನ ಅಧೀನ. ಮುಪ್ಪಿನಲ್ಲಿ ಮಗನ ಅಧೀನ-ಹೀಗಾಗಿ ಹೆಣ್ಣು ಸ್ವತಂತ್ರಳಾಗಿ ಬದುಕುವ ಅವಕಾಶವೇ ಇಲ್ಲ. "ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ". ಆದ್ದರಿಂದ ನಮ್ಮ ಕುಟುಂಬ ವ್ಯವಸ್ಥೆಯಲ್ಲಿ ಮಗನು ಅತ್ಯಂತ ಪ್ರಮುಖ ವ್ಯಕ್ತಿ. "ನ ಪುತ್ರಸ್ಯ ಗತಿರ್ನಾಸ್ತಿ" - ಪುತ್ರನೇ ಸದ್ಗತಿದಾತನು. ಮಗನಿಲ್ಲದಿದ್ದರೆ ತಂದೆತಾಯಿಗಳಿಗೆ ಸದ್ಗತಿ ಇರುವುದಿಲ್ಲ. ಅಲ್ಲದೆ ಈ ಗಂಡು ಮಕ್ಕಳಿಂದ ವಂಶ ಬೆಳೆಯುತ್ತದೆ. ಕುಟುಂಬಕ್ಕೆ ಆಸರೆಯಾಗಿ ಹೆಗಲುಕೊಟ್ಟು ನಿಲ್ಲುತ್ತಾನೆ. ಮುಪ್ಪಿನಲ್ಲಿ ತಂದೆ-ತಾಯಿಗಳನ್ನು ಜತನದಿಂದ ಕಾಪಾಡುತ್ತಾನೆ ಎನ್ನುವ ಮನೋಭಾವ ಸಾರ್ವಕಾಲಿಕವಾದುದು. ಆದರೆ ಇಂದು ಈ ಗಂಡುಮಕ್ಕಳು ತಮ್ಮ ಜವಾಬ್ದಾರಿಗಳಿಂದ ನುಣುಚಿಕೊಳ್ಳುತ್ತಿದ್ದಾರೆ. ಹೀಗಾಗಿ ವೃದ್ಧ ತಂದೆ-ತಾಯಿಗಳಲ್ಲಿ ನಿರಾಸೆ, ವ್ಯಾಕುಲ ಮನೆಮಾಡಿಕೊಂಡಿದೆ.

ಗಂಡು ಮಕ್ಕಳು ಮಾತ್ರ ಚಿತೆಗೆ ಬೆಂಕಿ ಹಾಕಬೇಕೆಂದು ಹಾಗೆ ಮಾಡಿದರೆ ಮಾತ್ರ ತಂದೆ-ತಾಯಿಗಳಿಗೆ ಸದ್ಗತಿ ದೊರೆಯುವುದೆಂದು ನಂಬಲಾಗಿದ್ದ ಕಾಲ ಇಂದು ಮರೆಯಾಗುತ್ತಿದೆ. ಗಂಡು ಮಕ್ಕಳಿಲ್ಲದಿರುವ ಮನೆಗಳಲ್ಲಿ, ಇದ್ದರೂ ಅವರುಗಳು ಸಂಸ್ಕಾರಕ್ಕೆ ಬರದಿರುವ ಸಂದರ್ಭಗಳಲ್ಲಿ ಇಂದು ಹೆಣ್ಣು ಮಕ್ಕಳೇ ಶವಗಳನ್ನು ಸ್ಮಶಾನಕ್ಕೆ ಹೊತ್ತುಕೊಂಡು ಸಾಗಿಸಿ, ಅಲ್ಲಿ ವಿಧಿ ವಿಧಾನಗಳ ಮೂಲಕ ಅಗ್ನಿ ಸಂಸ್ಕಾರ ಮಾಡಿ ತಲೆ ಬೋಳಿಸಿಕೊಂಡು ಎಲ್ಲಾ ಶ್ರಾದ್ಧಾದಿ ಕಾರ್ಯಗಳನ್ನು ಗಂಡು ಮಕ್ಕಳಂತೆಯೇ ನೆರವೇರಿಸುತ್ತಿದ್ದಾರೆ.

ಇದಲ್ಲದೆ ಗಂಡು ಮಕ್ಕಳು ತಂದೆ-ತಾಯಿಗಳನ್ನು ಮನೆಯಿಂದ ಹೊರ ಹಾಕಿದಾಗ, ಹೆಣ್ಣು ಮಕ್ಕಳು ಅವರುಗಳನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು ಸಾಕುತ್ತಿದ್ದಾರೆ. ಕೆಲವೊಮ್ಮೆ ಗಂಡಂದಿರ ಕಿರುಕುಳ ಹೆಚ್ಚಾದಾಗ ಗಂಡಂದಿರನ್ನೇ ಬಿಟ್ಟು ಬಂದು ತಂದೆ-ತಾಯಿಗಳಿಗೆ ಆಶ್ರಯ ನೀಡಿ ಅವರನ್ನು ತಾವೇ

ದುಡಿದು ಸಾಕುತ್ತಿದ್ದಾರೆ. ಇದ್ಯಾವುದೂ ಉತ್ಪ್ರೇಕ್ಷೆಯ ಮಾತುಗಳಲ್ಲ. ನಮ್ಮ ಕಣ್ಮುಂದೆಯೇ ನಡೆಯುತ್ತಿರುವ ವಾಸ್ತವ ಚಿತ್ರಣವಾಗಿದೆ. ಈ ರೀತಿ ಎಲ್ಲರೂ ಮಾಡುವುದಕ್ಕಾಗದಿದ್ದರೂ ಮಾಡುವವರೂ ಇದ್ದಾರಲ್ಲ ಎಂಬ ಸಮಾಧಾನ!

ಹಿಂದೆ ಪ್ರತಿಯೊಬ್ಬರೂ ದೀರ್ಘಕಾಲ ಬದುಕಿರಬೇಕೆಂಬ ಹಂಬಲ, ಆಸೆ ಇಟ್ಟುಕೊಂಡಿರುತ್ತಿದ್ದರು. ಅವರು ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳು–ಹೀಗೆ ವಂಶಾಭಿವೃದ್ಧಿಯನ್ನು ಕಂಡು ಹಿಗ್ಗುತ್ತಿದ್ದರು. ಅದನ್ನು ನೋಡುವುದಕ್ಕಾಗಿ ಹೆಚ್ಚು ಕಾಲ ಬದುಕಬೇಕೆಂಬ ಹಂಬಲ ಆಸೆ ಪ್ರಬಲವಾಗಿರುತ್ತಿತ್ತು. ೬೦ ರ ಷಷ್ಠ್ಯಬ್ಧಿ ಪೂರ್ತಿ ಶಾಂತಿ, ೭೦ ರ ಭೀಮರಥಿಶಾಂತಿ, ೮೦ ·ರ ಸಹಸ್ರ ಚಂದ್ರದರ್ಶನ ಶಾಂತಿ ಮಾಡಿಸಿಕೊಳ್ಳಲು ಬಯಸುತ್ತಿದ್ದರು. ಹೀಗಾಗಿಯೇ "ದೀರ್ಘಾಯುಷ್ಯಮಸ್ತು" "ಶತಮಾನಂ ಭವತಿ" ಎಂದು ಆಶೀರ್ವದಿಸುತ್ತಿದ್ದರು. ಆದರೆ ಈಗ "ಆರೋಗ್ಯವಾಗಿ ಬಾಳಿ" "ಆರೋಗ್ಯವೇ ಭಾಗ್ಯ" ಎಂದು ಆಶೀರ್ವದಿಸುವ ಮಟ್ಟಕ್ಕೆ ಬಂದು ತಲುಪಿದ್ದಾರೆ. ಏಕೆಂದರೆ ಇಂದು ಅಷ್ಟು ಆಯಸ್ಸು ಪೂರ್ತಿ ಬದುಕುವವರ ಸಂಖ್ಯೆ ಕಡಿಮೆ. ಆದರೂ ವೃದ್ಧರ ಸಂಖ್ಯೆ ಕಡಿಮೆಯೇನಿಲ್ಲ. ಏಕೆಂದರೆ ಇಂದು ವೈಜ್ಞಾನಿಕವಾಗಿ ದೇಶ ಮುಂದುವರೆದಿದೆ. ವೈದ್ಯಕೀಯ ರಂಗದಲ್ಲಿ ಅಚ್ಚರಿ ಮೂಡಿಸುವಷ್ಟು ಬದಲಾವಣೆಗಳಾಗಿವೆ. ರೋಗ ಬರದಂತೆ ತಡೆಗಟ್ಟುತ್ತಿರುವುದು, ಶಸ್ತ್ರಚಿಕಿತ್ಸೆಯ ಮೂಲಕ ನೋವನ್ನು ನಿವಾರಿಸುವುದು ಕಂಡುಬರುತ್ತಿದೆ. ಆದರೂ ಇಂದು ಯಾರಿಗಾದರೂ ನೀವು ನೂರು ವರ್ಷ ಬಾಳಿ ಎಂದಾಗಲೀ, ನಿಮಗೆ ನೂರು ವರ್ಷ ಆಯಸ್ಸಪ್ಪ ನಾನು ಈಗ ತಾನೇ ನಿಮ್ಮನ್ನು ನೆನೆಸಿಕೊಂಡೆ, ನೆನೆದ ಕೂಡಲೇ ಬಂದಿರಿ ಎಂದು ಹೇಳಿ ಮುಗಿಸುವಷ್ಟರಲ್ಲಿಯೇ ಅವರು ಬೇಡ, ಬೇಡ, ಕೈಕಾಲು ಗಟ್ಟಿಯಾಗಿರುವಾಗಲೇ, ಕಣ್ಣು ಕಾಣುತ್ತಿರುವಾಗಲೇ ಆ ದೇವರು ನಮ್ಮನ್ನು ಕರೆಸಿಕೊಳ್ಳಲಿ ಎನ್ನುವರು. ಏಕೆಂದರೆ ಇಂದು ೬೦ ದಾಟಿದವರಿಗೆ ಬದುಕು ಒಂದು ಪರಿಯಲ್ಲಿ ಶಾಪವಾಗಿದೆ. ಪರಾಧೀನತೆಗೆ ಅಥವಾ ಪರಾವಲಂಬನೆಗೆ ತಳ್ಳಿದ ಪರಿಸ್ಥಿತಿಯು ಅದನ್ನು ಎದುರಿಸುವವರಿಗೆ ಮಾತ್ರ ಗೊತ್ತು. ಕಣ್ಣು ಕುರುಡಾಗಿ, ಕಿವಿ ಮಂದವಾಗಿ, ನಡೆದಾಡಲು ಕೈ ಆಸರೆ ಬೇಕಾಗಿ, ಮನೆ ಮಂದಿಯ ತಾತ್ಸಾರಕ್ಕೆ ಗುರಿಯಾಗಿ, ಬದುಕುವುದಕ್ಕಿಂತ ಮರಣಕ್ಕೆ ಶರಣಾಗಬಯಸುವವರೇ ಹೆಚ್ಚು. ಹಿಂದೆ ಈ ಕಾರಣದಿಂದಲೇ ಇರಬೇಕು ವಾನಪ್ರಸ್ಥಾಶ್ರಮದ ವ್ಯವಸ್ಥೆ ಆದದ್ದು ಎನಿಸುತ್ತದೆ. "ಊರು ಹೋಗು ಎನ್ನುತ್ತೆ, ಕಾಡು ಬಾ ಅನ್ನುತ್ತೆ" ಎನ್ನುವ ಜನರ ಮಾತಿನಲ್ಲೂ ಇದೇ ಆಶಯ ಕಂಡುಬರುತ್ತದೆ.

ಇಂದು ವೃದ್ಧರ ಸ್ಥಿತಿ ಹೀನಾವಸ್ಥೆಗಿಳಿದಿದೆ. ಈ ವೃದ್ಧಾಪ್ಯ ಏಕಾದರೂ ಬಂತೋ ? ಅದರ ಬದಲು ಸಾವು ಬಂದು ನಮ್ಮನ್ನು ಕರೆದೊಯ್ಯಬಾರದಿತ್ತೇ ? ಎನ್ನುವ ಹಪಹಪಿಕೆ, ಆಕ್ರಂದನ, ನೋವು ಕೇಳಿ ಬರುತ್ತಿದೆ. ವೃದ್ಧರ ಬಗೆಗೆ ಎಷ್ಟು ತಿರಸ್ಕಾರವಿದೆ ಎಂದರೆ ಯಾವುದೇ ಸಮಾಜವಾಗಲೀ, ಪತ್ರಿಕೆಗಳಾಗಲೀ ವೃದ್ಧರ ನಿಟ್ಟುಸಿರುಗಳಿಗೆ, ಬಾಳಿನ ಬೇಗುದಿಗಳಿಗೆ, ಅಸಹಾಯಕತೆಗಳಿಗೆ ಧ್ವನಿಯಾಗಲು ಯತ್ನಿಸುವುದಿಲ್ಲ. ಅವರ ಗೋಳಿಗೆ ಕಿವಿಗೊಡುವುದಿಲ್ಲ.

ಮಕ್ಕಳು ಬೆಳೆದಂತೆ ಹಿರಿಯರ ಅನುಭವ, ಸಲಹೆ ಅವರಿಗೆ ಅಗತ್ಯವೆನಿಸುವುದಿಲ್ಲ. ಅವರು ಮುದುಕರನ್ನು ಅವಲಂಬಿಸಿಯೂ ಇರುವುದಿಲ್ಲ. ಅವರನ್ನು ಸೌಜನ್ಯದಿಂದಲೇ ಪಕ್ಕಕ್ಕೆ ತಳ್ಳುವರು. ಮನೆಯನ್ನು ಚೊಕ್ಕಟ ಮಾಡುವಾಗ ಅನುಪಯುಕ್ತ ಹಾಗೂ ಮುರಿದ ವಸ್ತುಗಳನ್ನು ಮೂಲೆಗೆ ತಳ್ಳುವಂತೆ, ಕಸವನ್ನು ತೊಟ್ಟಿಗೆ ಎಸೆಯುವಂತೆ ಎಸೆಯುವರು. ವೃದ್ಧರ ಬಾಳು ನಿಷ್ಪ್ರಯೋಜಕ ಬಾಳು. ಅವರ ಜೀವನ ತಾತ್ಸಾರ ಹಾಗೂ ನಿರ್ಲಕ್ಷ್ಯವನ್ನು ಹೊಂದುತ್ತಿದೆ. ನಿಮಗ್ಯಾಕೆ ಆ ವಿಷಯಗಳೆಲ್ಲ, ಅದನ್ಯಾಕೆ ತಲೆಗೆ ಹಚ್ಚಿಕೊಳ್ಳುವಿರಿ ? ನೀವು ನೆಮ್ಮದಿಯಾಗಿ ಮಾಡಿ ಹಾಕಿದ್ದನ್ನು ತಿಂದುಕೊಂಡು ರಾಮ ಕೃಷ್ಣಾ ಎಂದು ಒಂದು ಕಡೆ ಕುಳಿತು ಪುಸ್ತಕ ಓದಿ. ದೇವಸ್ಥಾನಗಳಿಗೆ ಹೋಗಿ ಹರಿಕಥೆ, ಪುರಾಣ ಪ್ರವಚನಗಳನ್ನು ಕೇಳಿ ಎನ್ನುವ ಹಿತವಚನ ಬೇರೆ ! ಇಂದಿನ ಪರಿಸ್ಥಿತಿಯಲ್ಲಿ ಯಾರನ್ನು ಬೈಯುವುದು ? ಇಲ್ಲಿ ಯಾರದು ಸರಿ ? ಯಾರದು ತಪ್ಪು ? ಅವರವರಿಗೆ ಅವರವರದೇ ಆದ ಕೆಲಸ ಕಾರ್ಯಗಳು. ವೃದ್ಧರಾದ ತಂದೆ-ತಾಯಿಗಳನ್ನು ಗಮನಿಸಲು ಪುರುಸೊತ್ತಿಲ್ಲದೆ ? ಹೀಗಾಗಿ ವೃದ್ಧರು ಮಾನಸಿಕ ತುಮುಲ ಹಾಗೂ ಒತ್ತಡಗಳಿಗೆ ಸಿಲುಕಿ ಮೂಕ ವೇದನೆಯನ್ನು ಅನುಭವಿಸುತ್ತಿದ್ದಾರೆ ಎಂದರೆ ಆಶ್ಚರ್ಯ, ಸಂಕಟ, ವೇದನೆಗಳಾಗುವುದಿಲ್ಲವೇ ?

ಈ ಇಳಿವಯಸ್ಸಿನಲ್ಲಿ ವೃದ್ಧರು ಶಾಂತಿ ಸಂತೃಪ್ತಿಗಳಿಲ್ಲದ ಜೀವನ ನಡೆಸಬೇಕಾದಂತಹ ಪರಿಸ್ಥಿತಿ ಕರುಣಾಜನಕವಾಗಿದೆ. ಹಣ, ಪ್ರತಿಷ್ಠೆ, ಅಧಿಕಾರ, ಭೋಗ ಇವುಗಳಿಗೆ ಮಹತ್ವ ಕೊಟ್ಟ ವಿದ್ಯಾವಂತ ಮಕ್ಕಳು ವೃದ್ಧರಾದ ತಂದೆ-ತಾಯಿಗಳನ್ನು ಕಡೆಗಣಿಸುತ್ತಿರುವುದು ನಮ್ಮ ಸಮಾಜನ ಮೇಲೆ ಬಡಿದ ಕಳಂಕವಲ್ಲವೇ? ಇದರಿಂದ ಪಾರಂಪರಿಕ, ನೈತಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಅವಸಾನವಾಗಿದೆ ಎನಿಸುವುದಿಲ್ಲವೇ ? ನಾವು ಯಾವ ಮೌಲ್ಯಗಳಿಗನುಸಾರವಾಗಿ ಜೀವನ ನಡೆಸುತ್ತೇವೆಯೋ, ನಮ್ಮ ಮುಂದಿನ ಪೀಳಿಗೆಯನ್ನು ಬೆಳೆಸುತ್ತೇವೆಯೋ ಆ ಮೌಲ್ಯಗಳ ಸ್ವಾಭಾವಿಕ ಪರಿಣಾಮವನ್ನು ವೃದ್ಧಾಪ್ಯದಲ್ಲಿ ಕಾಣುತ್ತೇವೆ.

ಕಬೀರರು ತಮ್ಮ ದೋಹೆಯಲ್ಲಿ ವೃದ್ಧರನ್ನು ನಿರ್ಲಕ್ಷಿಸುವವರ ಬಗೆಗೆ ಹೀಗೆ ಹೇಳುತ್ತಾರೆ :

"ಪಾತ್ ಝುರಂತಾದೇಖಿಕೇ ಹಂಸತೀಕೂಪಲುಯಾಂ
ಹಮ್ ಚಾಲೇ ತುಮ್ ಚಾಲಿಯೋ ಧೀರೀ ಬಾಪಲಿಯಾಂ"

ಹಣ್ಣೆಲೆಗಳು ತೊಟ್ಟು ಕಳಚಿ ಉದುರುತ್ತಿರುವುದನ್ನು ಕಂಡು ಚಿಗುರೆಲೆಗಳು ನಗತೊಡಗಿದವಂತೆ. ಆಗ ಆ ಹಣ್ಣೆಲೆಗಳು ಕೊಂಬೆ-ರೆಂಬೆಗಳಿಂದ ಕೆಳಕ್ಕೆ ಉದುರುತ್ತಲೇ-ಬೀಳುತ್ತಲೇ ಚಿಗುರೆಲೆಗಳಿಗೆ ಹೇಳುತ್ತವಂತೆ-ನಮ್ಮ ಜೀವಿತವಂತೂ ಮುಗಿಯಿತು. ನಾವಂತೂ ಹೊರಟೆವು. ನೀವೆಲ್ಲಾ ತೊಟ್ಟು ಕಳಚುವ ನಮ್ಮನ್ನು ಕಂಡು ನಗುತ್ತಿದ್ದೀರಿ. ಆದರೆ ಎಚ್ಚರ, ಮುಂದೊಂದು ದಿನ ನೀವೂ ನಮ್ಮಂತೆಯೇ ಹಣ್ಣಾಗಿ ತೊಟ್ಟು ಕಳಚಿ ಕೆಳಗೆ ಬಿದ್ದೇ ಬೀಳುತ್ತೀರಿ. ಮಣ್ಣಲ್ಲಿ ಮಣ್ಣಾಗುತ್ತೀರಿ, ಬೆಂಕಿಯಲ್ಲಿ ಸುಟ್ಟು ಬೂದಿಯಾಗುತ್ತೀರಿ.... !

ಸಾಕಿ ಸಲಹಿ ವಿದ್ಯೆ ಬುದ್ಧಿ ಕಲಿಸಿ ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಮಾಡಿದ ತಂದೆ-ತಾಯಿಗಳು ವೃದ್ಧಾಪ್ಯಕ್ಕೆ ಸರಿದ ಕೂಡಲೇ ಅವರನ್ನು ನಿರ್ಲಕ್ಷಿಸಿ, ನಿಷ್ಪ್ರಯೋಜಕರೆಂದು ಅಣಕಿಸುತ್ತಾ ಅಸಡ್ಡೆಯಾಗಿ ಕಾಣುತ್ತಾ ಅಸಹ್ಯಪಟ್ಟುಕೊಂಡು ಚುಚ್ಚು ಮಾತುಗಳನ್ನಾಡಿ ನೋಯಿಸುವವರಿಗೆ ಹೀನಾಯವಾಗಿ ನಡೆಸಿಕೊಳ್ಳುವವರಿಗೆ, ಮಾನಸಿಕವಾಗಿ ಹಿಂಸಿಸುವವರಿಗೆ ಕಬೀರರು ತಮ್ಮ ದೋಹೆಯ ಮೂಲಕ ಬಲವಾದ ಚಾಟಿ ಏಟು ನೀಡಿದ್ದಾರೆ. ಇಂತಹ ಅಮಾನುಷವಾದ, ಹೇಯವಾದ ಅನಾಗರಿಕ ನಡೆ ನುಡಿ ಯಾವುದೇ ಕಾರಣಕ್ಕೂ ಸಲ್ಲದು ಎಂದು ಎಚ್ಚರಿಕೆಯನ್ನು ನೀಡಿದ್ದಾರೆ.

ಹೆತ್ತವರನ್ನು ಗೌರವದಿಂದ, ಪೂಜ್ಯ ಭಾವನೆಯಿಂದ ಕಂಡು ಕೈಲಾದಷ್ಟು ಸೇವೆ ಮಾಡಬೇಕಾದದ್ದು ಪ್ರತಿಯೊಬ್ಬ ಮಕ್ಕಳ ಕರ್ತವ್ಯ. ಇದನ್ನು ಪಾಲಿಸಿದವರು ನಿಜವಾಗಿಯೂ ಮಾನವೀಯ ಮೌಲ್ಯವುಳ್ಳ ಮನುಷ್ಯರಾಗುತ್ತಾರೆ. ಹಾಗಿಲ್ಲದೆ ಅವರನ್ನು ಹಿಂಸಿಸುವ, ವೃದ್ಧಾಶ್ರಮಗಳಿಗಟ್ಟುವ, ಬೀದಿಪಾಲು ಮಾಡುವಂತಹ ಹೇಯ ನಡವಳಿಕೆಯಿಂದ ಅನಾಗರಿಕರಾಗಬಾರದು. ಇದು ಮಾನವ ಕುಲಕ್ಕೇ ಒಂದು ದೊಡ್ಡ ಕಳಂಕವಾಗುವುದು. ಹೀಗಾಗುವುದು ಬೇಡ ಎಂದು ಬುದ್ಧಿವಾದ ಹೇಳಿದ್ದಾರೆ. "ಏನಾದರೂ ಆಗು ಮೊದಲು ಮಾನವನಾಗು" ಎನ್ನುವ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ.

ತಂದೆ-ತಾಯಿಗಳಿಗೆ ಮಕ್ಕಳು ಯಾವಾಗಲೂ ಕೃತಜ್ಞರಾಗಿರಬೇಕೇ ಹೊರತು ಕೃತಘ್ನರಾಗಬಾರದು. ಇದನ್ನು ಗಮನಿಸಿಯೇ ದಾಸವರೇಣ್ಯರು ಹೀಗೆ ಹೇಳಿದ್ದಾರೆ.

"ಮಾತಾಪಿತರನ್ನು ಬಳಲಿಸಿದಾತನು ಯಾತ್ರೆಯ ಮಾಡಿದರೇನು ಫಲ?"
"ಹೆತ್ತ ತಂದೆ ತಾಯಿಗಳ ಚಿತ್ತವ ನೋಯಿಸಿ ನಿತ್ಯ ದಾನವ ಮಾಡಿದರೇನು ಫಲ?"

ಅಂದರೆ ದೇವರು ಬೇರೆಲ್ಲಿಯೂ ಇಲ್ಲ. ನಮಗೆ ಜನ್ಮಕೊಟ್ಟವರ ಸೇವೆಯಲ್ಲಿಯೇ ಇದ್ದಾನೆ. ಏಕೆಂದರೆ ದೇವರು ಪ್ರತಿಯೊಬ್ಬರ ಬಳಿಯೂ ಇರಲಾರ. ಆದ್ದರಿಂದಲೇ ಅವನು ತಂದೆ–ತಾಯಿಗಳನ್ನು ಸೃಷ್ಟಿಸಿಕೊಟ್ಟಿದ್ದಾನೆ. ಅವರನ್ನು ನೋಯಿಸದಂತೆ, ಬಳಲಿಸದಂತೆ, ನಮಗೆ ಜನ್ಮಕೊಟ್ಟು ಬೆಳೆಸಿ ಈ ಹಂತಕ್ಕೆ ತಂದಿದ್ದಾರೆ. ಅವರಿಗೆ ನಾನು ಋಣಿಯಾಗಿರಬೇಕು. ಅವರ ಋಣವನ್ನು ನಾನು ತೀರಿಸಬೇಕು ಎಂದು ಅರ್ಥಮಾಡಿಕೊಂಡು ಪ್ರೀತಿಯಿಂದ ನೋಡಿಕೊಂಡರೇ ಸಾಕು. ಅವರಿಗೆ ಯಾವ ಪಲ್ಲಕ್ಕಿಯ ಮೆರವಣಿಗೆಯೂ ಬೇಡ ಯಾವ ಸಿಂಹಾಸನವೂ ಬೇಡ, ಯಾವ ಹಣದ ಅಭಿಷೇಕವೂ ಬೇಡ, ಒಂದು ಹಿಡಿಯಷ್ಟು ಪ್ರೀತಿಯೊಂದಿದ್ದರೇ ಸಾಕು. ಅದರಿಂದ ಯಾತ್ರೆ ಮಾಡಿದ, ದಾನ ಮಾಡಿದ, ಜಪ–ತಪ, ಯಾಗ–ಯಜ್ಞಗಳನ್ನು ಮಾಡಿದ ಫಲ ತಾನಾಗಿಯೇ ದೊರೆಯುವುದು ಎಂದಿದ್ದಾರೆ ದಾಸರು.

ಲಿನ್ ಯು ಟಾಂಗ್ ಎಂಬಾತ ವೃದ್ಧರನ್ನು ಕುರಿತು ಈ ರೀತಿ ಹೇಳಿದ್ದಾನೆ: "ನಾವು ಪುರಾತನ ಚರ್ಚುಗಳನ್ನು ಪೀಠೋಪಕರಣಗಳನ್ನು, ಹಳೆಯ ಬೆಳ್ಳಿಯನ್ನು, ಜೀರ್ಣಗೊಂಡ ನಿಘಂಟನ್ನು, ಪೂರ್ವಕಾಲದ ಹಸ್ತಪ್ರತಿಗಳನ್ನು ಪ್ರೀತಿಸುತ್ತೇವೆ. ಜೋಪಾನವಾಗಿ ಕಾದಿರಿಸಲು ಪ್ರಯತ್ನಿಸುತ್ತೇವೆ. ಆದರೆ ವೃದ್ಧರಲ್ಲಿ ಇರುವ ಆಂತರಿಕ ಸೌಂದರ್ಯವನ್ನು ನಾವು ಸಂಪೂರ್ಣ ಮರೆತುಬಿಟ್ಟಿದ್ದೇವೆ" –ಎನ್ನುವ ಮಾತು ಎಷ್ಟೊಂದು ಮಾರ್ಮಿಕವಾಗಿದೆ ನೋಡಿ !

ಇಂದು ನಾವು ಯಾಂತ್ರಿಕ ಯುಗಕ್ಕೆ ಕಾಲಿಟ್ಟಿದ್ದೇವೆ. ನಮ್ಮ ಬದುಕೂ ಯಾಂತ್ರಿಕವಾಗಿದೆ. ಹಿಂದೆ ಇದ್ದಂತಹ ತುಂಬು ಅವಿಭಕ್ತ ಕುಟುಂಬಗಳು ಮರೆಯಾಗಿ ಹೋಗಿವೆ. ಅವುಗಳೆಲ್ಲ ಚಿಕ್ಕ ಚೊಕ್ಕ ಕುಟುಂಬಗಳಾಗಿ ವಿಭಜನೆಗೊಂಡಿವೆ. ಅಂದರೆ ಮನೆಯಲ್ಲಿ ಗಂಡ–ಹೆಂಡತಿ–ಮಕ್ಕಳು ಮಾತ್ರ ಇರತೊಡಗಿದ್ದಾರೆ. ಅದರಲ್ಲೂ ಗಂಡ–ಹೆಂಡತಿ ಇಬ್ಬರೂ ಹೊರಗೆ ದುಡಿಯಲು ಹೋಗುತ್ತಾರೆ. ಮಕ್ಕಳನ್ನು ತಾವು ಬರುವವರೆಗೂ ಬೇಬಿ ಸಿಟ್ಟಿಂಗ್‌ನಲ್ಲಿ ಬಿಡುತ್ತಾರೆ. ಇನ್ನು ಜನ್ಮದಾತರನ್ನು ಮನೆಯಲ್ಲಿಟ್ಟುಕೊಂಡರೆ ನೋಡಿಕೊಳ್ಳುವವರ್ಯಾರು ? ಜೊತೆಗೆ ವಯಸ್ಸಾದ ಅವರ ಜವಾಬ್ದಾರಿ ಮಕ್ಕಳಿಗೆ ಬೇಡವಾಗಿದೆ. ಅವರು ಮಕ್ಕಳ ಸಾಕುವ ಹೆಗಲಿಗೆ ಭಾರವಾಗಿದ್ದಾರೆ. ಮಕ್ಕಳು ಅವರವರ ಕಾರ್ಯಗಳಲ್ಲಿ ಮಗ್ನರಾಗುತ್ತಿದ್ದಾರೆ. ಅವರವರ ಸುಖ–ಸಂತೋಷಗಳಲ್ಲಿ ಮುಳುಗಿ ಹೋಗುತ್ತಿದ್ದಾರೆಯೇ ಹೊರತು ಮುಪ್ಪಾದ ತಂದೆ–ತಾಯಿಗಳ ಸೇವೆ ಮಾಡುತ್ತಿಲ್ಲ. ಅವರಿಗೆ ಸೇವಾ ಮನೋಭಾವನೆಯೇ ಮರೆಯಾಗಿ ಹೋಗುತ್ತಿದೆ.

ಅವಿಭಕ್ತ ಕುಟುಂಬವಾಗಿದ್ದರೆ ಮನೆಯಲ್ಲಿ ಜನ ತುಂಬಿದಂತಿರುತ್ತಿದ್ದರು. ಒಬ್ಬರಲ್ಲದಿದ್ದರೆ ಒಬ್ಬರು ಮನೆಯಲ್ಲಿ ಇದ್ದೇ ಇರುತ್ತಿದ್ದರು. ಅವರುಗಳು ಮಕ್ಕಳನ್ನು

ವೃದ್ಧರನ್ನು ನೋಡಿಕೊಳ್ಳುತ್ತಿದ್ದರು. ಯಾರಿಗೆ ಯಾರೂ ಭಾರವಾಗುತ್ತಿರಲಿಲ್ಲ. ಅಲ್ಲಿ ಪ್ರೀತಿ, ವಿಶ್ವಾಸ, ಸ್ನೇಹ, ಕರುಣೆ, ಮಮತೆ, ವಾತ್ಸಲ್ಯಗಳು ಮಡುಗಟ್ಟಿರುತ್ತಿದ್ದವು. ಪ್ರೀತಿಯ ಸೆಲೆ ಉಕ್ಕಿ ಹರಿಯುತ್ತಿತ್ತು. ಅಜ್ಜಿಯಂದಿರು ಮೊಮ್ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ತಂದೆ-ತಾಯಿಗಳು ಮಕ್ಕಳನ್ನು ಬಯ್ದಾಗ, ಹೊಡೆದಾಗ ಅವರನ್ನು ರಮಿಸಿ, ಮುದ್ದಿಸಿ ಸಮಾಧಾನಪಡಿಸುತ್ತಿದ್ದರು. ಮಕ್ಕಳಿಗೆ ಕಥೆ ಹೇಳಿ ನಕ್ಕು ನಲಿಸುತ್ತಿದ್ದರು. ಮಕ್ಕಳು ತಪ್ಪಿ ನಡೆದರೆ ತಿದ್ದಿ ಬುದ್ಧಿ ಹೇಳುತ್ತಿದ್ದರು. ಒಟ್ಟಿನಲ್ಲಿ ಅವಿಭಕ್ತ ಕುಟುಂಬದಲ್ಲಿ ಯಾರಿಗೂ ಯಾವ ಸಮಸ್ಯೆಯೂ ಇರುತ್ತಿರಲಿಲ್ಲ. ಆದರೆ ಈಗಿನ ವಿಭಕ್ತ ಕುಟುಂಬಗಳಲ್ಲಿ ಇದಾವುದರ ಸುಳಿವೇ ಇಲ್ಲ.

ಇಂದಿನವರಲ್ಲಿ ಹೆಚ್ಚು ಮಂದಿಗೆ ಕೇವಲ ದುಡಿಮೆ, ಸಂಪಾದನೆಯೇ ಮುಖ್ಯವಾಗಿದೆ. ಹಣವೊಂದಿದ್ದರೆ ಸಾಕು, ಬೇರೇನೂ ಅವರ ಕಣ್ಣಿಗೆ ಕಾಣುವುದಿಲ್ಲ. ಪ್ರೀತಿ-ವಿಶ್ವಾಸ, ಸಂಬಂಧ, ಕರುಣೆ, ಮಮತೆ, ವಾತ್ಸಲ್ಯ ಯಾವುದೂ ಬೇಕಿಲ್ಲ. ಪ್ರತಿಯೊಬ್ಬರ ಜೀವನಕ್ಕೂ ಬದುಕಿಗೂ ಹಣ ಬೇಕು, ನಿಜ. ಆದರೆ ಅದೇ ಪ್ರಮುಖವಲ್ಲ. ಈ ಹಣ ಯಾವತ್ತಿಗೂ ಸುಖ, ಸಂತೋಷ, ನೆಮ್ಮದಿ, ಶಾಂತಿ, ಆರೋಗ್ಯಗಳನ್ನು ನೀಡುವುದಿಲ್ಲ. ತಮಗೆ ಜನ್ಮಕೊಟ್ಟು, ವಿದ್ಯೆ ಬುದ್ಧಿ ಕಲಿಸಿ, ಇಷ್ಟು ಎತ್ತರಕ್ಕೆ ಬೆಳೆಸಿ ಬೇಕಾದ ಎಲ್ಲಾ ಸವಲತ್ತುಗಳನ್ನು ನೀಡಲು ತಮ್ಮ ಬದುಕಿನ ಅಮೂಲ್ಯ ಕಾಲವನ್ನೆಲ್ಲಾ ತ್ಯಾಗ ಮಾಡಿದ ತಂದೆ-ತಾಯಿಗಳಿಗೆ ಯಾವ ಬೆಲೆಯನ್ನೂ ನೀಡದ ಮಕ್ಕಳ ಸಂಪಾದನೆಗೆ, ಅವರ ಶ್ರೀಮಂತ ಬದುಕಿಗೆ ಯಾವ ಚಿಕ್ಕಾಸಿನ ಬೆಲೆಯೂ ಇಲ್ಲವೆಂಬ ಅರಿವು ಅವರಿಗೆ ಇರುವುದಿಲ್ಲ. ಅವರ ಗಳಿಕೆ ಏನಿದ್ದರೂ 'ನಾಯಿಯ ಮೊಲೆಯಲ್ಲಿ ಹಾಲಿದ್ದಂತೆ'- ಕುಡಿಯಲೂ ಇಲ್ಲ, ಪೂಜೆಗೂ ಇಲ್ಲ - ಯಾವುದಕ್ಕೂ ಸಲ್ಲುವುದಿಲ್ಲ.

ತಂದೆ-ತಾಯಿಗಳು ಸಂಪಾದಿಸಿಟ್ಟಿದ್ದನ್ನು ಅವರಿಂದ ಪಡೆದುಕೊಂಡು, ಕೆಲವೊಮ್ಮೆ ಬಲಾತ್ಕಾರದಿಂದ, ಹಿಂಸಾಚಾರದಿಂದ ಕಿತ್ತುಕೊಂಡು ಕೊನೆಗೆ ಅವರನ್ನು ತಿರಸ್ಕರಿಸಿ, ಅವರಿಗೆ ಮನೋವೇದನೆಯನ್ನು ಕೊಟ್ಟು ತಾವು ಬದುಕುವುದು ಮನುಷ್ಯತ್ವವಲ್ಲ. ತಂದೆ-ತಾಯಿಗಳನ್ನು ಗೌರವಿಸುವುದು, ಯಾವುದೇ ಕೆಲಸ ಮಾಡುವಾಗ ಅವರ ಸಲಹೆ-ಸೂಚನೆಗಳನ್ನು ತೆಗೆದುಕೊಳ್ಳುವುದು ಅವರ ಆಶಯದಂತೆ, ಅವರ ಮನೋ ಇಂಗಿತದಂತೆ ನಡೆದುಕೊಳ್ಳುವುದು ಮಕ್ಕಳಾದವರ ಆದ್ಯ ಕರ್ತವ್ಯವಾಗಬೇಕೇ ಹೊರತು ವಯಸ್ಸಾಯಿತೆಂದು ಅವರನ್ನು ಮೂಲೆಗೆ ತಳ್ಳಿ, ಅವರಿಂದ ಮುಂದೆ ತಮಗೇನೂ ಲಾಭವಿಲ್ಲವೆಂದು ಕಸಕ್ಕಿಂತ ಕಡೆಯಾಗಿ ಕಾಣುವುದಲ್ಲ. ಏಕೆಂದರೆ ಇಂದಿನ ಬದುಕು ರೊಟ್ಟಿ ಮಗುಚಿ ಹಾಕಿದಂತೆ. ನಾವು ಏನು ಮಾಡಿರುತ್ತೇವೋ ಅದನ್ನು ಇಲ್ಲೇ ಅನುಭವಿಸಿ ಹೋಗಬೇಕು. "ಮಾಡಿದ್ದುಣ್ಣೋ

ಮಹಾರಾಯ" ನಂತೆ. ತಾವೂ ಮುಂದೆ ವೃದ್ಧರಾದಾಗ ತಮ್ಮ ಮಕ್ಕಳಿಂದಲೂ ತಮಗೆ ಇದೇ ಪರಿಸ್ಥಿತಿ ಬಂದೊದಗುವುದೆಂಬ ಪರಿಜ್ಞಾನದ ಅರಿವಿರಬೇಕು. ಏಕೆಂದರೆ ಮಕ್ಕಳು ತಂದೆ-ತಾಯಿಗಳು ಹೇಗೆ ನಡೆದುಕೊಳ್ಳುವರೆಂಬುದನ್ನು ಸೂಕ್ಷ್ಮಗ್ರಾಹಿಗಳಾಗಿ ಗಮನಿಸುತ್ತಲೇ ಇರುತ್ತಾರೆ. ಕೊನೆಗೆ ಒಂದು ದಿನ ನೀನು ನಿಮ್ಮ ಅಪ್ಪ-ಅಮ್ಮನನ್ನು ಸಾಕಿದ ಹಾಗೆಯೇ ನಾನೂ ನಿಮ್ಮನ್ನು ಸಾಕುವುದು. ನನಗೆ ಬುದ್ಧಿವಾದ ಹೇಳಲು ನಿನಗೇನಿದೆ ಅಧಿಕಾರ ಎಂದು ಕೇಳುವ ಮಟ್ಟಕ್ಕೆ ಬರುತ್ತಾರೆ.

"ಮುಪ್ಪಿನ ಬಾಳು ನಾಯಿಯ ಬಾಳಿನಂತೆ" ಎನ್ನುವ ಮಾತಿದೆ. ತಂದೆ-ತಾಯಿಗಳು ತಾವು ಪಡೆದಂತಹ ಅಷ್ಟೂ ಮಕ್ಕಳನ್ನು ಸಾಕಿ ಸಲಹಿ, ಪೋಷಿಸಿ, ಅವರ ಬೇಕು ಬೇಡಗಳನ್ನು ಪೂರೈಸಿ, ವಿದ್ಯೆ ಬುದ್ಧಿ ಕಲಿಸಿ ಸಮಾಜಕ್ಕೆ ಉತ್ತಮ ಪ್ರಜೆಯನ್ನಾಗಿ ಗೌರವಾನ್ವಿತ ವ್ಯಕ್ತಿಯನ್ನಾಗಿ ರೂಪಿಸುವರು. ಆದರೆ ಅಷ್ಟೂ ಮಕ್ಕಳು ಮುಪ್ಪಡರಿದ ಆ ತಂದೆ-ತಾಯಿಗಳನ್ನು ಸಾಕಲಾರರು. ಪೋಷಿಸಲಾರರು. ನಾನೊಬ್ಬನೇ ಏಕೆ ಸಾಕಬೇಕು ? ಎಲ್ಲರೂ ತಂದೆ-ತಾಯಿಗಳು ಮಾಡಿದ ಆಸ್ತಿಯನ್ನು ಸಮನಾಗಿ ಹಂಚಿಕೊಂಡಿಲ್ಲವೇ ? ನನಗೇನಾದರೂ ಹೆಚ್ಚಿಗೆ ಕೊಟ್ಟಿದ್ದಾರೆಯೇ ? ನನ್ನೊಬ್ಬನ ಕೈಲಿ ಅವರನ್ನು ಸಾಕುವ ಹೊಣೆ ಹೊರಲು ಆಗುವುದಿಲ್ಲ. ಬೇರೆಯವರಿಲ್ಲವಾ? ಅವರೂ ಸಾಕಲಿ, ಹೊಣೆ ಹೊರಲಿ. ತಾಯಿ ಒಬ್ಬರ ಮನೆಯಲ್ಲಿ ಒಂದು ತಿಂಗಳು, ತಂದೆ ಒಬ್ಬರ ಮನೆಯಲ್ಲಿ ಒಂದು ತಿಂಗಳು ಇರಲಿ. ಇಬ್ಬರನ್ನೂ ಒಟ್ಟಿಗೆ ಇಟ್ಟುಕೊಳ್ಳಲು ಒಬ್ಬನಿಂದ ಸಾಧ್ಯವಿಲ್ಲ. ನನಗೂ ಸಂಸಾರವಿದೆ. ಮಕ್ಕಳಿವೆ, ಅವರನ್ನು ಓದಿಸಬೇಕು, ಖರ್ಚು ವೆಚ್ಚಗಳು ಅಧಿಕವಾಗುತ್ತವೆ ಎಂದು ತಂದೆ ತಾಯಿಗಳಿಬ್ಬರನ್ನೂ ವಿಭಜನೆ ಮಾಡಿ, ಇಬ್ಬರನ್ನೂ ಅಗಲಿಸಿ ಹಂಚಿಕೊಳ್ಳುವರು. ಒಂದು ತಿಂಗಳು ಮುಗಿಯುತ್ತಿದ್ದಂತೆಯೇ ಇನ್ನೊಬ್ಬರ ಮನೆಗೆ ಕಳುಹಿಸಲು ತುದಿಗಾಲಲ್ಲೇ ನಿಂತಿರುವರು. ಇದು ಉತ್ಪ್ರೇಕ್ಷೆಯ ಮಾತಲ್ಲ. ನಮ್ಮ ಕಣ್ಣೆದುರಿನಲ್ಲೇ ನೋಡುತ್ತಿರುವ ದೃಶ್ಯ. ಎಂತಹ ವಿಪರ್ಯಾಸವಲ್ಲವೇ ? ವಯಸ್ಸಾದ ದಂಪತಿಗಳಿಬ್ಬರೂ ಜೊತೆಯಲ್ಲಿರುವಂತಿಲ್ಲ. ತಮ್ಮ ಅನಿಸಿಕೆಗಳನ್ನು, ಕಷ್ಟ-ಸುಖಗಳನ್ನು, ನೋವು-ನಲಿವುಗಳನ್ನು ಪರಸ್ಪರ ಹಂಚಿಕೊಳ್ಳುವಂತಿಲ್ಲ. ಎಂತಹ ದುರದೃಷ್ಟಕರವಾದ ಪರಿಸ್ಥಿತಿ ! ಅದೇ ತಾಯಿಯಾಗಿದ್ದರೆ ಒಬ್ಬರ ಮನೆಯಲ್ಲಿ ಆಳಾಗಿ ದುಡಿದು, ತನ್ನ ಹೊಟ್ಟೆಕಟ್ಟಿ, ಕೊನೆಗೆ ತನ್ನ ಶೀಲವನ್ನಾದರೂ ಸೂರೆಗೊಂಡು ಅಷ್ಟು ಮಕ್ಕಳನ್ನೂ ತುತ್ತಿಟ್ಟು ಸಾಕಿ ಅವರನ್ನು ತನ್ನ ಸೆರಗಿನಲ್ಲಿ ಮುಚ್ಚಿಟ್ಟು ಕಾಪಾಡುತ್ತಿದ್ದರು. ಆದರೆ ಮಕ್ಕಳು ಮಾಡುತ್ತಿರುವುದೇನು ?

ಹಿಂದಿನವರು ಬಾಳೋ ಮನೆಗೆ ಹಿರಿಯರು ಬೇಕು. ಹಿರಿಯರಿಲ್ಲದ ಮನೆ-ಮನೆಯೇ ಅಲ್ಲ. ಮಕ್ಕಳ ಬದುಕಿಗೆ, ಅವರ ಶ್ರೇಯೋಭಿವೃದ್ಧಿಗಳಿಗೆ ಹಿರಿಯರ ಆಶೀರ್ವಾದ ಹಾರೈಕೆ ಮುಖ್ಯ. ಅವರಿಗೆ ನೋವಾಗದಂತೆ ನೋಡಿಕೊಳ್ಳುವುದು ಮಕ್ಕಳ ಕರ್ತವ್ಯ ಎಂಬ ಭಾವನೆ, ವಾಂಛಿತ ಇಟ್ಟುಕೊಂಡಿದ್ದವರು. ಇಂದೂ ಕೂಡ ಹಳ್ಳಿಗಳಲ್ಲಿ ಎಲ್ಲರೂ ಮುಪ್ಪಡರಿದ ತಂದೆತಾಯಿಗಳನ್ನು ಬಹಳ ಜತನದಿಂದ ನೋಡಿಕೊಳ್ಳುತ್ತಾರೆ. ಮನೆಯಲ್ಲಿ ಅವರಿದ್ದರೆ ಒಂದು ಆನೆಯ ಬಲ. ಒಂದು ಧೈರ್ಯ ಎಂಬ ಮನೋಭಾವ ಅವರಲ್ಲಿನ್ನೂ ಮನೆ ಮಾಡಿದೆ. ಅವರು ಯಾರೂ ವೃದ್ಧರಾದ ತಂದೆ ತಾಯಿಗಳನ್ನು ಮನೆಯಿಂದ ಓಡಿಸುವುದಾಗಲೀ ವೃದ್ಧಾಶ್ರಮಗಳಿಗೆ ಕಳುಹಿಸುವುದಾಗಲೀ ಅಥವಾ ಒಬ್ಬೊಬ್ಬರ ಮನೆಗೆ ಒಂದೊಂದು ತಿಂಗಳಿನಂತೆ ಹರಿದು ಹಂಚುವುದಾಗಲೀ ಮಾಡುವುದಿಲ್ಲ. ಅವರ ಸೇವೆ ಮಾಡಲು ಎಲ್ಲರೂ ಕಟಿಬದ್ಧರಾಗಿ ನಿಂತಿರುತ್ತಾರೆ. ಅವರನ್ನು ಸಾಕುವುದು ತಮ್ಮ ಸೌಭಾಗ್ಯವೆಂದು ಭಾವಿಸಿರುತ್ತಾರೆ.

ಆದರೆ ಇಂದು ಪಟ್ಟಣದಲ್ಲಿ ವೃದ್ಧರ ಬಾಳು ಗೋಳಾಗಿ ಹೋಗಿದೆ. ಏಕೆಂದರೆ ಮನೆಯಲ್ಲಿರಬೇಕಾದ ಹೆಣ್ಣು ಹೊರಗೆ ದುಡಿಯಲು ಹೋಗುವ ಅನಿವಾರ್ಯತೆ ಇದೆ. ವೃದ್ಧರನ್ನು ಗಮನಿಸುವಷ್ಟು ವ್ಯವಧಾನ, ಲಕ್ಷ್ಯ ಯಾರಿಗೂ ಇಲ್ಲ. ಹೀಗಾಗಿ ವೃದ್ಧರು ನಿರ್ಲಕ್ಷ್ಯಕ್ಕೊಳಗಾಗುತ್ತಿದ್ದಾರೆ. ತಾವು ಯಾರಿಗೂ ಬೇಡವಾದವರೆಂಬ ಖಿನ್ನತೆ-ಒಂಟಿತನಗಳು ಅವರನ್ನು ಕಾಡಲಾರಂಭಿಸುತ್ತಿವೆ.

ಪೂರ್ವ ಪರಂಪರೆಯಿಂದ ಬಂದ ವೃದ್ಧರನ್ನು ಗೌರವಿಸುವ ಸಂಸ್ಕೃತಿ ಇಂದು ಪರಿಸ್ಥಿತಿಯ ಒತ್ತಡಗಳಿಗೆ ಶರಣಾಗಿ, ತಮ್ಮ ಸ್ವಾರ್ಥ ಸುಖಕ್ಕಾಗಿ ಹೆತ್ತವರನ್ನು ಸಾಕುವುದು ಇಷ್ಟದ ವಿಷಯವಾಗದೆ ಕಷ್ಟದ ವಿಷಯವಾಗಿ ಅವರನ್ನು ಮನೆಯಿಂದ ಹೊರದೂಡುವ ಹಂತಕ್ಕೆ ತಲುಪಿರುವುದು ಆಧುನಿಕ ಸಮಾಜದ ಒಂದು ದೊಡ್ಡ ದುರಂತವೇ ಸರಿ !

ಕೆಲವು ಮಕ್ಕಳು ಓದಿ ವಿದ್ಯಾವಂತರಾಗಿ, ಯಾವುದಾದರೂ ಉನ್ನತ ಹುದ್ದೆಯಲ್ಲಿದ್ದರೆ, ತಮ್ಮ ಮನೆಗೆ ಬಂದಂತಹ ಸ್ನೇಹಿತರಿಗೆ ತಂದೆ-ತಾಯಿಗಳನ್ನು ತಮ್ಮ ಮನೆಯ ಆಳುಗಳೆಂದು ಪರಿಚಯಿಸುವುದೂ ಇದೆ. ಇದು ಆಶ್ಚರ್ಯದ ಉತ್ಪ್ರೇಕ್ಷೆಯ ಮಾತಲ್ಲ. ನಮ್ಮ ಹತ್ತಿರದವರಲ್ಲೇ ನಡೆದಂತಹ ಒಂದು ಘಟನೆ ಇದು.

ವಿದ್ಯಾವಂತರಾದ ಮಕ್ಕಳು ರೆಕ್ಕೆ ಬಲಿತ ಹಕ್ಕಿಗಳಂತೆ ತಮ್ಮ ಕಾಲ ಮೇಲೆ ತಾವು ನಿಂತ ಕೂಡಲೇ ತಂದೆ ತಾಯಿಗಳನ್ನು ಧಿಕ್ಕರಿಸಿ, ತಮಗಿಷ್ಟವಾದ ಹೆಣ್ಣನ್ನು ಪ್ರೀತಿಸಿ ಮದುವೆಯಾಗಿ, ಹಣದಾಸೆಗಾಗಿಯೋ ಅಥವಾ ಹೆಂಡತಿಯ ಮೇಲಿನ

ವ್ಯಾಮೋಹಕ್ಕಾಗಿಯೋ, ಬೇರೆ ಮನೆ ಮಾಡಿಕೊಂಡೋ ಅಥವಾ ಹೊರ ದೇಶಗಳಿಗೋ ಹೋಗಿ ಬಿಡುತ್ತಾರೆ. ಅವರಿಗೆ ಅವರ ಸುಖ-ಸಂತೋಷ ಮುಖ್ಯವೇ ಹೊರತು ತಂದೆ ತಾಯಿಗಳ ಚಿಂತೆ ಅವರಿಗೇಕೆ ? ಅವರು ಎಂದೂ ಅದರ ಬಗ್ಗೆ ಯೋಚಿಸುವುದೇ ಇಲ್ಲ.

ಎಷ್ಟೋ ತಂದೆ ತಾಯಿಗಳಿಗೆ ಬೇಕಾದಷ್ಟು ಹಣವಿರುತ್ತದೆ, ಆಸ್ತಿಯಿರುತ್ತದೆ. ಆದರೆ ಪ್ರೀತಿಸುವ, ಆದರಿಸುವ, ಕೈಯಾಸರೆಯಾಗುವ ಮಕ್ಕಳಾಗಲೀ, ನಕ್ಕು ನಲಿಸುವ ಮೊಮ್ಮಕ್ಕಳಾಗಲೀ ಹತ್ತಿರದಲ್ಲಿರದೆ ಎಲ್ಲರೂ ದೂರದಲ್ಲಿರುತ್ತಾರೆ. ಕೆಲವರು ಮಕ್ಕಳಿಲ್ಲದೆ ಅನಾಥರಾದರೆ ಹಲವರು ಮಕ್ಕಳಿದ್ದೂ ಅನಾಥ ಪ್ರಜ್ಞೆ ಅನುಭವಿಸುತ್ತಾರೆ. ಕೆಲವು ಮಕ್ಕಳು ತಿಂಗಳಿಗೆ ಒಂದಿಷ್ಟು ಹಣ ಕಳುಹಿಸಿದರೆ ತಮ್ಮ ಕರ್ತವ್ಯ ಮುಗಿದಂತೆ, ಜವಾಬ್ದಾರಿಯಿಂದ ಕಳಚಿಕೊಂಡಂತೆ ಎನ್ನುವ ಭಾವನೆಯನ್ನು ಹೊಂದಿರುತ್ತಾರೆ. ಆದರೆ ಈ ಹಣವನ್ನಿಟ್ಟುಕೊಂಡು ಬಂಗಲೆಯಂತಹ ಮನೆಗಳಲ್ಲಿ ಒಬ್ಬಂಟಿಗಳಾಗಿ ಕಾಲ ಕಳೆಯುವುದು ಹೇಗೆ ? ಇದು ಮಕ್ಕಳೆಲ್ಲಾ ದೂರದಲ್ಲಿರುವವರ ಕತೆಯಾದರೆ, ಜೊತೆಯಲ್ಲೇ ಇರುವವರದು ಇನ್ನೊಂದು ಕಥೆ. ಅವರಿಗೆ ತಂದೆ ತಾಯಿಗಳ ಕೂಡ ಮಾತನಾಡಲೂ ಸಮಯವಿರುವುದಿಲ್ಲ. ಹಾಗೆಯೇ ಊಟ ಮಾಡಿದಿರ ? ಹೇಗಿದ್ದೀರಿ ? ಏನು ಬೇಕು ? ಔಷಧ ತೆಗೆದುಕೊಂಡಿರ ? ಎಂದು ಕೇಳುವ ಸೌಜನ್ಯವಾಗಲೀ, ವ್ಯವಧಾನವಾಗಲೀ ಇರುವುದಿಲ್ಲ. ಅವರಿಗೇನಿದ್ದರೂ ಹೆಂಡತಿ-ಮಕ್ಕಳನ್ನು ಖುಷಿಪಡಿಸುವಲ್ಲಿ ಅವರ ಆಸೆ-ಆಕಾಂಕ್ಷೆಗಳನ್ನು ಪೂರೈಸುವಲ್ಲಿ ಸಮಯ ಹಾಗೂ ಮನಸ್ಸನ್ನು ತೊಡಗಿಸುವರು. ವೃದ್ಧರನ್ನು ಅಲಕ್ಷಿಸುವರು.

ಇದೊಂದು ಆತಂಕಕಾರಿ ಬೆಳವಣಿಗೆಯ ವಿಷಯ ಹಾಗೂ ನಮ್ಮ ಸಂಸ್ಕೃತಿಗೆ ಕೊಡುವ ಕೊಡಲಿ ಪೆಟ್ಟಿನಂತಾಗಿದೆ. ತಮ್ಮ ಜೀವಮಾನವೆಲ್ಲಾ ಮಕ್ಕಳಿಗಾಗಿ, ಅವರ ಹಿತರಕ್ಷಣೆಗಾಗಿ, ಸಂತೋಷ-ಸಂಭ್ರಮಗಳಿಗಾಗಿ ಶ್ರಮಿಸಿ, ತಮ್ಮ ಬಾಳಿನ ಮುಸ್ಸಂಜೆಯಲ್ಲಿ ನೆಮ್ಮದಿಯ ಜೀವನವನ್ನು ಮಕ್ಕಳೊಂದಿಗೆ ಮೊಮ್ಮಕ್ಕಳೊಂದಿಗೆ ಕಳೆಯಬೇಕೆನ್ನುವ ವೃದ್ಧ ತಂದೆ-ತಾಯಿಗಳ ಆಸೆಗೆ ತಣ್ಣೀರೆರಚಿದಂತಾಗಿದೆ. ಜೊತೆಗೆ ಒಂಟಿತನ ಕಾಡುವುದರೊಂದಿಗೆ ಮಾನಸಿಕ ಅಸಮತೋಲನಕ್ಕೆ ಸಿಕ್ಕಿ ನಲುಗುತ್ತಿದ್ದಾರೆ.

ಹೀಗೆ ಕರ್ತವ್ಯದ ವಿಷಯದಲ್ಲಿ ಸ್ವಾನುಕಂಪೆಯಾಗಲೀ, ಇಷ್ಟಾನಿಷ್ಟಗಳ ಪ್ರಶ್ನೆಗಳಾಗಲೀ ಉದ್ಭವಿಸಬಾರದು. ಮಕ್ಕಳು ಇಂದು ಕರ್ತವ್ಯ ವಿಮುಖರಾದರೆ ಅದರಿಂದಾಗುವ ತೊಂದರೆಯನ್ನಾಗಲೀ, ಅಪಾಯವನ್ನಾಗಲೀ ಮುಂದೆಂದೂ ಸರಿಪಡಿಸಿಕೊಳ್ಳಲಾಗುವುದಿಲ್ಲ.

ನಮ್ಮ ಪೌರಾಣಿಕ ಹಿನ್ನೆಲೆಯ, ಆರ್ಷ ಪರಂಪರೆಯ ನಾಡಲ್ಲಿ ಇಂದು ವೃದ್ಧಾಶ್ರಮಗಳು ಹೆಚ್ಚುತ್ತಿರುವುದು. ಅವುಗಳಿಗೆ ಬೇಡಿಕೆ ಬರುತ್ತಿರುವುದು ಆತಂಕಕ್ಕೆ

ಕಾರಣವಾಗಿದೆ. ಹಿಂದೆ ಈ 'ವೃದ್ಧಾಶ್ರಮ' ಎಂಬ ಹೆಸರೇ ನಮ್ಮಲ್ಲಿ ಕೇಳಿ ಬರುತ್ತಿರಲಿಲ್ಲ. ಆದರೆ ಈಗ ನಗರಗಳಲ್ಲಿ ಮಾತ್ರವಲ್ಲ ಪಟ್ಟಣಗಳಲ್ಲೂ ವೃದ್ಧಾಶ್ರಮಗಳು ಬಾಗಿಲು ತೆರೆದಿವೆ. ಜೊತೆಗೆ ಇನ್ನೂ ಹೆಚ್ಚು ಹೆಚ್ಚು ವೃದ್ಧಾಶ್ರಮಗಳನ್ನು ತೆರೆಯಬೇಕೆಂಬ ನೋವಿನ, ಹತಾಶೆಯ ಕೂಗು ಕೇಳಿ ಬರುತ್ತಿದೆ. ಇದೆಂತಹ ವಿಪರ್ಯಾಸ ಅಲ್ಲವೇ? ನಮ್ಮ ಸಂಸ್ಕೃತಿ ಯಾವ ಮಟ್ಟಕ್ಕೆ ಹೋಗುತ್ತಿದೆ ಎನ್ನುವುದರ ಮುನ್ಸೂಚನೆಯನ್ನೂ ವೃದ್ಧಾಶ್ರಮಗಳ ತೆರೆಯುವಿಕೆಯ ಮೂಲಕ ಕಾಣುತ್ತಿದ್ದೇವೆ. ಇದರಿಂದ ನಮ್ಮ ಮನೆ–ಮನಗಳು ಒಡೆದು ಛಿದ್ರವಾಗುತ್ತವೆ. ಇದು ನಮ್ಮ ಹಿಂದೂ ಧರ್ಮದ ಪಥವಲ್ಲ. ಶಾಂತಿ ಸಂತೃಪ್ತಿಗಳಿಂದ ಜೀವನ ನಡೆಸಬೇಕಾದ ಈ ವಯೋವೃದ್ಧರ ಕರುಣಾಜನಕ ಸ್ಥಿತಿ ನಮ್ಮ ಸಮಾಜದ ಮೇಲೆ ಬಡಿದ ಕಳಂಕವಲ್ಲವೇ ?

ಕೆಲವರು ಮಕ್ಕಳಿಲ್ಲದೆ ಅನಾಥರಾಗಿರುವುದರಿಂದ ವಯಸ್ಸಾದ ಮೇಲೆ ನೋಡಿಕೊಳ್ಳುವವರಿಲ್ಲದೆ ಅನಾಥಾಶ್ರಮಗಳಿಗೆ, ವೃದ್ಧಾಶ್ರಮಗಳಿಗೆ ಹೋಗುತ್ತಾರೆ. ಮತ್ತೆ ಕೆಲವರು ಮಕ್ಕಳು ಬೇರೆ ಮನೆ ಮಾಡಿಕೊಂಡು ಪ್ರತ್ಯೇಕವಾಗಿದ್ದಾಗ ಅಥವಾ ವಿದೇಶಗಳಲ್ಲಿ ನೆಲೆಸಿರುವುದರಿಂದ ತಾವು ಒಂಟಿಯಾಗಿ ಏಕಾಂಗಿತನದಿಂದ ಮಾನಸಿಕ ಕ್ಷೋಭೆಗಳಿಗೆ ತುತ್ತಾಗಿ ಆರೈಕೆ ಮಾಡುವಂತಹವರಿಲ್ಲದೆ ತಮಗೆ ನೆಮ್ಮದಿ ದೊರಕುವ, ತಮ್ಮ ಅನಿಸಿಕೆ, ನೋವುಗಳಿಗೆ ಸ್ಪಂದಿಸುವ ವೃದ್ಧಾಶ್ರಮಗಳಿಗೆ ತಾವಾಗಿಯೇ ಹೋಗುತ್ತಾರೆ. ಇನ್ನೂ ಕೆಲವರು ಮಗನ ನಿರ್ಲಕ್ಷ್ಯ, ಅನಾದರ ಸೊಸೆಯಂದಿರ ಕಿರುಕುಳ, ಮಾನಸಿಕ ಯಾತನೆಗಳಿಂದ ನೊಂದುಬೆಂದವರಾಗಿ ವೃದ್ಧಾಶ್ರಮಗಳಿಗೆ ಹೋದರೆ, ಮತ್ತೆ ಕೆಲವರನ್ನು ಮಕ್ಕಳುಗಳೇ ಮನೆಯಿಂದ ಕರೆತಂದು ವೃದ್ಧಾಶ್ರಮಗಳಿಗೆ ಸೇರಿಸುತ್ತಾರೆ.

ಇದನ್ನೆಲ್ಲಾ ನೋಡಿದಾಗ ಮುಂದೊಂದು ದಿನ ನಾವು ವೃದ್ಧರಾದ ತಂದೆ ತಾಯಿಗಳನ್ನು ವೃದ್ಧಾಶ್ರಮಕ್ಕೆ ಸೇರಿಸಿದ್ದೇವೆ ಎಂದು ಹೇಳಿಕೊಳ್ಳುವುದೇ ಒಂದು ಹೆಮ್ಮೆಯ, ಬಡಿವಾರದ, ಶ್ರೀಮಂತಿಕೆಯ ಅಟ್ಟಹಾಸವನ್ನು ಮೆರೆಯುವ ವಿಚಾರವಾದೀತೇನೋ ?

ಜನ್ಮದಾತರೇ ಪ್ರತ್ಯಕ್ಷ ದೇವರುಗಳು, ಇವರ ಸೇವೆಯೇ ಜನಾರ್ಧನನ ಸೇವೆ ಎಂದು ತಿಳಿದ ಈ ನಾಡಿನಲ್ಲಿಯೇ ವೃದ್ಧರ ಸಮಸ್ಯೆ ಜ್ವಲಂತ ಸಮಸ್ಯೆಯಾಗಿ ಪರಿಣಮಿಸಿರುವುದು ಹೀನಾಯ ಪರಿಸ್ಥಿತಿಯಾಗಿದೆ. ತಂದೆತಾಯಿಯನ್ನು ಮರೆಯದಿರಿ, ಮನೆಯಿಂದ ಆಶ್ರಮಕ್ಕೆ ನೂಕದಿರಿ, ಪ್ರೀತಿ ತೋರಿ ಅವರನ್ನು ಅಂತಿಮ ದಿನಗಳಲ್ಲಿ ನೆಮ್ಮದಿಯಿಂದ ಬಾಳಲು ಬಿಡಿ ಎನ್ನುವ ಹೃದಯಸ್ಪರ್ಶಿ ಮಾತುಗಳು ಎಲ್ಲೆಡೆ ಇತ್ತೀಚೆಗೆ ಕೇಳಿ ಬರಲಾರಂಭಿಸಿದೆ. ಇದಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದನ್ನೂ ಕಾಣುತ್ತಿದ್ದೇವೆ.

ದುಡಿದು ಹಣ್ಣಾಗಿರುವ ಜೀವಗಳ ಕೊನೆಯ ದಿನಗಳನ್ನು ದುರ್ಭರ ಮಾಡುವುದು ಧರ್ಮವೇ? ಯಾರನ್ನು ನಿಕೃಷ್ಟವಾಗಿ ಕಾಣಲಾಗುತ್ತಿದೆಯೋ ಅವರೇ ನಮಗೆ ಜನ್ಮಕೊಟ್ಟು ಬೆಳೆಸಿದವರು. ನಮ್ಮ ಏಳ್ಗೆಯಲ್ಲಿ ಅವರ ಶ್ರಮವಿದೆ. ನಮ್ಮ ಸುಖದಲ್ಲಿ ಅವರ ಬೆವರಿದೆ. ಎದ್ದರೆ ಖುಷಿ ಪಡುವ, ಬಿದ್ದರೆ ಹೆಗಲುಕೊಟ್ಟು ಸಂತೈಸುವ ಆ ಜೀವಗಳಿಗೆ ನೋವು ಕೊಟ್ಟು ನಾವು ಗಳಿಸುವ ಭಾಗ್ಯವಾದರೂ ಏನಿದೆ ? ಅವರು ಬಾಳಿ ಬದುಕಿದ್ದ, ದುಡಿದು ಸಂಪಾದಿಸಿದ್ದ ಅವರ ಮನೆಯಿಂದಲೇ ಅವರನ್ನು ಹೊರದೂಡುವುದು ಭಾರತೀಯ ಸಂಸ್ಕೃತಿಗೆ ವಿರುದ್ಧವಾದುದಾಗಿದೆ.

ಕಾಲೇಜೊಂದರಲ್ಲಿ 'ರಾಷ್ಟ್ರಕ್ಕೆ ವೃದ್ಧರು ಬೇಡ' ಎಂಬುದೇ ಒಂದು ಚರ್ಚಾಗೋಷ್ಠಿಯ ವಿಷಯವಾಗಿತ್ತು. ಈ ವಿಷಯದ ಬಗ್ಗೆ ಪರವಾಗಿ ಮಾತನಾಡಿದವರೇ ಹೆಚ್ಚು. ಎಂದರೆ ವೃದ್ಧರನ್ನು ಯಾವ ದುಸ್ಥಿತಿಗೆ ದೂಡಲಾಗುತ್ತಿದೆ ಎನ್ನುವುದರ ಕಠೋರ ಸತ್ಯ ನಮ್ಮ ಕಣ್ಮುಂದೆ ನಿಲ್ಲುತ್ತದೆ.

ಇದನ್ನೆಲ್ಲಾ ನೋಡಿದಾಗ ಮುಪ್ಪು ಆವರಿಸಿದ ಮನುಷ್ಯ ನಾನಾ ಸಮಸ್ಯೆಗಳಿಗೆ ಸಿಕ್ಕಿ ಕುಟುಂಬಕ್ಕೆ ಹಾಗೂ ಸಮಾಜಕ್ಕೆ ಹೊರೆಯಾಗುತ್ತಾನೆ ಎಂಬುದರ ಅರಿವಾಗುತ್ತದೆ. ಹಾಗೆಯೇ ಸಾಮಾಜಿಕ, ಆರ್ಥಿಕ ಭದ್ರತೆ ದೊರಕಿ ದೈಹಿಕ ಮತ್ತು ಮಾನಸಿಕ ಆರೋಗ್ಯದಿಂದ ಬದುಕನ್ನು ಕಳೆಯುವ ಅದೃಷ್ಟ ಎಲ್ಲಾ ವೃದ್ಧರಿಗೂ ದೊರಕುವುದಿಲ್ಲ ಎನ್ನುವ ಕಠೋರ ಸತ್ಯ ಕಣ್ಣೆದುರು ಗೋಚರವಾಗುತ್ತದೆ. ಇದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ.

ವಯಸ್ಸಾದ ಮೇಲೆ ಯಾವ ನೌಕರಿಗೂ ಹೋಗುವಂತಿಲ್ಲ. ಯಾವ ಕೆಲಸ ಮಾಡಲೂ ಮೈಯಲ್ಲಿ ಕಸುವಿರುವುದಿಲ್ಲ. ಕೈಯಲ್ಲಿ ಹಣವಿರುವುದಿಲ್ಲ. ದೈಹಿಕ ಅನಾರೋಗ್ಯಗಳು, ಕುಟುಂಬದ ಸದಸ್ಯರುಗಳು, ಸ್ನೇಹಿತರು ದೂರವಾಗುವರು. ಹೆತ್ತ ಮಕ್ಕಳು ತಂದೆ ತಾಯಿಗಳನ್ನು ಕಂಡೂ ಕಾಣದವರಂತೆ ಅಸಡ್ಡೆಯಾಗಿ, ನಿರ್ಲಕ್ಷ್ಯದಿಂದ ನಡೆದುಕೊಳ್ಳುವರು. ಇದೆಲ್ಲಾ ವೃದ್ಧರನ್ನು ಏಕಾಂಗಿಗಳನ್ನಾಗಿ ಮಾಡಿ ಚಿಂತೆ ಎಂಬ ಕಡಲಿನಲ್ಲಿ ಮುಳುಗಿಸುತ್ತವೆ. ದಿನ ದೂಡುವುದೇ ದುಸ್ತರವಾಗಿರುತ್ತದೆ. ಸಣ್ಣ ಪುಟ್ಟ ವಿಷಯಗಳನ್ನು ಭೂತಗನ್ನಡಿಯಲ್ಲಿ ನೋಡಿದಂತೆ ಇದು ನನ್ನನ್ನೇ ಕುರಿತು ಹೇಳುತ್ತಿರುವುದು, ಇದು ನನಗೇ ಸಂಬಂಧಿಸಿದ್ದು ಎಂದು ತಾನೇ ಊಹಿಸಿಕೊಂಡು ನೋವನ್ನನುಭವಿಸುವರು.

ಮುಪ್ಪಾದವರ ಈ ವೇದನೆ, ಸಂಕಟ, ನೋವುಗಳಿಗೆಲ್ಲಾ ಮಕ್ಕಳೊಬ್ಬರೇ ಕಾರಣರಲ್ಲ. ಒಂದು ನಾಣ್ಯಕ್ಕೆ ಎರಡು ಮುಖಗಳಿರುವಂತೆ ಇಬ್ಬರೂ ಕಾರಣರೇ. ವಯಸ್ಸಾದ ಮೇಲೆ ಎಲ್ಲರಿಗೂ ಸ್ವಲ್ಪ ಸಹನೆ, ತಾಳ್ಮೆ, ತಿಳುವಳಿಕೆ ಇರಬೇಕು. ಈ ವೃದ್ಧರ ಖಿನ್ನತೆಗೆ ಅವರ ಸ್ವಯಂಕೃತಾಪರಾಧವೂ ಕಾರಣವಾಗಿರುತ್ತದೆ ಎಂಬುದನ್ನು

ಎಷ್ಟೋ ಜನರು ಅರ್ಥಮಾಡಿಕೊಳ್ಳುವುದೇ ಇಲ್ಲ. ಜೇಡರ ಹುಳುವಿನಂತೆ ತಾವೇ ಸೃಷ್ಟಿಸಿಕೊಂಡ ಅನುಮಾನ, ಸಂದೇಹ, ಸಂಶಯ, ಅಹಂಗಳೆಂಬ ಬಲೆಯಲ್ಲಿ ತಾವೇ ಸಿಕ್ಕಿಕೊಂಡು ತಮ್ಮ ನೆಮ್ಮದಿಗೆ ತಾವೇ ಭಂಗ ತಂದುಕೊಳ್ಳುತ್ತಾರೆ. ಉದಾ: ನಾನು ಹೇಳಿದಂತೆಯೇ ನಡೆಯಬೇಕು. ನನ್ನ ಮಾತು ಮೀರಿ ಏನೂ ಮಾಡಬಾರದು. ನಾನು ಹಾಕಿದ ಗೆರೆ ದಾಟಬಾರದು. ನನ್ನ ಹಿಡಿತದಲ್ಲಿಯೇ ಎಲ್ಲರೂ ಇರಬೇಕು ಎನ್ನುವ ನಾನತ್ವದ ಪ್ರತಿಷ್ಠೆ. ಕೆಲವರಂತೂ ಮಕ್ಕಳ ಬೆಳೆವಣಿಗೆಗೇ ತೊಡರು ಗಾಲಾಗುತ್ತಾರೆ. Egoism ಅವರನ್ನು ಕಾಡುತ್ತಿರುತ್ತದೆ. ಎಲ್ಲಿ ಇವರ ಅಹಂಗೆ ಕೊಡಲಿ ಪೆಟ್ಟು ಬೀಳುವುದೋ ಆಗ ಭ್ರಾಂತಿಗೊಳಗಾಗುತ್ತಾರೆ, ಮಾನಸಿಕ ಅಸಮತೋಲನಕ್ಕೆ ಸಿಲುಕುತ್ತಾರೆ.

ಕೆಲವೊಮ್ಮೆ ಕೆಲವರು ತಂದೆ-ತಾಯಿಗಳು ತಾವೇ ಜನ್ಮ ನೀಡಿದ ಮಕ್ಕಳನ್ನು ಒಂದೇ ದೃಷ್ಟಿಯಿಂದ ನೋಡುವುದಿಲ್ಲ. 'ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ' ಎಂಬಂತೆ ವರ್ತಿಸುತ್ತಾರೆ. ದುಡಿದು ತಂದು ಹಾಕುವ ಮಗನನ್ನು ಅಸಡ್ಡೆಯಿಂದ ನಿರ್ಲಕ್ಷಿಸಿ ಉಂಡಾಡಿ ಗುಂಡನಂತೆ ಕೆಲಸ ಕಾರ್ಯವಿಲ್ಲದೆ ಮಾಡಿದ್ದನ್ನು ಉಂಡು ಅಲೆಯುವ ಮಗನಿಗೆ ಹೆಚ್ಚು ಪ್ರಾತಿನಿಧ್ಯ ನೀಡಿದರೆ ಎಂತಹವರಿಗಾದರೂ ಬೇಸರ ಮೂಡುವುದು ಸಹಜವೇ. ಹೆಣ್ಣು ಮಕ್ಕಳಿದ್ದರಂತೂ ಅವರಿಗೇ ಎಲ್ಲವನ್ನೂ ಮಾಡಬೇಕು, ಕೊಡಬೇಕು ಎಂದು ಗಂಡು ಮಕ್ಕಳಿಗೆ ವರಾತ ಹಚ್ಚುವ ತಾಯಂದಿರು ಇಲ್ಲದೇ ಇಲ್ಲ. ಹೀಗಾದಾಗಲೇ ಮನೆಯಲ್ಲಿ ಹಿರಿಯರ ಬಗ್ಗೆ ವೈಮನಸ್ಯ, ತಿರಸ್ಕಾರ ಭಾವ ತಾನಾಗಿಯೇ ಮೂಡುತ್ತದೆ.

ಇದಲ್ಲದೆ ತಮ್ಮ ಹೆಣ್ಣು ಮಕ್ಕಳು ಅವರ ಗಂಡಂದಿರನ್ನು ಹೇಳಿದಂತೆ ಕೇಳುವ ಹಾಗೆ ಇಟ್ಟುಕೊಳ್ಳಬೇಕು. ಬೇರೆ ಮನೆ ಮಾಡಿಕೊಂಡಿರಬೇಕು. ಅತ್ತೆ, ಮಾವ, ಮೈದುನ, ಅತ್ತಿಗೆ-ನಾದಿನಿ ಯಾರನ್ನೂ ಹತ್ತಿರ ಸೇರಿಸಬಾರದು. ಅಳಿಯ ಮಗಳು ಸಂತೋಷವಾಗಿರಬೇಕು ಎನ್ನುವ ತಾಯಿ ಅದೇ ತನ್ನ ಸೊಸೆಗೆ ಆ ಸ್ವಾತಂತ್ರ್ಯವನ್ನು ಕೊಡಲು ನಿರಾಕರಿಸುವಳು. ತಾನು ಹೇಳಿದಲ್ಲದೆ ಅವರು ಹೊರಗೆ ಹೋಗುವಂತಿಲ್ಲ. ಅವರು ಬೇರೆ ಮನೆ ಮಾಡುವಂತಿಲ್ಲ. ಹೆಂಡತಿ ಹೇಳಿದ ಹಾಗೆ ತನ್ನ ಮಗ ಏನೂ ಕೇಳಬಾರದು ಎಂದೆಲ್ಲಾ ಕಟ್ಟುಪಾಡುಗಳನ್ನು ಹೇರಿ ಅವರ ಮನಸ್ಸಿಗೆ ಕಿರಿಕಿರಿಯನ್ನುಂಟು ಮಾಡುತ್ತಾರೆ. ಹೀಗೆ ನಾನಾ ಕಾರಣಗಳಿಂದ ತಂದೆ-ತಾಯಿಗಳ ವರ್ತನೆಯಿಂದ ಬೇಸತ್ತ ಮಕ್ಕಳು, ಮುಪ್ಪಾದ ಸಮಯದಲ್ಲಿ ನಿರ್ಲಕ್ಷಿಸುವ ಹಂತಕ್ಕೆ ತಲುಪುತ್ತಾರೆ. ಇದು ಸರಿಯೋ, ತಪ್ಪೋ ತಿಳಿಯದಂತಾಗುವುದು!

ಇದೇ ರೀತಿ ಮದುವೆಯಾದ ಹೊಸದರಲ್ಲಿ ಸೊಸೆಯನ್ನು ಅತ್ತೆ ಗೋಳು ಹೊಯ್ದುಕೊಂಡಿರುತ್ತಾರೆ. ಅವರು ಕೂತರೆ ತಪ್ಪು, ನಿಂತರೆ ತಪ್ಪು ಎನ್ನುವಂತೆ

ಕಾಟ ಕೊಟ್ಟಿರುತ್ತಾರೆ. ಆಗ ಅವರಿಗೆ ವಯಸ್ಸಿತ್ತು, ಎಲ್ಲವನ್ನೂ ನಿಭಾಯಿಸುವ ಶಕ್ತಿ ಇತ್ತು. ಹೇಗೆ ನಡೆದುಕೊಂಡರೂ ನಡೆಯುತ್ತಿತ್ತು. ಆದರೆ ವಯಸ್ಸಾಗಿ ಮುಪ್ಪು ಆವರಿಸುತ್ತಿದ್ದಂತೆ ಕೈಕಾಲುಗಳಲ್ಲಿ ಶಕ್ತಿಯಿರುವುದಿಲ್ಲ. ಕೆಲಸ ಮಾಡಲು ಆಗುವುದಿಲ್ಲ. ಎದ್ದರೆ ಕೂರುವುದಕ್ಕೂ ಕೂತರೆ ಏಳುವುದಕ್ಕೂ ಆಗದ ಪರಿಸ್ಥಿತಿ ಇರುತ್ತದೆ. ಈಗ ಸೊಸೆಯಂದಿರು ಅಂದಿನ ಅತ್ತೆಯ ಕಾಟವನ್ನು ನೆನೆದುಕೊಂಡು ಅವರಿಗೆ ತಿರುಗೇಟು ನೀಡಲು ಸನ್ನದ್ಧರಾಗುವರು. ಉದಾ:

ಅ) ನಿಮಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ, ಸುಮ್ಮನೆ ಒಂದು ಕಡೆ ಕೂತಿರಿ. ಅಪ್ಪಿತಪ್ಪಿ ಬಿದ್ದು ಏನಾದರೂ ಆದರೆ ಯಾರು ನೋಡಿಕೊಳ್ಳುತ್ತಾರೆ. ನನಗೆ ನನ್ನ ಮಕ್ಕಳನ್ನು, ನಿಮ್ಮ ಮಗನನ್ನು ನೋಡಿಕೊಂಡು, ಮನೆಯನ್ನು ಸಂಬಾಳಿಸುವುದೇ ಕಷ್ಟವಾಗಿರುವಾಗ ಅದರಲ್ಲಿ ನಿಮ್ಮದು ಬೇರೆ ಕೋಟಲೆ ಬೇಡ. ತೆಪ್ಪಗೆ ಒಂದು ಕಡೆ ಸುಮ್ಮನೆ ಕೂತಿರಿ ಎಂದು ಮೂದಲಿಸುವರು.

ಆ) ಅಡುಗೆ ಮನೆಗೆ ಏನಾದರೂ ಹೋದರೇ ಸಾಕು, ನೀವು ಮಧ್ಯೆ ಬಂದು ಏನೂ ತೊಂದರೆ ಕೊಡಬೇಡಿ. ನನಗೇ ಗೊತ್ತು. ಎಲ್ಲವನ್ನೂ ನಾನೇ ಮಾಡುತ್ತೇನೆ. ನೀವು ಹೋಗಿ ಒಂದು ಕಡೆ ಕುಳಿತುಕೊಳ್ಳಿ ಎಂದು ಗದರಿಸುವರು.

ಇ) ದೇವರ ಮನೆಗೆ ಹೋದರಂತೂ ನೀವು ಎಣ್ಣೆಯನ್ನು ಚೆಲ್ಲಿ ದೇವರ ಮನೆ ಗಲೀಜು ಮಾಡುತ್ತೀರಿ, ದೂರದಿಂದಲೇ ಕೈ ಮುಗಿಯಿರಿ ಸಾಕು ಎಂದು ಹೇಳುವ ಕಟ್ಟುಪಾಡು ಬೇರೆ.

ಈ) ಟಿ.ವಿ.ಯನ್ನು ತಮಗೆ ಬೇಕಾದ ಚಾನಲ್ ಹಾಕಿಕೊಂಡು ನೋಡಲೂ ಸ್ವಾತಂತ್ರ್ಯವಿರುವುದಿಲ್ಲ. ಮಕ್ಕಳು ಯಾವುದನ್ನಾದರೂ ಹಾಕಿಕೊಳ್ಳಲಿ, ನೀವು ಸುಮ್ಮನೆ ಮಲಗಿಕೊಳ್ಳಿ, ಆ ಟಿ.ವಿ. ನೋಡಿ ಏನೂ ಕಲಿಯಬೇಕಾಗಿಲ್ಲ, ಈ ವಯಸ್ಸಿನಲ್ಲಿ ಎನ್ನುವ ತಾಕೀತು ಬೇರೆ.

ಉ) ಸುಮ್ಮನೆ ಕುಳಿತುಕೊಳ್ಳುವುದು ಏಕೆಂದು ಏನಾದರೂ ಕೆಲಸ ಮಾಡಲು ಹೋದರೇ ಸಾಕು. ನೀವು ದಯಮಾಡಿ ಏನೂ ಮಾಡಬೇಡಿ, ನನ್ನ ತಂಟೆಗೆ ಬರದಿದ್ದರೆ ಅಷ್ಟೇ ಸಾಕು ಎಂದು ಛೇಡಿಸುವರು. ಇದರಿಂದ ವೃದ್ಧರಿಗೆ ನಾನು ಮನೆಯಲ್ಲಿ ಕಸಕ್ಕಿಂತ ಕಡೆಯಾದೆನಲ್ಲಾ ನನ್ನನ್ನು ಕೇಳುವವರೇ ಇಲ್ಲವಲ್ಲ ಎಂದು ನೋವು, ಆಘಾತ ಉಂಟಾಗುವುದು.

ಊ) ಮನೆಯನ್ನು ಕಟ್ಟುವಾಗ, ಸೈಟು ಕೊಳ್ಳುವಾಗ, ಮಕ್ಕಳ ಮದುವೆ ವಿಷಯದಲ್ಲಿ ಹಿರಿಯರನ್ನು ಏನೂ ಕೇಳದೆ ಅವರ ಗಮನಕ್ಕೆ ತಾರದೆ ತಾನೇ ನಿರ್ಧಾರ ಕೈಗೊಂಡಾಗ ಅವರಿಗೆ ನೋವಾಗುವುದು.

ಇದನ್ನೆಲ್ಲಾ ಗಮನಿಸಿದಾಗ ಒಂದು ವಿಷಯ ಮನನವಾಗುತ್ತದೆ. ವಯಸ್ಸಾದವರು ಪರಿಸ್ಥಿತಿಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವುದು ಸೂಕ್ತ ಎಂದೆನಿಸುತ್ತದೆ. ಏಕೆಂದರೆ ಅವರು ಸ್ವಲ್ಪ ವಿದ್ಯಾವಂತರಾಗಿದ್ದರೆ, ಕೈಯಲ್ಲಿ ಹಣವಿಟ್ಟುಕೊಂಡಿದ್ದರೆ, ಬೇರೆ ಯಾವುದಾದರೂ ಉಪಕಸುಬನ್ನು ಕಲಿತಿದ್ದರೆ ಅವರಲ್ಲಿ ಆತ್ಮಸ್ಥೈರ್ಯ, ಆತ್ಮವಿಶ್ವಾಸ ಬಂದು ಪರಿಸ್ಥಿತಿಯನ್ನು ಎದುರಿಸುವ ಶಕ್ತಿ ಬರುತ್ತದೆ. ಎಲ್ಲರಿಂದಲೂ ಗೌರವ ಸಿಗುತ್ತದೆ. ಇವಾವುವೂ ಇಲ್ಲದಿದ್ದರೆ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳಬೇಕು. ಯಾವುದೇ ವಿಚಾರಗಳಲ್ಲಿ ಮಧ್ಯೆ ಮೂಗು ತೂರಿಸಬಾರದು. ತಮ್ಮ ಅಭಿಪ್ರಾಯವನ್ನು ಎಲ್ಲರೂ ಒಪ್ಪಬೇಕೆಂದು ಬಲವಂತಪಡಿಸಬಾರದು. ಎಲ್ಲರೂ ಟಿ.ವಿ. ನೋಡುವಾಗ ಅವರುಗಳು ಯಾವುದನ್ನು ನೋಡುತ್ತಾರೋ ಅದನ್ನೇ ತಾವೂ ನೋಡುವ ಅಭ್ಯಾಸ ಬೆಳೆಸಿಕೊಳ್ಳಬೇಕೇ ಹೊರತು ಅದು ಹಾಕಿ, ಇದು ಹಾಕಿ ಎಂದು ಒತ್ತಾಯಿಸಿ ಎಲ್ಲರ ತಿರಸ್ಕಾರಕ್ಕೆ ಅನಾದರಕ್ಕೆ ಒಳಗಾಗಬಾರದು. ಎಲ್ಲಕ್ಕಿಂತ ಮುಖ್ಯವಾಗಿ ಅಕ್ಕಪಕ್ಕದ ತಮ್ಮ ವಯಸ್ಸಿನವರ ಜೊತೆ ಸ್ನೇಹ ಬೆಳೆಸಿಕೊಳ್ಳಬೇಕು. ಅದೂ ಮನೆಯವರಿಗೆ ಯಾವ ರಿತಿಯ ಬೇಸರಕ್ಕೂ ಕಾರಣವಾಗದ ರೀತಿಯಲ್ಲಿ ಸ್ನೇಹ-ಸಂಬಂಧ ಹೊಂದಿರಬೇಕು. ದೇವಸ್ಥಾನಗಳಿಗೆ ಹೋಗುವುದು, ಹರಿಕಥೆ, ಪ್ರವಚನಗಳನ್ನು ಕೇಳುವುದು, ಭಜನೆಗಳಲ್ಲಿ ಭಾಗವಹಿಸುವುದನ್ನು ಮಾಡಬೇಕು-ಇದೆಲ್ಲಾ ವಯಸ್ಸಾದವರು ಕೇಳುವುದಕ್ಕೆ ಇರುವುದು ಎನ್ನುವುದು ವಾಡಿಕೆಯ ಮಾತಾಗಿದೆ. ಜೊತೆಗೆ ಅಂಗಡಿಗಳಿಗೆ ಹೋಗಿ, ಹಾಲು, ತರಕಾರಿ ತರುವುದು, ಮೊಮ್ಮಕ್ಕಳನ್ನು ಆಡಿಸುವುದು, ಅವರನ್ನು ಶಾಲೆಗೆ ಬಿಟ್ಟು ಕರೆತರುವುದು – ಇವುಗಳನ್ನು ಮಾಡುವಾಗ ಯಾವ ಕೀಳರಿಮೆಯನ್ನೂ ಇಟ್ಟುಕೊಳ್ಳದೆ ವಿಶಾಲ ಮನಸ್ಸಿನಿಂದ ಮಾಡಿದರೆ ಅದರಿಂದ ಸಂತೋಷ, ನೆಮ್ಮದಿ, ಮನಶಾಂತಿ ದೊರೆಯುವುದು. ಎಲ್ಲಕ್ಕಿಂತ ಮುಖ್ಯವಾಗಿ ಮನೆಗೆ ಬಂದ ಸೊಸೆಯನ್ನು ಮಗಳಂತೆ ನೋಡಿಕೊಂಡರೆ, ಅವಳ ಭಾವನೆಗಳಿಗೆ ಸ್ಪಂದಿಸಿದರೆ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ತನಗೆ ತಾನೇ ದೊರೆಯುವುದು. ಏಕೆಂದರೆ ಸಮಸ್ಯೆಯ ಹುಟ್ಟಿನಲ್ಲೇ ಪರಿಹಾರದ ಗುಟ್ಟೂ ಇರುತ್ತದೆ.

ಮಕ್ಕಳೂ ಸಹ ವಯಸ್ಸಾದ ತಂದೆತಾಯಿಗಳ ಮನಸ್ಸನ್ನರಿತು ಕೊಂಚ ತ್ಯಾಗ ಮನೋಭಾವ ಮೆರೆದರೇ ಸಾಕು. ಸಮಸ್ಯೆ ತಾನಾಗಿಯೇ ಓಡಿ ಹೋಗುವುದು. ತಂದೆ-ತಾಯಿಗಳನ್ನು ಪ್ರೀತಿಯಿಂದ ಮಾತನಾಡಿಸಿದರೇ ಸಾಕು, ಊಟ ಮಾಡಿದಿರಾ? ಮೊದಲು ಅವರಿಗೆ ತಿಂಡಿಕೊಡು-ಊಟ ಬಡಿಸು ಎಂದು ಹೆಂಡತಿಗೆ ಹೇಳಿದರೇ ಸಾಕು, ಹುಷಾರಾಗಿದ್ದೀರಾ ? ಆಸ್ಪತ್ರೆಗೆ ತೋರಿಸಲಾ ? ಮಾತ್ರೆ ತೆಗೆದುಕೊಂಡಿರಾ, ಮಾತ್ರೆ ಮುಗಿದಿದೆಯಾ, ತಂದು ಕೊಡಲಾ, ಏನು ತಿನ್ನುತ್ತೀರಿ, ಏನು ತರಲಿ,

ನಾನು ಈ ಕೆಲಸ ಮಾಡಬೇಕೆಂದಿದ್ದೇನೆ, ನಿಮ್ಮ ಅಭಿಪ್ರಾಯವೇನು ?- ಎಂದೆಲ್ಲಾ ಕೇಳುವುದರಿಂದ ಏನೂ ಕಳೆದುಕೊಳ್ಳುವುದಿಲ್ಲ. ಇಲ್ಲಿ ಪಡೆದುಕೊಳ್ಳುವುದೇ ಹೆಚ್ಚಿರುತ್ತದೆ. ಆದರೆ ಅದರರಿವು, ಕೇಳುವ ತಾಳ್ಮೆ ಅವರಿಗಿರುವುದಿಲ್ಲ ಅಷ್ಟೇ. ಇದರಿಂದ ಹಿರಿಯರ ಮತ್ತು ಮಕ್ಕಳ ಜೀವನ ಎರಡೂ ಸುಮಧುರವಾಗಿರುತ್ತದೆ. ಆದರೆ ಇಬ್ಬರಲ್ಲೂ ಈ ಭಾವನೆ ಮೂಡಿಬರದಿರುವುದೇ ವೃದ್ಧಾಪ್ಯದ ಸಮಸ್ಯೆ ಬೃಹದಾಕಾರವಾಗಿ ಬೆಳೆದು ಜ್ವಲಂತ ಸಮಸ್ಯೆಯಾಗಿರುವುದು. ಮುಸ್ಸಂಜೆಯ ಬಾಳಿನಲ್ಲಿ ನೋವು, ಆಕ್ರಂದನ ಕೇಳಿ ಬರುತ್ತಿರುವುದು.

ಇತ್ತೀಚೆಗೆ ವೃದ್ಧರ ಹಿತದೃಷ್ಟಿಯಿಂದ ಕಾನೂನು ಕಟ್ಟಳೆಗಳು ಜಾರಿಯಾಗುತ್ತಿರುವುದು ವಿಪರ್ಯಾಸವೇ ಸರಿ !

ಇಂದು ಸರ್ಕಾರದವರು ನಿವೃತ್ತಿಯ ವಯಸ್ಸನ್ನು ೬೦ಕ್ಕೆ ಏರಿಸಿದ್ದಾರೆ. ಅಂದರೆ ಮನುಷ್ಯರಿಗೆ ವೃದ್ಧಾಪ್ಯ ಪ್ರಾರಂಭವಾಗುವುದು ೬೦ ನೇ ವಯಸ್ಸಿಗೆ ಎಂಬುದನ್ನು ಘೋಷಿಸಿದಂತಾಗಿದೆ. ಸರ್ಕಾರ ಪಿಂಚಣಿ ನೀಡುತ್ತದೆ. ಜೊತೆಗೆ 'ಅಂತರರಾಷ್ಟ್ರೀಯ ವೃದ್ಧರ ವರ್ಷ' ಎಂದು ಘೋಷಣೆಯನ್ನೂ ಮಾಡಿದೆ. ಮಾಸಾಶನವನ್ನು ಜಾರಿಗೊಳಿಸಿದೆ. ವೃದ್ಧಾಪ್ಯ ವೇತನವನ್ನು ನೀಡುತ್ತಿದೆ. ವೃದ್ಧಾಶ್ರಮಗಳನ್ನು ಸ್ಥಾಪಿಸಿದೆ. ವೈದ್ಯಕೀಯ ರಕ್ಷಣೆಯನ್ನು ಒದಗಿಸಲಾಗುತ್ತಿದೆ. ಅವರ ಕುಂದುಕೊರತೆಗಳನ್ನು ಕೂಲಂಕಷವಾಗಿ ಚರ್ಚಿಸಿ ತಕ್ಕ ಅನುಕೂಲಗಳನ್ನು ಮಾಡಿಕೊಟ್ಟಿದೆ. ಬಸ್ಸಿನಲ್ಲಿ, ರೈಲಿನಲ್ಲಿ ರಿಯಾಯಿತಿಯನ್ನು ತೋರಿಸಿದೆ. ಔಷಧಿ ಕೊಳ್ಳುವಾಗಲೂ ರಿಯಾಯಿತಿ ನೀಡಿದೆ.

ಇದಲ್ಲದೆ ಹಿರಿಯರಿಗೆ ಕೆಲವು ಸಂದರ್ಭಗಳಲ್ಲಿ ಕೆಲವು ಸ್ತರಗಳಲ್ಲಿ ಹೆಚ್ಚಿನ ಗೌರವ ಮನ್ನಣೆ ದೊರೆಯುತ್ತದೆ. ಹಿರಿಯ ನಾಗರಿಕರೆಂದು ಮನ್ನಣೆ ದೊರೆತಿದೆ. ರಾಜಕೀಯ ರಂಗದಲ್ಲೂ ಹಿರಿಯ ವೃದ್ಧರು ಸಕ್ರಿಯ ಪಾತ್ರ ವಹಿಸುತ್ತಿದ್ದಾರೆ. ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಇಲ್ಲೆಲ್ಲಾ ವಯೋವೃದ್ಧತ್ವಕ್ಕೆ ಬೆಲೆ, ಗೌರವ ದೊರೆಯುತ್ತಿದೆ. ನಾನಾ ಕ್ಷೇತ್ರಗಳಲ್ಲಿ ತಮ್ಮ ಶಕ್ತಿ ಮೀರಿ ದುಡಿದು, ಸಮಾಜಸೇವೆ ಮಾಡಿದ ವೃದ್ಧರಿಗೆ ನಾನಾ ಪ್ರಶಸ್ತಿಗಳನ್ನಿತ್ತು ಗೌರವಿಸಲಾಗುತ್ತದೆ. ಉದಾ: ಭಾರತರತ್ನ, ಪದ್ಮವಿಭೂಷಣ, ಜ್ಞಾನಪೀಠ ಪ್ರಶಸ್ತಿಗಳನ್ನಿತ್ತು ಗೌರವಿಸಲಾಗುತ್ತಿದೆ. ನಾನಾ ರಾಜ್ಯಗಳಿಗೆ ರಾಜ್ಯಪಾಲರುಗಳನ್ನಾಗಿ, ರಾಯಭಾರಿಗಳನ್ನಾಗಿ ನೇಮಕ ಮಾಡಲಾಗುತ್ತಿದೆ.

ಹಿಂದೆ ವೃದ್ಧರು ಸಮಾಜದ ಆವಶ್ಯಕ ಅಂಗವಾಗಿದ್ದರು. ಇಂದಿಗೂ ಅನೇಕ ಹಳ್ಳಿಗಳಲ್ಲಿ ವೃದ್ಧರಿಗೆ ನ್ಯಾಯ ತೀರ್ಮಾನ ಮಾಡಲು ನ್ಯಾಯಾಧೀಶನ ಸ್ಥಾನ ಕೊಟ್ಟು ಗೌರವಿಸಲಾಗುತ್ತದೆ. ಯಾವುದೇ ಜಗಳಗಳನ್ನು ತೀರ್ಮಾನಿಸಲು, ಮನೆಯ ಆಸ್ತಿಯನ್ನು ಮಕ್ಕಳಿಗೆ ವಿಭಾಗ ಮಾಡಿಕೊಡುವಾಗ ಹಿರಿಯರಿಗೆ ಮೊದಲ ಆದ್ಯತೆ

ನೀಡುವರು. ಆದ್ದರಿಂದಲೇ 'ಹಿರಿಯರಿಲ್ಲದ ಸಭೆ ಸಭೆಯಲ್ಲ. ಹಿರಿಯರಿಲ್ಲದ ಮನೆ ಮನೆಯಲ್ಲ' ಎನ್ನುವ ಮಾತು ಪ್ರಚಲಿತದಲ್ಲಿರುವುದು. ಗುಡ್ಡಗಾಡಿನ ಜನಾಂಗಗಳಲ್ಲಿಯೂ ವೃದ್ಧರನ್ನೇ ನಾಯಕರನ್ನಾಗಿ ಆರಿಸುತ್ತಾರೆ. ಹೀಗೆ ವೃದ್ಧರು ಸಾಮುದಾಯಿಕ ಜೀವನದಲ್ಲಿ ಬೆರೆತು ಹೋಗುವುದರಿಂದ ಅವರು ಇಂತಹ ಪಂಗಡಗಳಲ್ಲಿ ಹೆಚ್ಚಿನ ಸಮಸ್ಯೆಗಳನ್ನು ಎದುರಿಸುವುದಿಲ್ಲ.

ಇಷ್ಟೆಲ್ಲಾ ಇದ್ದರೂ ಇಂದಿನ ಪರಿಸ್ಥಿತಿಯಲ್ಲಿ ವೃದ್ಧರ ಸಮಸ್ಯೆ ಬೃಹದಾಕಾರ ವಾಗಿದೆ. ತಂದೆ-ತಾಯಿಗಳೇ ದೇವರೆಂದು ತಿಳಿದು ಅಡ್ಡೆಯಲ್ಲಿ ಹೊತ್ತು ತಿರುಗಿದ ಶ್ರವಣ, ಪಿತೃವಾಕ್ಯ ಪರಿಪಾಲನೆಗಾಗಿ ಕಾಡಿಗೆ ಹೋದ ಶ್ರೀರಾಮ ಮೊದಲಾದ ಆದರ್ಶಪ್ರಾಯರಾದವರ, ಮಾತೃದೇವೋಭವ, ಪಿತೃದೇವೋಭವ ಎನ್ನುವ ಭಾವ ತುಂಬಿರುವ ಪುರಾಣಕತೆಗಳು ಪ್ರಸಿದ್ಧವಾದ ಈ ನಾಡಿನಲ್ಲಿ ಇಂದು ಹೆತ್ತವರನ್ನು ಸಾಕಲು ಕಾನೂನು ಕಾಯಿದೆಗಳು ಜಾರಿಗೆ ಬರುತ್ತಿದೆ ಎಂದರೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ನಮ್ಮ ಸಂಸ್ಕೃತಿಯೊಳಗೆ ಹೇಗೆ ಕಾಲೂರುತ್ತಿದೆ ಎಂಬುದು ಒಂದು ವಿಪರ್ಯಾಸವೇ ಸರಿ ! ಇದನ್ನು ನೋಡಿದರೆ ಸಾಕಷ್ಟು ತಂದೆ-ತಾಯಿಗಳು ಮಕ್ಕಳಿಂದ ತಿರಸ್ಕೃತರಾಗುತ್ತಿದ್ದಾರೆ ಎಂದೇ ಅರ್ಥವಲ್ಲವೇ ? ವೃದ್ಧಾಪ್ಯ ಎಂತಹ ನೆಲೆಗಟ್ಟಿನಲ್ಲಿ ನಿಂತಿದೆ ಎನ್ನುವುದರ ಅರಿವಾಗುತ್ತಿದೆ ಇಲ್ಲಿ.

"ಹೆತ್ತವರನ್ನು ನೋಡಿಕೊಳ್ಳಲು ಬೇಕು ಕಾಯಿದೆ" – "ಹೆತ್ತವರ ಹೀಗಳೆದರೆ ಜೈಲು" ಈ ಮಾತು ನಮ್ಮೆದೆಯನ್ನು ಈಟಿಯಿಂದ ಚುಚ್ಚಿದಂತಾಗುತ್ತದೆ. ನಮ್ಮ ದೇಶಕ್ಕೆ ಇಂತಹ ಕಾನೂನಿನ ಅಗತ್ಯವಿತ್ತೇ? ಹೀಗೇಕಾಯಿತು? ಇದು ಯೋಚಿಸಬೇಕಾದಂತಹ ವಿಷಯವೇ ಸರಿ !

ಆಧುನಿಕತೆಯ ಪ್ರಭಾವ, ಪಾಶ್ಚಿಮಾತ್ಯ ಸಂಸ್ಕೃತಿಯ ಪರಿಣಾಮದಿಂದ ಹೆತ್ತವರನ್ನು ನೋಡಿಕೊಳ್ಳಲು ಕಾಯಿದೆಯನ್ನು ಅಳವಡಿಸಬೇಕಾಗಿ ಬಂದಿರುವ ಮಟ್ಟಕ್ಕೆ ಕೆಲವು ತಂದೆ-ತಾಯಿಗಳ ಸ್ಥಿತಿ ತಲುಪಿದೆ. ಕೆಲವರು ಮಕ್ಕಳಿಗಾಗಿ ತಾವು ಗಳಿಸಿದ ಆಸ್ತಿಯನ್ನೆಲ್ಲಾ ಹಂಚಿಕೊಟ್ಟು ತಾವು ಬರಿಗೈಯಾಗಿ ಮನೆಯಿಂದ ಹೊರದೂಡಲ್ಪಟ್ಟಿದ್ದಾರೆ. ಅಂತಹವರ ಸ್ಥಿತಿ ಯಾರಿಗೂ ಬರುವುದು ಬೇಡ. ಇಂತಹ ದುಸ್ಥಿತಿಯಲ್ಲಿರುವ ತಂದೆ-ತಾಯಿಗಳಿಗೆ ಈ ಕಾನೂನು ವರವಾಗಬಹುದೇನೋ?

ಹುಟ್ಟಿದ ಮಕ್ಕಳನ್ನು ತಂದೆ ತಾಯಿಗಳು ಯಾವ ರೀತಿ ನೋಡಿಕೊಳ್ಳುತ್ತಾರೋ ಹಾಗೆಯೇ ವೃದ್ಧರಾದ ತಂದೆತಾಯಿಗಳನ್ನು ಮಕ್ಕಳೂ ನೋಡಿಕೊಳ್ಳಬೇಕಾದುದೂ ಅವರ ಕರ್ತವ್ಯ ಕೂಡ. ಈ ಕರ್ತವ್ಯಗಳೆಲ್ಲ ನಡೆಯುವುದು ಪ್ರೀತಿ ವಿಶ್ವಾಸಗಳ ಮೂಲಕ. ಈ ಪ್ರೀತಿ ವಿಶ್ವಾಸಗಳನ್ನು ಅಂಗಡಿಯಲ್ಲಿಟ್ಟು ಮಾರುವುದಿಲ್ಲ. ಇದನ್ನು ಹಣ ಕೊಟ್ಟು ಕೊಂಡುಕೊಳ್ಳಲೂ ಸಾಧ್ಯವಿಲ್ಲ. ಇದು ಅಂತರಂಗದಿಂದ ಮೂಡಿ

ಬರಬೇಕು. ಇಂತಹ ಭಾವನಾತ್ಮಕವಾದ ವಿಷಯಗಳಿಗೆ ಕಾನೂನು ಮಾಡಬೇಕಾದ ಪರಿಸ್ಥಿತಿ ಬಂದಿದೆ ಎಂದರೆ ನಿಜಕ್ಕೂ ಇದಕ್ಕಿಂತ ದುರಂತ ಇನ್ನೊಂದಿಲ್ಲ. ಇದು ಮಾನವೀಯ ಮೌಲ್ಯಗಳು ಅಧಃಪತನ ಹೊಂದುತ್ತಿರುವ ಸಂಕೇತವೂ ಆಗಿದೆ. ಇಂತಹ ಕಾಯಿದೆ ಕಾನೂನುಗಳಿಂದ ಬಲವಂತವಾಗಿ ನೋಡಿಕೊಳ್ಳಬಹುದೇ ಹೊರತು ಪ್ರೀತಿ ವಿಶ್ವಾಸಗಳಿಂದಲ್ಲ. ಪ್ರೀತಿ ಹಣ ಕೊಟ್ಟು ಕೊಂಡುಕೊಳ್ಳುವ ವಸ್ತುವೂ ಅಲ್ಲ. ಅದನ್ನು ಅಂಗಡಿಯಲ್ಲಿಟ್ಟು ಮಾರುವುದೂ ಅಲ್ಲ. ಇದು ಹೃದಯಾಂತರಾಳದಿಂದ ಹೊರಹೊಮ್ಮಿ ಬರಬೇಕು.

ಕಾನೂನು ಕಾಯಿದೆಗಳನ್ನು ಬಲವಂತವಾಗಿ ಹೇರಲ್ಪಟ್ಟರೆ ಅದರಿಂದ ಯಾವುದೇ ಸುಖ–ಸಂತೋಷ ನೆಮ್ಮದಿ ದೊರೆಯಲಾರದು. ಇದು ಬಲವಂತದ ಮಾಘಸ್ನಾನವಾಗುವುದು. 'ಅತ್ತೂ ಕರೆದೂ ಔತಣಕ್ಕೆ ಕರೆಸಿಕೊಂಡಂತಾಗುವುದು'. ಯಾವುದನ್ನೇ ಆಗಲಿ ಪ್ರೀತಿಯಿಂದ ಗೆಲ್ಲಬೇಕೇ ಹೊರತು ಕಾನೂನಿನಿಂದ ಅಲ್ಲ.

ಹೆತ್ತವರನ್ನು ಸಾಕದಿದ್ದರೆ ಅವರಿಗೆ ೩ ತಿಂಗಳು ಜೈಲು. ಮೇಲ್ಮನವಿಗೂ ಅವಕಾಶವಿಲ್ಲ ಎಂಬುದು ಹೆತ್ತವರಿಗೆ ಒಂದು ರೀತಿಯ ಕ್ಷಣಿಕ ಸಂತಸವಾದರೆ ಹೊಣೆಗೇಡಿ ಮಕ್ಕಳಿಗೆ ಎಚ್ಚರಿಕೆಯ ಗಂಟೆಯಾಗಿ ಪರಿಣಮಿಸಿದೆ. ಈ ಕಾಯಿದೆಯ ಪ್ರಕಾರ ಮಕ್ಕಳು ಕಡ್ಡಾಯವಾಗಿ ವೃದ್ಧ ತಂದೆ – ತಾಯಿಗಳನ್ನು ಪೋಷಿಸಬೇಕು. ಅವರನ್ನು ಹೊರದಬ್ಬುವುದಾಗಲೀ, ನಿಕೃಷ್ಟವಾಗಿ ಕಾಣುವುದಾಗಲೀ ಆದರೆ ಅವರಿಗೆ ೩ ತಿಂಗಳ ಸೆರೆವಾಸ ಕಟ್ಟಿಟ್ಟ ಬುತ್ತಿ. ಇಲ್ಲಿ ತಂದೆ ತಾಯಿಗಳು ಸುಳ್ಳು ಹೇಳುತ್ತಿದ್ದಾರೆ ಎಂದಾಗಲೀ ಬೇರೆ ಯಾವ ಕಾರಣಗಳನ್ನಾಗಲೀ ನೀಡಿ ಮಕ್ಕಳು ಮೇಲ್ಮನವಿ ಸಲ್ಲಿಸಲು ಅವಕಾಶವಿಲ್ಲ. ನ್ಯಾಯ ಮಂಡಳಿ ಆದೇಶ ನೀಡಿದ ೩೦ ದಿನಗಳೊಳಗಾಗಿ ಪೋಷಕರಿಗೆ ಜೀವನಾಂಶ ಸಂದಾಯವಾಗಬೇಕು. ಇಲ್ಲದಿದ್ದರೆ ೫% ನಿಂದ ೧೮% ತನಕ ಬಡ್ಡಿ ನೀಡುವಂತೆಯೂ ಆದೇಶ ನೀಡಬಹುದು. ಆ ಆದೇಶ ಉಲ್ಲಂಘಿಸಿದವರಿಗೆ ಗರಿಷ್ಠ ೩ ತಿಂಗಳ ಕಾರಾಗೃಹವಾಸ ಮತ್ತು ೫ ಸಾವಿರ ರೂ. ಗಳ ದಂಡ ವಿಧಿಸಬಹುದು. ಇನ್ನೊಂದು ವಿಷಯವೆಂದರೆ ಮಕ್ಕಳಿಗೆ ಆಸ್ತಿಪಾಲು ಮಾಡಿಕೊಟ್ಟ ಬಳಿಕ ಅದರಲ್ಲಿ ಇವರಿಗೆ ಜೀವನ ನಿರ್ವಹಣೆಗೆಂದು ಆಸ್ತಿಯಲ್ಲಿ ಭಾಗವಿಲ್ಲದಿದ್ದರೆ ಆಗ ಪೋಷಕರು ತಾವು ಕಾನೂನು ಪ್ರಕಾರ ವರ್ಗಾಯಿಸಿದ ಇಲ್ಲವೇ ದಾನ ಮಾಡಿದ ಆಸ್ತಿಯನ್ನು ಮರಳಿ ಪಡೆಯಬಹುದು.

ಹೆತ್ತು 'ಹೊರೆ' ಯಾದವರಿಗೆ ಮಕ್ಕಳಿಂದ ಪರಿತ್ಯಕ್ತರಾದ ಹಿರಿಯ ಜೀವಗಳಿಗೆ ಸ್ವಂತ ವರಮಾನದಲ್ಲಿ ಜೀವನ ದುಸ್ತರವೆನಿಸಿದಾಗ ಅಥವಾ ಯಾವುದೇ ಆರ್ಥಿಕ ವರಮಾನ ಇಲ್ಲದಿದ್ದಾಗ ಜೀವನಾಂಶಕ್ಕಾಗಿ ಈ ಕಾನೂನು ಊರುಗೋಲಾಗಿದೆ. ಇಂತಹ ಕಾಯಿದೆ ವೃದ್ಧರಿಗೆ ವರದಾನವಾಗಿದೆ ಎನ್ನಬಹುದು. ಹಾಗೆಯೇ ಈ

ಕಾನೂನು ನೋವಿನ ಸಂಗತಿಯೂ ಕೂಡ ಆಗಿದೆ ಎಂದೂ ಹೇಳಬಹುದು. ಈ ಕಾಯಿದೆ ಜಾರಿಯಾದರೆ ಆಗುವ ಕೆಡುಕಿನ ಪರಿಣಾಮ, ಮಾನಸಿಕ ಕ್ಷೋಭೆ ಊಹೆಗೂ ನಿಲುಕದ್ದಾಗುವುದು ಎನಿಸುತ್ತದೆ. ಸಣ್ಣ ಪುಟ್ಟ ಮನಸ್ತಾಪಗಳಿಗೂ ಈ ಕಾಯಿದೆ ಬಳಕೆಯಾಗುವುದಾದರೆ ಕೌಟುಂಬಿಕ ದೌರ್ಜನ್ಯ ತಡೆ ಕಾಯಿದೆಯಂತೆ ದುರ್ಬಳಕೆಯಾಗುವ ಸಾಧ್ಯತೆಗಳು ಹೆಚ್ಚಾಗುತ್ತವೆ ಎನ್ನುವ ನೋವೂ ಕಾಡುತ್ತದೆ. ಇದು ಹೆತ್ತವರಿಗೆ ಊರುಗೋಲಾಗುವುದೋ ಅಥವಾ ಬೀಸುವ ದೊಣ್ಣೆಯಾಗುವುದೋ ಎಂಬುದನ್ನು ಕಾಲವೇ ನಿರ್ಧರಿಸಬೇಕಾಗಿದೆ.

ಇಂದೂ ತಂದೆ ತಾಯಿಗಳಿಗೆ ಹೆದರುವ, ಅವರ ಅನುಮತಿ ಇಲ್ಲದೆ ಯಾವ ಕೆಲಸವನ್ನೂ ಮಾಡದ, ಅವರು ಹಾಕಿದ ಗೆರೆಯನ್ನು ದಾಟದ, ಅವರುಗಳನ್ನು ಪ್ರೀತಿ ವಿಶ್ವಾಸಗಳಿಂದ ತಮ್ಮೆರಡು ಕಣ್ಣುಗಳಂತೆ ಕಾಪಾಡುವ ಮಕ್ಕಳುಗಳೂ ಇದ್ದಾರೆ. ಹಾಗೆಯೇ ತಂದೆತಾಯಿಗಳನ್ನು ಧಿಕ್ಕರಿಸುವ, ಅವರ ಬಳಿ ಇರುವ ಹಣ, ಆಸ್ತಿ, ಒಡವೆ ವಸ್ತುಗಳನ್ನೆಲ್ಲಾ ಕಿತ್ತುಕೊಂಡು ಅವರನ್ನು ಮನೆಯಿಂದ ಹೊಡೆದೋಡಿಸುವ, ಹಾಗೆಯೇ ಮನೆಯ ಒಂದು ಮೂಲೆಯಲ್ಲಿ ನಾಯಿಗಳ ರೀತಿ ಕೂರಿಸಿ ಒಂದು ತುತ್ತು ಅನ್ನ ಹಾಕುವ, ಕಾರುಷೆಡ್ಡುಗಳಲ್ಲಿ ಮಲಗಲು ಅವಕಾಶ ನೀಡುವ, ವೃದ್ಧಾಶ್ರಮಗಳಿಗೆ ಬಿಟ್ಟು ಬರುವ ಮಕ್ಕಳುಗಳೂ ಇದ್ದಾರೆ. ಮುಂದೊಂದು ದಿನ ಅವರಿಗೆ ತಮ್ಮ ತಪ್ಪಿನ ಅರಿವು ಆಗೇ ಆಗುತ್ತದೆ. ಅದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಆದರೆ ಅಷ್ಟು ಹೊತ್ತಿಗೆ ಕಾಲ ಮಿಂಚಿರುತ್ತದೆ. ಅಂತಹ ಮಕ್ಕಳಿಗೆ ಬುದ್ಧಿ ಕಲಿಸಲು ವೃದ್ಧರಿಗೆ ಈ ಕಾನೂನು ಕಾಯಿದೆಗಳು ವರವಾಗಬಹುದು!

ತಂದೆ-ತಾಯಿಗಳು ಯಾವಾಗಲೂ ಕೆಟ್ಟವರಾಗಿರುವುದಿಲ್ಲ. ಸದಾ ಮಕ್ಕಳ ಶ್ರೇಯಸ್ಸನ್ನು ಬಯಸುತ್ತಿರುತ್ತಾರೆ. ಅದರರಿವು ಮಕ್ಕಳಿಗೆ ಆಗಿರುವುದಿಲ್ಲ. ಮಕ್ಕಳು ಕೇಡು ಬಯಸಿದರೂ ಅವರ ಕರುಳು ಮಕ್ಕಳಿಗಾಗಿ ಮಿಡಿಯುತ್ತಿರುತ್ತದೆ. ಇಂತಹವರು ಕಾನೂನಿನ ಮೂಲಕ ಮಕ್ಕಳಿಂದ ತಮ್ಮ ಬದುಕಿಗಾಗಿ ಹಣ ಪಡೆಯುವ ಧೈರ್ಯ ಬಂದಾಗ ಮಾತ್ರ ಈ ಕಾಯಿದೆ-ಕಾನೂನು ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಇದು ಕಡತದಲ್ಲಿಯೇ ಉಳಿಯುತ್ತದೆ.

ಒಟ್ಟಿನಲ್ಲಿ ಹಿರಿಯಜೀವಿಗಳು ಗೀತೆಯಲ್ಲಿ ಹೇಳಿದಂತೆ 'ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೇ ಹೊರ್ರತು ಅದರ ಫಲಗಳನ್ನು ಅಪೇಕ್ಷಿಸುವುದು ಸಲ್ಲದು' ಎಂಬ ಭಾವನೆಯುನ್ನು ತಾಳಿ ಪ್ರತಿಫಲವನ್ನು ಅಪೇಕ್ಷಿಸುವ ಸ್ವಾರ್ಥಿಗಳಾಗದೆ, ನಿಸ್ವಾರ್ಥತೆಯಿಂದ ಎಲ್ಲವನ್ನೂ ಬಿಟ್ಟು ಎಲ್ಲರೊಡನೆ ದರ್ಪ, ಅಹಂಗಳನ್ನು ತೊರೆದು, ನಾನತ್ವವನ್ನು ದೂರೀಕರಿಸಿ, ಪ್ರೀತಿ, ವಿಶ್ವಾಸದಿಂದ ಬೆರೆತರೆ ಯಾವ ಸಮಸ್ಯೆಯೂ ಬರುವುದಿಲ್ಲ. ಯಾವ ಕುಂದು ಕೊರತೆಗಳಿಗೂ ಅಲ್ಲಿ ಸ್ಥಳವಿರುವುದಿಲ್ಲ. ಹಾಗೆಯೇ

ಮಕ್ಕಳೂ ಕೂಡ ತಮಗೆ ಜನ್ಮ ನೀಡಿ, ಸಾರ್ಥಕ ಬದುಕನ್ನು ಬದುಕಲು ಅವಕಾಶ ನೀಡಿದಂತಹ ತಂದೆತಾಯಿಗಳನ್ನು ಪ್ರೀತಿಯಿಂದ, ಗೌರವದಿಂದ ನೋಡಿಕೊಂಡರೇ ಸಾಕು. ಅವರಿಗಾಗಿ ಯಾವ ತ್ಯಾಗ-ಭೋಗಗಳೂ ಬೇಡ. ಇದೇ ಹಿರಿಯರಿಗೆ ಸಲ್ಲಿಸುವ ಪೂಜೆ, ಇದೇ ಮಾತಾ-ಪಿತೃಗಳ ಋಣ ಮುಕ್ತಿ. ಇದಕ್ಕಿಂತ ಶ್ರೇಷ್ಠವಾದ ಯಾವ ಪೂಜಾದಿಗಳೂ, ಯಾತ್ರೆಗಳೂ, ಯಾಗ ಯಜ್ಞಗಳೂ ಬೇಕಾಗಿರುವುದಿಲ್ಲ. ತಂದೆ ತಾಯಿಗಳು ಸತ್ತ ನಂತರ ಗೋಳಿಡುವುದು, ಡೌಲು ತೋರಿಸಿಕೊಳ್ಳಲು ಮಾಡುವ ಶ್ರಾದ್ಧ-ಯಾವ ಪಿತೃ ಹಾಗೂ ಮಾತೃ ಋಣವನ್ನೂ ತೀರಿಸುವುದಿಲ್ಲ. ಯಾರ ಆತ್ಮಕ್ಕೂ ಶಾಂತಿಯನ್ನು ನೀಡುವುದಿಲ್ಲ ಎನ್ನುವ ಅರಿವು ಮಕ್ಕಳಿಗಾದರೆ ಅಷ್ಟೇ ಸಾಕು ! ಆಗ ಬಾಳ ಮುಸ್ಸಂಜೆಯ ನೋವು, ಆಕ್ರಂದನ ನಿಲ್ಲುವುದು, ಮುದುಡಿದ ತಾವರೆ ಅರಳಿದಂತಾಗುವುದು, 'ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ' ಎನ್ನುವ ದಾಸರ ವಾಣಿಯಂತೆ ಮನುಷ್ಯ ಜನ್ಮ ಸಾರ್ಥಕ್ಯ ಪಡೆಯುವುದು.

ಒಟ್ಟಿನಲ್ಲಿ ವಯಸ್ಸಿರುವಾಗಲೇ ತಮ್ಮ ಹವ್ಯಾಸಗಳನ್ನು ಹತೋಟಿಯಲ್ಲಿ ಬೆಳೆಸಿಕೊಳ್ಳುತ್ತಾ ಪ್ರಾಣಾಯಾಮ, ನಡಿಗೆ, ವ್ಯಾಯಾಮ, ದೇವತಾ ಧ್ಯಾನ, ಒಳ್ಳೆಯ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಳ್ಳುವುದು, ಮಕ್ಕಳೊಡನೆ ಪ್ರೀತಿ-ವಿಶ್ವಾಸಗಳಿಂದ ನಡೆದುಕೊಳ್ಳುವುದು, ಆದಷ್ಟೂ ಅವರಿಗೆ ಹೊರೆಯಾಗದಂತೆ ಬದುಕಲು ಪ್ರಯತ್ನಿಸುವುದು ಮಾಡಿದರೆ ಮುಪ್ಪಿನಲ್ಲಿ ಬದುಕು ಸಹನೀಯವಾಗಿರುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಕುಟುಂಬದಲ್ಲಿ ವೃದ್ಧಾಪ್ಯ ವೈಭವದಿಂದ ವಿಜೃಂಭಿಸಬೇಕಾದರೆ ಮಕ್ಕಳೊಡನೆ ಮಕ್ಕಳಿಗಾಗಿ ಬಾಳುವುದನ್ನು ಕಲಿತಾಗ, ಕಣ್ಣಿದ್ದೂ ಕುರುಡರಾಗಿ ಕಿವಿಯಿದ್ದೂ ಕಿವುಡರಾಗಿ ಮರೆವಿನ ಮೊರೆ ಹೊಕ್ಕಾಗ ಮಾತ್ರ, ಇಲ್ಲದಿದ್ದರೆ ಬದುಕು ಅಸಹನೀಯವಾದ ಮುಳ್ಳಾಗಿ ಬಾಳ ಮುಸ್ಸಂಜೆಯಲ್ಲಿ ಚುಚ್ಚಿ ಚುಚ್ಚಿ ನೋವಾಗುವುದು.....

ಗ್ರಂಥಋಣ

೧. ಕನ್ನಡ ವಿಶ್ವಕೋಶ

೨. ಕನ್ನಡ ಸಾಹಿತ್ಯ ಪರಿಷತ್ ನಿಘಂಟು

೩. ಕಿಟ್ಟೆಲ್ ಕೋಶದ ಗಾದೆಗಳು

೪. ಕನ್ನಡ ಪ್ರಭ

೫. ವಿಜಯ ಕರ್ನಾಟಕ

೬. ಹಿತಚಿಂತನ – ಎಂ.ವಿ. ಸೀತಾರಾಮಯ್ಯ

೧೨. ಶ್ರೀಕೃಷ್ಣ ಗೋಪಾಲಕನಾಗಿಯೂ ಮಹಾನ್ ಯೋಗದಾನವನ್ನು ಜಗತ್ತಿಗೆ ಕೊಟ್ಟ

– ಗೋಪಾಲಕೃಷ್ಣ ಭಟ್ಟ, ಯಲ್ಲಾಪುರ

ಗೋಪಾಲನೆಯ ಬಗ್ಗೆ ವೇದಗಳಲ್ಲಿ ಉನ್ನತ ಮಟ್ಟದಲ್ಲಿ ಉಪವರ್ಣಿಸಿದೆ. ಗೋವಿಗೆ ವಿಶೇಷ ಸ್ಥಾನವಿದೆ. ಪರಮ ಪಾವನಿ ಗೋವನ್ನು ಸಭೆ ಸಮಾರಂಭಗಳಲ್ಲಿ–ಸತ್ಕಾರ್ಯಗಳಲ್ಲಿ ಬಳಸುವ ಪದ್ಧತಿ ಅನಾದಿಕಾಲದಿಂದಲೂ ನಡೆದು ಬಂದಿದೆ. ಗೋವಿಗೆ ತಾಯಿಯ ಸ್ಥಾನವನ್ನು ನೀಡಲಾಗಿದೆ.

गावो विश्वस्य मातरः

ಗೋಮಾತೆಯೆಂದೇ ಪೂಜಿಸಿ ಧನ್ಯತೆಯನ್ನು ಹೊಂದುವ ಶಕ್ತಿ ಅವಳದು. ಗೋಮಾತೆ ನಡೆದಾಡುವ ಹಾಸ್ಪಿಟಲ್ ಇದ್ದಂತೆ. ಅದು ಔಷಧಿಗಳ ಭಂಡಾರವನ್ನೇ ಹೊತ್ತು ತಿರುಗುತ್ತದೆ. ಹಾಲಿನ ರೂಪದಲ್ಲಿ ಒಳ್ಳೆಯ ಪೋಷಕ ಆಹಾರವಾದರೆ, ಜಮೀನುಗಳಿಗೆ ಅತ್ಯುತ್ತಮ ರಸಗೊಬ್ಬರ ಒದಗಿಸುತ್ತದೆ. ಪರಿಸರ ಮತ್ತು ಗಾಳಿಯನ್ನು ಶುದ್ಧಗೊಳಿಸುವ ಕಾರ್ಖಾನೆಯೂ ಹೌದು.

ಉತ್ಸವಗಳಲ್ಲಿ ಅದರ ವಿನಃ ಪಾವಿತ್ರ್ಯತೆ ಪೂರ್ಣತೆ ಬರಲಾರದು. ವಾಸ್ತವದಲ್ಲಿ ಗೋಮಾತೆಯು ನಡೆದಾಡುವ ಒಂದು ಚಿಕಿತ್ಸಾಲಯ ಹಾಗೂ ಔಷಧ ಭಂಡಾರವಾಗಿದೆ. ನಿರಂತರ ವಾತಾವರಣವನ್ನು ಶುದ್ಧಗೊಳಿಸುವ ಶೋಧಕ ಪ್ರಾಣವಾಯುವನ್ನು ಹೊರಸೂಸುತ್ತದೆ.

ಅಂತಹ ಗೋವುಗಳ ಪಾಲನೆಯ ಬಗ್ಗೆ ಶ್ರೀಕೃಷ್ಣ ಪ್ರಪ್ರಥಮವಾಗಿ ಲೋಕದಲ್ಲಿ ಪ್ರಜ್ಞೆಯನ್ನು ಮೂಡಿಸಿದ.

ಗೋವುಗಳು ನಮಗೆ ಹಾಲು, ಮೊಸರು, ತುಪ್ಪ–ಗೋಮೂತ್ರ ಮತ್ತು ಗೋಮಯ ಎಂಬ ಪಂಚತತ್ವದ ಪಂಚಗವ್ಯವನ್ನು ಕೊಡುತ್ತದೆ. ಇದರೊಟ್ಟಿಗೆ ಕೆನೆ–ಬೆಣ್ಣೆ ಮತ್ತು ಮಜ್ಜಿಗೆಯನ್ನು ಕೊಡುತ್ತದೆ. ಇವೆಲ್ಲವೂ ಪ್ರತ್ಯೇಕವಾಗಿ, ಕೆಲವೊಮ್ಮೆ ಒಟ್ಟಿಗೇ ವಿಶೇಷ ಔಷಧೀಯ ಗುಣಗಳನ್ನು ಹೊಂದಿವೆ. ಹೇಗೆ ಬಳಸಿದರೂ ಸರಿ.

ಕುಡಿದರೂ ಸರಿ ಪ್ರೋಕ್ಷಿಸಿದರೂ ಸರಿಯೇ ಲಾಭದಾಯಕವೇ ! ಇವುಗಳಲ್ಲಿ ಪ್ರಮುಖವಾಗಿ ರೋಗ ನಿವಾರಣೆ ಮತ್ತು ಸ್ಥಾಯಿ ಲಾಭದ ಗುಣವಿದೆ.

ಬ್ರಹ್ಮಾಂಡದ ಐದು ತತ್ವಗಳು-ಪೃಥಿವಿ-ಜಲ-ವಾಯು-ತೇಜ, ಆಕಾಶ ಈ ಐದು ತತ್ವಗಳು-ಶರೀರದೊಳಗೂ ಇದೆ. ಪಂಚಗವ್ಯದಲ್ಲಂತೂ ಇವು ಪೂರ್ಣ ಪ್ರಮಾಣದಲ್ಲಿ ದೊರೆಯುತ್ತದೆ. ಮೃತ್ಯುವೊಂದನ್ನು ಬಿಟ್ಟು ಬೇರೆಲ್ಲ ರೋಗಗಳಿಗೂ ಪಂಚಗವ್ಯ ಪರಿಣಾಮಕಾರಿಯಾದ ಔಷಧಿಯಾಗಿದೆ.

ಶ್ರೀಕೃಷ್ಣ ದೇವದೇವೋತ್ತಮನಾದರೂ ಸಾಮಾನ್ಯ ಗೋವಳನಾಗಿ ಕೆಲವು ಕಾಲ ಜೀವಿಸಿದ ಗೋವುಗಳನ್ನೇ ಪೂಜಿಸಿ ಎಂದು ಆಜ್ಞಾಪಿಸಿದ ಯಾಕೆ ?

ಗೋವಿನ ಬಗೆಗೆ ಸಾಮಾನ್ಯನೊಬ್ಬನು ಹೇಳಿದರೆ ಅಭಿಮಾನವನ್ನು ಮೂಡಿಸಿದರೆ ಅದು ಆಚರಣೆಗೆ, ಅನುಕರಣಕ್ಕೆ ಬರುವುದಿಲ್ಲ. ಆದರೆ ಶ್ರೀಕೃಷ್ಣನು ಪರಮ ಪುರುಷನು, ಹಾಗಾಗಿ ಲೋಕವೂ ಅಂತೆಯೇ ಪ್ರವರ್ತಿಸುತ್ತದೆ. ಹಾಗಾಗಿ ಗೋಪಾಲಕನಾಗಿ ಜೀವಿಸಿದನು.

यद्यदायरति श्रेष्ठो
तत्वदेवेतरो जनाः
स यत्प्रमाणं कुरुते।
लोकस्तदनु वर्तते ॥

ಶ್ರೇಷ್ಠರು ಯಾವುದನ್ನು ಆಚರಿಸುತ್ತಾರೋ ಇತರರೂ ಅದನ್ನೇ ಅನುಸರಿಸುತ್ತಾರೆ. ಅವನು ಯಾವುದನ್ನು ಆದರ್ಶವೆಂದು ಭಾವಿಸುತ್ತಾನೋ, ಇತರರೂ ಕೂಡ ಅದನ್ನೇ ಸ್ವೀಕರಿಸುತ್ತಾರೆ. ಮನುಷ್ಯನಲ್ಲಿ ಅನುಕರಿಸುವ ಗುಣ ಇರುವುದು. ಅದು ಸುಲಭ. ನಾವೇ ಸ್ವತಃ ಒಂದು ನಿರ್ಣಯಕ್ಕೆ ಬರಬೇಕಾದರೆ ಅದು ಅತಿ ಪ್ರಯಾಸದ ಕೆಲಸ. ಅದಕ್ಕಾಗಿ ತುಂಬಾ ಯೋಚಿಸಬೇಕು. ಒಂದು ವೇಳೆ ನಾನು ತಪ್ಪಾಗಿ ಭಾವಿಸಿರುವುದು ತಪ್ಪಾಗಿ ಇದ್ದರೂ ಇರಬಹುದು ಎಂಬ ಅನುಮಾನ ಯಾವಾಗಲೂ ನಮ್ಮನ್ನು ಕಾಡುತ್ತ ಇರುವುದು. ಅದಕ್ಕಾಗಿಯೇ ಒಬ್ಬ ದೊಡ್ಡವನನ್ನು ಅನುಸರಿಸಿದರೆ ಮಾರ್ಗ ಸರಿಯಾಗಿಯೂ ಇರುತ್ತದೆ. ಸುಲಭವೂ ಆಗುತ್ತದೆ.

ಹಾಗಂತ ಮುಂದಾಳುವಾದವನೇ ತನಗೆ ಯಾವ ಕರ್ಮವೂ ಅವಶ್ಯವಿಲ್ಲವೆಂದು ಕುಳಿತುಬಿಡಬಹುದು. ಆದರೆ ಅವನಿಗೆ ಅವಶ್ಯವಿಲ್ಲದಿದ್ದರೂ ಸಮಾಜಕ್ಕಾಗಿ ಅವನು ತನ್ನ ಆದರ್ಶ ಕರ್ಮವನ್ನು ಮಾಡಲೇಬೇಕು. ಅದಕ್ಕಾಗಿ ಶ್ರೀಕೃಷ್ಣನು ತನಗೆ ಅವಶ್ಯವಿಲ್ಲದಿದ್ದರೂ ಸಮಾಜದ ಭದ್ರತೆಗಾಗಿ, ಸುಸ್ಥಿರ ಆರೋಗ್ಯಕ್ಕಾಗಿ ಗೋವನ್ನು ಕಾಯುವವನಾಗಿ ಗೋವಿನ ಪ್ರತಿಯೊಂದು ಅಂಶದ ಮಹತ್ವವನ್ನು ಜಗತ್ತಿಗೆ ತೋರಿದ.

ಗೋವಿನಲ್ಲಿ ಎಲ್ಲ ದೇವತೆಗಳು ವಾಸವಿದ್ದು, ಕಾಮಧೇನುವೆಂದು ನಮಗೆ ಪರಿಚಯಿಸಿದ. ಇದರ ಹಿಂದಿನ ರಹಸ್ಯವೇನು ಗೊತ್ತೇ ?

[1]ಗೋವುಗಳು ಇರುವಲ್ಲಿ ಎಲ್ಲಾ ನಕ್ಷತ್ರಗಳ ಪ್ರಭಾವವಿರುತ್ತದೆ. ಇದನ್ನು ನಾವು ಎಲ್ಲ ದೇವತೆಗಳ ಕೃಪೆ ಅಥವಾ ವಾಸವೆಂದು ಪೂಜಿಸುತ್ತೇವೆ. ಈ ಎಲ್ಲಾ ಕಾರ್ಯವನ್ನು ಮಾಡೋದು ಗೋವಿನ ಬೆನ್ನೆಲುಬಿನ ಒಳಗೆ ಸೂರ್ಯನಾಡಿಯಾಗಿದೆ. ಇದು ಸೂರ್ಯ ಕಿರಣವನ್ನು ತನ್ನ ಶರೀರದಲ್ಲಿ ಹೀರಿ ಸುವರ್ಣ ಕ್ಷಾರ ತಯಾರಿಸುತ್ತದೆ. ಅದೇ ಸುವರ್ಣ ಕ್ಷಾರವೇ ಗೋವಿನ ಹಾಲು, ಬೆಣ್ಣೆ, ತುಪ್ಪದಲ್ಲಿರುತ್ತದೆ. ವಿಶೇಷವಾಗಿ ಗೋಮಾತೆಯ ಹಾಲನ್ನು ಬಿಟ್ಟರೆ ಬೇರೆ ಯಾವುದೇ ಹಾಲಿನಲ್ಲಿ ಸುವರ್ಣ ಕ್ಷಾರ ಇರುವುದಿಲ್ಲ. ಸತ್ವವೂ ಇರುವುದಿಲ್ಲ. ಅದೇ ಸುವರ್ಣ ಕ್ಷಾರ ಗೋಮಯ, ಗೋಮೂತ್ರದಲ್ಲಿಯೂ ಇರುತ್ತದೆ. ಗೋಮೂತ್ರದಲ್ಲಿರುವ ಕಾರ್ಬಾಲಿಕ್ ಆಮ್ಲವು ಕೀಟಾಣು ನಾಶಕವಾಗಿದೆ. ವೈಜ್ಞಾನಿಕವಾಗಿಯೂ ಗೋಮೂತ್ರದಲ್ಲಿ ಎಲ್ಲಾ ರೀತಿಯ ರಸಾಯನಗಳಿರುತ್ತದೆ. ಶುದ್ಧ ಮತ್ತು ಸ್ವಚ್ಚತೆಯನ್ನು ಹೆಚ್ಚಿಸುವುದರಿಂದ ನಮ್ಮ ಪವಿತ್ರ ಗ್ರಂಥಗಳಲ್ಲಿ ಗೋಮೂತ್ರವನ್ನು ಪವಿತ್ರವೆನ್ನಲಾಗಿದೆ. ಮತ್ತೆಂದರೆ ಇವತ್ತಿನ ದಿನಗಳಲ್ಲಿ ಮಹಾರೋಗವೆಂದು ಪರಿಗಣಿಸಲ್ಪಟ್ಟ ಕ್ಯಾನ್ಸರ್ ರೋಗವನ್ನು ಗೋಮೂತ್ರ ಚಿಕಿತ್ಸೆಯಿಂದ ಶಮನಗೊಳಿಸಬಹುದೆಂಬುದನ್ನು ಸಿದ್ಧಗೊಳಿಸಿದ್ದಾರೆ.

ಶ್ರೀ ಕೃಷ್ಣ ತುಳಸಿ ಮತ್ತು ಗೋವುಗಳನ್ನು ತನ್ನ ಹತ್ತಿರದಲ್ಲೇ ಇರಿಸಿಕೊಂಡು ಬೆಳೆದ ಏಕೆ ?

ತುಳಸಿ ಮತ್ತು ಗೋವು ಇರುವ ಮನೆಯಲ್ಲಿ ವೈದ್ಯರ ಪ್ರಯೋಜನವೇ ಇಲ್ಲ ಎಂದು ಹಿರಿಯರ ಗಾದೆ ಮಾತಿದೆ. ಆಯುರ್ವೇದವು ವೇದಗಳಿಂದ ತೆಗೆದುಕೊಂಡ ಚಿಕಿತ್ಸಾ ಭಾಗವಾಗಿದೆ. ಆಯುರ್ವೇದದಲ್ಲಿ ವಿಷಯುಕ್ತ ಪದಾರ್ಥಗಳನ್ನು ಗೋಮೂತ್ರದಲ್ಲಿ ಶುದ್ಧೀಕರಿಸುವುದು ಕಡ್ಡಾಯವಾಗಿದೆ.

गोमाता विषनाशिनी[2]

ಹಸುವಿನ ಮೇವಿನಲ್ಲಿ ಒಂದೊಮ್ಮೆ ವಿಷಕಾರಿ ಅಥವಾ ಹಾನಿಕರವಾದಂಥ ಅಂಶಗಳಿದ್ದರೆ ಅದು ಅದರ ಮಾಂಸದಲ್ಲೇ ಹೀರಿಕೊಂಡು ಬಿಡುತ್ತದೆ. ಹಾಗಾಗಿ ಹಾಲು ಗೋಮೂತ್ರ ಅಥವಾ ಗೋಮಯದಲ್ಲಿ ಅದನ್ನು ಹೊರ ಹಾಕುವುದಿಲ್ಲ ಅಥವಾ ತೀರಾ ಕಡಿಮೆ ಪ್ರಮಾಣದಲ್ಲಿ ಹೊರ ಹಾಕುತ್ತದೆ. ಇದನ್ನು ಬೇರೆ ಪ್ರಾಣಿಗಳಿಗೆ ಆಹಾರ ಕೊಟ್ಟು ಅವುಗಳ ಹಾಲು/ಮೂತ್ರ ಪರೀಕ್ಷಿಸಿ ಕಂಡುಕೊಳ್ಳಲಾಗಿದೆ. ಆದ್ದರಿಂದ ಗೋಮೂತ್ರ ಪವಿತ್ರವಾದದ್ದು ಹಾಗೂ ಗೋಮಯ ಮಲಶೋಧಕ, ಗೋಕ್ಷೀರವಂತೂ ವಿಷನಾಶಕವೇ ಆಗಿದೆ.

यत्वगस्थिगतं पापं देहे तिष्ठति मामके

प्राशनात् पंचगव्यस्य दहत्याग्निरिवेन्धनम्। [೪]

ತ್ವಚಾದಿ ಮೂಳೆವರೆಗಿನ ಧಾತುಗಳಿಗುಂಟಾಗುವ ಏನೇ ರೋಗವಿದ್ದರೂ ಪಂಚಗವ್ಯ ಪ್ರಾಶನದಿಂದ ಬೆಂಕಿಯು ಪಾಪವನ್ನು ಸುಡುವಂತೆ ರೋಗವನ್ನು ಸುಡುತ್ತದೆ.

गव्यं पवित्रं त रसायनं च, पथ्यं च हृद्यं बलबुद्धि ही स्यात्

आयुः प्रदं रक्त विकारहारि त्रिदोष हृद्रोग विषाप हंस्यात्।।

ಪವಿತ್ರ ರಸಾಯನ, ಪಥ್ಯಕರ, ಹೃದಯಕ್ಕೆ ಹಿತವಾಗುವುದು, ಬುದ್ಧಿವರ್ಧಕ, ಆಯುಷ್ಯ ಹೆಚ್ಚಿಸುತ್ತದೆ. ರಕ್ತಕ್ಕೆ ಸಂಬಂಧಿಸಿದ ರೋಗನಾಶ ಮಾಡುತ್ತದೆ. ತ್ರಿದೋಷನಾಶಕ, ಹೃದ್ರೋಗ ನಾಶಮಾಡುತ್ತದೆ ವಿಷವನ್ನು ನಾಶಮಾಡುತ್ತದೆ.

ಗೋಮೂತ್ರ ಪರಮ ರಸಾಯನ, ಪಥ್ಯ ಹೃದಯಕ್ಕೆ ಆನಂದ ನೀಡುವ ಬಲಬುದ್ಧಿ ನೀಡುವುದಾಗಿದೆ. ಇದು ಆಯುಷ್ಯ ವೃದ್ಧಿಸುವ, ರಕ್ತದಲ್ಲಿರುವ ಎಲ್ಲ ವಿಕಾರಗಳನ್ನು ದೂರ ಮಾಡುವ, ಕಫ, ವಾತ ಮತ್ತು ಪಿತ್ತಜನ್ಯ ಮೂರು ಹೃದಯ ರೋಗ ಅಥವಾ ವಿಷ ಪ್ರಭಾವದಿಂದ ಹೃದಯವನ್ನು ರಕ್ಷಿಸುತ್ತದೆ. ಸುಶ್ರುತ ಸಂಹಿತೆಯು ೫೦೦೦ ವರ್ಷ ಹಳೆಯದಾದ ಆಯುರ್ವೇದ ಗ್ರಂಥವಾಗಿದ್ದು, ಅದರ ಪ್ರಕಾರ ತೀಕ್ಷ್ಣ, ಉಷ್ಣ ಕಟು, ಪಿತ್ತರಸ, ಲವಣಅನುರಸ, ಲಘು, ಶೋಧನ, ಕಫವಾತಶಾಮಕ, ಕೃಮಿಹರ, ಮೇದೋಹರ, ವಿಷಹರ, ಗುಲ್ಮ, ಅರ್ಶ, ಉದರ, ಶೋಥ, ಪಾಂಡು ರೋಗಹರ ಎಲ್ಲಾ ಪ್ರಾಣಿಗಳ ಮೂತ್ರಕ್ಕಿಂತ ಗೋಮೂತ್ರ ಹೆಚ್ಚು ಪರಿಣಾಮಕಾರಿಯಾಗಿದೆ.

ಹೀಗೆ ಗೋವಿನ ಮಹತ್ವವು ಅನೇಕ ಕಡೆಯಲ್ಲಿ ಸಿದ್ಧವಾಗಿದೆ. ಇದನ್ನು ಶ್ರೀಕೃಷ್ಣ ಪ್ರಪ್ರಥಮವಾಗಿ ಜಗತ್ತಿಗೆ ತೋರಿಸಿದ.

ಅಡಿಟಿಪ್ಪಣಿಗಳು

೧. ಮೂಲ ಭಗವದ್ಗೀತೆ – ೩, ೨೧

೨. ಗೋ ಚಿಕಿತ್ಸೆ, ೧೯, ಸ್ವರಾಜ ಪ್ರಕಾಶನ ಸಮೂಹ, ಬೆಂಗಳೂರು, ೨೦೦೫

೩. ಗೋ ಚಿಕಿತ್ಸೆ (ಅದೇ)

೪. ಗೋ ಚಿಕಿತ್ಸೆ ೨೨

❑

೧೩. ನಾಗಮಂಗಲದ ಭೌಗೋಳಿಕತೆ ಮತ್ತು ಪ್ರಾಗ್ ಇತಿಹಾಸ

–ಡಾ. ಎಸ್.ಜಿ. ರಾಮದಾಸ ರೆಡ್ಡಿ

ಕರ್ನಾಟಕ ರಾಜ್ಯದ ದಕ್ಷಿಣ ಮೈದಾನ ಪ್ರದೇಶದಲ್ಲಿರುವ ಜಿಲ್ಲೆ ಮಂಡ್ಯ. ಮಾಂಡವ್ಯ ಮುನಿಗಳಿಂದ 'ಮಂಡೆಯ' ನಂತರ ಮಂಡ್ಯ ಆಯಿತೆಂದೂ ಪ್ರತೀತಿ, ಕ್ರಿ.ಶ. ೧೮೮೨ರ ವರೆಗೆ ಹಾಸನ, ೧೯೩೯ರವರೆಗೆ ಮೈಸೂರು ಜಿಲ್ಲೆಗಳಲ್ಲಿದ್ದು ನಂತರ ೧೯೩೯ ಜುಲೈ ೧ ರಂದು ಮಂಡ್ಯ ಜಿಲ್ಲೆಯಾಯಿತು. ಜಿಲ್ಲೆಯಲ್ಲಿ ೭ ತಾಲ್ಲೂಕುಗಳಿದ್ದು ನಾಗಮಂಗಲ ಒಂದು ತಾಲ್ಲೂಕಾಗಿದೆ. ಈ ತಾಲ್ಲೂಕು ಕಸಬೆ, ಬಿಂಡಿಗನವಿಲೆ, ಬೆಳ್ಳೂರು, ದೇವಲಾಪುರ ಮತ್ತು ಹೊಣಕೆರೆ ಹೋಬಳಿಗಳಿಂದ ಕೂಡಿದೆ.

ನಾಗಮಂಗಲದ ಉತ್ತರ ಮತ್ತು ಪೂರ್ವಕ್ಕೆ ತುಮಕೂರು ಜಿಲ್ಲೆ, ಪಶ್ಚಿಮದಲ್ಲಿ ಹಾಸನ ಜಿಲ್ಲೆ ಮತ್ತು ತಾಲ್ಲೂಕಾದ ಕೃಷ್ಣರಾಜಪೇಟೆ, ದಕ್ಷಿಣದಲ್ಲಿ ಮಂಡ್ಯ ಜಿಲ್ಲೆ ಮತ್ತು ಪಾಂಡವಪುರ ತಾಲ್ಲೂಕುಗಳು ಸುತ್ತುವರಿದಿವೆ. ಜಿಲ್ಲೆಯ ತಾಲ್ಲೂಕುಗಳ ಪೈಕಿ ವಿಸ್ತೀರ್ಣದಲ್ಲಿ ಶೇಕಡ ೨೧ ರಷ್ಟು ಇದ್ದು (೧೦೪೫ ಚ.ಕಿ.ಮೀ) ಪ್ರಥಮ ಸ್ಥಾನದಲ್ಲಿದೆ. ತಾಲ್ಲೂಕು ಪೂರ್ವರೇಖಾಂಶ ೭೬° ೭೬′–೭೬° ೫೪ ಉತ್ತರ ಅಕ್ಷಾಂಶ ೧೨° ೩೮′–೧೩೦೦′ರವರೆಗೆ ಇದೆ.

ನಾಗಮಂಗಲ ಪ್ರದೇಶ ಹಿಂದೆ ದಂಡಕಾರಣ್ಯದ ಭಾಗವಾಗಿದ್ದು ಲೋಹಿತ ವಂಶದವರು ಇಲ್ಲಿಗೆ ಮೊದಲು ವಲಸೆ ಬಂದರು. ಆ ವಂಶದ ಒಬ್ಬ ಪಾಳೆಯಗಾರರ ಕನಸಿನಲ್ಲಿ ಕಂಡ ದೇವರಿರುವ ಹುತ್ತವನ್ನು ಅರಸುತ್ತ ನಾಗಮಂಗಲವಿರುವ ಸ್ಥಳಕ್ಕೆ ಬಂದು ಅಲ್ಲಿ ಸರ್ಪವೊಂದು ಸುತ್ತುತ್ತಿದ್ದುದನ್ನು, ನರಸಿಂಹದೇವರು ಆವಿರ್ಭಾವವಾಗಿದ್ದುದನ್ನು ಕಂಡು ಅಲ್ಲಿಯೇ ದೇವಾಲಯ ನಿರ್ಮಿಸಿದರು. ಈ ಸ್ಥಳಕ್ಕೆ ನಾಗಮಂಡಲವೆಂದು ನಂತರ ನಾಗಮಂಗಲವಾಯಿತು. ಮಹಾಭಾರತ ಕಾಲದಲ್ಲಿ ಮಣಿಪುರವೆಂದೂ, ನಂತರದ ದಿನಗಳಲ್ಲಿ ಚತುರ್ವೇದ ಭಟ್ಟಾರಕರತ್ನ ಅಗ್ರಹಾರವೆಂದೂ. ಫಣಿಪುರ, ನಾಗಪುರ, ನಾಗಮಂಡಲ, ನಾಗಮಂಗಲ ಎಂಬ ಹೆಸರುಗಳು ಆದ ಬಗ್ಗೆ ಐತಿಹ್ಯ ಇದೆ.

ಶಾಸನಗಳಲ್ಲಿ ನಾಗಮಂಗಲ ಕ್ರಿ.ಶ. ೧೧೩೪, ಕಸಲಗೆರೆ ಕ್ರಿ.ಶ. ೧೧೪೨, ನಾಗಮಂಗಲ ಕ್ರಿ.ಶ. ೧೧೭೩ರ ಶಾಸನಗಳು ನಾಗಮಂಗಲ ಎಂಬ ಹೆಸರು ಸೂಚಿಸಿದರೆ, ಕ್ರಿ.ಶ. ೧೪೫೮ರ ವಿಜಯನಗರದ ತಿಮ್ಮದಂಡನಾಯಕನ ಶಾಸನ, ಕ್ರಿ.ಶ. ೧೫೧೧ರ ಕೃಷ್ಣದೇವರಾಯನ ಆಳ್ವಿಕೆ ಅವಧಿ ಶಾಸನಗಳಲ್ಲಿ ನಾಗಮಂಗಲ ಅಥವಾ ವೀರ ಬಲ್ಲಾಳ ಚತುರ್ವೇದಿ ಭಟ್ಟಾರಕರತ್ನಕರ ಅಗ್ರಹಾರ ಎಂದೂ, ಕ್ರಿ.ಶ. ೧೭೨೫ರ ಒಂದನೇ ಕೃಷ್ಣರಾಜ ಒಡೆಯರ ಕಾಲದ ತಾಮ್ರಪಟ ಶಾಸನದಲ್ಲಿ ಹೊಯ್ಸಳ ದೇಶದ ಹೂಗರ ನಾಡಿನ ನಾಗಮಂಗಲ ಸ್ಥಳದ ವ್ಯಾಪ್ತಿಯಲ್ಲಿದ್ದ ಪ್ರವೇಶಗಳ ಬಗ್ಗೆ ಮಾಹಿತಿ ಹಾಗೂ ಕ್ರಿ.ಶ. ೧೭೬೦ರ ತಾಮ್ರಪಟ ಶಾಸನದಲ್ಲಿ ೨ನೇ ಕೃಷ್ಣರಾಜ ಒಡೆಯರು ನಾಗಮಂಗಲ ತಾಲ್ಲೂಕಿನ ಗ್ರಾಮಗಳನ್ನು ದತ್ತಿ ಕೊಟ್ಟ ಬಗ್ಗೆ ಮಾಹಿತಿ ಇದೆ. ಈ ಎಲ್ಲ ಶಾಸನಗಳು ನಾಗಮಂಗಲ ಎಂಬ ಹೆಸರಿನ ಬಗ್ಗೆ ಮಾಹಿತಿಯನ್ನು ಉಲ್ಲೇಖಿಸಿವೆ.

ನಾಗಮಂಗಲವು ದಕ್ಷಿಣ ಪ್ರಸ್ಥಭೂಮಿಗೆ ಸೇರಿದ್ದು ಬಹುಭಾಗ ಸಮತಟ್ಟಾದ ಭೂಭಾಗವಾಗಿ ಪೂರ್ವ ಮತ್ತು ದಕ್ಷಿಣಕ್ಕೆ ಇಳಿಜಾರಾಗಿದೆ. ಬಸವನಕಲ್ಲು ಬೆಟ್ಟ, ಹಾಲತಿಬೆಟ್ಟ, ಹದ್ದಿನಕಲ್ಲು ಹನುಮಂತರಾಯನ ಬೆಟ್ಟ, ಆದಿಚುಂಚನಗಿರಿ ಬೆಟ್ಟ ಹಾಗೂ ಇತರೇ ಬೆಟ್ಟಗಳಿದ್ದು ಆದಿಚುಂಚನಗಿರಿ ಬೆಟ್ಟ (೧೦೬೦ ಅಡಿ) ಕಪಾಲಿ ಪಂಥದವರ ಪ್ರಮುಖ ಎಡೆಯಾಗಿದ್ದರೆ, ಹದ್ದಿನಕಲ್ಲು ಹನುಮಂತರಾಯನ ಬೆಟ್ಟವು ಸಂಪ್ರದಾಯಸ್ಥರ ಪವಿತ್ರ ಸ್ಥಳವಾಗಿದೆ. ಈ ಭೂ ಭಾಗವು ಸಮುದ್ರ ಮಟ್ಟದಿಂದ ೭೬೦ ರಿಂದ ೯೨೦ ಮೀಟರ್ ಎತ್ತರದಲ್ಲಿದ್ದು, ಭಾರತದ ಪರ್ಯಾಯದ್ವೀಪದ ಒಂದು ಭಾಗವಾಗಿದೆ. ಆರ್ಕೀಯನ್‌ಕಲ್ಪಕ್ಕೆ ಸೇರಿದ ಧಾರವಾಡ ಶಿಲಾಸ್ತೋಮ, ಕ್ಲೋಸ್‌ಪೇಟೆ ಶಿಲಾಸ್ತೋಮದಡಿಯಲ್ಲಿದ್ದು ಗ್ರಾನೈಟ್, ನೈಸ್, ಶಿಸ್ಟ್ ಕಲ್ಲುಗಳು ಹೇರಳವಾಗಿ ಕಂಡುಬಂದರೆ ಕ್ವಾರ್ಟ್ಸೈಟ್ ಮತ್ತು ಸುಣ್ಣಶಿಲೆಯಂತಹ ಇತರ ಶಿಲೆಗಳು ವಿರಳವಾಗಿ ಕಂಡುಬರುತ್ತಿವೆ.

ನಾಗಮಂಗಲದ ಪಶ್ಚಿಮ ಭಾಗದಲ್ಲಿರುವ ಹೊನ್ನುಬೆಟ್ಟದ ಶಿಲೆಗಳಲ್ಲಿ ಸ್ವಲ್ಪಮಟ್ಟಿನ ಚಿನ್ನದ ನಿಕ್ಷೇಪಗಳು, ಮೃದುವಾದ ಬಳಪದಕಲ್ಲು ಹಾಗೂ ದೇವಲಾಪುರದ ಭೂಭಾಗದಲ್ಲಿ ಆಭರಣಗಳಿಗೆ ಬಳಸುವ ಹರಳುಗಳು ಸಹ ಸಿಗುವ ಭೂಪ್ರದೇಶವಾಗಿದೆ. ನಾಗಮಂಗಲವು ಹಳೇ ಸಂಪ್ರದಾಯದ ಹಿತ್ತಾಳೆ, ಕಂಚಿನಲೋಹಗಳಾದ ದೀಪಾಲೆ ಕಂಬಗಳು, ದೇವರ ವಿಗ್ರಹಗಳು, ಪೂಜೋಪಕರಣಗಳು ಮತ್ತು ಇತರೆ ಕಲಾ ವಸ್ತುಗಳನ್ನು ತಯಾರಿಸುವ ಪ್ರಮುಖ ಕೇಂದ್ರವಾಗಿದ್ದು ರಾಷ್ಟ್ರೀಯ ಖ್ಯಾತಿ ಗಳಿಸಿದೆ. ಪ್ರಾಚೀನ ಕಾಲದಿಂದಲೂ ಪ್ರಮುಖ ಧಾರ್ಮಿಕ, ವ್ಯಾಪಾರ ಕೇಂದ್ರವಾಗಿದ್ದುದ್ದರ ಬಗ್ಗೆ, ಮಹತ್ತರವಾದ ರಸ್ತೆ ಸಾರಿಗೆ

ಇದ್ದುದ್ದರ ಬಗ್ಗೆ ಇಂಗ್ಲೆಂಡಿನ ಫ್ರಾನ್ಸೀಸ್ ಬುಕಾನ್ನನ್ ತಿಳಿಸಿದ್ದಾನೆ (ಮ.ಜಿ.ಗ್ಯಾ.ಪು-೩೭೩) ಹಾಗೂ ಫ್ರೆಂಚ್ ಪಾದ್ರಿ ಅಬ್ಬೆದುಬೆಯ "ಅಧ್ಯಯನ ಶೀಲ ಗ್ರಂಥವು" ಸಾರಿಗೆ ಸೌಕರ್ಯ ಕ್ರಿ.ಶ. ೧೮೦೦-೧೮೨೩ರ ಸಮಯದಲ್ಲಿ ವ್ಯವಸ್ಥಿತವಾಗಿತ್ತೆಂದಿದ್ದಾರೆ (ಮ.ಜಿ.ಗ್ಯಾ-ಪುಟ-೨೭೪).

ಭೂಮಿ ಮುಖ್ಯವಾಗಿ ಮರುಳು ಮಿಶ್ರಿತ ಕೆಂಪು ಮಣ್ಣಿನ ಹರಳುಗಳು ಇರುವ ಭೂ ಪ್ರದೇಶವಾಗಿದೆ ಹಾಗೂ ಊರಿನ ನಾಲ್ಕು ದಿಕ್ಕುಗಳಲ್ಲಿ ಪ್ರಾಚೀನ ಕೆರೆಗಳಾದ ಹಿರಿಕೆರೆ, ಸೂಳೆಕೆರೆ, ಸಿಂಗೇಅರಸೀಕೆರೆ ಹಾಗೂ ಅಮ್ಮನವರ ಕೆರೆಗಳಿದ್ದು ನೀರಾವರಿಯಿಂದ ತೆಂಗು, ಬಾಳೆ, ಮೆಣಸಿನಕಾಯಿ ಇತರೆ ತರಕಾರಿ ಬೆಳೆಗಳನ್ನು ಹಾಗೂ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದರು. "ತಿರುಗನಹಳ್ಳಿ ಸಣ್ಣ" ಎಂಬ ಜಾತಿಯ ಬತ್ತ ವಿಶೇಷ ಬೆಳೆ ಮತ್ತು ಹಳ್ಳಿ ಕಾರು ಜಾತಿಯ ರಾಸುಗಳಿಗೆ ಹೆಸರಾದ ಸ್ಥಳವಾಗಿದೆ.

ಭೂಭಾಗವು ಬಹುತೇಕ ಭೂಕಂಪ ಮುಕ್ತವಲಯವಾಗಿದ್ದು ಸುತ್ತಮುತ್ತಲ ಪ್ರದೇಶಗಳಲ್ಲಿ ಮಾತ್ರ ಭೂಕಂಪ ಆದ ಬಗ್ಗೆ ವರದಿಯಾಗಿದೆ. ಅದರಲ್ಲಿ ೧೯೬೭, ೧೯೬೮, ೧೯೬೯, ೧೯೭೦, ೧೯೭೧ರವರೆಗೆ ಅಲ್ಪ ಪ್ರಮಾಣದಲ್ಲಿ ಆದ ಬಗ್ಗೆ ವರದಿಯಾಗಿದ್ದರೆ, ೧೯೭೨ರಲ್ಲಿ ೪.೨ ರಿಂದ ೪.೫ರ ಪ್ರಮಾಣದಲ್ಲಿ ದೇವಗೌಡನಕೊಪ್ಪಲಿನಲ್ಲಿ ಸಂಭವಿಸಿದ ಭೂಕಂಪ ಪ್ರಮುಖವಾಗಿದ್ದು ಯಾವುದೇ ಸಾವು ನೋವು ಆದ ಬಗ್ಗೆ ವರದಿಯಾಗಿಲ್ಲ. ಈ ಭಾಗದ ಉಷ್ಣತೆ ೩೯° ಸೆಲ್ಸಿಯಸ್‌ನಿಂದ ೧೬° ಸೆಲ್ಸಿಯಸ್ ಇರುತ್ತದೆ.

ಜಿಲ್ಲೆಯಲ್ಲಿ ವಾರ್ಷಿಕ ಸರಾಸರಿ ವಾಡಿಕೆ ಮಳೆಯ ಪ್ರಮಾಣ ೬೯೧.೨. ಮಿ.ಮೀ ಆದರೆ ನಾಗಮಂಗಲದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಅತಿ ಹೆಚ್ಚು ಮಳೆ. ಕ್ರಿ.ಶ. ೧೯೦೩ರಲ್ಲಿ ೧೧೪೮.೪ ಮಿ.ಮೀ. ವಾರ್ಷಿಕವಾಗಿ ಆಗಿದ್ದರೆ, ಅತಿ ಕಡಿಮೆ ಕ್ರಿ.ಶ. ೧೯೧೩ರಲ್ಲಿ ೩೬೨.೫ ಮಿ.ಮೀ. ಆದ ಬಗ್ಗೆ ವರದಿಯಾಗಿದೆ. ೧೯೨೫ ನವಂಬರ್ ೧೨ರಂದು ೨೪ ಗಂಟೆಗಳಲ್ಲಿ ಬಿದ್ದ ಮಳೆ ೨೦೦.೭ ಮಿ.ಮೀ. ದಾಖಲಾದ ಗರಿಷ್ಠ ಮಳೆಯಾಗಿದೆ. ಸ್ವಾತಂತ್ರ್ಯಾ ನಂತರ ಅತಿ ಹೆಚ್ಚು ಮಳೆ ಕ್ರಿ.ಶ. ೧೯೭೭ರಲ್ಲಿ ೧೩೨೪.೫ ಮಿ.ಮೀ. ಆದರೆ, ಅತಿ ಕಡಿಮೆ ೧೯೬೫ರಲ್ಲಿ ೨೮೪.೩ ಮಿ.ಮೀ. ವಾರ್ಷಿಕ ಮಳೆಯಾದ ಬಗ್ಗೆ ವರದಿಯಾಗಿದೆ. ಕೃಷಿ ಯೋಗ್ಯ ಭೂಮಿಯ ಬಹುಪಾಲನ್ನು ಒಳಗೊಂಡಿರುವ ಬಯಲು ಪ್ರದೇಶ ಅಡಿಗಡಿಗೆ "ಬರಗಾಲಕ್ಕೆ" ಈಡಾಗುತ್ತಿದೆ. ಈ ಭಾಗದಲ್ಲಿ ಅತ್ಯಂತ ದಾಖಲೆ ಪಡೆದಿರುವ ಮಳೆಯ ವೈಫಲ್ಯ "ಕ್ರಿ.ಶ. ೧೭೯೬ರಲ್ಲಿ ಆರಂಭವಾಗಿ ಇಡೀ ದಕ್ಷಿಣ ಭಾರತದಲ್ಲೇ ಆವರಿಸಿ ೧೨ ವರ್ಷ ಇತ್ತೆಂದು ದಾಖಲಾಗಿದೆ. ೧೬ನೇ ಶತಮಾನದ ಕೊನೆಯಲ್ಲಿ "ಸುಣ್ಣದಕ್ಕಿ

ಬರ" ಬಹಳ ಭೀಕರವಾಗಿದ್ದು ಸುಮಾರು ೭ ವರ್ಷ ಸತತವಾಗಿ ಮಳೆ ಬೀಳದೇ ಗಿಡ, ಮರ, ಬಳ್ಳಿ, ತೋಟಗಳೆಲ್ಲ ನಾಶವಾಗಿ ಪ್ರಾಣಿ, ಪಕ್ಷಿಗಳಿಗೆ ಆಹಾರ, ನೀರು, ನೆರಳಿಲ್ಲದೆ ಸತ್ತು ಜನರು ವಿಧಿಯಿಲ್ಲದೆ ಬಿದಿರಕ್ಕಿ ಮತ್ತು ಕತ್ತಾಳೆ ಗೆಡ್ಡೆಗಳನ್ನು ತಿಂದು ಜೀವನ ಸಾಗಿಸುತ್ತಿದ್ದರು (ಮ.ಜಿ.ಗ್ಯಾ.ಪು–೪೯೦) ಮತ್ತು ಕ್ರಿ.ಶ. ೧೭೯೪ರಲ್ಲಿ ಕಾಲರಾ, ಪ್ಲೇಗು ಬಂದು ನಾಗಮಂಗಲವು ಸೇರಿಕೊಂಡು ೧,೫೦,೦೦೦ ಇದ್ದ ಜನಸಂಖ್ಯೆ ಕ್ರಿ.ಶ. ೧೮೦೦ರ ವೇಳೆಗೆ ಮೈಸೂರು ಸಂಸ್ಥಾನದಲ್ಲಿ ೩೨,೦೦೦ ಸಾವಿರಕ್ಕೆ ಇಳಿಯಿತೆಂದು ಬುಕಾನ್ನನ್ ವಿವರಿಸಿದ್ದಾನೆ. ಕ್ರಿ.ಶ. ೧೮೭೪ರಲ್ಲಿ ಸಂಭವಿಸಿದ ಬರಗಾಲ ನಾಗಮಂಗಲದಲ್ಲಿ ಅಡಿಕೆ ಮರ ನಾಶವಾಗಿ ತೆಂಗು ಮಾತ್ರ ಉಳಿದಿತ್ತೆಂದು ಹಯವದನರಾವ್ ಉಲ್ಲೇಖಿಸಿದ್ದಾರೆ. ಕ್ರಿ.ಶ. ೧೮೯೧–೯೨ರಲ್ಲಿ ನಾಗಮಂಗಲ, ಕೆ.ಆರ್.ಪೇಟೆ, ಮಳವಳ್ಳಿ ತಾಲ್ಲೂಕುಗಳು ಬರಗಾಲಕ್ಕೀಡಾದ ಬಗ್ಗೆ ಹಾಗೂ ಕ್ರಿ.ಶ. ೧೮೯೮–೯೯, ೧೯೦೧–೦೨, ೧೯೦೮–೦೯ ರಲ್ಲಿ ಮಳೆಯಿಲ್ಲದೆ ನಾಗಮಂಗಲದ ಆರ್ಥಿಕ ಜೀವನದ ಮೇಲೆ ಪ್ರಭಾವ ಬೀರಿತು. ಹಾಗೆಯೇ ಕ್ರಿ.ಶ. ೧೯೨೨–೨೩ರಲ್ಲಿ ನಾಗಮಂಗಲದ ಸುತ್ತಮುತ್ತಲ ೯ ಹಳ್ಳಿಗಳು ಮಳೆಯಿಲ್ಲದೆ ತುಂಬಾ ತೊಂದರೆಗೊಳಗಾದ ಬಗ್ಗೆ ವರದಿಯಾಗಿದೆ. ಒಟ್ಟಾರೆ ಈ ಭೂಭಾಗವು "ಮಳೆಯ ನೆರಳಿನ ಭೂಭಾಗ"ವಾಗಿ ಮಳೆಯಿಲ್ಲದೆ ಸದಾ ಸಂಕಷ್ಟಕ್ಕೆ ಈಡಾಗುತ್ತಿರುತ್ತದೆ. **"ಇಷ್ಟಾದರೂ ಜಿಲ್ಲೆಯಲ್ಲೇ ಅತಿ ಕಡಿಮೆ ನೀರಾವರಿಯಾದ ಪ್ರದೇಶವಾಗಿದೆಯೆಂದು ೧೯೭೭–೭೮ರ ದಾಖಲಾತಿ ತಿಳಿಸುತ್ತದೆ".** (ಮ.ಜಿ.ಗ್ಯಾ.ಪು–೨೧೮)

ನಾಗಮಂಗಲವು ದಟ್ಟಕಾಡುಗಳಿಲ್ಲದ, ಕ್ರೂರಕಾಡುಪ್ರಾಣಿಗಳಿಲ್ಲದ ವಿರಳವಾಗಿರುವ ಭೂಭಾಗವಾಗಿದೆ. ಪ್ರತಿ ಜಿಲ್ಲೆಯಲ್ಲಿ ಒಟ್ಟು ಭೌಗೋಳಿಕವಾಗಿ ಕನಿಷ್ಠ ಶೇ.೩೩ ರಷ್ಟು ಅರಣ್ಯವಿರಬೇಕೆಂದು ನೀತಿ ಇದ್ದರೂ ಶೇ. ೮ ಮಾತ್ರ ಇದೆ. ಸಸ್ಯಶಾಸ್ತ್ರಜ್ಞರಾದ ಚಾಂಪಿಯನ್ ಮತ್ತು ಸೇತ್ ಅವರು ವಾಯುಗುಣದ ಆಧಾರದ ಮೇಲೆ ಈ ಭೂಭಾಗದ ಅರಣ್ಯಗಳು ದಕ್ಷಿಣ ಉಷ್ಣವಲಯದ ಒಣ ಉದುರೆಲೆ ಅರಣ್ಯ ವರ್ಗಕ್ಕೆ ಸೇರುತ್ತದೆ ಎಂದು ಇಲ್ಲಿಯ ಮರಗಿಡಗಳು ಹಾರ್ಡ್ವಿಕಿಯ ಭಿನ್ನಾಟ, ಟಿರೋಕಾರ್ಪಸ್ ಮಾರ್ಸೊಪಿಯಂ, ಅಲ್ಬಿಜಿಯ, ಟರ್ಮಿನೀಲಿಯ ಪಾನಿಕುಬೇಟ, ಟರ್ಮಿನೇಲಿಯಾ ಚೆಬುಲಾ, ಸಂಟಾಲಂ ಆಲ್ಬಂ, ಅಜಡಿರಾಕ್ಟ್ ಇಂಡಿಕ ಇತ್ಯಾದಿ ಮುಖ್ಯ ಜಾತಿಗೆ ಸೇರಿದವಾಗಿವೆ ಎಂದಿದ್ದಾರೆ. ಆದಿಚುಂಚನಗಿರಿ ಮಯೂರವನವು ಕುರುಚಲ ಗಿಡದ ಗುಡ್ಡಗಳಲ್ಲಿ ಕಂಡುಬರುವ ನವಿಲುಗಳನ್ನು ಸಂರಕ್ಷಿಸಿ ಸಂತಾನಾಭಿವೃದ್ಧಿಗೆ ಪ್ರಾಧಾನ್ಯತೆ ನೀಡಿದ್ದರೆ, ಕೊಕ್ಕರೆ ಬೆಳ್ಳೂರಿನಲ್ಲಿ ವಿದೇಶಗಳಿಂದ ಆಗಮಿಸಿದ ಸ್ಮಾರ್ಕ್ ಮತ್ತು ಪೆಲಿಕನ್ ಎಂಬ ಎರಡು ಪ್ರಭೇದ ಪಕ್ಷಿಗಳು ಬಂದು ಸಂತಾನಾಭಿವೃದ್ಧಿ ನಂತರ ಹಿಂತಿರುಗುತ್ತವೆ.

ಜಿಲ್ಲೆಯಲ್ಲಿ ಕಾವೇರಿ, ಹೇಮಾವತಿ, ಲೋಕಪಾವನಿ, ಶಿಂಷಾ, ವೀರವೈಷ್ಣವಿ ನದಿಗಳು ಪ್ರಮುಖವಾಗಿದ್ದು ನಾಗಮಂಗಲ ತಾಲ್ಲೂಕಿನಲ್ಲಿ ಕ್ರಮವಾಗಿ ಹುಟ್ಟಿ ಮತ್ತು ಹರಿಯುವ ಲೋಕಪಾವನಿ ಮತ್ತು ವೀರ ವೈಷ್ಣವಿ, ಶಿಂಷಾ ನದಿಗಳು ಪ್ರಮುಖವಾಗಿ ಕಾವೇರಿ ಜಲಾನಯನ ಪ್ರದೇಶದಡಿಯಲ್ಲಿ ಹರಿಯುತ್ತಿವೆ.

'ಲೋಕಪಾವನಿ' ನದಿಯು ನಾಗಮಂಗಲ ತಾಲ್ಲೂಕಿನ ಹೂಣಕೆರೆ (ಹೊನ್ನಾಕೆರೆ) ಹೋಬಳಿಯಲ್ಲಿ ಹುಟ್ಟುತ್ತದೆ. ಬೋಗಾದಿ ಸುತ್ತಮುತ್ತಲ ಪ್ರದೇಶದಿಂದ ಹರಿದು ಬರುವ ನೀರನ್ನು ಕೂಡಿಕೊಂಡು, ಹೂಣಕೆರೆ, ಚೀಣ್ಯ, ಮಾಚಘಟ್ಟ, ಕಾಳೇನಹಳ್ಳಿ, ಹುಲೀಕೆರೆ, ಸುಂಕತೊಣ್ಣೂರು, ಕೆರೆತೊಣ್ಣೂರು, ಮೇಲುಕೋಟೆ, ನುಗ್ಗನಹಳ್ಳಿ, ಕುಂತಿಬೆಟ್ಟ, ಚಿಕ್ಕಮರಳಿ, ಕೆ. ಶೆಟ್ಟಿಹಳ್ಳಿ, ಕರಿಘಟ್ಟದ ಮುಖಾಂತರ ಶ್ರೀರಂಗಪಟ್ಟಣದ ಹತ್ತಿರ ಸಂಗಮದಲ್ಲಿ ಕಾವೇರಿ ನದಿ ಸೇರುತ್ತದೆ. **"ಶಿಂಷಾನದಿಯು"** ತುಮಕೂರು ಜಿಲ್ಲೆ ತುರುವೆಕೆರೆ ತಾಲ್ಲೂಕಿನ ದೇವರಾಯನದುರ್ಗದ ದಕ್ಷಿಣದಲ್ಲಿ ಹುಟ್ಟಿ ದಕ್ಷಿಣಾಭಿಮುಖವಾಗಿ ಸಾಗಿ ನಾಗಮಂಗಲ ತಾಲ್ಲೂಕಿನ ದೇವರಹಳ್ಳಿಯ ಹತ್ತಿರ ತಾಲ್ಲೂಕಿನ ಗಡಿಗುಂಟ ಹರಿದು ತಳಗವಾದಿಯ ಹತ್ತಿರ ಕಾವೇರಿ ನದಿ ಸೇರುತ್ತದೆ. **"ವೀರವೈಷ್ಣವಿ ನದಿ"**ಯು ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಉತ್ತರದ ಬೆಟ್ಟಗಳ ಶ್ರೇಣಿಯಲ್ಲಿ ಹುಟ್ಟಿ ಹರಿದು ಬರುವ ನೀರಿನಲ್ಲಿ, ಸ್ವಲ್ಪ ನೀರು ಶಿಂಷಾ ನದಿಗೆ, ಉಳಿದ ನೀರಿನಲ್ಲಿ ವೀರವೈಷ್ಣವಿಗೆ ಹರಿದು ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯಲ್ಲಿ ಪ್ರವೇಶಿಸಿ ಆದಿಚುಂಚನಗಿರಿ ಬೆಟ್ಟ, ಆರಣಿ, ಶ್ರೀರಂಗಪುರ, ಬೆಳ್ಳೂರು ಮುಖಾಂತರ ಹರಿದು ದೊಡ್ಡ ಜಟಕಾದ ಹತ್ತಿರ ಶಿಂಷಾ ನದಿಗೆ ಸೇರುತ್ತದೆ.

ಪಂಚನದಿಗಳ ನಾಡೆಂಬ ಹೆಗ್ಗಳಿಕೆಗೆ ಪಾತ್ರವಾದ ಮಂಡ್ಯ ಜಿಲ್ಲೆ ಪ್ರಾಚೀನ ಕಾಲದಿಂದಲೂ ಮಾನವನ ನಾಗರಿಕತೆಯ ವಿಕಾಸಕ್ಕೆ ಯೋಗ್ಯಸ್ಥಾನವೆಂದು ಪರಿಗಣಿಸಲ್ಪಟ್ಟಿದೆ. ಫಲವತ್ತಾದ ನದೀಕಣಿವೆಗಳು, ಬೆಟ್ಟಗುಡ್ಡಗಳ ಪ್ರದೇಶ, ಬಯಲು ಪ್ರದೇಶ, ಅರಣ್ಯ, ನದಿ, ಪ್ರಾಣಿ ಸಂಪತ್ತು, ವಾಸಿಸಲು ಯೋಗ್ಯ ನೈಸರ್ಗಿಕ ಗುಹೆಗಳು, ಶಿಲಾಯುಧ ತಯಾರು ಮಾಡಲು ಯೋಗ್ಯವಾದ ವಿವಿಧ ಜಾತಿಯ ಕಲ್ಲುಗಳು ಮುಂತಾದ ನೈಸರ್ಗಿಕ ಸಂಪತ್ತುಗಳಿಂದ ಕೂಡಿದ ಪ್ರದೇಶವಾಗಿ ಮಾನವ ವಿಕಾಸದ ಸರಣಿಯಲ್ಲಿ ಸಾಕಷ್ಟು ಪ್ರಭಾವ ಬೀರಿದೆ. ಇಷ್ಟೆಲ್ಲಾ ಸೌಲಭ್ಯಗಳಿದ್ದರೂ ಪೂರ್ವೇತಿಹಾಸದ ನೆಲೆಗಳು ಅನ್ವೇಷಿಸಲ್ಪಟ್ಟಿರುವುದು ಅತಿ ವಿರಳವೆಂದೇ ಹೇಳಬಹುದು. ನಾಗಮಂಗಲ ಮತ್ತು ಮಂಡ್ಯದ ಪರಿಸರದಲ್ಲಿ ಪರಿವೀಕ್ಷಣೆ ಕಾರ್ಯ ಕೈಗೊಂಡು ಆದಿಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭ ಕಾಲದ ಸಂಸ್ಕೃತಿಗಳ ಅವಶೇಷಗಳನ್ನು ಈ ನದಿ ತೀರಗಳ ನೆಲೆಗಳಲ್ಲಿ ಸಂಶೋಧಕರು ಸಂಶೋಧಿಸಿದ್ದಾರೆ.

ಕಳೆದ ಶತಮಾನದ ಕಡೆಯ ಪಾದದಲ್ಲಿ ರಾಬರ್ಟ್‌ಬ್ರೂಸಿಫೂಟ್ ಅವರು ಕುಂತಿಬೆಟ್ಟದ ಪರಿಸರದಲ್ಲಿ ಪರಿವೀಕ್ಷಣಾ ಕಾರ್ಯ ಕೈಗೊಂಡು ನವಶಿಲಾಯುಗ ಸಂಸ್ಕೃತಿ, ಬೃಹತ್‌ಶಿಲಾಯುಗ ಸಂಸ್ಕೃತಿಗಳ ಅವಶೇಷಗಳನ್ನು ಪತ್ತೆ ಹಚ್ಚಿದ್ದಾರೆ. ಡಾ. ಎಂ.ಎಸ್. ಕೃಷ್ಣಮೂರ್ತಿ ಅವರು ಆದಿ ಹಳೇಶಿಲಾಯುಗ, ಮಧ್ಯಹಳೇ ಶಿಲಾಯುಗ, ನವಶಿಲಾಯುಗ ಸಂಸ್ಕೃತಿ, ಬೃಹತ್ ಶಿಲಾಯುಗ ಸಂಸ್ಕೃತಿ ಮತ್ತು ಇತಿಹಾಸ ಆರಂಭ ಕಾಲದ ಅವಶೇಷಗಳನ್ನು ಇದೇ ನೆಲೆಯಲ್ಲಿ ಪತ್ತೆಹಚ್ಚಿ ಪ್ರಕಟಿಸಿದ್ದಾರೆ. ಹಾಗೆಯೇ ಡಾ. ಎಸ್.ಜಿ. ರಾಮದಾಸರೆಡ್ಡಿ ಅವರು ಪಾಂಡವಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಬಿ.ಎಸ್. ಮಂಜುನಾಥ್, ಗ್ರಾಮದ ಮುಖಂಡ ಹೆಚ್. ಗಿರಿರಾಜು ಹಾಗೂ ಕಾಲೇಜಿನ ವಿದ್ಯಾರ್ಥಿಗಳ ಸಹಕಾರದೊಂದಿಗೆ ಇದೇ ನೆಲೆಯಲ್ಲಿ ಅಂತ್ಯಹಳೇಶಿಲಾಯುಗ, ನವಶಿಲಾಯುಗ ಸಂಸ್ಕೃತಿ, ಬೃಹತ್ ಶಿಲಾಯುಗ ಸಂಸ್ಕೃತಿ ಮತ್ತು ಇತಿಹಾಸ ಆರಂಭ ಕಾಲದ ಅವಶೇಷಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಡಾ. ಸಿ. ಮಹದೇವ ಅವರು ಶ್ರೀರಂಗಪಟ್ಟಣ ಪರಿಸರದಲ್ಲಿ ಅಂತ್ಯಹಳೇಶಿಲಾಯುಗ, ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಉಪಕರಣಗಳನ್ನು ಕಚ್ಚಾ ವಸ್ತುಗಳನ್ನು ಸಂಗ್ರಹಿಸಿ ಈ ಎಡೆ **"ಆಯುಧ ತಯಾರಿಕಾ ಕಾರ್ಖಾನೆ"** ಯಾಗಿತ್ತೆಂದಿದ್ದಾರೆ ಹಾಗೂ ಸಣಬ ಪರಿಸರದಲ್ಲಿ ಡಾ. ಎನ್.ಎಸ್.ರಂಗರಾಜು ಅವರು ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಮತ್ತು ಸಮಾಧಿಗಳನ್ನು ಪತ್ತೆ ಹಚ್ಚಿದ್ದಾರೆ.

ತಾಲ್ಲೂಕಿನ ಬಿಂಡಿಗನವಿಲೆ ಹೋಬಳಿಯ ಹರಳಹಳ್ಳಿ ಗ್ರಾಮದ ಪರಿಸರದಲ್ಲಿ ಡಾ.ಎಂ.ಎಸ್. ಕೃಷ್ಣಮೂರ್ತಿ ಅವರು ಆದಿ ಹಳೇಶಿಲಾಯುಗದ ಹಾಗೂ ಇತಿಹಾಸ ಆರಂಭ ಕಾಲದ ಅವಶೇಷಗಳನ್ನು ಪತ್ತೆ ಹಚ್ಚಿದ್ದಾರೆ. ಇದೇ ಹೋಬಳಿಯ ಅಣೆಚನ್ನಾಪುರ ನೆಲೆಯಲ್ಲಿ ಡಾ.ಎಸ್.ಜಿ. ರಾಮದಾಸರೆಡ್ಡಿ ಅವರು ವಿದ್ಯಾರ್ಥಿಯಾದ ಚನ್ನಮಾದೇಗೌಡ, ಸ್ಥಳೀಯರಾದ ಮಹಮದ್ ಕಲೀಂ ಉಲ್ಲಾರ ಸಹಕಾರದೊಂದಿಗೆ ಭೂ ಅನ್ವೇಷಣೆ ಮಾಡಲು ಹೋದಾಗ ನೆಲೆಯ ಸುತ್ತಲೂ ಬೃಹದಾಕಾರದ ಗ್ರಾನೈಟ್ ಗುಡ್ಡ, ನೈಸರ್ಗಿಕ ಗುಹೆಗಳಿಂದ ಸುತ್ತುವರಿದಿರುವ, ಮಧ್ಯೆ ಸಮತಟ್ಟಾದ ಸುಮಾರು ೩ ಹೆಕ್ಟೇರು ಭೂಭಾಗ ಕೃಷಿಗೆ ಒಳಪಟ್ಟಿದ್ದು ಬೂದಿ, ಕೆಂಪು, ಮರಳುಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ ಭೂಮಿಯಲ್ಲಿ ನವಶಿಲಾಯುಗ ಸಂಸ್ಕೃತಿ, ಬೃಹತ್ ಶಿಲಾಯುಗ ಸಂಸ್ಕೃತಿ ಮತ್ತು ಇತಿಹಾಸ ಆರಂಭ ಕಾಲದ ಅವಶೇಷಗಳು ಕ್ರಮವಾಗಿ ಬೂದು, ಬೂದು ಮಿಶ್ರಿತ ಕೆಂಪು, ಕವಣೆಕಲ್ಲು, ಕುಟ್ಟುವಕಲ್ಲುಗಳು, ಆಹಾರ ಧಾನ್ಯ ಅರೆಯಲು ಬಳಸಿದ ಮುರಿದ ಅಡಿಗಲ್ಲು ದೊರಕಿದ್ದು, ಕುಂತಿಬೆಟ್ಟದ ಅನ್ನಪೂರ್ಣೇಶ್ವರಿ ದೇವಾಲಯದ ನೆಲೆಯಲ್ಲಿ ಸಿಕ್ಕಿರುವ ಅಡಿಗಲ್ಲಿನ ಹಾಗೆ

ಹೋಲಿಕೆಯಿದೆ ಹಾಗೂ ದಪ್ಪ ಮಡಿಕೆ ತುಂಡುಗಳು, ಹೇರಳವಾದ ಬೂದಿ ಮಣ್ಣು, ಇತರೇ ಅವಶೇಷಗಳು ದೊರಕಿದರೆ, ಕೆಂಪು, ಕಪ್ಪು, ಕೆಂಪು ಮತ್ತು ಕಪ್ಪು ಬಣ್ಣದ ಮಡಿಕೆ ತುಣುಕುಗಳು, ಕಬ್ಬಿಣ ಕರಗಿಸಿದ ನಂತರ ಉಳಿಯುವ ಕಿಟ್ಟ, ಕಬ್ಬಿಣದ ಅದಿರು, ಮೂಳೆ ತುಂಡುಗಳು, ಡಾಲ್ಮನ್ ಸಿಸ್ಟ್ ಸಮಾಧಿ ಇತರೇ ಅವಶೇಷಗಳು ದೊರಕಿವೆ ಮತ್ತು ಕೆಂಪು ಬಣ್ಣದ, ರಸ್ಸೆಟ್ ಕೋಟೇಂಡ್ ಪೆಯಿಟೆಂಡ್ ಮಡಿಕೆ ತುಂಡುಗಳು, ನೀರಿನ ಹೂಜಿಯ ಮೂತಿಗಳು, ಸುಟ್ಟಮಣ್ಣಿನ ಅವಶೇಷ ಹಾಗೂ ಇತರೇ ಅವಶೇಷಗಳು ನೆಲೆಯಲ್ಲಿ ದೊರಕಿದ್ದು, ತಲಕಾಡು, ಬನವಾಸಿ, ಕೊಪ್ಪ, ಟಿ. ನರಸೀಪುರ ಇತರೇ ನೆಲೆಗಳ ಅವಶೇಷಗಳ ಹಾಗೆ ಹೋಲಿಕೆಯಿವೆ. ಈ ನೆಲೆಯ ಗುಡ್ಡದಲ್ಲಿ ಹೆಚ್ಚಿನ ಸಂಶೋಧನೆಗಳು ನಡೆದರೆ ಈ ಸಂಸ್ಕೃತಿಗಳ ಅವಶೇಷಗಳು, ಬಣ್ಣದ ಚಿತ್ರಗಳು ಸಿಗುವ ಸಾಧ್ಯತೆಯಿದೆ. ನಾಗಮಂಗಲ ಪರಿಸರದ ಆದಿಚುಂಚನಗಿರಿ ಅವಶೇಷಗಳು, ಬಣ್ಣದ ಚಿತ್ರಗಳು ಸಿಗುವ ಸಾಧ್ಯತೆಯಿದೆ. ನಾಗಮಂಗಲ ಪರಿಸರದ ಆದಿಚುಂಚನಗಿರಿ ಬೆಟ್ಟದಲ್ಲಿ ಡಾ. ಸಿ. ಮಹದೇವ ಅವರು ನವಶಿಲಾಯುಗ ಸಂಸ್ಕೃತಿ ಮತ್ತು ಇತಿಹಾಸ ಆರಂಭ ಕಾಲದ ಅವಶೇಷಗಳನ್ನು ಪತ್ತೆ ಹಚ್ಚಿದ್ದಾರೆ. ಡಾ. ಎಸ್.ಜಿ. ರಾಮದಾಸರೆಡ್ಡಿ ಅವರು ಬಿಂಡಿಗನವಿಲೆ ಕಡೆ ಹಾದು ಹೋಗುವ ನಾಗಮಂಗಲ ಪಟ್ಟಣದ ಹೊರಭಾಗದ ಪಾಳುದೇವಾಲಯದ ಸುತ್ತಮುತ್ತ ಕ್ಷೇತ್ರ ಕಾರ್ಯ ಮಾಡುವಾಗ ಬೃಹತ್ ಶಿಲಾಯುಗ ಸಂಸ್ಕೃತಿಯ ಮತ್ತು ಇತಿಹಾಸ ಆರಂಭ ಕಾಲದ ಅವಶೇಷಗಳನ್ನು ಹಾಗೂ ಚಿನಕುರಳಿ ಹೋಬಳಿ ಹಳೇಮಾಡರಹಳ್ಳಿ ನೆಲೆಯಲ್ಲಿ ಪ್ರೊ. ಬಿ.ಎಸ್. ಮಂಜುನಾಥ್, ಚನ್ನಮಾದೇಗೌಡ, ಸಿ.ಡಿ.ಪ್ರತಾಪ್, ಚನ್ನಕೇಶವ, ಹರೀಶ, ಸುರೇಶ ಇತರ ವಿದ್ಯಾರ್ಥಿಗಳ ಸಹಕಾರದೊಂದಿಗೆ ನವಶಿಲಾಯುಗ ಸಂಸ್ಕೃತಿ, ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಸಂಗ್ರಹಿಸಿದ್ದಾರೆ ಹಾಗೂ ೨೦ಕ್ಕೂ ಹೆಚ್ಚು ಹಗೇವುಗಳನ್ನು ಪತ್ತೆ ಹಚ್ಚಿದ್ದಾರೆ.

ಒಟ್ಟಿನಲ್ಲಿ ನಾಗಮಂಗಲ ಪರಿಸರವು ಭೌಗೋಳಿಕವಾಗಿ ಮತ್ತು ಪ್ರಾಗೈತಿಹಾಸಿಕವಾಗಿ ಮಹತ್ತರವಾದ ಭೂಭಾಗವಾಗಿದ್ದು, ಪ್ರಾಗೈತಿಹಾಸಿಕವಾಗಿ ಈ ಪರಿಸರದಲ್ಲಿ ಹೆಚ್ಚಿನ ಸಂಶೋಧನಾ ಕಾರ್ಯಗಳು ನಡೆದರೆ ಈ ಪರಿಸರದಿಂದ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಬಹುದು.

ಆಧಾರಗ್ರಂಥಗಳು

೧. ಭಾರತದ ಗ್ಯಾಸೆಟಿಯರ್ - ಕರ್ನಾಟಕ ರಾಜ್ಯ - ಮಂಡ್ಯ ಜಿಲ್ಲೆ, ೨೦೦೩

೨. ಕನ್ನಡ ವಿಷಯ ವಿಶ್ವಕೋಶ - ಪುಟ - ೮೨೮, ೧೯೭೯

೩. ಕರ್ನಾಟಕ ಪರಂಪರೆ - ಸಂಪುಟ - ೧ - ೧೯೭೦.

೪. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೧-ಸಂ-ಸೂರ್ಯನಾಥ ಕಾಮತ್ - ೧೯೮೪

೫. ಮಂಡ್ಯ ಜಿಲ್ಲೆ ಅಂಕಿ ಅಂಶಗಳ ನೋಟ, ಜಿಲ್ಲಾ ಅಂಕಿ ಸಂಖ್ಯಾಧಿಕಾರಿಗಳು - ೨೦೦೭

೬. ಇಸಿ-ವಾಲ್ಯೂಮ್ - III

೭. ಆರ್.ಬಿ.ಪೂಟ್ - ದಿ ಪೂಟ್ ಕಲೆಕ್ಷನ್ ಆಫ್ ಪ್ರಿಹಿಸ್ಟಾರಿಕ್ ಅಂಡ್ ಪ್ರೋಟೋಹಿಸ್ಟಾರಿಕ್ ಆ್ಯಂಟಿಕ್ವಿಟೀಸ್, ಮದ್ರಾಸ್ - ೧೯೧೬, ಪು - ೭೩-೭೪

೮. ಡಾ. ಎಂ.ಎಸ್. ಕೃಷ್ಣಮೂರ್ತಿ, ಇತಿಹಾಸದರ್ಶನ - ಕುಂತಿಬೆಟ್ಟದ ಪ್ರಾಕ್ತನಾನ್ವೇಷಣೆ - ಒಂದು ಟಿಪ್ಪಣಿ, ಪುಟ -೧-೩, ೧೯೮೯

೯. ಡಾ. ಸಿ. ಮಹದೇವ - ಕರ್ನಾಟಕ ಪುರಾತತ್ವ ಶೋಧ -ಪು-೧-೪,೨೦೦೧.

೧೦. ಎಂ.ಎ.ಆರ್. ವರದಿ - ೧೯೪೭ - ೧೯೫೬

೧೧. ಡಿ.ವಿ. ದೇವರಾಜು - ಆರ್. ಗೋಪಾಲ್ - ಶೇಷಾಚಂದ್ರಿಕ - ಪುಟ - ೫೮.

೧೨. ಕೆ.ಆರ್. ಶ್ರೀನಿವಾಸನ್ - ದಕ್ಷಿಣ ಭಾರತದ ಬೃಹತ್ ಶಿಲಾಯುಗದ ಸರ್ವೇಕ್ಷಣೆ - ಪುಟ - ೧೦೩ - ೧೧೫

೧೩. ಡಾ. ಎಸ್.ಎಸ್. ರಂಗರಾಜು ಅವರಿಂದ ಮಾಹಿತಿ

೧೪. ಡಾ. ಸಿ. ಮಹದೇವ ಅವರಿಂದ ಮಾಹಿತಿ

೧೫. ಡಾ. ಎಂ.ಎಸ್. ಕೃಷ್ಣಮೂರ್ತಿ ಅವರಿಂದ ಮಾಹಿತಿ

೧೬. ಆರ್. ಗೋಪಾಲ, ಡಿ.ವಿ. ದೇವರಾಜ್ - ತಲಕಾಡು ಉತ್ಖನನ - ೧೯೮೪

೧೭. ಶೇಷಾದ್ರಿ - ಟಿ. ನರಸೀಪುರ ಉತ್ಖನನ - ೧೯೭೨

೧೮. ಎ.ವಿ. ನರಸಿಂಹಮೂರ್ತಿ ಅವರಿಂದ ಕೊಪ್ಪ ಉತ್ಖನನದ ಬಗ್ಗೆ ಮಾಹಿತಿ.

೧೯. ಎ.ವಿ. ನರಸಿಂಹಮೂರ್ತಿ, ಡಿ.ವಿ. ದೇವರಾಜು - ಎಕ್ಸ್‌ಕವೇಶನ್ ಅಟ್ ಬನವಾಸಿ - ೧೯೯೭

೨೦. ಕನ್ನಡ ವಿಷಯ ವಿಶ್ವಕೋಶ (ಹೊಸ ಸಂಪುಟ) - ೨೦೦೫

೨೧. ಹಾ.ಮಾ. ನಾಯಕ - ಕನ್ನಡ ವಿಶ್ವಕೋಶ, ಸಂಪುಟಗಳು

೨೨. ದೇಜಗೌ, ಸಿರಿಯೊಡಲು - ಮಂಡ್ಯ - ೧೯೯೪

೨೩. ಹಯವದನರಾವ್ - ಮೈಸೂರು ಗ್ಯಾಸೆಟಿಯರ್ - ೧೯೨೭

೨೪. ಟೈಮ್ಸ್ ಆಫ್ ಇಂಡಿಯಾ, ದಿನಪತ್ರಿಕೆಯ ಲೇಖನ.

೨೫. ಎಸ್.ಜಿ. ರಾಮದಾಸ ರೆಡ್ಡಿ - ವೇದಾವತಿ ನದಿಯ ತೀರದ ಸಾಂಸ್ಕೃತಿಕ ಒಂದು

ಅಧ್ಯಯನ (ಅಪ್ರಕಟಿತ) ಪ್ರೌಢ ಮಹಾಪ್ರಬಂಧ – ಮೈಸೂರು ವಿಶ್ವವಿದ್ಯಾನಿಲಯ – ೨೦೦೬.

೨೬. ಅ. ಸುಂದರ – ದಿ ಆರ್ಲಿಚೇಂಬರ್ ಟೂಲ್ಸ್ ಆಫ್ ಸೌತ್ ಇಂಡಿಯಾ – ೧೯೭೫

೨೭. ಬಿ.ಕೆ. ಗುರುರಾಜರಾವ್ – ಮೆಗಲಿಥಿಕ್ ಕಲ್ಚರ್ ಆಫ್ ಸೌತ್ ಇಂಡಿಯಾ – ೧೯೭೨

೨೮. ಸಿ. ಮಾರ್ಗಭಂದು–ಆರ್ಕಿಯಾಲಜಿ ಆಫ್ ದಿ ಶಾತವಾಹನ ಕಾಶ್ಯತ್ರಪ ಟೈಮ್ಸ್ – ೧೯೮೮

೨೯. ವೀಲರ್. ಆರ್.ಇ.ಎಂ. – ಏನ್ಷಿಯಂಟ್ ಇಂಡಿಯಾ –ನಂ–೪–೧೯೪೭–೪೮

ಈ ಲೇಖನವನ್ನು ತಯಾರಿಸಲು ಸಹಕಾರ ನೀಡಿದ ಡಾ. ಎನ್.ಎಸ್. ರಂಗರಾಜುರವರಿಗೂ ಕ್ಷೇತ್ರ ಕಾರ್ಯದಲ್ಲಿ ನೆರವು ನೀಡಿದ ಪ್ರೊ.ಬಿ.ಎಸ್. ಮಂಜುನಾಥ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪಾಂಡವಪುರ, ಮಂಡ್ಯ ಜಿಲ್ಲೆ, ವಿದ್ಯಾರ್ಥಿಗಳಿಗೂ ಧನ್ಯವಾದಗಳು.

ಸಂಚಿಕೆಯ ಬರಹಗಾರರು

ಎಂ.ಡಿ. ದೇವಪ್ಪ
ವಕೀಲರು
೫೮೨, ೨೬ನೇ ಮುಖ್ಯ ರಸ್ತೆ
೨ನೇ ಹಂತ, ಜೆ.ಪಿ.ನಗರ, ಮೈಸೂರು-೮

ಹನುಮಂತರಾಜು ಎಂ.ಜೆ.
ರಾಜ್ಯಶಾಸ್ತ್ರ ಅಧ್ಯಾಪಕರು
ಮಹಾರಾಜ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಆರ್.ಎಸ್. ಪದ್ಮನಾಭ
ನಿವೃತ್ತ ಪ್ರಾಧ್ಯಾಪಕರು
ಪತ್ರಿಕೋದ್ಯಮ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫

ಆರ್. ಸಿದ್ಧರಾಜು
ಸಹಕಾರ ಅಧ್ಯಾಪಕರು
ಮಹಾರಾಜ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫

ಶಿವಾನಂದ
ಸಂಶೋಧಕ
ಇತಿಹಾಸ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು-೬

ಎಸ್. ನಾಗರಾಜು
ಸಂಶೋಧಕರು
ರಾಜ್ಯಶಾಸ್ತ್ರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು-೫

ಜೆ. ಲೋಹಿತ್
ಅತಿಥಿ ಉಪನ್ಯಾಸಕರು
ಪತ್ರಿಕೋದ್ಯಮ ವಿಭಾಗ
ಮಹಾರಾಜ ಕಾಲೇಜು, ಮೈಸೂರು – ೫

ಡಾ. ಕೆ.ಎಂ. ಮಹದೇವಸ್ವಾಮಿ
ಉಪನ್ಯಾಸಕರು
ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ
ಸುತ್ತೂರು, ನಂಜನಗೂಡು ತಾಲ್ಲೂಕು
ಮೈಸೂರು ಜಿಲ್ಲೆ

ಎನ್. ಮಲ್ಲಿಕಾರ್ಜುನ
ಸಂಶೋಧನಾ ವಿದ್ಯಾರ್ಥಿ
ಶಾಸ್ತ್ರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು–೬

ಡಾ. ಎಸ್.ಜಿ. ರಾಮದಾಸ ರೆಡ್ಡಿ
ಆಯ್ಕೆ ಶ್ರೇಣಿ ಇತಿಹಾಸ; ಉಪನ್ಯಾಸಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಪಾಂಡವಪುರ, ಮಂಡ್ಯ ಜಿಲ್ಲೆ

ಲಕ್ಷ್ಮೀ ಜಿ ಪ್ರಸಾದ
ನಂ. –೫, 'ನಂದನ ತೋಟ'
ಮಂಗನ ಹಳ್ಳಿ ಕ್ರಾಸ್ ಹತ್ತಿರ
ಉಳ್ಳಾಲು ಮುಖ್ಯ ರಸ್ತೆ
ಜ್ಞಾನ ಭಾರತೀ (ಪೋಸ್ಟ್) ಬೆಂಗಳೂರು

ಗೋಪಾಲಕೃಷ್ಣ ಭಟ್ಟ
ಯಲ್ಲಾಪುರ

ಕೆ.ಸಂ. ೮೭೧-ಎಂಯುಪಿಪಿ-೩೦೦ ಪ್ರತಿಗಳು-೧೪-೧೧-೨೦೦೧